ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY DEBATES

ಮಂಗಳವಾರ 12ನೇ ಆಗಸ್ಟ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್‌ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಶಾಸನ ರಚನಾ ಕಾರ್ಯಕಲಾಪ

ಅಧ್ಯಕ್ಷರು : ಮೊದಲು ಬಿಲ್‌ಗಳನ್ನು ತೆಗೆದುಕೊಳ್ಳೋಣ.

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಅನುಬಂಧ I ವಿಧೇಯಕವನ್ನು ಮಂಡಿಸಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಶಿಕ್ಷಣ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು) ಹಾಗೂ ಮತಕ್ಕೆ ಹಾಕುವುದು.

ಅಧ್ಯಕ್ಷರು : ಈಗ ಶ್ರೀರಾಮರೆಡ್ಡಿಯವರು ಚರ್ಚೆಯನ್ನು ಮುಂದುವರಿಸಿ. ಗೋವಿಂದೇಗೌಡರು ಕೌನ್ಸಿಲ್‌ನಲ್ಲಿ ಕ್ವೊಶ್ಚನ್ ಅವರ್ ಇರುವುದರಿಂದ ಅವರು ಅಲ್ಲಿ ಇರಬೇಕಾಗುತ್ತದೆ. ಅವರ ಪರವಾಗಿ ಅವರ ಸಿಬ್ಬಂದಿಯವರು ಇದ್ದಾರೆ. ಅವರು ನೋಟ್ ಮಾಡಿಕೊಳ್ಳುತ್ತಾರೆ. There is no problem and he will come and respond to all the suggestions that you make. ಹೈಯರ್ ಎಜುಕೇಷನ್ ಮಿನಿಸ್ಟರ್ ಏನೂ ಕಮ್ಯುನಿಕೇಟ್ ಮಾಡಲಿಲ್ಲ. I do not know in view of yesterday's developments what has happened. ಹೈಯರ್ ಎಜ್ಯುಕೇಷನ್‌ನ ಪ್ರಿನ್ಸಿಪಲ್ ಸೆಕ್ರೆಟರಿಯವರು ಇದ್ದಾರೆ. There is no problem. You can go on. It seems Higher Education Minister is also there in the Council.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಚರ್ಚೆಯನ್ನು ಪ್ರಾರಂಭ ಮಾಡಿದ್ದೆ. ಇವೊತ್ತು ಮುಂದುವರೆಸುತ್ತಾ ಉನ್ನತ ಶಿಕ್ಷಣದ ಬಗ್ಗೆ ವ್ಯಾಪಕವಾದಂಥ ಒಂದು ಅಭಿಪ್ರಾಯವು ಇರತಕ್ಕಂಥಾದ್ದು "technocrats can rule this country and can frame this country. ಎಂದು ಈ ರೀತಿ ಹೇಳತಕ್ಕಂಥ ಒಂದು ಅಭಿಪ್ರಾಯವನ್ನು ಉನ್ನತ ಶಿಕ್ಷಣದಲ್ಲಿ ವ್ಯಾಪಕವಾಗಿ ಹರಡಲಾಗಿದೆ. ಈ ಉನ್ನತ ಶಿಕ್ಷಣ ಅಂದರೆ, ಕ್ಯಾಪಿಟೇಶನ್ ಹಣವನ್ನು ಕೊಟ್ಟು ಪಡೆಯತಕ್ಕಂಥ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣವಷ್ಟೇ ಉನ್ನತ ಶಿಕ್ಷಣ ಎನ್ನತಕ್ಕಂಥ ಅಭಿಪ್ರಾಯವೂ ಕೂಡ ಬರುತ್ತಾ ಇದೆ. ಅದರಲ್ಲಿ ಇನ್ನೊಂದು ಕಡೆ ಸಮಾಜದ ಮೂಲಭೂತ ಬೆಳವಣಿಗೆಗೆ ಅವಶ್ಯಕವಾಗಿರತಕ್ಕಂಥ ವಿಜ್ಞಾನ, ಮಾನವ ಶಾಸ್ತ್ರ, ಭಾಷೆ, ಸಂಸ್ಕೃತಿ, ಇತ್ಯಾದಿಗಳ ಕಲಿಯುವಿಕೆಯು ಬಹಳ ನಿರುಪಯುಕ್ತ ಎನ್ನತಕ್ಕಂಥ ಒಂದು ಅಭಿಪ್ರಾಯ ಕೂಡ ಬರುತ್ತಾ ಇದೆ. ಇದರ ಬೆನ್ನ ಹಿಂದೆಯೇ ನಮ್ಮ ವ್ಯವಸ್ಥೆಯಲ್ಲಿ ಇವತ್ತು ಏನಾಗಿದೆ ಅಂದರೆ, ಶಿಕ್ಷಣ ಪ್ರತಿಷ್ಠೆಯ ಪ್ರಶ್ನೆಯಾಗಿದೆಯೇ ಹೊರತು, ಅದು ಪ್ರತಿಯೊಬ್ಬ ಮನುಷ್ಯನ ಹಕ್ಕಾಗಿ ಉಳಿಯಲಿಲ್ಲ. ಹಾಗೆಯೇ ಅದು ಇಂದಿಗೂ ಕೂಡ ಸಾರ್ವತ್ರೀಕರಣವಾಗಿಲ್ಲ. ಹೆಸರಿಗೆ ನಾವು ಇವೊತ್ತು ಸಾರ್ವತ್ರಿಕ ಶಿಕ್ಷಣ ಎಂದು ಹೇಳುತ್ತೇವೆ. ಪಬ್ಲಿಕ್ ಎಜ್ಯುಕೇಷನ್ ಎಂದು ಹೇಳುತ್ತಾ ಇದ್ದೇವೆ. ಆದರೆ ಇವೊತ್ತಿಗೂ ಕೂಡ ನಮ್ಮ ದೇಶದಲ್ಲಿ, ರಾಜ್ಯದಲ್ಲಿ, ಶೇಕಡ 60ಕ್ಕಿಂತ ಹೆಚ್ಚು ಭಾಗ ಅನಕ್ಷರಸ್ಥರನ್ನು ನೋಡುತ್ತಾ ಇದ್ದೇವೆ. ಈ ಒಂದೇ ಅಂಶವು ಈ ದೇಶದಲ್ಲಿ ಶಿಕ್ಷಣವು ಸಾರ್ವತ್ರೀಕರಣವಾಗಿಲ್ಲ ಎಂಬುದನ್ನು ಸಾಬೀತು ಮಾಡುತ್ತದೆ. ಮತ್ತೆ ನಾವು ಕೊಡುತ್ತಾ ಇರತಕ್ಕಂಥ ಶಿಕ್ಷಣ ಎಂಥಾದ್ದು? ಇವೊತ್ತು ಶಿಕ್ಷಣದಲ್ಲಿನ ಮೌಲ್ಯಗಳ ಬಗ್ಗೆ ನಾವೆಲ್ಲಾ ಸಾಕಷ್ಟು ಮಾತನಾಡುತ್ತಾ ಇದ್ದೇವೆ. ಶಿಕ್ಷಣದಲ್ಲಿ ಮೌಲ್ಯಗಳು ಇಲ್ಲ, ಮೌಲ್ಯಗಳು ಕುಸಿದು ಹೋಗಿಬಿಟ್ಟಿವೆ, ಎಂದು ಹೇಳುತ್ತಿದ್ದೇವೆ. ನನ್ನ ಒಂದೇ ವಿಚಾರ ಅಂದರೆ, ಇಡೀ ಶಿಕ್ಷಣವನ್ನು ವ್ಯಾಪಾರೀಕರಣಕ್ಕೆ ಒಳಪಡಿಸಿ, ವ್ಯಾಪಾರೀಕರಣಕ್ಕೊಳಗಾಗಿರತಕ್ಕಂಥ ಶಿಕ್ಷಣದಲ್ಲಿ ಮೌಲ್ಯವನ್ನು ನಿರೀಕ್ಷೆ ಮಾಡತಕ್ಕಂಥಾದ್ದೇ ಒಂದು ದೊಡ್ಡ ಹಿಪೋಕ್ರಸಿ. ಅದೊಂದು ಆಷಾಡಭೂತಿತನ. ಇಡೀ ಶಿಕ್ಷಣವನ್ನು ವ್ಯಾಪಾರೀಕರಣ ಮಾಡಿದ್ದಾರೆ. ವ್ಯಾಪಾರೀಕರಣ ಮಾಡಿದಂಥ ಈ ಶಿಕ್ಷಣದಲ್ಲಿ ಮೌಲ್ಯಗಳನ್ನು ಸ್ಥಾಪನೆ ಮಾಡುವುದಾಗಲೀ, ಮೌಲ್ಯಗಳನ್ನು ತರತಕ್ಕಂಥ ರೀತಿಯಲ್ಲಿ ಅದನ್ನು ರಚನೆ ಮಾಡುವುದಕ್ಕೂ ಕೂಡ ಸಾಧ್ಯವಾಗಿಲ್ಲ. ಹಾಗಾಗಿ ಇವೊತ್ತು ಯಾವುದೇ ಒಂದು ಪಠ್ಯಪುಸ್ತಕದಲ್ಲಿಯೂ ಕೂಡ ತಾವು ನಿನ್ನೆ

ಪ್ರಸ್ತಾಪ ಮಾಡಿದ ಹಾಗೆ ಅದರಲ್ಲಿರತಕ್ಕಂಥ ಸಿಲೆಬಸ್ ಕಂಟೆಂಟ್ಸ್ ಏನಿದೆ. ಆ ಕಂಟೆಂಟ್ಸ್ ಕೂಡ ವ್ಯಾಪಾರೀಕರಣಕ್ಕೆ ಅನುಗುಣವಾಗಿ ಉದಾರೀಕರಣದ ಆರ್ಥಿಕ ಧೋರಣೆಗಳಿಗೆ ಅನುಗುಣವಾಗಿ ಪುಸ್ತಕಗಳನ್ನು ರಚಿಸುತ್ತಾ ಇದ್ದಾರೆ. ಆ ದಿಸೆಯಲ್ಲಿ ಶಿಕ್ಷಣವನ್ನು ರೂಪಿಸುತ್ತಾ ಇದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು ಪ್ರಾಥಮಿಕ ಶಿಕ್ಷಣದಲ್ಲಿ ಕೊಡಲು ಇಷ್ಟಪಡುತ್ತೇನೆ. ಡಿಪಿಇಪಿ ಕಾರ್ಯಕ್ರಮದಲ್ಲಿ ಇವೊತ್ತು ಶಿಕ್ಷಣವನ್ನು ತರತಕ್ಕಂಥ ಪ್ರಯತ್ನ ನಡೆಯುತ್ತಾ ಇದೆ. ಅದು ವಿಶ್ವಬ್ಯಾಂಕ್‌ನ ಆರ್ಥಿಕ ನೆರವಿನಿಂದ ಬರುತ್ತಾ ಇರತಕ್ಕಂಥ ಒಂದು ಕಾರ್ಯಕ್ರಮ. ಅದರ ಪಠ್ಯಪುಸ್ತಕಗಳನ್ನು ರೂಪಿಸಿದ್ದಾರೆ. ಬಹುಶಃ ತಾವುಗಳೂ ಕೂಡ ಅದನ್ನು ನೋಡಿರಬಹುದು. ಹಿಂದೆ ಪ್ರಾಥಮಿಕ ಶಿಕ್ಷಣ ಪಠ್ಯಕ್ರಮದಲ್ಲಿ "ಇವನು ಈಶ" - "ಇವನು ಗಣಪ"- ಎಂದು ಇರುತ್ತಿತ್ತು. ಇವೊತ್ತಿನ ಪಠ್ಯಕ್ರಮದಲ್ಲಿ ಮೊದಲನೇ ಪಾಠದಲ್ಲಿ "ಠಣ ಠಣ ಠಣ" - "ಜಣ ಜಣ ಜಣ" ಇದರಿಂದ ಪ್ರಾರಂಭವಾಗುತ್ತದೆ. ಅಂದರೆ ಮೌಲ್ಯಗಳು ಹೇಗೆ ಬದಲಾವಣೆಯಾಗುತ್ತವೆ ಅಂದರೆ, ಊಳಿಗಮಾನ್ಯ ಸಮಾಜವೊಂದರ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಿರತಕ್ಕಂಥ ಆ ಶಿಕ್ಷಣ ಪದ್ಧತಿ, ಇವೊತ್ತು ಬದಲಾವಣೆಯಾಗಿರತಕ್ಕಂಥಾದ್ದು ಏನೆಂದರೆ ಫ್ರೀ ಮಾರ್ಕೆಟ್ ಮತ್ತು ಉದಾರೀಕರಣ. ಅದಕ್ಕನುಗುಣವಾಗಿ ಇವೊತ್ತು ಶಿಕ್ಷಣವನ್ನು ರೂಪಿಸಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಠಣ,ಠಣ, ಜಣ,ಜಣ,ಜಣ ಎಂದು ಮೊದಲ ಪಾಠದಲ್ಲಿ ಪ್ರಾಂಭವಾದರೆ ಅದು ಹಣದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ. ಒಂದು ಸಣ್ಣ ಮಗುವು ಕಲಿಯತಕ್ಕಂಥ ಸಂದರ್ಭದಲ್ಲಿಯೇ ಹಣದ ವ್ಯಾಮೋಹವನ್ನು ಮತ್ತು ಹಣದ ಮೌಲ್ಯಗಳನ್ನು ಪ್ರತಿಪಾದನೆ ಮಾಡತಕ್ಕಂಥಾದ್ದು ಇರುವುದರಿಂದ ಇದರ ಪರಿಣಾಮವನ್ನು ನಾವು ನೇರವಾಗಿ ನೋಡುತ್ತಾ ಇದ್ದೇವೆ. ಮಾನ್ಯ ಅಧ್ಯಕ್ಷರೂ ಕೂಡ ಒಂದು ಸಭೆಯಲ್ಲಿ ಇದ್ದರು. ನಾವು ಶಿಕ್ಷಣ ಸಮಿತಿಗೆ ಸಂಬಂಧಪಟ್ಟ ಹಾಗೆ ಎಕ್ಸ್‌ಪರ್ಟ್ಸ್ ಜೊತೆಗೆ ಸಮಾಲೋಚನೆ ಮಾಡಿ ಈ ಪ್ರಾಥಮಿಕ ಶಿಕ್ಷಣವನ್ನು ಏನಾದರೂ ಬದಲಾವಣೆ ಮಾಡಲಿಕ್ಕೆ ಸಲಹೆಗಳನ್ನು ಕೊಡಲಿಕ್ಕೆ ಕೆಲದಂಥ ಸಭೆಯಲ್ಲಿ ಒಬ್ಬ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಕಾರ್ಯದರ್ಶಿಯೊಬ್ಬರು ಹೇಳಿದರು, "Money is knowledge." ಎಂದು ನಾನು ಅವರನ್ನು ಪ್ರಾಮಾಣಿಕವಾಗಿ ಪ್ರಶ್ನಿಸುತ್ತೇನೆ, Where are we, then? Even if you have money to purchase knowledge, there must be a knowledge. Without the knowledge available in the market, your money cannot purchase it. How hallow that argument is? But that argument is not an accidental argument. It is a very conscious argument, a very calculated argument evolved through the free market economy, through the world Bank Philosophy and through all sorts of economic liberalisation. ಇಂಥ ಒಂದು ಶಿಕ್ಷಣದಲ್ಲಿ ಮೌಲ್ಯಗಳನ್ನು ತರಲು ಪ್ರಯತ್ನ ಮಾಡುತ್ತಾ ಇದ್ದಾರೆ. ಇದರ ಅರ್ಥ ಏನು ಅಂದರೆ, ಈ ಚೌಕಟ್ಟಿನ ಒಳಗಡೆ, ಈ ವ್ಯವಸ್ಥೆಯ ಒಳಗಡೆ, ಅಪಮಾನ ವ್ಯವಸ್ಥೆಯಲ್ಲಿ ನಡೆಯುತ್ತಿರತಕ್ಕಂಥ ಅಸಮಾನ ಶಿಕ್ಷಣದ ಒಳಗಡೆಯೇ ಬದಲಾವಣೆಗಳನ್ನು ತರಬೇಕೆಂದು ಪ್ರಯತ್ನಗಳನ್ನು ಮಾಡುತ್ತ ಇದ್ದಾರೆಯೇ ಹೊರತು, ಈ ಚಾಕಟ್ಟನ್ನು ಮೀರಿ ಸಮಾನ ವ್ಯವಸ್ಥೆ ಇರತಕ್ಕಂಥ ಸಮಾನ ವಿದ್ಯಾಭ್ಯಾಸವನ್ನು ತರಬೇಕೆನ್ನುವ ಕಾಳಜಿಯಾಗಲೀ, ಪ್ರಯತ್ನವಾಗಲೀ

ಅಥವಾ ಆ ನಿಟ್ಟಿನಲ್ಲಿ ಮಾಡಬೇಕಾಗಿರತಕ್ಕಂಥ ಕೆಲಸವನ್ನಾಗಲೀ ಮಾಡಲು ಸಾಧ್ಯವಾಗುತ್ತಾ ಇಲ್ಲ. ಕೆಲವರು ಎಜ್ಯುಕೇಷನ್ ಎಕ್ಸ್‌ಪರ್ಟ್ಸ್, the so-called education experts ಅವರ ವಾದದ ಮಿತಿಯು ಎಲ್ಲಿಗೆ ಸೀಮಿತವಾಗುತ್ತದೆ ಅಂದರೆ, ಈ ವ್ಯವಸ್ಥೆಯಲ್ಲಿಯೇ ಏನಾದರೂ ಬದಲಾವಣೆಗಳನ್ನು ತರಲು ಸಾಧ್ಯವಿದೆಯೇ? ಅದರ ಇತಿಮಿತಿಯು ಬಹುಶಃ ಅವರಿಗೆ ಗೊತ್ತಾಗಿದೆ. ಈ ಅಸಮಾನ ವ್ಯವಸ್ಥೆಯನ್ನು, ಕೇಂದ್ರೀಕೃತ ವ್ಯವಸ್ಥೆಯನ್ನು ಹಾಗೆಯೇ ಇಟ್ಟು ಈ ವಿದ್ಯಾಭ್ಯಾಸದಲ್ಲಿ ಏನಾದರೂ ಮೌಲ್ಯಗಳನ್ನು ತರಲು ಸಾಧ್ಯವಾಗುತ್ತದೆಯೇ ಎಂಬುದು ಅವರಿಗೆ ಅರ್ಥವಾಗಿಲ್ಲ ಪಾಪ... ಮತ್ತೆ ಈ non-technical ಉನ್ನತ ಶಿಕ್ಷಣದ ಬಗ್ಗೆ ಇವೊತ್ತು ಗಂಭೀರವಾದಂಥ ನಿರ್ಲಕ್ಷ್ಯ ಮನೋಭಾವವು ಬರುತ್ತಾ ಇದೆ. ಮತ್ತು ಆ ನಾನ್ ಟೆಕ್ನಿಕಲ್ ಎಜ್ಯುಕೇಷನ್ ಬಿಟ್ಟು ಇರತಕ್ಕಂಥ ಉನ್ನತ ಶಿಕ್ಷಣದ ಬಗ್ಗೆ ಅದು ಅನಾವಶ್ಯಕ ಎನ್ನತಕ್ಕಂಥ ಒಂದು ಪರಿಸ್ಥಿತಿಯು ಉಂಟಾಗಿದೆ. ಏಕೆಂದರೆ, ಇವೊತ್ತಿನ ವ್ಯಾಪಾರೀಕರಣದ ವ್ಯವಸ್ಥೆಯಲ್ಲಿ ಉದಾರೀಕರಣದ ವ್ಯವಸ್ಥೆಯಲ್ಲಿ ಟೆಕ್ನಿಕಲ್ ಎಜ್ಯುಕೇಷನ್ ಒಂದು ಪ್ರಾಮುಖ್ಯವಾದಂಥ ಸ್ಥಾನವನ್ನು ಪಡೆಯುತ್ತಾ ಇದೆ. ಒಂದು ವಿಚಾರವನ್ನು ನಾವು ಮರೆಯಬಾರದು. The technocrats cannot frame and build this country unless there is a basic development of science, natural science, social science and language. ಹಾಗಾಗಿ ಇವೊತ್ತು ಮೂಲಭೂತವಾಗಿ ಒಂದು ಪ್ರಶ್ನೆಯನ್ನು ತಮ್ಮ ಮುಂದಿಡಲಿಚ್ಚಿಸುತ್ತೇನೆ. ಏಕೆಂದರೆ ಶಿಕ್ಷಣ ಎನ್ನುವುದು ಬಹಳ ಗಂಭೀರವಾದಂಥ ವಿಚಾರ. ಒಂದು ಸಮಾಜದ ಭವಿಷ್ಯವನ್ನು ನಿರ್ಧಾರ ಮಾಡತಕ್ಕಂಥ, ಅದರ ರೂಪುರೇಷೆಗಳನ್ನು ನಿರ್ಧಾರ ಮಾಡತಕ್ಕಂಥ ವಿಷಯ ಇದು. ಜಗತ್ತಿನಲ್ಲಿ ಯಾವುದೇ ದೇಶ ನಿಜವಾಗಿ ಮುಂದುವರಿದಿದೆ ಅಂದರೆ, that is because of non-technical higher education. ಆ ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ಮನುಷ್ಯನಿಗೂ ಶಿಕ್ಷಣವನ್ನು ಕೊಟ್ಟಂಥ ದೇಶ ಮಾತ್ರ ಅಂಥ ನಿಜವಾಗಿಯೂ ಮುಂದುವರಿಯಲು ಸಾಧ್ಯವಿಲ್ಲ. ಈ ನಾನ್‌ಟೆಕ್ನಿಕಲ್ ಹೈಯರ್ ಎಜ್ಯುಕೇಷನ್ ಇವೊತ್ತು ಯಾವ ಸ್ಥಿತಿಗೆ ಬಂದಿದೆ ಅಂದರೆ, ನಮ್ಮ Tata Institute of Fundamental Research ನಲ್ಲಿರತಕ್ಕಂಥ ತಜ್ಞರು ಡಾ॥ ಪದ್ಮನಾಭನ್ ಹೇಳುತ್ತಾರೆ." ಈ ದೇಶಕ್ಕೆ ಇವೊತ್ತಿಗೂ ವಿಜ್ಞಾನದ ಭೋದನೆ, ಸಂಶೋಧನೆಗೆ ಸಮರ್ಪಿಸಿಕೊಳ್ಳಬಹುದಾದ ಶ್ರಧ್ಧಾವಂತ ಯುವಕರ ಅಗತ್ಯವಿದೆ. ಆರ್ಥಿಕ ತಜ್ಞರು, ಯೋಜನಾ ಪರಿಣತರು, ಮತ್ತು ಸಮಾಜ ಶಾಸ್ತ್ರಜ್ಞರ ಸೇವೆ ಇಂದಿಗೂ ಅನಿವಾರ್ಯವಾಗಿದೆ. ಭಾಷಾ ಕಲಿಕೆ, ಸಾಂಸ್ಕೃತಿಕ ಕ್ರಿಯಾಶೀಲತೆ, ಪ್ರಯೋಜನ ಲಭಿಸಬೇಕು. ಹೀಗಿರುವಾಗ ಭಾರತ ಸರಕಾರ ಉನ್ನತ ಶಿಕ್ಷಣಕ್ಕೆ ಈಗಿದ್ದಕ್ಕಿಂತ ಆರ್ಥಿಕ ನೆರವನ್ನು ಕಡಿತಗೊಳಿಸಲು ಹೊರಟಿರುವುದು ದುರಂತಮಯ ಪರಿಣಾಮಗಳಿಗೆ ನಾಂದಿಯಾಗಿದೆ. ಇದು ಜಗತ್ತಿನ ಒಬ್ಬ ಪ್ರಸಿದ್ಧ ವಿಜ್ಞಾನಿ ಹೇಳಿದ ವಿಚಾರ. ನಾನೇಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಅಂದರೆ, ಇವೊತ್ತು ಇಡೀ ಸಮಾಜ, ಇಡೀ ಜಗತ್ತು, ಉನ್ನತವಾದಂಥ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬೆಳೆಸಿದೆ, ಅಳವಡಿಸಿಕೊಂಡಿದೆ. ಎಂದು ಹೇಳಿದರೆ ನಾವು ಯಾರಿಗೆ ಚಿರಋಣಿಯಾಗಿರಬೇಕೆಂದರೆ, ವಿಜ್ಞಾನ ಕ್ಷೇತ್ರದಲ್ಲಿ ಮೂಲಭೂತವಾದ ಸಂಶೋಧನೆಗಳನ್ನು ಮಾಡಿ, ಇಡೀ ಜಗತ್ತಿನ ಬದಲಾವಣೆಗೆ ಕಾರಣವಾಗಿದ್ದಂಥ ಆ ಮಹಾನ್ ವಿಜ್ಞಾನಿಗೆ, ಅವರು ಸಮಾಜ ವಿಜ್ಞಾನಿಗಳಾಗಿರಬಹುದು, ನ್ಯಾಚುರಲ್‌ಸೈನ್ಸ್‌ನ ವಿಜ್ಞಾನಿಗಳಾಗಿರಬಹುದು. ನಾನು ಉದಾಹರಣೆಗೆ ಹೇಳುತ್ತೇನೆ. ಗೆಲಿಲಿಯೋ ಇಲ್ಲದೇ ಹೋಗಿದ್ದರೆ, ಅವರ ಸಂಶೋಧನೆ ಇಲ್ಲದೇ ಹೋಗಿದ್ದರೆ.

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಎಂ. ಮಾಮನಿ) ರವರು
ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಈ ಜಗತ್ತು ಏನಾಗುತ್ತಾ ಇತ್ತು? ಅದೇ ರೀತಿಯಲ್ಲಿ ಕೂಪರ್‌ನಿಕಸ್ ಇಲ್ಲದೇ ಹೋಗಿದ್ದರೆ ಈ ಜಗತ್ತಿನಲ್ಲಿ ಏನನ್ನು ನಿರೀಕ್ಷೆ ಮಾಡಲು ಸಾಧ್ಯವಾಗುತ್ತಾ ಇತ್ತು? ಅದೇ ರೀತಿಯಲ್ಲಿ ಫಾರಡೇ ವಿಜ್ಞಾನಿ ಇಲ್ಲದೇ ಇದ್ದಿದ್ದರೆ ಜಗತ್ತಿನಲ್ಲಿ ವಿದ್ಯುತ್ ಸಂಶೋಧನೆಯಾಗದೇ ಇದ್ದಿದ್ದರೆ ಈ ಜಗತ್ತು ಏನು ಆಗುತ್ತಾ ಇತ್ತು? ಅದೇ ರೀತಿಯಲ್ಲಿ ಡಾಕ್ಟರ್ ಭಾಸ್ಕರ್ ಇಲ್ಲದೇ ಇದ್ದಿದ್ದರೆ ಈ ಜಗತ್ತಿನ ವೈದ್ಯಕೀಯ ಸಂಶೋಧನೆ, ಪರಿಶೋಧನೆಗಳ ಗತಿ ಏನಾಗುತ್ತಿತ್ತು? ಅದೇ ರೀತಿಯಲ್ಲಿ ಫ್ಲೇಮಿಂಗ್ ವಿಜ್ಞಾನಿ ಇಲ್ಲದೇ ಇದ್ದಿದ್ದರೆ ಈ ಜಗತ್ತಿನ ವಿಜ್ಞಾನದ ಬೆಳವಣಿಗೆ ಏನಾಗುತ್ತಾ ಇತ್ತು? ಈ ಜಗತ್ತು ಯಾವ ಸ್ಥಿತಿಯಲ್ಲಿ ಇರುತ್ತಾ ಇತ್ತು? ಡಾ|| ಸಿ.ವಿ. ರಾಮನ್‌ರವರ ಆ ವಿಜ್ಞಾನ ಸಂಶೋಧನೆ ಇಲ್ಲದೇ ಹೋಗಿದ್ದರೆ ಈ ಜಗತ್ತು ಇವತ್ತು ಯಾವ ಸ್ಥಿತಿಯಲ್ಲಿ ಇರುತ್ತಾ ಇತ್ತು ಎನ್ನುವುದನ್ನು ಎಲ್ಲರೂ ಊಹೆ ಮಾಡಬೇಕಾಗುತ್ತದೆ ಮತ್ತು ಚಿಂತನೆ ಮಾಡಬೇಕಾಗುತ್ತದೆ. ಅಂದರೆ ಇಡೀ ಸಮಾಜದ ಮೂಲಭೂತ ಬೆಳವಣಿಗೆ ಅಗತ್ಯವಾಗಿರತಕ್ಕಂಥ ಸಾಮಾನ್ಯ ವಿಜ್ಞಾನದ ಸಂಶೋಧನೆ ಸಮಾಜದ ವಿಜ್ಞಾನ ತತ್ವ ಶಾಸ್ತ್ರಜ್ಞರು ಸಾಮಾಜಿಕ ಸಂಶೋಧನೆಗಳನ್ನು ವಿಜ್ಞಾನದ ಬೆಳವಣಿಗೆಗಳನ್ನು ಸಂಶೋಧನೆ ನಡೆಸದೇ ಇದ್ದಿದ್ದರೆ ಈ ದೇಶದ ಈ ಜಗತ್ತಿನ ಬೆಳವಣಿಗೆಯನ್ನು ಊಹೆ ಮಾಡಲಿಕ್ಕೆ ಇವತ್ತು ಸಾಧ್ಯವಾಗುತ್ತಾ ಇತ್ತೇ. ಸೆಟ್ಲೈಟ್ ಬಗ್ಗೆ ಮಾತನಾಡುತ್ತಿದ್ದೀರಿ. ಖಗೋಳ ಶಾಸ್ತ್ರಜ್ಞರು ಸಂಶೋಧನೆ ಮಾಡದೆ ಹೋಗಿದ್ದರೆ ಈ ದೇಶದ .ಈ ಜಗತ್ತಿನಲ್ಲಿ ಸೆಟ್ಲೈಟ್‌ನ್ನು ಪಡೆಯತಕ್ಕಂಥ ಸೌಲಭ್ಯ ಸಾಧ್ಯವಾಗುತ್ತಾ ಇರಲಿಲ್ಲ. ಕಂಪ್ಯೂಟರ್ ವಿಜ್ಞಾನ ಏನು ಇವತ್ತು ಮಾರುಕಟ್ಟೆಯಲ್ಲಿ ಬಿಸಿ ಬಿಸಿ ಬೊಂಡಾಗಳ ಮಾರಾಟ ಮಾಡಿದ ಹಾಗೆ ಆಗುತ್ತಿದೆ. ಈ ಕಂಪ್ಯೂಟರ್ ಡಿಗ್ರಿಗಳೆಂದು ಹೇಳಿದರೆ, ಆ ಕಂಪ್ಯೂಟರ್ ಸೈನ್ಸ್ ಮೂಲ ಆಧಾರ ಯಾವುದು? ನ್ಯೂಟನ್ ಇಲ್ಲದೇ ಇದ್ದಿದ್ದರೆ, ಅಣು ವಿಜ್ಞಾನ ಇಲ್ಲದೇ ಇದ್ದಿದ್ದರೆ ಏನು ಆಗುತ್ತಿತ್ತು? ಅಂದರೆ ಇಂತಹ ಮಹತ್ತರವಾದ ಒಂದು ನಾನ್‌ಟೆಕ್ನಿಕಲ್ ಹೈಯರ್ ಎಜ್ಯುಕೇಷನ್ ಅನ್ನು ಇವತ್ತು ಯಾವ ಸ್ಥಿತಿಯಲ್ಲಿ ನೋಡುತ್ತಿದ್ದೇವೆ ಅಂದರೆ ಅದು ಕೆಲಸಕ್ಕೆ ಬಾರದ ವಿದ್ಯಾಭ್ಯಾಸ, ಅದು ಕೆಲಸಕ್ಕೆ ಭಾರತ ವಿಜ್ಞಾನದ ಶಿಕ್ಷಣ ಎಂದು ಹೇಳತಕ್ಕಂಥ ಸ್ಥಿತಿಗೆ ಇವತ್ತು ನಾವು ಬಂದು ತಲುಪಿದ್ದೇವೆ. ಒಂದು ಕಡೆ ಇದು ವಿಪರ್ಯಾಸ ಆಗಿದೆ. ಈ ದೇಶದ ಮತ್ತು ನಮ್ಮ ರಾಜ್ಯದ ಶಿಕ್ಷಣ ವ್ಯವಸ್ಥೆ ಸಮಾಜದ ಅವಶ್ಯಕತೆಗೆ ಅನುಗುಣವಾಗಿ ಪೂರಕವಾದ ವಿದ್ಯಾಭ್ಯಾಸ ರಚಿಸುವುದರಲ್ಲಿ ವಿಫಲವಾಗಿರತಕ್ಕಂಥ ಈ ಸರ್ಕಾರಗಳು ಈ ವ್ಯವಸ್ಥೆಗಳು, ಇನ್ನು ಒಂದು ಕಡೆ ಆ ಸಮಾಜದ ಅವಶ್ಯಕತೆ ಇಲ್ಲದೆ ಇರತಕ್ಕಂಥ ಯಾವುದೆ ಕೆಲವೇ ಕೆಲವು ವರ್ಗಗಳ ಹಿತರಕ್ಷಣೆ ಮಾಡತಕ್ಕಂಥ ಮತ್ತು ವರ್ಗಗಳಿಗೆ ಪ್ರಯೋಜನ ಆಗತಕ್ಕಂಥ ಟೆಕ್ನಿಕಲ್ ಎಜ್ಯುಕೇಷನ್ ಇವತ್ತು ರೂಪಿಸುತ್ತಿದ್ದಾರೆ. ಈ ತಾಂತ್ರಿಕ ಶಿಕ್ಷಣ ಇವತ್ತು ಈ ದೇಶದ ಇಡೀ ಆರ್ಥಿಕ ಸಂಬಂಧಗಳ ಹಿಡಿತವನ್ನು ಯಾರು ಕೈಯಲ್ಲಿ ಹಿಡಿದಿದ್ದಾರೆ ಅವರಿಗೆ ಅನುಕೂಲ ಆಗುವಂತಹ ಉತ್ಪಾನೆಯನ್ನು, ಉತ್ಪಾದನಾ ಸಾಮಗ್ರಿಗಳ ಹಿಡಿತವನ್ನು ಈ ದೇಶದಲ್ಲಿ ಯಾರು ಸಾಧಿಸಿದ್ದಾರೆ ಅವರಿಗೆ ಪೂರಕವಾಗಿದ್ದಂಥ ಶಿಕ್ಷಣವನ್ನು ಕೊಡಲಿಕ್ಕೆ ಇವತ್ತು ಇಡೀ ಟೆಕ್ನಿಕಲ್ ಎಜ್ಯುಕೇಷನ್ ನಾನ್ ಟೆಕ್ನಿಕಲ್ ಎಜ್ಯುಕೇಷನ್ ಕೆಳಗಡೆ ಬಿಟ್ಟು ಟೆಕ್ನಿಕಲ್

ಎಜ್ಯುಕೇಷನ್‌ಗೆ ಇವತ್ತು ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಇವತ್ತು ವಿಜ್ಞಾನ ಮನುಷ್ಯನ ಬೆಳವಣಿಗೆಗೆ ಪ್ರಮುಖವಾದಂಥ ಒಂದು ಅಂಶ. ಆದರೆ ಇವತ್ತು ವಿಜ್ಞಾನದಲ್ಲಿ ಸಂಶೋಧನೆ ಆಗಬೇಕಾಗಿದೆ, ಆದರೆ ಸಂಶೋಧನೆಗಳಿಗೆ ಪೂರಕವಾಗಿರತಕ್ಕಂಥ ಮೂಲಭೂತ ವಿದ್ಯಾಭ್ಯಾಸ ಕೊಡತಕ್ಕಂಥ ನಾನ್ ಟೆಕ್ನಿಕಲ್ ಹೈಯರ್ ಎಜ್ಯುಕೇಷನ್ ಮಾತ್ರ ಇವತ್ತು ಬಹಳ ವಿಸ್ತಾರ ಮನೋಭಾವದಿಂದ ನಿರ್ಲಕ್ಷ್ಯ ಮನೋಭಾವದಿಂದ ನೋಡತತಕ್ಕಂಥದ್ದನ್ನು ಇವತ್ತು ನಾವು ನೋಡುತ್ತಿದ್ದೇವೆ. ಅದರ ಪರಿಣಾಮ ಕರ್ನಾಟಕದಲ್ಲಿ ಏನಾಗಿದೆ ಇಡೀ ಶಿಕ್ಷಣ ದೇಶದಲ್ಲಿ ಮೊದಲಬಾರಿಗೆ ವ್ಯಾಪಾರಕ್ಕೆ ಇಟ್ಟಂತಹ ರಾಜ್ಯ ಇದು. ಅಂದರೆ ಒಂದು ಕಡೆ ಪ್ರಜಾಪ್ರಭುತ್ವವಾದ ದೇಶ. ನಾವೆಲ್ಲರೂ ಹೇಳತಕ್ಕಂಥದ್ದು, ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಮನುಷ್ಯನೂ ಶಿಕ್ಷಣ ಪಡೆಯತಕ್ಕಂಥಾದ್ದು ಅವನ ಹಕ್ಕು. ಆದರೆ ಹಕ್ಕನ್ನು ಪ್ರಜ್ಞಾಪೂರ್ವಕವಾಗಿ ನಿರಾಕರಣೆ ಮಾಡತಕ್ಕಂಥ ನಿಟ್ಟಿನಲ್ಲಿ ಇಡೀ ಶಿಕ್ಷಣವನ್ನು ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭ ಮಾಡಿ ಉನ್ನತ ಶಿಕ್ಷಣ ಟೆಕ್ನಿಕಲ್ ನಾನ್ ಟೆಕ್ನಿಕಲ್ ಎಜ್ಯುಕೇಷನ್ ಇವೆರಡನ್ನೂ ಕೂಡ ಇವತ್ತು ಯಾರು ಹಣವಂತರು ಇದ್ದಾರೆ, ಯಾರು ಲಕ್ಷಂತರ ಹಣವನ್ನು ಕೊಟ್ಟು ಡಿಗ್ರಿಯನ್ನು ಪ್ರಶಸ್ತಿಯನ್ನು ಪಡೆಯಲು ಸಾಧ್ಯವಾಗಿದೆ ಆ ವಿಭಾಗದ ಜನಕ್ಕೆ ಶಿಕ್ಷಣ ಸಿಗುವಂತಹ ಸ್ಥಿತಿಯಲ್ಲಿ ಇದೆ. ಇಡೀ ದೇಶದಲ್ಲಿ ಅತಿ ಹೆಚ್ಚು ಇಂಜಿನಿಯರ್ ಕಾಲೇಜುಗಳು ಇರುವುದು ಕರ್ನಾಟಕದಲ್ಲಿ. ಇಡೀ ದೇಶದಲ್ಲಿ ಅತಿ ಹೆಚ್ಚಿನ ಮೆಡಿಕಲ್ ಕಾಲೇಜುಗಳು ಇರುವುದು ಕರ್ನಾಟಕದಲ್ಲಿ. ಕರ್ನಾಟಕದಲ್ಲಿ ಒಂದು ವರ್ಷಕ್ಕೆ 12,700 ಡಾಕ್ಟರ್‌ಗಳನ್ನು ನಾವು ತಯಾರು ಮಾಡುತ್ತಿದ್ದೇವೆ. But, the unfortunate thing is that we have no doctors in our villages. ಹಾಗಾದರೆ ನೀವು ಯಾರ ಸಲುವಾಗಿ ಈ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿದಿರಿ. ಯಾರಿಗೋಸ್ಕರ ನೀವು ಈ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಿದಿರಿ. ಇದರ ಅರ್ಥ ಏನೆಂದರೆ, ನಮ್ಮ ಸಮಾಜದ ಅವಶ್ಯಕತೆ ಏನು ಇದೆ ಆ ಅವಶ್ಯಕತೆಗೆ ಅನುಗುಣವಾಗಿ ನೀವು ಶಿಕ್ಷಣವನ್ನು ರೂಪಿಸುತ್ತಾ ಇದ್ದಿರೋ ಅಥವಾ ವ್ಯಾಪಾರಕ್ಕೋಸ್ಕರ ಶಿಕ್ಷಣವನ್ನು ರೂಪಿಸುತ್ತಾ ಇದ್ದಿರೋ ಎನ್ನತಕ್ಕಂಥದ್ದು ಸ್ಪಷ್ಟವಾಗುತ್ತದೆ. ಅಂತಹ ಒಂದು ಸನ್ನಿವೇಶದಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಈ ಸರ್ಕಾರ ಮತ್ತೆ ಇಂಜನಿಯರಿಂಗ್ ಕಾಲೇಜು ಮತ್ತೆ ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಲಿಕ್ಕೆ ಹೊರಟಿದೆ. ಹೊಸ ಕಾಲೇಜುಗಳನ್ನು ಕೊಡುತ್ತಿದ್ದೇವೆಂದು ಈಗಾಗಲೇ ಮಂತ್ರಿ ಮಂಡಲದಲ್ಲಿ ತೀರ್ಮಾನ ಆಗಿರತಕ್ಕಂಥ ರೀತಿಯಲ್ಲಿ ಪತ್ರಿಕೆಯಲ್ಲಿ ಬಂದಿದ್ದನ್ನು ನಾವು ನೋಡಿದ್ದೇವೆ. ಹಾಗಾಗಿ ಇವತ್ತು ಶಿಕ್ಷಣದ ಮೂಲ ಉದ್ದೇಶ ಏನು? ಶಿಕ್ಷಣದ ಬಗ್ಗೆ ಮೂಲ ಉದ್ದೇಶವೂ ಇಲ್ಲ. ಶಿಕ್ಷಣದ ಬಗ್ಗೆ ಪ್ರಾಥಮಿಕ ಕಾಳಜಿಯೂ ಇಲ್ಲ. ಏಕೆ ಶಿಕ್ಷಣ ಕೊಡಬೇಕೆನ್ನುವ ಬಗ್ಗೆ ಗೊತ್ತು ಗುರಿ ಏನೂ ಇಲ್ಲದೆ ಇರತಕ್ಕಂಥ ಶಿಕ್ಷಣವು ಒಂದು ಕಮಾಡಿಟಿಯಾಗಿದೆ. Education has also become a commodity which can be freely purchased in the market by those who are capable to purchase, who are having a capacity to purchase. Yesterday, ನನ್ನ ಸ್ನೇಹಿತರು ಹೇಳಿದಂಥಾ ರೀತಿಯಲ್ಲಿ ಡಿಗ್ರಿ ಸರ್ಟಿಫಿಕೇಟ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಇಷ್ಟು ರೇಟಿಗೆ ಎಂದು. It is a purchasable commodity, not only certificates, but education has also become the purchasable

commodity in this state. ಅಂತಹ ಸಂದರ್ಭದಲ್ಲಿ ಇವತ್ತು ಇದನ್ನು ಸರ್ವನಾಶ ಮಾಡಲಿಕ್ಕೆ ಕರ್ನಾಟಕ ರಾಜ್ಯ ಸರ್ಕಾರದವರು ಒಂದು ಬಿಲ್ಲನ್ನು ತರುತ್ತಿದ್ದಾರೆ. ಅದು 1997ರ ಯೂನಿವರ್ಸಿಟಿ ಎಜ್ಯುಕೇಷನ್ ಬಿಲ್ ಇದರ ಬಗ್ಗೆ ನಾನು ವಿವರವಾಗಿ ನಂತರ ಹೇಳುತ್ತೇನೆ. ಈ ಬಿಲ್ಲಿನ ಉದ್ದೇಶ ಏನು ಎಂದು ಹೇಳಿದರೆ ಈ ಸರ್ಕಾರ ಮತ್ತು ಈ ಗೌರವಾನ್ವಿತ ಸದನ ಈ ಬಿಲ್ಲನ್ನು ಒಪ್ಪಿಬಿಟ್ಟರೆ ಇಡೀ ಕರ್ನಾಟಕದಲ್ಲಿ ವಿಶ್ವವಿದ್ಯಾನಿಲಯಗಳಿಗೆ ಬಾಗಿಲು ಹಾಕಿಬಿಟ್ಟು ಅದರ ಇಡೀ ವ್ಯವಸ್ಥೆಯನ್ನು ನಾಶ ಮಾಡಿ ಅಲ್ಲಿ ಅಡ್ಮಿನಿಸ್ಟ್ರೇಟರ್‌ಗಳನ್ನು ಅಪಾಯಿಂಟ್ ಮಾಡಿಬಿಟ್ಟು ಆ ಅಡ್ಮಿನಿಸ್ಟ್ರೇಟರುಗಳು ಈ ಸರ್ಕಾರದ ಕೈಗೊಂಬೆಗಳಾಗಿ ಕೆಲಸ ಮಾಡುವಂತಹ ರೀತಿಯಲ್ಲಿ ಈ ಬಿಲ್ಲನ್ನು ತರುತ್ತಿದ್ದಾರೆ. ನಾನು ಈ ಬಿಲ್ಲಿನ ಬಗ್ಗೆ ಮತ್ತೆ ಹೇಳುತ್ತೇನೆ. ಈ ಬಿಲ್ಲಿನ ಹಿಂದೆ ಇರತಕ್ಕಂಥ ಕ್ರೂರ ಹೃದಯಗಳು ಯಾವುವು ಆ ಅಮಾನುಷ ಹೃದಯಗಳು ಶಿಕ್ಷಣದ ಬಗ್ಗೆ ಪ್ರಾಮಾಣಿಕ ಕಾಳಜಿ ಇಲ್ಲದೆ ಇರತಕ್ಕಂಥ ಜನ. ವಿಶ್ವವಿದ್ಯಾನಿಲಯಗಳ ಬಗ್ಗೆ ಕನಿಷ್ಠ ಪ್ರಾಮಾಣಿಕತೆ ಇಲ್ಲದೆ ಇರುವಂತಹ ಜನ ಈ 1997ನೇ ಡ್ರಾಫ್ಟ್ ಬಿಲ್ಲನ್ನು ತರಲಿಕ್ಕೆ ಯೋಚಿಸುತ್ತಿದ್ದಾರೆ. ಈ ಕೊಳಕು ಮನಸ್ಸು ಈ ಬಿಲ್ಲನ್ನು ತಯಾರು ಮಾಡಿರುವ ಕೊಳಕು ಕ್ರೂರ ಮನಸ್ಸುಗಳು ಏನನ್ನು ರಿಫ್ಲೆಕ್ಟ್ ಮಾಡುತ್ತಿವೆ ಎಂದು ಹೇಳಿದರೆ ಈ ದೇಶದಲ್ಲಿ ವಿದ್ಯಾಭ್ಯಾಸ ಅಲ್ಲ ಬೇಕಾಗಿರತಕ್ಕದ್ದು. ವಿದ್ಯಾಭ್ಯಾಸದ ಹೆಸರಿನಲ್ಲಿ ರಾಜಕೀಯ ಲೂಟಿ ನಡೆಯಬೇಕು, ರಾಜಕೀಯ ಅಧಿಕಾರ ನಡೆಯಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ಬಿಲ್ಲನ್ನು ತರುತ್ತಿದ್ದಾರೆ. ಅದರ ಜೊತೆಗೆ ಕಾಂಪೋಸ್ಟ್ ಡಿಗ್ರಿ ಸ್ಕೂಲ್ಸ್ ಸಪರೇಟ್ ಮಾಡಬೇಕು. ಅಂದರೆ ಪಿ.ಯು.ಸಿ ಡಿಗ್ರಿ ಒಟ್ಟಾಗಿ ಇದ್ದಂಥ ಈ ಶಿಕ್ಷಣದ ವ್ಯವಸ್ಥೆಯನ್ನು ಬದಲು ಮಾಡಿ ಪಿ.ಯು.ಸಿಯನ್ನು ಪ್ರತ್ಯೇಕ ಮಾಡಿ ಕಾಂಪೊಸಿಟ್ ಕಾಲೇಜು ಡಿಗ್ರಿಯನ್ನು ಒಂದೊಂದು ಸಪರೇಟ್ ಆಗಿ ಮಾಡಬೇಕು ಎನ್ನುವ ವಾದವನ್ನು ಇವತ್ತು ಮುಂದಿಡುತ್ತಿದ್ದಾರೆ. ಇದರ ಸಾಧಕ ಬಾಧಕಗಳು ಏನು ಕಾಂಪೊಸಿಟ್ ಕಾಲೇಜುಗಳನ್ನು ಡಿವೈಡ್ ಮಾಡಿ ಇವರ ಸರ್ಕಾರದ ವಾದ ಏನು ಎಂದರೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ. ಅಂದರೆ it is a pure business mind. 100% business mind. ನೀವು ಆರ್ಥಿಕ ಹೊರೆ ಕಡಿಮೆಯಾಗುತ್ತದೆ ಎನ್ನುವ ವಿಷಯವನ್ನು ಮಾತನಾಡುತ್ತೀರೇ ಹೊರತು ಈ ಶಿಕ್ಷಕರ ಅನುಭವ ಏನು ಆ ವಿಧ್ಯಾರ್ಥಿಗಳಿಗೆ ಅವರು ಕೊಟ್ಟಿರತಕ್ಕಂಥ ಆ ಮೌಲ್ಯಗಳು ಏನು ಅದರ ಬಗ್ಗೆ ಮಾತ್ರ ಇವರಿಗೆ ಕಾಳಜಿ ಇಲ್ಲ ಅದರ ಬದಲು ಇದನ್ನು ಪೂರ್ತಿಯಾಗಿ ವ್ಯಾಪಾರದ ದೃಷ್ಟಿಯಿಂದ ಪ್ರಾಫಿಟ್ ಅಂಡ್ ಲಾಸ್ ದೃಷ್ಟಿಯಿಂದ ಇವತ್ತು ನೋಡುತ್ತಿದ್ದಾರೆ. ಈ ಪ್ರಾಫಿಟ್ ಅಂಡ್ ಲಾಸ್ ಎಲ್ಲಿಗೆ ಬಂದಿದೆ ಎಂದರೆ ಇವರೇ ರಚನೆ ಮಾಡಿರುವಂಥ ಒಂದು ಕಮಿಟಿ ಏನಿದೆ ಆ ಕಮಿಟಿ ವರದಿಯಲ್ಲಿ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಬಹಳ ಸ್ಪಷ್ಟವಾದಂಥ ಒಂದು ವಿಷಯವನ್ನು ಅದರಲ್ಲಿ ಹೇಳಿದ್ದಾರೆ. ನಾನು ಅದನ್ನು ಸಂಪೂರ್ಣ ಒಪ್ಪದೇ ಹೋದರೆ ಇವತ್ತಿನ ಪರಿಸ್ಥಿತಿಯನ್ನು ನೆಗ್ಲೆಕ್ಟ್ ಮಾಡಿದರೆ ಆ ವರದಿಯಲ್ಲಿ ಯಾವ ರೀತಿ ಇದೆ ಎಂದು ಹೇಳಿದರೆ A non-committed teacher teaching unwilling students, having irrelevant syllabus facing uncertain examination. This is the final culmination of this profit motivated education system. How can you blame the student community? How

can you blame the teaching community? What is wrong with them? When you made this education as a commodity which can be purchased in the open market by those who are capable to purchase, you are going to blame the teaching community and the student community that they are unwilling and non-committed. It is a sheer responsibility of the Government which is not at all having a basic approach to the education system and which does not understand the basic values of the education system.

10.40 ಎ.ಎಂ.

ಅಂತಹ ಒಂದು ಸರ್ಕಾರದವರು ಇವತ್ತು ಶಿಕ್ಷಣದಲ್ಲಿ ಮೌಲ್ಯಗಳ ಬಗ್ಗೆ ಮಾತನಾಡುತ್ತಾರೆ. ಶಿಕ್ಷಣದ ಸುಧಾರಣೆಯ ಬಗ್ಗೆ ಮಾತನಾಡುತ್ತಾರೆ. ಪ್ರಾಮಾಣಿಕ ಅಧಿಕಾರಿಗಳು ಕೂಡ ಇದರಲ್ಲಿ ಪ್ರಯತ್ನ ಮಾಡುತ್ತಾರೆ. ನಾನು ಅವರನ್ನು ನಿಜವಾಗಿಯೂ ಅಭಿನಂದಿಸುತ್ತೇನೆ. ಅವರು ಅರ್ಥಮಾಡಿಕೊಳ್ಳಬೇಕು. ನಿಮ್ಮ ಎಲ್ಲಾ ಎಕ್ಸರ್‌ಸೈಸ್ ಕೂಡ it will go to to the dustbin because the whole system, when degenerated the whole socio-economic system making the education as a mockery, all your reformistic ideas do not give any result at all, because we should have a basic approach. ಇಂತಹ ಸಂದರ್ಭದಲ್ಲಿ ಇರತಕ್ಕಂತಹ ಶಿಕ್ಷಣವನ್ನು ಏನಾದರೂ ಸುಧಾರಣೆ ಮಾಡಲಿಕ್ಕೆ ಸಾಧ್ಯ ಇದೆಯೇ? ಇರತಕ್ಕಂತಹ ವ್ಯವಸ್ಥೆಯಲ್ಲಿ, ಇರತಕ್ಕಂತಹ ಶಿಕ್ಷಣವನ್ನು ಇದರಲ್ಲಿ ಏನಾದರೂ ಮಾಡಲಿಕ್ಕೆ ಸಾಧ್ಯ ಇದೆಯೇ ಎಂದರೆ ಅದರಲ್ಲೂ ಕೂಡ ಪ್ರಾಮಾಣಿಕತೆ ಇಲ್ಲ. ಆ ಅಪ್ರಮಾಣಿಕತೆ ಇವತ್ತು ಎಷ್ಟರಮಟ್ಟಿಗೆ ಹೋಗಿದೆ ಎಂದರೆ ಶಿಕ್ಷಣದ ಮೂಲಭೂತ ಸಮಸ್ಯೆಗಳನ್ನು ಗುರುತಿಸಿ ಅದಕ್ಕೆ ಪರಿಹಾರ ಕಂಡುಹಿಡಿಯಬೇಕು. ಪ್ರಾಥಮಿಕ ಶಿಕ್ಷಣದ ಮೂಲಭೂತ ಸಮಸ್ಯೆಗಳೇನು ಅದನ್ನು ಪರಿಹಾರ ಮಾಡಬೇಕು. ನಮ್ಮ ಹಲವಾರ ಮಿತ್ರರು ಮಾತನಾಡುವಾಗ ಹೇಳಿದರು, ಶಾಲಾ ಕಟ್ಟಡಗಳು ಇಲ್ಲ, ಕಟ್ಟಡ ಇದ್ದರೆ ಟೀಚರ್ಸ್‌ಗಳು ಇಲ್ಲ, ಡೆಸ್ಕ್‌ಗಳು ಇಲ್ಲ ಎಂದು ಹೇಳಿದರು ಇದೆಲ್ಲವೂ ಸರಿ. ಇದರ ಜೊತೆಗೆ ನಾವು ನಮ್ಮ ವಿದ್ಯಾರ್ಥಿಗಳಿಗೆ ಏನನ್ನು ಹೇಳಿಕೊಡುತ್ತಿದ್ದೇವೆ ಆ ಮಕ್ಕಳು ಏನನ್ನು ಕಲಿಯಬೇಕು? ಏನನ್ನು ತಿಳಿದರೆ ಈ ದೇಶಕ್ಕೆ ಅವರಿಂದ ಪ್ರಯೋಜನವಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಸಾರ್ವತ್ರೀಕರಣಗೊಳ್ಳದೇ ಇರತಕ್ಕಂತಹ ಶಿಕ್ಷಣ, ಅಸಮಾನ ವ್ಯವಸ್ಥೆಯಲ್ಲಿ ಕೊಡುತ್ತಿರತಕ್ಕಂತಹ ಅಸಮಾನ ವಿದ್ಯೆ ಅಂತಹ ಪರಿಸ್ಥಿತಿಯಲ್ಲಿ ನಾವು ನಮ್ಮ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಅವರಿಗೆ ಏನನ್ನು ಹೇಳಿಕೊಡುತ್ತಿದ್ದೇವೆನ್ನುವುದು ಬಹಳ ಮುಖ್ಯ. ನಂಬರ್‌ಆಫ್ ಸ್ಕೂಲ್ ಬಿಲ್ಡಿಂಗ್ಸ್ ಮತ್ತು ಟೀಚರ್ಸ್ ಹುದ್ದೆಗಳನ್ನು ಇನ್‌ಕ್ರೀಸ್ ಮಾವುದರ ಜೊತೆಗೆ ನಾವು ಏನನ್ನು ಹೇಳಿಕೊಡುತ್ತಿದ್ದೇವೆ, ಏನನ್ನು ಹೇಳಿಕೊಡಬೇಕಾಗಿತ್ತು ಅದನ್ನು ಮೊದಲು ವಿಚಾರ ಮಾಡಬೇಕು. ಆಗಸ್ಟ್ 15ರಂದು 50ನೇ ಸ್ವಾತಂತ್ರ್ರೋತ್ಸವವನ್ನು ಆಚರಣೆ ಮಾಡುತ್ತಿದ್ದೇವೆ. ಈ ದೇಶಕ್ಕೆ ಸ್ವಾತಂತ್ರ್ಯ ಯಾವಾಗ, ಯಾರಿಗೆ, ಏಕೆ ಬಂತು ಎಂಬ ವಿಷಯ ಈ ದೇಶದ ನೂರಕ್ಕೆ 60 ಜನರಿಗೆ ಗೊತ್ತಿಲ್ಲ.

ರು ಎಲ್ಲಿಯಾದರೂ ಸ್ವಾತಂತ್ರ್ಯ ಹೋರಾಟಗಾರರ ಫೋಟೋ ನೋಡಿದ್ದು, ಇನ್ನು ಕೆಲವು ದಿವಸ ೀದ ಮೇಲೆ ಇವರೇನಾದರೂ ಜೈಲಿನಲ್ಲಿ ಇದ್ದುದ್ದನ್ನು ನೋಡಿದ್ದರೆ, ಇವರೇನಾದರೂ ಬೇರೆ ಣಕ್ಕೆ ಜೈಲಿಗೆ ಹೋಗಿದ್ದಾರೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಎನ್. ರಾಜಣ್ಣ : ಮಾನ್ಯ ಶ್ರೀರಾಮರೆಡ್ಡಿಯವರ ಡೇಟ್ ಆಫ್ ಬರ್ತ್ ಏನು ಎನ್ನುವುದನ್ನು ತಿಳಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಅವಶ್ಯಕತೆ ಇದ್ದರೆ ನಾನು ಹೇಳುತ್ತೇನೆ.

ಶ್ರೀ ಎನ್. ರಾಜಣ್ಣ : ಇವರೇನು ರಿಯಲ್ ತ್ಯಾಗೀನಾ ಎಂಬುದು ಗೊತ್ತಾಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದು ಕರೆಕ್ಟ್. ನಾನು ್.ಎಸ್.ಎಲ್.ಸಿ ಮಕ್ಕಳು ಇದ್ದ ಶಾಲೆಗೆ ಹೋಗಿದ್ದೆ. ಅಲ್ಲಿಯ ಮಕ್ಕಳನ್ನು 1997ನೇ ಇಸವಿ ಮ್ಮ ಭಾರತ ದೇಶಕ್ಕೆ ಏಕೆ ಮುಖ್ಯವೆಂದು ಕೇಳಿದಾಗ ಒಬ್ಬನು ತುಂಬಾ ಯೋಚನೆ ಮಾಡಿ || ರಾಜ್‌ಕುಮಾರ್ ಅವರಿಗೆ ಫಾಲ್ಕೆ ಅವಾರ್ಡ್ ಕೊಟ್ಟರು ಎಂದು ಹೇಳಿದರು. ಅದು ಹೋದ ರ್ಷ ಬಂತು. 1997ನೇ ಇಸವಿ ಏಕೆ ಮುಖ್ಯ ಎಂದು ಕೇಳಿದ್ದಕ್ಕೆ ತುಂಬಾ ತಲೆ ಕೆಡಿಸಿಕೊಂಡು ಬ್ಬನು ನ್ಯಾಷನಲ್ ಗೇಮ್ಸ್ ಬಂತು ಎಂದು ಹೇಳಿದ. ಅದು 4 ವರ್ಷಕ್ಕೊಂದು ಸಲ ನಡೆಯುತ್ತಿರುತ್ತದೆ ಂದು ಹೇಳಿದ 1997ನೇ ಇಸವಿ ಏಕೆ ಮುಖ್ಯ ಎಂದು ಕೇಳಿದ್ದಕ್ಕೆ ಒಬ್ಬ ಬುದ್ಧಿವಂತ ಕೊನೆಗೆ ಳಿದ ಇಂಡಿಪೆಂಡೆಟ್ಸ್ ಕ್ರಿಕೆಟ್ ಮ್ಯಾಚ್ ನಡೆಯಿತು ಎಂದು. ಕೊನೆಗೂ ಅವನಿಗೆ ಇಂಡಿಪೆಂಡೆಟ್ಸ್ ್ ಏಕೆ ನಡೆಯಿತು ಎಂಬುದು ಗೊತ್ತಿಲ್ಲ ಇದು ಪರಿಸ್ಥಿತಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ದೇಶದ ಶಿಕ್ಷಣದಲ್ಲಿ ಪ್ರಪ್ರಥಮವಾಗಿ ಇರಬೇಕಾದಂತಹ ತಂತ್ರ್ಯ ಸಂಗ್ರಾಮದ ಮೌಲ್ಯಗಳ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ನಾವೆಲ್ಲಾ ಸ್ವಾತಂತ್ರ್ಯ ಂದ ಮೇಲೆ ಹುಟ್ಟಿರತಕ್ಕಂತಹವರು. ಮಾನ್ಯ ಪಟೇಲರು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ hot bed of struggle ಸಂದರ್ಭದಲ್ಲಿ ಹುಟ್ಟಿರತಕ್ಕಂತಹ ಜನ ಇದ್ದಾರೆ. ಅವರ ಕೈಯಲ್ಲಿ ನೆಲ್ಲಾ ಸಾಧ್ಯಾವಿದೆಯೋ ಮ್ಯಾಕ್ಸಿಮಮ್ ಸ್ಯಾಕ್ರಿಫೈಸ್ ಮಾಡಲಿಕ್ಕೆ ಸಾಧ್ಯ ಇದ್ದಂತಹ ಜನ ಈ ೀಶಕ್ಕೆ ಸ್ವಾತಂತ್ರ್ಯ ತರಲಿಕ್ಕೋಸ್ಕರ ಸ್ಯಾಕ್ರಿಫೈಸ್ ಮಾಡಿದ್ದಾರೆ. ಕೊನೆಗೆ ತಮ್ಮ ಪ್ರಾಣಗಳನ್ನೇ ಬಲಿ ೊಟ್ಟಂತಹ ಜನ ನಮ್ಮ ದೇಶದ ಇತಿಹಾಸದಲ್ಲಿ ಇದ್ದಾರೆ. ನಮ್ಮ ದೇಶದ ಸ್ವಾತಂತ್ರ್ಯಕ್ಕೋಸ್ಕರ ಯಾರ್‍ಯಾರು ್ರಾಣ ಕೊಟ್ಟರು ಎನ್ನುವ ವಿಷಯ ಈ ಜನಾಂಗಕ್ಕೆ ಗೊತ್ತಿಲ್ಲ. ಇದು ನಮ್ಮ ದುರಂತ. ನಾಳೆ ಭಗತ್ ಂಗ್, ಸುಭಾಷ್ ಚಂದ್ರಬೋಸ್, ರಾಜಗುರು ಸುಖದೇವ್ ಅವರ ಫೋಟೋಗಳನ್ನು ಎಲ್ಲಿಯಾದರೂ ಸ್ತು ಪ್ರದರ್ಶನದಲ್ಲಿ ಇಟ್ಟು ಇವರು ಯಾರು ಎಂದು ಕೇಳಿದರೆ ಎಲ್ಲಿ ಏನಾದರೂ ಹೇಳಿಬಿಡುತ್ತಾರೋ ಂಬ ಭಯಕ್ಕೆ ಆ ಫೋಟೋಗಳನ್ನು ಇಡುವುದು ಬೇಡವೆಂದು ಹೇಳುವ ಪರಿಸ್ಥಿತಿ ಬಂದಿದೆ. ಕೆಂದರೆ ಆ ಭಗತ್ ಸಿಂಗ್‌ಗೆ ಗಡ್ಡ ಇದೆ, ರಾಜಗುರುವಿಗೆ ಮೀಸೆ ಇದೆ ಇದೆಲ್ಲಾ ನೋಡಿ ಇವರು ೀರೆ ಯಾರೋ ಎಂದು ಹೇಳಿದರೆ ಅದು ನಮ್ಮ ಗ್ರಹಚಾರ. ಅದು ಈ ದೇಶದ ದುರಂತ. ಏಕೆ

ನಾವು ಈ ರೀತಿಯಾಗಿದ್ದೇವೆ, ಯಾರನ್ನು ಇದಕ್ಕೆ ಬ್ಲೇಮ್ ಮಾಡಬೇಕು. ಇವತ್ತಿಗೂ ನಮ್ಮ ಶಿಕ್ಷಣದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಪ್ರಾಣಗಳನ್ನು ಬಲಿ ಕೊಟ್ಟು ಈ ದೇಶವನ್ನು ದಾಸ್ಯದಿಂದ ಮಿಮುಕ್ತವನ್ನ ಮಾಡಿದಂತಹ ಆ ವೀರ ಸೇನಾನಿಗಳ ಬಗ್ಗೆ ಯಾವುದಾದರೂ ಪುಸ್ತಕದಲ್ಲಿ ಇದೆಯೇ? ಕೆಲವರ ಇದೆ. ಗಾಂಧೀಜಿಯವರದ್ದು ಇದೆ ನೆಹರು ಅವರದ್ದು ಇದೆ.

ಡಾ|| ಎಂ.ಪಿ. ಕರ್ಕಿ : ಭಗತ್‌ಸಿಂಗ್ ಅಜಾದ್ ಎಂದು ಹೇಳಿದರಲ್ಲಾ ಅವರೆಲ್ಲಾ untochabl

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಗಾಂಧೀಜಿ ಮತ್ತು ನೆಹರು ಬಗ್ಗೆ ಈ ದೇಶದಲ್ಲಿ ಯಾರಾದರ ಅಪಸ್ವರ ಎತ್ತಿದರೆ ಅದು ಅಪ್ರಸ್ತುತ. They are undisputed leaders. ಅವರ ಬಗ್ಗೆ ಯಾರ ಎರಡನೇ ಮಾತು ಮಾತನಾಡತಕ್ಕಂತಹ ಪ್ರಶ್ನೆಯೇ ಇಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಂತಹವ ಅವರಿಬ್ಬರೇ ಎನ್ನುವ ಮೆಸೇಜ್ ಏನು ಇದೆ ಅದು ನಮ್ಮನ್ನು ಇವತ್ತು ಎಲ್ಲಿಗೆ ತೆಗೆದುಕೊಂ ಹೋಗಿದೆ ಎಂದರೆ...

ಶ್ರೀ ಜೆ.ಹೆಚ್. ಪಟೇಲ್ : ಗಾಂಧೀಜಿಯವರನ್ನು ಬೇರೆ ಯಾರಿಗೂ ಹೋಲಿಸಬೇ ನೆಹರುರವರು, ಪಟೇಲ್ ಆಜಾದ್ ಇವರೆಲ್ಲಾ ಬಹಳ ದೊಡ್ಡ ರಾಷ್ಟ್ರ ನಾಯಕರು. ಗಾಂಧೀಜಿಯ ಬೇರೆ ಕ್ಲಾಸ್. ಅವರಿಗೆ ಹೋಲಿಸುವುದು ಬಹುಶಃ ಸರಿಯಲ್ಲ, ಏತಕ್ಕೆಂದರೆ ಶತಶತಮಾನಗಳ ಒಬ್ಬರು ಅಂಥವರು ಹುಟ್ಟುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಸ್ವಾತಂತ್ರ್ಯ ಸಂಗ್ರಾಮ ಇತಿಹಾಸ ಬಹಳ ದೊಡ್ಡದು. ಲಕ್ಷಾಂತರ ಜನ ತಮ್ಮ ಪ್ರಾಣಗಳನ್ನು ಬಲಿ ಕೊಟ್ಟಿದ್ದಾರೆ ಅವರ ಬ ನಮ್ಮ ಜನಾಂಗಕ್ಕೆ ಕಡೇ ಪಕ್ಷ ನೀವೇನು ಹೇಳದೇ ಇದ್ದರೂ ಕೂಡ ಇಂತಿಂತಹವರು ನಮ್ಮ ದೇಶ ಸ್ವಾತಂತ್ರ್ಯಕ್ಕೋಸ್ಕರ ತಮ್ಮನ್ನು ತಾವೇ ಬಲಿಕೊಟ್ಟುಕೊಂಡಿದ್ದಾರೆ ಎಂದು ಅಷ್ಟಾದರೂ ಹೇಳದೇ ಹೋದ ನಮ್ಮ ಜನಾಂಗದ ಪರಿಸ್ಥಿತಿ ಏನಾಗಬಹುದು ಎಂದು ವಿಚಾರ ಮಾಡಿ. ಇವತ್ತು ಯುವ ಜನಾಂ ಯಾರು ಆದರ್ಶವಾಗಬೇಕು . ದುರಂತದ ಪರಿಸ್ಥಿತಿಯಲ್ಲಿ ಈಗಿನ ಸಾರ್ವಜನಿಕ ಜೀವನದಲ್ಲಿರತಕ್ಕಂತ ರಾಜಕಾರಣಿಗಳ ಬಗ್ಗೆ ರಾಜಕೀಯ ವ್ಯವಸ್ಥೆ ಬಗ್ಗೆ ಬಹಳಷ್ಟು ಅಪನಂಬಿಕೆಗಳು, ಅಸಮಾಧಾನಗ ಗುಮಾನಿಗಳು ಸಾರ್ವಜನಿಕ ಜೀವನದಲ್ಲಿ ಬರುತ್ತವೆ. ಗಾಂಧಿ ನೆಹರು ಅವರಂತಹ ನಾಯಕ ಇಡೀ ಜನಾಂಗದ ಒಂದು ಸ್ವಾಭಿಮಾನದ ಪ್ರತೀಕ, ಪ್ರಾಮಾಣಿಕತೆಯೆ ಪ್ರತೀತವಾಗತಕ್ಕಂತಹ ಸ್ಥಿತಿಯ ಇಲ್ಲ. ಹಾಗಾದರೆ ಯಾರು ಆದರ್ಶವಾಗಬೇಕು? ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯ ಆ ವೀ ಸೇನಾನಿಗಳನ್ನು ಗುರುತಿಸತಕ್ಕಂತಹ ಪರಿಸ್ಥಿತಿಯಲ್ಲೂ ನಾವು ಇಲ್ಲ. ಈ ದೇಶಕ್ಕೆ ಯಾ ಆದರ್ಶವಾಗಬೇಕು? ಆದರ್ಶವಾಗತಕ್ಕಂತಹ ಮೌಲ್ಯಗಳಾಗಲೀ ಆದರ್ಶವಾಗತಕ್ಕಂತಹ ವ್ಯಕ್ತಿಗಳಾಗ ಕಾಣುತ್ತಿಲ್ಲ. ಇದಕ್ಕೆ ಯಾರು ಕಾರಣರು? ಪ್ರಾಥಮಿಕ ಶಿಕ್ಷಣದ ಪುಸ್ತಕವನ್ನು ತೆಗೆದು ನೋಡಿ ಸ್ವಾತಂ ಸಂಗ್ರಾಮದಲ್ಲಿ ಭಾಗವಹಿಸಿ ತಮ್ಮ ಪ್ರಾಣಗಳನ್ನು ಬಲಿ ಕೊಟ್ಟಂತಹ ಜನರ ಬಗ್ಗೆ ಪರಿಚಯ ಇ ಉನ್ನತ ಶಿಕ್ಷಣದಲ್ಲಿ ನೋಡಿ ಅವರ ಪರಿಚಯ ಇಲ್ಲ. ಸೆಲೆಕ್ಟೆಡ್ ಸಿಲಬಸ್‌ಯಾವ ರೀತಿ ಇದೆ.

country. ಉತ್ಪಾದನಾ ಸಾಮಗ್ರಿಗಳ ಮೇಲೆ ಯಾರ ಒಡೆತನ ಇತ್ತು ಆ ವರ್ಗಕ್ಕೆ ಬೇಕಾಗಿರತಕ್ಕಂತಹ ಸೆಲೆಕ್ಟೆಡ್ ಸಿಲಬಸ್ ಅನ್ನು ಈ ದೇಶದಲ್ಲಿ ಸೃಷ್ಟಿ ಮಾಡಿದ್ದಾರೆ. ಈ ದೇಶದ ರೈತರ ಬಗ್ಗೆ ಕಾಳಜಿ ಇಲ್ಲ. ಕಾರ್ಮಿಕರ ಬಗ್ಗೆ ಕಾಳಜಿ ಇಲ್ಲ. ಈಗಿನ ಜನಾಂಗಕ್ಕೆ ವಿಜ್ಞಾನಿಗಳ ಬಗ್ಗೆ ಗೌರವ ಇಲ್ಲ. ಈ ದೇಶದ ಶಿಕ್ಷಣ ತಜ್ಞರ ಬಗ್ಗೆ ಗೌರವ ಇಲ್ಲ. ಮತ್ತು ಇವುಗಳ ಬಗ್ಗೆ ನಮ್ಮ ಶಿಕ್ಷಣದಲ್ಲಿ ಎಲ್ಲೂ ಚರ್ಚೆ ಮಾಡಿಲ್ಲ. ಪ್ರಾಥಮಿಕವಾಗಿ ಅವರಿಗೆ ಇದರ ಬಗ್ಗೆ ಪರಿಜ್ಞಾನವೇ ಇಲ್ಲ. ಅವರೆಲ್ಲಾ ಇರುವುದು, ಏನನ್ನು ಓದಿದರೆ ಎಷ್ಟು ಸಂಬಳ ಸಿಗಬಹುದು, ಏನನ್ನು ಕಲಿತರೆ ಬೇಗ ಕೆಲಸ ಸಿಗಬಹುದು ಇವೆರಡೇ ಲೆಕ್ಕಚಾರದಲ್ಲಿ ಇದ್ದಾರೆ. ಇವೆರಡು ಲೆಕ್ಕಾಚಾರ ಬಿಟ್ಟರೆ ಇನ್ನೊಂದು ಲೆಕ್ಕಾಚಾರದಲ್ಲಿ ವಿದ್ಯೆಯನ್ನು ಕಲಿಯಬೇಕೆನ್ನುವ ಪ್ರಶ್ನೆಯೇ ಇವತ್ತು ದೇಶದಲ್ಲಿ ಇಲ್ಲ. ಇಂತಹ ಸಂದರ್ಭದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರಕಾರ 1997ನೇ ಇಸವಿಯ ಯೂನಿವರ್ಸಿಟಿ ಆ್ಯಕ್ಟ್ ಅನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದೆ. ಈ ಆಕ್ಟ್ ಅನ್ನು ನಾವೇನಾದರೂ ಒಪ್ಪಿದರೆ ಯೂನಿವರ್ಸಿಟಿಗಳ ಅವಶ್ಯಕತೆ ಇಲ್ಲ. ಚೀಫ್ ರಿಜಿಸ್ಟ್ರಾರ್ ಎನ್ನತಕ್ಕಂತಹ ಒಂದು ಪೋಸ್ಟ್‌ನ ಪ್ರಪೋಸಲ್ ಅನ್ನು ಇವತ್ತು ಈ ಬಿಲ್ಲಿನಲ್ಲಿ ಮಾಡುತ್ತಿದ್ದಾರೆ. ಮೊದಲು ರಿಜಿಸ್ಟ್ರಾರ್ ಎಂದು ಇತ್ತು. According to the draft Bill, the Chief Registrar shall be a whole time Officer of the University appointed by the Government in consultation with the Vice-Chancellor, Who shall be a Member of the Indian Administrative Service (Super-time scale). The emoluments and Terms and Conditions of service of the Chief Registrar shall be determined by the State Government, the Chief Registrar shall be the Member-Secretary of the Syndicate and Board of Appointees, Academic, Senate and the Finance Committee, he shall be in overall charge of the administrative matters including finance and allied matters relating to the university and shall perform subject to the overall control and supervision of the VC. He shall issue notices of the meetings of the syndicate, Exercise such powers and such duties as may be prescribed under this Act, or Rules or Statutes made thereunder. In the performance of the duties, he shall be assisted by the Registrar of Academic, Registrar of Evaluation, Law Officer and the Finance Officer. His duties, functions and powers shall be as may be prescribed under this Act or Rules or in the status. ಇವರನ್ನು ಚೀಫ್ ರಿಜಿಸ್ಟ್ರಾರ್ ಎಂದು ಹೇಳಿ ಅಪಾಯಿಂಟ್ ಮಾಡಿದರೆ ವೈಸ್ ಛಾನ್ಸಲರ್ ಏತಕ್ಕೆ ಇರಬೇಕು? What is the necessity of Vice Chancellor? You can remove that post. What is the point in having the Vice Chancellor if we agree for this Chief Registrar's post? ನೋಡಿ, ಇಲ್ಲಿ ಎಷ್ಟು ಸ್ಪಷ್ಟವಾಗಿ ಹೇಳುತ್ತಾರೆ ಎಂದರೆ : "The Chief Registrar shall be the Member-Secretary of the Syndicate". ಸಿಂಡಿಕೇಟ್‌ಗೆ ಮೆಂಬರ್ ಸೆಕ್ರೆಟರಿ ಯಾರು ಎಂದರೆ ಗೌರ್ನಮೆಂಟ್ ಅಪಾಯಿಂಟ್‌ಮೆಂಟ್ ಮಾಡುವ ಒಬ್ಬ ಮನುಷ್ಯ. ಬೋರ್ಡ್ ಆಫ್ ಅಪಾಯಿಂಟೀಸ್ Member of the Academic Council and

member of the Senate. ಸೂಪರ್ ಟೈಮ್ ಸ್ಕೇಲ್ ಇರುವ ಒಬ್ಬ ಐಎಎಸ್ ಆಫೀಸರನ್ನು ಅಕಾಡೆಮಿಗೆ ನೀವು ಮೆಂಬರ್ ಎಂದು ಹೇಳುವುದಾದರೆ ಆ ಅಕಾಡೆಮಿ ಕೌನ್ಸಿಲ್‌ನ ಉದ್ದೇಶವೇನು? ಅಕಾಡೆಮಿ ಕೌನ್ಸಿಲ್ ಎಂದರೆ ಏನು ಅದರ ಅರ್ಥ? ಮಹಾನ್ ಬುದ್ಧಿಜೀವಿಗಳು, ಶಿಕ್ಷಣ ತಜ್ಞರು ಎಲ್ಲಾ ವಿಧದಲ್ಲೂ ಪರಿಣಿತಿ ಹೊಂದಿರುವ ವಿದ್ವಾಂಸರು ಇರಬೇಕಾಗಿರುವ ಟೀಚಿಂಗ್ ಕಮ್ಯೂನಿಟಿ ಇವರೆಲ್ಲರೂ ಸೇರಿರಬೇಕಾಗಿರುವ ಆ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಐಎಎಸ್ ಆಫೀಸರ್‌ಮೆಂಬರ್ ಅಂತೆ. ಅಂದರೆ ಈ ದೇಶದಲ್ಲಿ ಏನಾಗಿದೆ ಎಂದರೆ ಐಎಎಸ್ ಆಫೀಸರ್‌ಗಳು ಎಂದರೆ ಸರ್ವಜ್ಞರು ಎಂದು. ಎಲ್ಲಿ ಬೇಕಾದರೂ ಇವರದ್ದು ನಡೆಯುತ್ತದೆ ಎಂದು. They are all products of the society. They cannot be, the Sarvagnas of the whole thing. ಹಾಗಾದರೆ ಸೆಪರೇಟಾಗಿ ಅಕಾಡೆಮಿ ಏಕೆ ಬೇಕಾಗಿತ್ತು? ಸಿಂಡಿಕೇಟ್ ಏಕೆ ಬೇಕಾಗಿತ್ತು ಸೆನೆಟ್ ಏಕೆ ಬೇಕಾಗಿತ್ತು? ಎಲ್ಲದಕ್ಕೂ ಇವರನ್ನು ನಾಮಿನೇಟ್ ಮಾಡಿದ್ದರೆ ಆಗುತ್ತಿತ್ತಲ್ಲಾ. ಅಂದರೆ ಈ ರೀತಿಯಾದ ಪರಿಸ್ಥಿತಿ ಈ ಬಿಲ್‌ನಲ್ಲಿ ಇದೆ. ಚೀಫ್ ರಿಜಿಸ್ಟ್ರಾರ್ ಪೋಸ್ಟ್‌ನ್ನು ಕ್ರಿಯೇಟ್ ಮಾಡುತ್ತಿದ್ದಾರೆ. ಅದರ ಜೊತೆಗೆ ನಾನು ಮುಖ್ಯ ಅಂಶಗಳನ್ನಷ್ಟೇ ಹೇಳುತ್ತೇನೆ. Authorities of the University, ಅದರಲ್ಲಿ ಪ್ರಮುಖವಾಗಿ ಸಿಂಡಿಕೇಟ್. ಸಿಂಡಿಕೇಟ್ ಎನ್ನುವಂಥದ್ದು ಯಾವುದೇ ಒಂದು ವಿಶ್ವವಿದ್ಯಾನಿಲಯದಲ್ಲಿ ಅತ್ಯುನ್ನತವಾದ ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಯಾದಂಥ ಒಂದು ಸಂಸ್ಥೆ ಅದು. ಅದರಲ್ಲಿ ಟೀಚಿಂಗ್ ಕಮ್ಯುನಿಟಿಯಿಂದ ಎಲೆಕ್ಟ್ ಆಗುತ್ತಾರೆ. ಬೇರೆ ಬೇರೆ ವಿಭಾಗಗಳಿಂದ ಎಲೆಕ್ಟ್ ಆಗುತ್ತಾರೆ. ಹಾಗೆ ಎಲೆಕ್ಟ್ ಆದಂಥ ಬಾಡಿ ಅದು ಯೂನಿವರ್ಸಿಟಿಗೆ ಒಂದು ಸುಪ್ರೀಂ ಬಾಡಿ. ಅದು ಆಯ್ಕೆಯಾಗುವಂಥದ್ದು. ಈ ಸರ್ಕಾರದವರ ಪ್ರಜಾಪ್ರಭುತ್ವದ ಬಗ್ಗೆ, ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಮಾತನಾಡತಕ್ಕಂಥವರು, ಪ್ರಜಾಪ್ರಭುತ್ವದ ಎಲ್ಲಾ ಅಂಶಗಳನ್ನು ಅದರಲ್ಲೂ ಎಲ್ಲಿ ಎಂದರೆ ವಿಶ್ವವಿದ್ಯಾನಿಲಯಗಳಲ್ಲಿರುವ ಎಲ್ಲಾ ಪ್ರಜಾಪ್ರಭುತ್ವ ಮೌಲ್ಯಗಳನ್ನು ನಾಶ ಮಾಡಲಿಕ್ಕೆ ಇವತ್ತು ಸಿಂಡಿಕೇಟ್‌ಗೆ ತಂದಿದ್ದಾರೆ. ಡ್ರಾಫ್ಟ್ ಬಿಲ್ ಪ್ರಕಾರ ಹೇಗಿದೆ ಎಂದರೆ, the Syndicate shall consist of the following members:

(a) The Vice-Chancellor ;

(b) Principal Secretary to Government/Secretary to Government incharge of University Education or his nominee;

(c) Commissioner of Collegiate Education or his nominee not below the rank of Joint Director ;

(d) The Commissioner of Public Instruction or his nominee not below the rank of Joint Director ;

(e) The Director of Technical Education or his nominee not below the rank of joint Director;

(f) One team nominated by the Vice-Chancellor for a period of one year by rotation in the order of seniority ;

(g) Three members elected from the Academic Council and senate;

(h) The Principals of 3 affiliated colleges nominated by the Vice-Chancellor for a period of one year by rotation in the order of seniority of whom one shall be the principal of Women's College, one is principal of a professional college and one principal of University affiliated non-professional college by rotation according to the seniority.

(i) Five persons nominated by the Chancellor in consultation with the Government from amongst eminent educationists each belonging to SC/ST, OBCs, Women-folk, religious minority and general.

No person who is the employee of affiliated college or in the University or in the management of a college in whatsoever capacity shall be eligible to be a member of the Syndicate. The Syndicate shall have atleast 100 meetings in a year. However with a duration between two months. ಇವರು ಸಿಂಡಿಕೇಟ್‌ಗೆ ಪ್ರಪೋಸ್ ಮಾಡುತ್ತಿರುವ ಅವಸ್ಥೆ ಇದು. ಅಂದರೆ ಇದರಲ್ಲಿ ಎಲ್ಲರೂ ನಾಮಿಮೇಟೆಡ್ ಬೈ ದಿ ಗೌರ್ನ್‌ಮೆಂಟ್. ಏಕೆ ಇಷ್ಟು ಕಷ್ಟ ತೆಗೆದುಕೊಳ್ಳುತ್ತೀರಿ? You close down the university. Directly takeover the administration from the Vice-Chancellor and Chancellor. Let it become a Government institution like any other institutions. Why should we have these universities if this is the fate of this Bill ? ಇದರ ಜೊತೆಗೆ ಅದಕ್ಕಿಂತ ಬಹಳ ಪ್ರಮುಖವಾದ, ಮುಖ್ಯವಾದ ಅಂಶ ಎಂದರೆ, ಎಕ್ಸ್‌ಪರ್ಟ್ಸ್ ಕಮಿಟಿ, again it is nominated. Appointment of teachers and other employees, the university has no authority. ಇದರ ಪ್ರಕಾರ ಈಗ ಯೂನಿವರ್ಸಿಟಿಗೆ ಅಥಾರಿಟಿ ಇಲ್ಲ, ಹಾಗಾದರೆ ಯಾರು ಮಾಡುವುದು? Four experts of whom one shall belong to SC, ST, OBCs to be appointed by the Chancellor in consultation with the State Government. ಅಪಾಯಿಂಟ್ ಮಾಡತಕ್ಕಂಥದ್ದು ಇದು. ಯಾರನ್ನು ಅಪಾಯಿಂಟ್ ಮಾಡುವುದು ಎಂದರೆ ಟೀಚರ್ಸ್‌ನ್ನು, ಎಕ್ಸ್‌ಪರ್ಟ್ಸ್‌ನ್ನು. ಅದರ ಜೊತೆಗೆ ಇನ್ನೊಂದು ಕ್ಲಾಸ್‌ಇದೆ. ಬಹಳ ಇಂಟರೆಸ್ಟಿಂಗ್ ಕ್ಲಾಸ್. Four experts to be nomintated by the Chancellor of whom one shall belong to SC/ST and another two to OBCs. "Particularly in consultation with the State Government"ಇದು ಬಹಳ ಆಸಕ್ತಿದಾಯಕವಾದುದು. ಇದು ಈ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ದುರಂತಗಳು. The most undemocratic part of this bill, the most crusade part of this bill is about punishment for the teachers. ಪಾಪ ಅವರಿಗೆ ಪನಿಷ್‌ಮೆಂಟ್

ಮಾಡಲೇಬೇಕಲ್ಲವೇ? ನಮಗೆಲ್ಲಾ ಶಿಕ್ಷಣ ಕೊಟ್ಟು ಇಲ್ಲಿಗೆ ಕಳುಹಿಸಿದ್ದಾರಲ್ಲ. ನಮಗೆಲ್ಲಾ ಓದುಬರಹ ಹೇಳಿಕೊಟ್ಟು ಕಳುಹಿಸಿದ್ದಾರಲ್ಲಾ, ಅವರಿಗೆ ಶಿಕ್ಷೆ ಕೊಡಲಿಲ್ಲ ಎಂದರೆ ನೀವು ಇನ್ನಾರಿಗೆ ಕೊಡುತ್ತೀರಿ? ನೋಡಿ, ಎಷ್ಟು ಪಾಪ ದಯೆ ತೋರಿಸಿದ್ದಾರೆ ಆ ಟೀಚಿಂಗ್ ಕಮ್ಯುನಿಟಿ ಬಗ್ಗೆ, ನಮಗೆ ಎಷ್ಟು ಗೌರವ ಇದೆ? There may be some bad elements among the teaching community, I do agree. But, it cannot be generalised. ಇಲ್ಲಿ ಹೇಳುತ್ತಾರೆ ನೋಡಿ, ನಾನು ಡೀಟೈಲ್ ಓದುವುದಕ್ಕೆ ಹೋಗುವುದಿಲ್ಲ. If any person who has been allotted to examination work under sub-section (i) is found guilty of breach of duties or involved in misbehaviour shall be liable for punishment on conviction to undergo imprisonment for a period which may extend upto two years or fine of Rs.2000 or both. They are to be sent to jail, why? If they putforth their demands, they are to be put behind bars. Is it a democracy or tyrrany of military dictatorship? ಹಾಗಾದರೆ ಪ್ರಜಾಪ್ರಭುತ್ವ ಹಕ್ಕುಗಳ ಪ್ರಶ್ನೆ ಏನಿದೆ? You may accept or reject their demands. That is a different thing. But you are trying to put the teaching community behind the bars because they are going on agitation, and you find them also. This is the credibility. This is the gift which we are going to give to that great teaching community-like Dr. Radhakrishnan in the 50th year of independence.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮಗೆ ಅರ್ಥವಾಗಿಲ್ಲ. ಮಾಲ್‌ಪ್ರಾಕ್ಟೀಸ್ ಮಾಡುವ ಶಿಕ್ಷಕರಿಗೆ ಶಿಕ್ಷೆ ಕೊಡಿ ಎನ್ನುವುದರಲ್ಲಿ ಏನು ತಪ್ಪಿದೆ? ಇದುವರೆಗೆ ತಾವು ಯೂನಿವರ್ಸಿಟಿ ಆ್ಯಕ್ಟ್ ಮಾಡಿದ್ದು, ಬಿಲ್ ಪ್ರಪೋಸ್ ಮಾಡಿದ್ದು ತಪ್ಪಿದೆ ಎಂಬುದನ್ನು ಇಲ್ಲಿ ಕುಳಿತುಕೊಂಡು ನಾವು ಕೇಳುತ್ತಿದ್ದೇವೆ. If a teacher who indulges in malpractice in an examination and favours a student ಅವನಿಗೆ ಶಿಕ್ಷೆ ಆಗುವುದನ್ನು ನೀವು ಇಷ್ಟೊಂದು ಎಮೋಷನಲ್ ಆಗಿ ಏಕೆ ಹೇಳುತ್ತಿದ್ದೀರಿ? Radhakrishan never involved in any malpractice. ರಾಧಾಕೃಷ್ಣನ್ ಅವರಂಥ ಶಿಕ್ಷಕರಿಗೆ ಶಿಕ್ಷೆ ಕೊಡುವುದೇನೂ ಬಿಲ್‌ನಲ್ಲಿ ಇಲ್ಲವಲ್ಲಾ. ಮಾಲ್‌ಪ್ರಾಕ್ಟೀಸ್ ಮಾಡುವುದು, ನಾಳೆ ಪರೀಕ್ಷೆ ಆಗಬೇಕೆಂದರೆ ಮುಷ್ಕರ ಮಾಡುವುದು, ವ್ಯಾಲ್ಯೂಯೇಷನ್ ಪ್ರಾರಂಭವಾಗುವ ದಿನ ಕುಳಿತು ಧರಣಿ ಮಾಡುತ್ತೇವೆ ಎನ್ನತಕ್ಕಂಥ ಶಿಕ್ಷಕರಿಗೆ ಏನೂ ಕಂಟ್ರೋಲ್ ಬೇಡವೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ನಿಮ್ಮ ಅಭಿಪ್ರಾಯ. ನೀವು ಅದನ್ನು ಹೇಳಿ.

ಶ್ರೀ ಸಿ. ಭೈರೇಗೌಡ : ಈ ಮೆಡಿಕಲ್ ಎಕ್ಸಾಮಿನೇಷನ್ ಯಾವ ರೀತಿ ನಡೆಯುತ್ತದೆ ಎನ್ನತಕ್ಕಂಥದ್ದು ಬಹುಶಃ ನೀವು ಪತ್ರಿಕೆಯಲ್ಲಿ ಓದಿದ್ದೀರಿ ಎನಿಸುತ್ತದೆ. ಅದು ನಡೆದಿರತಕ್ಕಂಥದ್ದು ನಿಜವೋ ಸುಳ್ಳೋ ಎಂಬುದು ಬೇರೆ ವಿಚಾರ. ಆದರೆ ಮೆಡಿಕಲ್ ಕಾಲೇಜ್‌ನಲ್ಲಿ ಅವರು ಹೊರಗಿನಿಂದ ಬಂದಂಥ ವಿದ್ಯಾರ್ಥಿಗಳಾದರೆ ಇಷ್ಟು ಹಣ ಎಂದು ಸ್ಕೇಲ್ ಫಿಕ್ಸ್ ಮಾಡಿದ್ದಾರೆ. ಒಳಗಡೆ ಇರತಕ್ಕಂಥ ವಿದ್ಯಾರ್ಥಿಗಳಾದರೆ ಇಷ್ಟು ಎಂದು ಸ್ಕೇಲ್ ಫಿಕ್ಸ್ ಮಾಡಿದ್ದಾರೆ. ಆ ಪತ್ರಿಕೆ ವರದಿಯ ಪ್ರಕಾರ

ವು ಹೇಳಿದ ಹಾಗೆ ರಾಧಾಕೃಷ್ಣನ್ ಅಥವಾ ಇನ್ನೊಬ್ಬರು, ಮತ್ತೊಬ್ಬರು ಎಕ್ಸ್‌ಪ್‌ಷನ್ ಎಂದು ತ್ರಿಕೆಯಲ್ಲಿ ನಾನು ಓದಿದ ಜ್ಞಾಪಕ ಇಲ್ಲ. ಇದು ಸರ್ವೆ ಸಾಮಾನ್ಯವಾಗಿ ನಡೆಯುತ್ತಿದೆ ಎನ್ನುವಂಥದ್ದು ತ್ರಿಕೆಯಲ್ಲಿ ಬಂದಿರತಕ್ಕಂಥ ವಿಚಾರ. ಅದರ ಸತ್ಯಾಸತ್ಯತೆ ವಿಚಾರ ಬೇರೆ. ಅಂಥ ಸಂದರ್ಭದಲ್ಲಿಯೂ ರ ಈ ದುಷ್ಕೃತ್ಯದಲ್ಲಿ ತೊಡಗುವವರ ಮೇಲೆ ಕ್ರಮ ತೆಗೆದುಕೊಳ್ಳುವುದು ತಪ್ಪೇ? ದಯವಿಟ್ಟು ವು ಅದನ್ನು ಹೇಳಿ. ಒಂದು ರೀತಿಯಲ್ಲಿ ಒಬ್ಬ ಪ್ರೊಫೆಸರ್ ಮೇಲೆ ಒಂದು ಆಪಾದನೆ ಇದೆ. ಮ ಎಲ್ಲಿ ಏನು ಎಂದು ಕೇಳುವುದಕ್ಕೆ ಹೋಗಬೇಡಿ. ಅದೇನೆಂದರೆ ಅವನು ಪಾಠ ಕಲಿಸುತ್ತಿದ್ದಂಥ ದ್ಯಾರ್ಥಿಗಳಿಗೆ ಬ್ಲೂ ಫಿಲ್ಮ್ ತೋರಿಸುತ್ತಿದ್ದ ಎಂದು ಆಪಾದನೆ ಇದೆ. ಅಂಥವರ ಮೇಲೆ ಕ್ರಮ ಗೆದುಕೊಳ್ಳಬಾರದು ಎಂದು ಹೇಳಿ ನೀವು ರಾಧಾಕೃಷ್ಣನ್ ಅವರನ್ನು ತೋರಿಸಿಬಿಟ್ಟಿರಿ. ಈ ರೀತಿ ಪ್ಪು ಮಾಡಿರತಕ್ಕಂಥವರ ಮೇಲೆ ಕ್ರಮ ತೆಗೆದುಕೊಳ್ಳಬಾರದು, ಅದಕ್ಕೆ ಅವಕಾಶ ಇರಬಾರದು ಂದು ಹೇಳುವುದಾದರೆ ಅದು ಎಷ್ಟರಮಟ್ಟಿಗೆ ಸಾಧುವಾದುದು ಎಂಬುದನ್ನು ತಾವು ದಯವಿಟ್ಟು ೋಚನೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾದಾಕೃಷ್ಣನ್‌ರವರನ್ನು ತೋರಿಸಿ ಈ ರೀತಿ ದೊಡ್ಡ ಅಪರಾಧ ಾಡಿದವರ ಮೇಲೆ ಶಿಕ್ಷೆ ಮಾಡಬಾರದು ಎಂದು ಅವರು ಮಾತನಾಡಬೇಕಾದರೆ ಹೇಳಲಿಲ್ಲ. ನರೆ ಒಂದು ದುರ್ಧೈವ ಏನೆಂದರೆ, ಯಾವುದೇ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಯಾವುದೇ ಕರ ವರ್ಗ ಅಥವಾ ಕಾರ್ಮಿಕ ವರ್ಗ ವಿಧಾನಮಂಡಲದ ಅಧಿವೇಶನ ನಡೆಯುತ್ತಿರುವಂಥ ಂದರ್ಭದಲ್ಲಿ ಧರಣಿ ಕುಳಿತರೆ ಇಲ್ಲಿ ನಾವು ಪ್ರಸ್ತಾಪ ಮಾಡುತ್ತೇವೆ, ಅದರಿಂದ ಅಲ್ಪಸ್ವಲ್ಪ ಪರಿಹಾರ ುತ್ತದೆ ಎಂಬ ಪರಿಪಾಠ ಹೊಂದಿದ್ದಾರೆ ಎಂದು ನಾನು ಹೇಳುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಈ ೇಶದಲ್ಲಿ ಸಂಬಳಕ್ಕಾಗಿ ಗಿಂಬಳ ಇಲ್ಲದೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವಂಥ ಯಾವುದಾದರೂ ಂದು ಸಮೂಹ ಇದ್ದರೆ ಶಿಕ್ಷಕ ಸಮೂಹ. ಈ ಮಾತನ್ನು ತಾವು ಬಹುತೇಕ ಒಪ್ಪುತ್ತೀರಿ ಎಂದು ನು ತಿಳಿದುಕೊಂಡಿದ್ದೇನೆ. ಅವರು ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರಿ ಬದುಕಲು ಸಾಧ್ಯವಿಲ್ಲದಂಥ ರಣದಿಂದ ಕೆಲವು ಬೇಡಿಕೆಗಳನ್ನು ನಮ್ಮ ಮುಂದಿಟ್ಟಾಗ ಅದನ್ನು ಕೂಲಂಕಷವಾಗಿ ನಮ್ಮ ಅಧಿಕಾರಿಗಳು ರಿಶೀಲನೆ ಮಾಡಿ ಅವರು ಬಂದಾಗ ಅವರೊಂದಿಗೆ ಗೌರವಯುತವಾಗಿ ಮಾತನಾಡಿ ಆ ಸಮಸ್ಯೆಯನ್ನು ಗೆಹರಿಸುವುದಕ್ಕೆ ಸಾಧ್ಯ ಇದ್ದರೆ ಅದನ್ನು ಸರಿಪಡಿಸುವಂಥ ಯಾವುದೇ ಪ್ರಯತ್ನ ಮಾಡದೇ ಇರುವಂಥ ಸಂದರ್ಭದಲ್ಲಿ ಅವರು ಪರೀಕ್ಷೆ ಸಮಯದಲ್ಲಿ ಪರೀಕ್ಷೆಗೆ ಬಹಿಷ್ಕಾರ ಹಾಕುತ್ತೇವೆ, ಮೌಲ್ಯಾಮಾಪನದ ಂದರ್ಭದಲ್ಲಿ ಬಾಯ್ಕಟ್ ಮಾಡುತ್ತೇವೆ ಎನ್ನತಕ್ಕಂಥ ಪ್ರವೃತ್ತಿ ಬರುತ್ತಿದೆ. ಆದುದರಿಂದ ಅವರನ್ನು ರೆದು ಈ ಪರಿಸ್ಥಿತಿ ಸರಿಯಲ್ಲ ಎಂದು ಹೇಳಿ ಗೈಡ್ ಮಾಡಿ ಅವರ ಬೇಡಿಕೆಯನ್ನು ಈಡೇರಿಸುವ ಯತ್ನ ಮಾಡದೆ ಇವತ್ತು ಎಲ್ಲ ರಂಗಗಳಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ನಡೆಯುತ್ತಿದೆ. ಇವತ್ತು ನನಿತ್ಯ ನಾವು ಕೇಳುತ್ತಿದ್ದೇವೆ. ತಾವೇ ಹೇಳಿದಂತೆ ಒಬ್ಬ ಅಧಿಕಾರಿಯನ್ನು ಅರೆಸ್ಟ್ ಮಾಡಿ ಜೈಲಿಗೆ ಳುಹಿಸಿದ್ದಾರೆ ಎಂಬುದನ್ನೂ ಕೇಳಿದ್ದೇವೆ. ಇಂಥ ಕಾಲದಲ್ಲಿ ಅವರು ಬೇಡಿಕೆ ಮುಂದೆ ಇಟ್ಟುಕೊಂಡು ತ್ಯಾಗ್ರಹ ಮಾಡುವವರಿಗೆ ಒಂದು ಕಾನೂನು ತರುತ್ತೇವೆ, ಎರಡು ವರ್ಷ ಜೈಲಿಗೆ ಹಾಕುತ್ತೇವೆ ನ್ನುವ ಮಾತು ಏನಿದೆ ಇದು ಇಡೀ ಶಿಕ್ಷಣ ರಂಗವನ್ನು ಗೊಂದಲಕ್ಕೀಡು ಮಾಡಿ ಪ್ರಾಮಾಣಿಕವಾಗಿ

ಕೆಲಸ ಮಾಡುವ ಶಿಕ್ಷಕರಿಗೆ ಮಾಡುತ್ತಿರುವ ಮಹಾಪರಾಧ ಎಂದು ನಾನು ತಿಳಿದುಕೊಂಡುದ್ದೇ ದಯಮಾಡಿ ಅದನ್ನು ಕೈಬಿಟ್ಟು ಅವರ ಸಮಸ್ಯೆಗಳನ್ನು ಕೇಳಿ ಚರ್ಚೆ ಮಾಡಿ ಅವರನ್ನು ವಿಶ್ವಾಸ ತೆಗೆದುಕೊಂಡು ಇಂಥ ಒಳ್ಳೆಯ ಸೇವೆ ಯಾರು ಮಾಡುತ್ತಿದ್ದಾರೆ ಅವರು ಕೇವಲ ಸಂಬಳಕ್ಕಾ ದುಡಿಯುತ್ತಿಲ್ಲ? ಅವರು ಆ ಕ್ಷೇತ್ರವನ್ನು ಪ್ರಾಮಾಣಿಕವಾಗಿ ಆರಿಸಿಕೊಂಡಿದ್ದಾರೆ. ಈ ಮಹತ್ವವ ಅರ್ಥ ಮಾಡಿಕೊಂಡು ಸರ್ಕಾರ ನಡವಳಿಕೆ ನಡೆಸಬೇಕೇ ಹೊರತು ಒಂದು ಬಿಲ್ ತಂದು 2 ವರ್ಷ ಜೈಲಿಗೆ ಕಳುಹಿಸುತ್ತೇವೆ ಎಂದು ಹೇಳುವುದಾದರೆ ಈ ಸಂದರ್ಭದಲ್ಲಿ ಇಲ್ಲಿ ಚರ್ಚೆಯಾಗುತ್ತಿರುವಂತ ಅನೇಕ ವಿಷಯಗಳನ್ನು ನೋಡಿದಾಗ ಮೊದಲು ಯಾರು ಜೈಲಿಗೆ ಹೋಗಬೇಕು ಸ್ವಾಮಿ, ಶಿಕ್ಷಕ ಹೋಗಬೇಕೆ? ಅದನ್ನು ಪ್ರಾಮಾಣಿಕವಾಗಿ ನಮ್ಮ ಸರ್ಕಾರ ಯೋಚನೆ ಮಾಡಬೇಕು ಎನ್ನುವು ಅವರ ಮಾತಿನಲ್ಲಿ ಇರುವ ಹಿನ್ನೆಲೆ.

ಡಾ|| ಎಂ.ಪಿ. ಕರ್ಕಿ : ನಾನು ಮಾತನಾಡಿ ಆಗಿದೆ. ಈಗ ಶಿಕ್ಷಕರಿಗೆ ಶಿಕ್ಷೆ ಬೇಕೆ ಬೇಡ ಎಂಬುದು ಪ್ರಶ್ನೆ. ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ತರಲು ಶಿಕ್ಷಕರಿ ಯಾವಾಗಲೂ ಅವಕಾಶವಿದೆ. ನಮ್ಮ ಶಿಕ್ಷಣದ ಟಾರ್ಗೆಟ್ ಇರತಕ್ಕಂಥದ್ದು ವಿದ್ಯಾರ್ಥಿಗಳ ಬಗ್ಗೆ. ವಿದ್ಯಾರ್ಥಿಗಳಿಗೆ ಸರಿಯಾಗಿ ತರಗತಿಗಳು ಆಗಬೇಕು, ಸರಿಯಾಗಿ ಮೌಲ್ಯಮಾಪನ ಆಗಬೇಕು ಮ ಅವರ ಸಮಯ ಅಥವಾ ಆಯುಷ್ಯ ಹಾಳಾಗಬಾರದು. ಇಂಥ ಸಂದರ್ಭದಲ್ಲಿ ಕ್ಲುಪ್ತ ಸಮಯದ ಪರೀಕ್ಷೆಗಳನ್ನು ನಡೆಸಿ ಫಲಿತಾಂಶ ಕೊಡಬೇಕಾಗುತ್ತದೆ. ಆ ಸಮಯದಲ್ಲಿ ಒಂದು ಟ್ರೇಡ್ ಯೂನಿಯ ರೀತಿಯಲ್ಲಿ ನಾವು ಪರೀಕ್ಷೆಗಳನ್ನು ಮಾಡುವುದಿಲ್ಲ, ಮೌಲ್ಯಮಾಪನವನ್ನು ಮಾಡುವುದಿಲ್ಲ ಎಂ ಹಠ ಹಿಡಿದರೆ ಯಾರು ಶಿಕ್ಷಣ ಟಾರ್ಗೆಟ್ ಆದಂಥ ವಿದ್ಯಾರ್ಥಿಗಳಿದ್ದಾರೆ ಅವರಿಗೆ ತೊಂದರೆಯಾಗುತ್ತ ಅದಕ್ಕಾಗಿ ಈ ರೀತಿಯ ಶಿಕ್ಷೆ ಜಾಸ್ತಿಯಾಯಿತೊ ಏನೋ. ಆದರೆ ಅವರಲ್ಲಿ ಡಿಸಿಪ್ಲಿನ್ ತರುವುದ ಇಂಥ ಒಂದು ವಿಧಾನ ಇರಬೇಕಾಗುತ್ತದೆ. ಶಿಕ್ಷಕರ ತೊಂದರೆಗಳೇನಿವೆ ಅವುಗಳನ್ನು ಬಗೆಹರಿಸುವಂತ ಕೆಲಸವನ್ನು ಸರ್ಕಾರ ಮಾಡಬೇಕು. ಪರಿಹರಿಸದಿದ್ದರೆ ಸರ್ಕಾರದಲ್ಲಿ ಮುಖ್ಯಮಂತ್ರಿಗಳು ಅಥವ ಅದಕ್ಕೆ ಸಂಬಂಧಪಟ್ಟ ಸಚಿವರು ಕ್ರಮ ತೆಗೆದುಕೊಳ್ಳಬಹುದು. ಆದರೆ ಈ ರೀತಿ ವಿದ್ಯಾರ್ಥಿಗಳನ ಹರಾಜು ಹಾಕಿ ಟ್ರೇಡ್ ಯೂನಿಯನ್ ರೀತಿಯಲ್ಲಿ ಅಧಿಕಾರ ಮಾಡುವಂಥಾದ್ದು ಅಥವಾ ಮುಷ್ಕ ಮಾಡುವುದು ಸರಿಯಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಇನ್ನು 5 ಅಥವಾ 10 ನಿಮಿಷಗಳ ನನ್ನ ಮಾತನ್ನು ಮುಗಿಸುತ್ತೇನೆ. ನಾನು ರಾಧಾಕೃಷ್ಣನ್ ಅವರ ಫೋಟೋ ತೋರಿಸಿಕೊಂಡು ಏನಾದರು ಅನಾಹುತ ಮಾಡತಕ್ಕಂಥ ಶಿಕ್ಷಕರ ಬಗ್ಗೆ ಮಾತನಾಡುತ್ತಿಲ್ಲ. ಹಾಗೆ ಲೆಕ್ಕಹಾಕಿದರೆ ಗಾಂಧೀಜಿಯವ ಫೋಟೊ ತೋರಿಸಿ ಬ್ಲೂ ಫಿಲ್ಮಂ ತೋರಿಸತಕ್ಕಂಥ ಜನ ನಮ್ಮಲ್ಲಿ ಸಾಕಷ್ಟಿದ್ದಾರೆ. ಬೈರೇಗೌಡ ಅದರ ಬಗ್ಗೆಯೂ ಹೇಳಬೇಕಾಗುತ್ತದೆ. ಯಾರೋ ಒಬ್ಬ ಶಿಕ್ಷಕ ಆ ರೀತಿಯ ಕೆಲಸ ಮಾಡುತ್ತಾ ಎಂದುಕೊಂಡು ಎಲ್ಲರನ್ನೂ ಜನರಲೈಜೇಷನ್ ಮಾಡುವುದು, ಕ್ರಿಮಿನಲ್ ಅಲಿಗೇಷನ್ ಮಾಡುವುದ ಸರಿಯಲ್ಲ. ಇದು ಮೆಡಿಕಲ್ ಕಾಲೇಜ್ ಒಂದರಲ್ಲೇ ಅಲ್ಲ, ಜಗತ್ತಿನಲ್ಲಿ ಎಲ್ಲದರಲ್ಲಿಯೂ ಇದ ಅದನ್ನು ಕೇಳುವುದು ಬೇಡ ಎಂದು ಯಾರೂ ಹೇಳಲಿಲ್ಲ. There are already establishe

laws in the University to punish the teaching community. ಕಳೆದ ಸಲದ ಎಜುಕೇಷನ್ ಬಿಲ್‌ನಲ್ಲಿ ಬಂದಿದೆ. ಅವರನ್ನು ಜೈಲಿಗೆ ಹಾಕುವುದಕ್ಕೆ ಇವರೇನೂ ಕ್ರಿಮಿನಲ್ಸ್‌ಗೆ ಅಲ್ಲ ದರೋಡೆಕೋರರಲ್ಲ.

ಶ್ರೀ ಸಿ. ಬೈರೇಗೌಡ : ನಾನೂ ವಿದ್ಯಾರ್ಥಿಯಾಗಿದ್ದೆ. ಈಗ ವಿದ್ಯಾರ್ಥಿಗಳಿಗೆ ನೀವು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಮಾತ್ರ ವಿದ್ಯಾರ್ಥಿಗಳಾಗಿರುತ್ತೀರಿ, ರೈತರಾಗಿರುತ್ತೀರಿ ಎಲ್ಲವೂ ಆಗಿರುತ್ತೀರಿ, ಹಾಗಾದರೆ ನಾವು ವಿದ್ಯಾರ್ಥಿಗಳಾಗಿರುವುದಿಲ್ಲವೆ? ವಿದ್ಯಾರ್ಥಿಗಳ ಸಮಸ್ಯೆ ಬಂದಾಗ ನಾನು ವಿದ್ಯಾರ್ಥಿಯಾಗಿದ್ದೆ ಎಂದು ಹೇಳುತ್ತೀರಿ, ರೈತರ ಸಮಸ್ಯೆ ಬಂದಾಗ ನಾನು ರೈತನಾಗಿದ್ದೆ ಎಂದು ಹೇಳುತ್ತೀರಿ ಹಾಗಾದರೆ ನಾವುಗಳೇನು ಮಾರವಾಡಿಗಳೆ?

ಶ್ರೀ ಸಿದ್ಧರಾಮಯ್ಯ : ಮಾರವಾಡಿಗಳು ವಿದ್ಯಾರ್ಥಿಗಳಾಗಿರಲಿಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾರವಾಡಿಗಳು ಎಂದರೆ ಅವರು ಜೈನರು ಇರಬಹುದು, ವೈಶ್ಯರು ಇರಬಹುದು ಅಥವಾ ಪರಿಶಿಷ್ಟ ಜಾತಿಯವರು ಇರಬಹುದು ಇದು ಒಂದು ಊರು. ಮದ್ರಾಸಿನವರಿಗೆ ಮದ್ರಾಸಿ ಎಂದು ಹೇಳುವಂತೆ ಮಾರವಾಡಿ ಎಂದು ಹೇಳುತ್ತಾರೆ. ಮೊನ್ನೆ ಮುಖ್ಯಮಂತ್ರಿಗಳು ನಾವೇನು ಮಾರವಾಡಿಗಳ ಮಕ್ಕಳೆ ಎಂದರು. ಇದು ನನಗೆ ಅರ್ಥವಾಗುವುದಿಲ್ಲ. ಮಾರವಾಡಿ, ಮದ್ರಾಸಿ ಇದು ಒಂದು ಪ್ರಾಂತ್ಯದ ಹೆಸರು. ಆ ಪ್ರಾಂತ್ಯದಿಂದ ಬಂದಂಥ ಜನ ಎಂದು ಅರ್ಥ. ರಾಜಾಸ್ಥಾನದಲ್ಲಿ ಜೈನರು ಇರಬಹುದು, ಕ್ಷತ್ರಿಯರಿರಬಹುದು ಬ್ರಾಹ್ಮಣರಿರಬಹುದು, ಎಲ್ಲರನ್ನೂ ಮಾರವಾಡಿಗಳೆಂದೇ ಹೇಳುತ್ತಾರೆ.

11.10 ಎ. ಎಂ

ಶ್ರೀ ವಾಟಾಳ್ ನಾಗರಾಜ್ : ಮಾರವಾಡಿಗಳು ಅಂದರೆ ರಕ್ತಹೀರುವರು, ಬಡ್ಡಿ ತಿನ್ನುತ್ತಾರೆ ಎಂದು ಅರ್ಥ, ಬೇರೆ ಏನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಂತಹ ಮಾರವಾಡಿಗಳು ದೇಶದಲ್ಲಿ ಎಲ್ಲಾ ರಂಗದಲ್ಲೂ ಇದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಉಪಾಧ್ಯಕ್ಷರೇ, ವಿದ್ಯೆ ಎನ್ನುವುದಕ್ಕೆ ಯಾವುದೇ ಜಾತಿ ಶ್ರೀಮಂತ ಬಡತನ ಯಾವುದೂ ಬರುವುದಿಲ್ಲ. ಆದ್ದರಿಂದ ವಿದ್ಯೆಗೆ ಇವೆಲ್ಲಾ ಹಚ್ಚುವುದು ಬೇಕಿಲ್ಲ. ವಿದ್ಯೆ ಎಲ್ಲರಿಗೂ ಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಪ್ರಾರಂಭದಲ್ಲೇ ಹೇಳಿದೆ, ಟೀಚಿಂಗ್ ವರ್ಗದಲ್ಲಿ ಬ್ಯಾಡ್ ಎಲಿಮೆಂಟ್ಸ್ ಇದ್ದಾರೆ, ಇಲ್ಲ ಎಂದು ಇಲ್ಲ. ಈ ಕಾನೂನು ಮಾಲ್‌ಪ್ರಾಕ್ಟೀಸ್‌ನಲ್ಲಿ ಇಂಡಲ್ಜ್ ಆಗುವವರಿಗೆ ಅದು ಅಪ್ಲೈ ಆಗುತ್ತದೆ ಎಂದು ಒಬ್ಬ ಸದಸ್ಯರು ಹೇಳಿದರು. ಇನ್ನೊಂದು ಸಲ ಓದುತ್ತೇನೆ, ಮಾಲ್‌ಪ್ರಾಕ್ಟೀಸ್‌ನವರಿಗೆ ಇದು ಅಪ್ಲೈ ಆಗುವುದಿಲ್ಲ.

"If any person who has been allotted the examination work under sub-section (1) is found guilty of breach of duty or involved in any mis-behaviour shall be liable for punishment or conviction to undergo imprisonment for a period of... it may be extended to two years or fine of Rs. 2,000 or both." ಇದು ಪ್ರಶ್ನೆ ಇರುವುದು. ಇದರರ್ಥ ಏನೆಂದರೆ ಉಪಾಧ್ಯಾಯ ವರ್ಗಕ್ಕಿರುವ ಪ್ರಜಾಸತ್ತಾತ್ಮಕ ಹಕ್ಕುಗಳನ್ನೇ ಕಿತ್ತುಕೊಳ್ಳುವುದು ಅವರನ್ನು ಥ್ರೆಟ್ ಮಾಡುವುದು.

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಾಯರ ಬೇಡಿಕೆಗಳ ಬಗ್ಗೆ, ಅದನ್ನು ಚಳುವಳಿ ಎಂದು ಕರೆಯುವುದಕ್ಕೂ ಆಗುವುದಿಲ್ಲ. ನನಗನ್ನಿಸುವುದು ಏನೆಂದರೆ, ಈಗ ಅವರಿಗೆ ಎರಡು ವರ್ಷ ಜೈಲು ಶಿಕ್ಷೆ, 2 ಸಾವಿರ ರೂಪಾಯಿ ಜುಲ್ಮಾನೆ ಹಾಕಬೇಕು ಎಂಬ ವಾದವಿವಾದಗಳು. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ತಾವುಗಳು ಜೆಪಿ ಮತ್ತು ಗಾಂಧಿಯವರ ಹೆಸರು ಹಾಕಿಕೊಂಡು ಚುನಾವಣೆಗೆ ಹೊರಟಿರಿ. ಮತ್ತು ಸದನದಲ್ಲೂ ಈ ರಾಷ್ಟ್ರಕ್ಕೋಸ್ಕರ ಹೋರಾಟ ತ್ಯಾಗ ಮಾಡಿ ಮಿಲಿಟರಿ ಪ್ರಭುತ್ವವನ್ನು ವಿರೋಧ ಮಾಡಿದ ಜನರ ಚಿತ್ರಗಳು ಇವೆ. ನನಗನ್ನಿಸುತ್ತದೆ, ನೀವು ತರುತ್ತಿರುವುದು ನೋಡಿದರೆ ಪ್ರಜಾಪ್ರಭುತ್ವದ ಬಗ್ಗೆ ನೀವು ನಂಬಿಕೆಯನ್ನೇ ಕಳೆದುಕೊಂಡಿದ್ದೀರೇನೋ, ದಂಡಿನ ಆಳ್ವಿಕೆಗೆ ನೀವೇನು ದಾರಿ ಮಾಡಿಕೊಡುತ್ತೀರೇನೋ ಎಂಬ ರೀತಿಯಲ್ಲಿ ತಲುಪುತ್ತಿದ್ದೀರಿ. ಈಗಾಗಲೇ ನ್ಯಾಯಾಧೀಶರು ಕಬ್ಬನ್‌ಪಾರ್ಕಿನಲ್ಲಿ ಯಾರೂ ಕುಳಿತುಕೊಳ್ಳಬಾರದು ಸತ್ಯಾಗ್ರಹ ಮಾಡಬಾರದು ಎಂದು ಹಾಕಿದ್ದಾರೆ. ಯಾರಾದರೂ ಮೇಸ್ಟ್ರುಗಳು ಮೆರವಣಿಗೆ ಮಾಡುತ್ತೇವೆಂದು ಹೇಳಿದರೆ ಎರಡು ವರ್ಷ ಜೈಲಿಗೆ ಹಾಕುತ್ತೇವೆಂದು ಹೇಳುತ್ತೀರಿ. ಇದೇನು ಪರಿಸ್ಥಿತಿ? ಎಲ್ಲಿದೆ ಪ್ರಜಾಪ್ರಭುತ್ವ? ಉಪಾಧ್ಯಾಯರದ್ದು ಪರಮಪವಿತ್ರವಾದ ಸ್ಥಾನ. ಅಂಥವರನ್ನು ಜೈಲಿಗೆ ಹಾಕುತ್ತೇವೆ ಎಂಬ ನಿರ್ಧಾರ ನೀವು ಕೈಗೊಳ್ಳುವುದಾದರೆ ಇದು ಒಳ್ಳೆಯ ನಿರ್ಧಾರವಲ್ಲ. 50ನೇ ವರ್ಷದ ಸ್ವಾತಂತ್ರೋತ್ಸವಕ್ಕೆ ಹೋಗುತ್ತಿದ್ದೇವೆ. ಅದರಲ್ಲೂ ಗೋವಿಂದೇಗೌಡರಂತಹ ಹಿರಿಯ ಮಹಾವ್ಯಕ್ತಿ ಇದನ್ನು ತರುವುದಾದರೆ ನಮಗೇ ನಾಚಿಕೆಯಾಗುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉಪಮುಖ್ಯಮಂತ್ರಿಗಳೇ, ಶಿಕ್ಷಣಕ್ಕೆ ಸಂಬಂಧಪಟ್ಟ ಬೇಡಿಕೆ ಮೇಲೆ ನಾನು ಮಾತನಾಡುತ್ತಿರುವುದು. ಈ ಮಸೂದೆ ಉನ್ನತ ಶಿಕ್ಷಣದ ಭಾಗವಾಗಿ ಬರುತ್ತಿರುವುದು. ಅದಕ್ಕೇ ಸೀಮಿತ ಮಾಡುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಇದು ಇನ್ನೂ ಬಿಲ್‌ಆಗಿ ಬಂದಿಲ್ಲ. ಅದು ಬಂದಾಗ ಎಲ್ಲರ ಅಭಿಪ್ರಾಯದ ಪ್ರಕಾರ ನಾಳೆ ಜಂಟಿ ಸದನ ಸಮಿತಿಗೂ ಕಳುಹಿಸಬಹುದು. ಅಲ್ಲಿ ತಮ್ಮ ಅಭಿಪ್ರಾಯ ಹೇಳಬಹುದು. ಯಾವುದು ಇನ್ನೂ ಅಸ್ತಿತ್ವದಲ್ಲಿಲ್ಲವೋ ಅದರ ಬಗ್ಗೇನೆ ನಾವು ಮಾತನಾಡಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಏನು ಮಾತನಾಡಬೇಕೆಂದು ನನಗೆ ಗೊತ್ತಿದೆ. ಅದು ನನ್ನ ಹಕ್ಕು. ಅರ್ಥವಾಯಿತೇ? ಮೊದಲು ಬೇರೆ ವಿಷಯಗಳನ್ನೆಲ್ಲಾ ಮಾತನಾಡಿದ ಮೇಲೆ ಇದನ್ನು ಮಾತಾಡುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಎಷ್ಟು ಟೈಮಿದೆಯೋ ಏನೇನು ಬೇಕೋ ಮಾತನಾಡಿ ಇನ್ನು ಮೇಲೆ ನಾವೂ ಅಬ್ಜೆಕ್ಷನ್ ತೆಗೆಯುತ್ತೇವೆ. ನೀವು ಪ್ರತಿ ಪಕ್ಷದ ಸ್ಟ್ರೆಂಥ್ ಮೇಲೆ ಟೈಂ ಫಿಕ್ಸ್ ಮಾಡಿ. ಅವರದ್ದು ಇವರಿಗೆ ಅಲಾಟ್ ಮಾಡುತ್ತೇನೆ ಎಂದು ಹೇಳಬೇಡಿ. ನಮ್ಮ ಸೌಜನ್ಯಕ್ಕೂ ತಾವು ಮರ್ಯಾದೆ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದಕ್ಕಿಂತ ಮೋಸ್ಟ್ ಡೇಂಜರಸ್, ಶಿಕ್ಷೆ ಬಗ್ಗೆ No Court shall take cognizance of the offence punishable under this Section or abetment of .... ಹಾಗಾಗಿ ಈ ಬಿಲ್ ತರುತ್ತಿರುವ ಉದ್ದೇಶಕ್ಕೂ ಆಗಲೇ ನಾನು ಮಾತನಾಡಿದ ಇಡೀ ಶಿಕ್ಷಣದ ವ್ಯವಸ್ಥೆಗೆ ರಿಫ್ಲೆಕ್ಟ್ ಆಗುತ್ತಿದೆ. ಪ್ರತ್ಯೇಕವಾಗಿ ಉನ್ನತ ಶಿಕ್ಷಣದ ಅವ್ಯವಸ್ಥೆಗೆ ಹಿಡಿದಿರುವ ಕನ್ನಡಿ ಇದು. ಈ ಡ್ರಾಫ್ಟ್ ಬಿಲ್ ಅನ್ನು ತಯಾರು ಮಾಡಿದ್ದರ ಹಿಂದೆ ಇರುವ ಕೊಳಕು ಮನಸ್ಸು, ಕ್ರೂರ ಹೃದಯಗಳೇನಿವೆ ಅದರ ಬಗ್ಗೆ ಅಷ್ಟೇ ನಾನು ಹೇಳುತ್ತಿರುವುದು. ಆದ್ದರಿಂದ ಈ ಶಿಕ್ಷಣ ಮಸೂದೆ ತರಬಾರದು, ಈಗಿರುವ ಶಿಕ್ಷಣದಲ್ಲಿ ಬದಲಾವಣೆ ತರಲು ಪ್ರಯತ್ನ ಮಾಡಬೇಕು. ಉಪಾಧ್ಯಾಯ ವರ್ಗದಲ್ಲಿ ತಪ್ಪುಗಳಿದ್ದರೆ ನೀವು ಅವರನ್ನು ಕರೆದು ಮಾತನಾಡಿ ಯಾರೂ ಬೇಡ ಎಂದು ಹೇಳುವುದಿಲ್ಲ ಅಥವಾ ಪರೀಕ್ಷೆಗಳನ್ನು ಬಾಯ್ಕಾಟ್ ಮಾಡುವುದನ್ನೇ ಹಾಬಿ ಮಾಡಿಕೊಂಡವರಿಗೆ ಯಾರೂ ಒಪ್ಪಲು ತಯಾರಿಲ್ಲ. ಆದ್ದರಿಂದ ಶಿಕ್ಷಣದ ಬಗ್ಗೆ ಮಾತನಾಡುವಾಗ ಈ ಎಲ್ಲ ಮೂಲ ಅಂಶಗಳನ್ನು ನಾವು ಗಮನದಲ್ಲಿಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಇಲಾಖೆಗಳಿಗಿಂತ ಅತ್ಯಂತ ಜವಾಬ್ದಾರಿಯದು ಶಿಕ್ಷಣ ಇಲಾಖೆ ಅದರಲ್ಲಿ ಎರಡು ರೀತಿ ಶಿಕ್ಷಣ ಇದೆ. ಒಂದು ದೈಹಿಕ ಶಿಕ್ಷಣ, ಇನ್ನೊಂದು ಜ್ಞಾನವನ್ನು ಸೃಷ್ಟಿ ಮಾಡುವಂತಹ ಶಿಕ್ಷಣ. ಅದಕ್ಕೋಸ್ಕರ ಪ್ರಾಥಮಿಕ ಶಿಕ್ಷಣಕ್ಕೇ ಒಬ್ಬ ಸಚಿವರನ್ನು, ಉನ್ನತ ಶಿಕ್ಷಣಕ್ಕೆ ಒಬ್ಬ ಸಚಿವರನ್ನು, ದೈಹಿಕ ಶಿಕ್ಷಣಕ್ಕೆ ಒಬ್ಬ ಸಚಿವರನ್ನು ಮತ್ತು ವೈದ್ಯಕೀಯ ಶಿಕ್ಷಣಕ್ಕೇ ಒಬ್ಬ ಸಚಿವರನ್ನು ಮಾಡಿಕೊಂಡು ಇಡೀ ರಾಜ್ಯದ ಶಿಕ್ಷಣ ವ್ಯವಸ್ಥೆ ಬಗ್ಗೆ ಚಿಂತಿಸಿದಾಗ ಈಗಾಗಲೇ 50 ವರ್ಷ ತಲುಪಿದ್ದೇವೆ. ಕಡ್ಡಾಯ ಶಿಕ್ಷಣ ಜಾರಿಗೆ ತರುವ ನಿಟ್ಟಿನಲ್ಲಿ ಕನಿಷ್ಟ ಕೆಲಸವನ್ನು ಮಾಡದೇ ಇರುವಂತಹ ಪರಿಸ್ಥಿತಿ ಇದೆ ಪೂರ್ಣವಾಗಿ ಶಿಕ್ಷಣದ ಬಗ್ಗೆ ಚಿಂತನೆ ಮಾಡುತ್ತಿಲ್ಲ. ನಾವು ಯಾವ ಮಟ್ಟಕ್ಕೆ ತಲುಪಿದ್ದೇವೆ ಎಂದರೆ, ಗಂಗೋತ್ರಿಯಲ್ಲಿ ವಯಸ್ಕರ ಶಿಕ್ಷಣ ಸಮಿತಿ ಕಟ್ಟಡವನ್ನು ಆರ್‌ಸಿಸಿ ಬಿಲ್ಡಿಂಗ್‌ನಲ್ಲಿ ಮಾಡಿಕೊಂಡಿದ್ದೇವೆ. ಅಂದರೆ ಕಡ್ಡಾಯವಾಗಿ ವಯಸ್ಕರ ಶಿಕ್ಷಣ ಸಮಿತಿ ಇರಲೇಬೇಕು. ಕಡ್ಡಾಯ ಶಿಕ್ಷಣ ಜಾರಿಗೆ ಬರಬಾರದು. ಸಂವಿಧಾನದಲ್ಲಿ ಬರೆದುಕೊಂಡಿದ್ದೇವೆ, ನಾವು, ಸರ್ಕಾರ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ಕೆಲಸದಲ್ಲಿ ಯಾವ ದಿಕ್ಕಿನಲ್ಲಿ ಇದ್ದೇವೆ ಎಂದು ಯೋಚನೆ ಮಾಡಬೇಕು. ಈಗ ಬಹಳ ವಿಜೃಂಬಣೆಯಿಂದ 50ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ ಮಾಡುತ್ತಿದ್ದೇವೆ. ಇವತ್ತು ರಾಜ್ಯದಲ್ಲಿ ಶಿಕ್ಷಣ ವ್ಯಾಪಾರೀಕರಣವಾಗಿದೆ ನಾವು ಏನು ಶಿಕ್ಷಣವನ್ನು ಅನುತ್ಪಾದಕ ಕೇಂದ್ರವೆಂದು ತಿಳಿದುಕೊಂಡಿದ್ದೇವೆ, ಇಡೀ ರಾಜ್ಯ ದೇಶಕ್ಕೆ ಪ್ರಪಂಚಕ್ಕೆ ಸಂಸ್ಕೃತಿ ಜ್ಞಾನ ಮುಂತಾದವನ್ನು ಕೊಡುವಂಥದ್ದು. ಆದರೆ ಇಂದು ಬರೀ ಓದಿನ ಶಿಕ್ಷಣವನ್ನು ಸೃಷ್ಟಿಮಾಡಿಕೊಂಡು ಅದರಿಂದ ಕ್ರಾಂತಿ ಮಾಡುತ್ತೇವೆಂಬ ಹುಚ್ಚುಕಲ್ಪನೆಯಲ್ಲಿ ನಾವೆಲ್ಲಾ ಇದ್ದೇವೆ.

ಉದಾಹರಣೆಗೆ, ಬೇರೆ ದೇಶದಲ್ಲಿ ಯಾರಾದರೂ ಮನೆಯಲ್ಲಿನ ಮಕ್ಕಳನ್ನು ಶಾಲೆಗೆ ಸೇರಿಸದೇ ಇದ್ದರೆ ಮನೆಯನ್ನು ಇನ್ಸ್‌ಪೆಕ್ಟ್ ಮಾಡಿ ತಂದೆತಾಯಿಗಳಿಗೆ ಕನಿಷ್ಠ ಶಿಕ್ಷೆ ಕೊಡುವಂತಹ ಆಲೋಚನೆ ನಡೆದಿದೆ. ನಮ್ಮ ದೇಶದಲ್ಲಿ ಕಡ್ಡಾಯ ಶಿಕ್ಷಣವೆಂದು ಜಾರಿ ಮಾಡಿ ಯಾವ್ಯಾವ ಜನ ಇವತ್ತು ಶಿಕ್ಷಣದಿಂದ ವಂಚಿತರಾಗಿದ್ದೇವೆ. ಎಷ್ಟೊಂದು ಕೋಟಿ ಖರ್ಚು ಮಾಡುತ್ತಿದ್ದೇವೆ, ಬಿಪಿಇಪಿ ಯೋಜನೆ, ವಯಸ್ಕರ ಶಿಕ್ಷಣ ಯೋಜನೆ, ಆಮೇಲೆ ಶಿಕ್ಷಕರಿಗೆ ಬೋಧನಾಕ್ರಮದಲ್ಲಿ ತರಬೇತಿಯ ಬಿಆರ್‌ಸಿ ಸಿಆರ್‌ಸಿ ಎಂದು ಇಡೀ ರಾಜ್ಯದ ತುಂಬ ಬರಿ ಬಿಲ್ಡಿಂಗ್ ಕಟ್ಟಿಕೊಳ್ಳುತ್ತಾ ನಾವು ಬೋಧನಾ ಕ್ರಮದ ಮೇಲೆ ಚಿಂತನೆ ಮಾಡುತ್ತಿದ್ದೇವೆ, ಆ ಉಪಾಧ್ಯಾಯ ಕಾಫಿಪುಡಿ ದುಡ್ಡನ್ನೇ ಹೊಡೆದುಬಿಟ್ಟ, ಊಟಕ್ಕೆ ಕೊಟ್ಟಿರುವ ದುಡ್ಡನ್ನೇ ಹೊಡೆದುಬಿಟ್ಟ - ಈ ರೀತಿ ನನ್ನ ಕ್ಷೇತ್ರದಲ್ಲಿ ಸಿಕ್ಕಾಪಟ್ಟೆ ಕಂಪ್ಲೇಂಟುಗಳಿವೆ ಪುಸ್ತಕಗಳೇ ಇಲ್ಲ, ತುಮಕೂರು ಜಿಲ್ಲಾಧಿಕಾರಿಗಳ ಮೇಲೆ ಇದೇ ಸದನದಲ್ಲಿ ಚರ್ಚೆಯಾಯಿತು. ಯಾವ್ಯಾವ ದಿಕ್ಕಿನಲ್ಲಿ ಕೆಲಸ ಮಾಡಬೇಕು? ಆಶ್ರಯ ಮನೆಗಳನ್ನು ಕೊಡಬೇಕಾದರೆ ಮನೆಯಲ್ಲಿ ಕಡ್ಡಾಯವಾಗಿ ಮಕ್ಕಳನ್ನು ಶಾಲೆಗೆ ಸೇರಿಸಿರಬೇಕು ಎಂದು ಮಾಡಿದೆವು. ನಾವು ಹಸಿರು ಕಾರ್ಡ್ ಕೊಡುತ್ತೇವೆ, ಯಾವ ವರ್ಗದ ಜನ ವಂಚಿತರಾಗಿದ್ದಾರೆ? ಹಸಿರು ಕಾರ್ಡ್ ಕೊಡಬೇಕಾದರೆ ಕಡ್ಡಾಯವಾಗಿ ಅವರ ಮಕ್ಕಳನ್ನು ಶಾಲೆಗೆ ಸೇರಿಸಿರಬೇಕು ಆಮೇಲೆ ಬ್ಯಾಂಕ್ ಸಾಲದ ಸೌಲಭ್ಯ ಕೊಡಬೇಕಾದರೆ ಅವರ ಮಕ್ಕಳು ಶಾಲೆಗೆ ಸೇರಿರಬೇಕು. ಹಳ್ಳಿಯ ಮಕ್ಕಳು ದಡ್ಡರೇನಲ್ಲ, ಭಾರಿ ಬುದ್ಧಿವಂತರು. ಒಂದು ಸಾರಿ ಒಬ್ಬ ಇನ್ಸ್‌ಪೆಕ್ಟರ್ ಬಂದಿದ್ದನಂತೆ, ಮಕ್ಕಳ ಬುದ್ಧಿಶಕ್ತಿ ಪರೀಕ್ಷೆ ಮಾಡುವುದಕ್ಕೆ ಏನೇನೋ ಪ್ರಶ್ನೆ ಕೇಳುತ್ತಿದ್ದ. ಒಬ್ಬ ಹುಡುಗ ಎದ್ದುನಿಂತು ಒಂದು ಪ್ರಶ್ನೆ ಕೇಳಿದ : ಸ್ವಾಮಿ ಬಲಿ ಚಕ್ರವರ್ತಿಯನ್ನು ವಾಮನ ಮೂರು ಹೆಜ್ಜೆ ಸ್ಥಳ ಕೇಳಿದ, ಒಂದು ಹೆಜ್ಜೆ ಆಕಾಶಕ್ಕೆ ಮಡಗಿದ್ದು, ಇನ್ನೊಂದು ಹೆಜ್ಜೆ ಪೂರ್ಣ ಭೂಮಿಗೆ ಮಡಗಿದ್ದು ಆಗ ಬಲಿ ಚಕ್ರವರ್ತಿ ಎಲ್ಲಿದ್ದ ಸಾರ್ ಎಂದು ಕೇಳಿದ. ಬಲಿ ಚಕ್ರವರ್ತಿ ಎಲ್ಲಿದ್ದ ಎಂದು ಮೇಸ್ಟ್ರು ಉತ್ತರವನ್ನೇ ಕೊಡುವುದಕ್ಕೆ ಆಗಲಿಲ್ಲವಂತೆ. ಅಲ್ಲಿ ಯಾರೋ ಒಬ್ಬ ಹುಡುಗ ಇದ್ದವನು ಇಷ್ಟು ಗೊತ್ತಿಲ್ಲವೇನೋ ದಡ್ಡ, ಎರಡು ಕಾಲು ಕೂಡಿಸು, ಇಷ್ಟು ಚಿಕ್ಕಾಲಿಗೆ ಬೆರಳಿನ ಸಂದಿ ಇಷ್ಟಗಲ ಬಂದಿದೆ, ಅಷ್ಟು ದೊಡ್ಡ ಕಾಲಿಗೆ ಎಷ್ಟು ಅಗಲ ಬೆರಳಿನ ಸಂದಿ ಬಂದಿತ್ತು, ಆ ಬೆರಳಿನ ಸಂದಿಯಲ್ಲಿ ಕುಳಿತಿದ್ದ ಅಂದನಂತೆ. ಹಾಗೆ ಹಳ್ಳಿಗಾಡಿನ ಮಕ್ಕಳು ಸಮಯೋಚಿತ ಎಷ್ಟು ಬುದ್ಧಿವಂತರು ಅಂತ. ಇನ್ನೊಬ್ಬ ಹುಡುಗ ಒಂದು ಪ್ರಶ್ನೆ ಕೇಳಿದನಂತೆ. ದೇವರು ಅಂದರೆ ಯಾರು ಸ್ವಾಮಿ? ಕಣ್ಣಿಗೆ ಕಾಣದಿರುವ ಅದ್ಭುತ ಶಕ್ತಿ ದೇವರು ಬಹಳ ದೊಡ್ಡವನು ಆದರೆ ಏನು ಬೇಕಾದರೂ ಮಾಡಬಲ್ಲ ಎಂದು, ಹಾಗಾದರೆ ತಾನು ಎತ್ತಲಾಗದಂತಹ ಒಂದು ಕಲ್ಲನ್ನು ಸೃಷ್ಟಿಮಾಡಬಲ್ಲನೇ ಆ ದೇವರು ಎಂದು ಪ್ರಶ್ನೆ ಮಾಡಿದನಂತೆ. ಸುಮಾರು ಎರಡು ನಿಮಿಷ ಯೋಚನೆ ಮಾಡಿ ತನ್ನ ಪೆನ್ ತೆಗೆದು ಅವನಿಗೆ ಕೊಟ್ಟುಬಿಟ್ಟ ನಿನ್ನ ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ನಮಸ್ಕಾರ ಎಂದು ಹೋದನಂತೆ. ಅಂತಹ ಬುದ್ಧಿವಂತ ಮಕ್ಕಳಿರುವುದು ಹಳ್ಳಿಯಲ್ಲಿ. ಆದರೆ ಅವರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅವರಿಗೆ ಕಡ್ಡಾಯ ಶಿಕ್ಷಣ ಕೊಡುವ ದಿಕ್ಕಿನಲ್ಲಿ ಸರ್ಕಾರ ಯಾವುದೇ ಪ್ರಯತ್ನ ಮಾಡಿಲ್ಲ. ಯಾವುದೇ ಪ್ರಯತ್ನ ಮಾಡಿದರೂ ನೀವು ಏನು ಕೆಲಸ ಮಾಡಲಿಕ್ಕೆ ಸಾಧ್ಯ? ಆದ್ದರಿಂದ ತಾವು ದಯವಿಟ್ಟು ಕಡ್ಡಾಯ ಶಿಕ್ಷಣ ಜಾರಿಗೆ

ಕೊಡುವ ದಿಕ್ಕಿನಲ್ಲಿ ಕೆಲಸ ಮಾಡಿದರೆ ಇವೆಲ್ಲ ಹೋಗುವುದಕ್ಕೆ ಸಾಧ್ಯ. ಯಾವ ಯಾವ ವಯಸ್ಕರ ಶಿಕ್ಷಣ ಸಮಿತಿಗಳಿವೆ ಇವನ್ನೆಲ್ಲ ತೆಗೆದುಹಾಕಬಹುದು. ಪ್ರಾಥಮಿಕ ಶಿಕ್ಷಣಕ್ಕೆ ಎಷ್ಟು ಹೆಚ್ಚು ಹಣವನ್ನು ಖರ್ಚು ಮಾಡಬಹುದು? ಹಿಂದೆ ಉಪಾಧ್ಯಾಯರ ಬಗ್ಗೆ ಬಹಳ ಗೌರವವಿತ್ತು ಉಪಾಧ್ಯಾಯ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾನೂನು ಮೂಲಕ ಶಿಕ್ಷೆ ಮಾಡುವ ವಿಚಾರದಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಉಪಾಧ್ಯಾಯರಿಗೆ ನಾನೇ ಒಂದು ಸಭೆಯಲ್ಲಿ ಹೇಳಿದೆ ಒಬ್ಬ ರಾಷ್ಟ್ರಪತಿ ಒಬ್ಬ ಉಪಾಧ್ಯಾಯನಿಗೆ ಎದ್ದು ಮೊದಲನೆ ಗೌರವ ಕೊಡುತ್ತಾನೆ ಮಾನ್ಯ ಉಪಾಧ್ಯಕ್ಷರೇ, ಆದರೆ ನಿಮ್ಮ ವೃತ್ತಿ ಇಡೀದೇಶದ ಸ್ವಾಭಿಮಾನ, ಸಾಂಸ್ಕೃತಿಕ ಚಟುವಟಿಕೆ ಎಲ್ಲವನ್ನೂ ಬೆಳಸುವ ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ. ಯಾರು ನಿಮ್ಮ ಹುದ್ದೆಗೆ ದ್ರೋಹ ಮಾಡುತ್ತಾರೆ ಅವರು ದೇಶದ್ರೋಹಿಗಳಲ್ಲಿ ಮೊದಲನೆಯವರು ಅಂತ. ಆದ್ದರಿಂದ ಇನ್ನೊಂದು ಹೇಳಬೇಕು. ತಾವು ಶಾಲಾಭಿವೃದ್ದಿ ಸಮಿತಿಗಳನ್ನು ಮಾಡುತ್ತೀರಿ. ಇದುವರೆಗೂ ಶಾಲಾಭಿವೃದ್ಧಿ ಸಮಿತಿಗಳನ್ನು ಯಾವರೀತಿ ಮಾಡುತ್ತಿದ್ದೀರಿ? ಅತ್ಯಂತ ಜವಾಬ್ದಾರಿಯುತವಾಗಿ ಯಾವುದೇ ಶಾಲಾಭಿವೃದ್ಧಿ ಸಮಿತಿ ಇಲ್ಲ. ಆ ಸಮಿತಿಯ ಕಾರ್ಯವ್ಯಾಪ್ತಿಯೇನು? ಆ ಶಾಲೆಯ ಉಸ್ತುವಾರಿ ನೋಡಿಕೊಳ್ಳಲು ಆ ಸಮಿತಿ ಯಾವ್ಯಾವ ಆಲೋಚನೆ ಮಾಡಬೇಕೆಂಬ ವಿಚಾರವೇ ಇಲ್ಲ. ಶಾಲಾಭಿವೃದ್ಧಿ ಸಮಿತಿ ಅಂದರೆ ಅಲ್ಲಿ ಯಾರೋ ನಮಗೆ ಬೇಕಾದವನು ಇರುತ್ತಾನೆ. ಆ ಅಭಿವೃದ್ಧಿ ಸಮಿತಿಗೂ ರಾಜಕೀಯ ಆವರಿಸಿರುತ್ತದೆ. ನಮ್ಮ ದಳ ಪಕ್ಷದವನ್ನು ಹಾಕಬೇಕು, ನಮ್ಮ ರೈತಸಂಘದವನ್ನು ಹಾಕಬೇಕು, ಇಲ್ಲ ಕಾಂಗ್ರೆಸ್‌ನವನ್ನು ಹಾಕಬೇಕು. ಯಾವ ಐಡಿಯಾಲಜಿ ಇರಬೇಕು? ಒಬ್ಬ ವಿದ್ಯಾವಂತ ಊರಿನಲ್ಲಿರುವವನು ಒಬ್ಬ ಸಮಾಜ ಸೇವೆ ಮಾಡಿರುವ ಒಂದು ಉತ್ತಮವಾದ ಸಮಿತಿ ಮಾಡಿ ತಾಲ್ಲೂಕುಮಟ್ಟದಲ್ಲಿ ಸಮಿತಿ ಮಾಡಿ ಶಾಲೆ ಅಭಿವೃದ್ಧಿ ಬಗ್ಗೆ ಏನು ಚಿಂತನೆ ಮಾಡಬೇಕು ಯಾವ ಕಾರ್ಯಕ್ರಮ ಮಾಡಬೇಕು ಅಂತ ಚಿಂತನೆ ಮಾಡಬೇಕು. ಇವತ್ತು ನಾವು ಶಿಕ್ಷಣವನ್ನು ಯಾವ್ಯಾವ ತರಹದಲ್ಲಿ, ಒಂದು ನವೋದಯ ಶಾಲೆ, ಒಂದು ಸೆಂಟ್ರಲ್ ಸ್ಕೂಲ್, ಒಂದು ಬಾಲ್ಡ್‌ವಿನ್ ಸ್ಕೂಲ್ ಕ್ಯಾತನಹಳ್ಳಿಯಲ್ಲಿ ಸರ್ಕಾರಿ ಶಾಲೆ ಇನ್ಯಾವುದೇ ಒಂದು ಸರ್ಕಾರಿ ಶಾಲೆ. ನೀವು ಸಮವಸ್ತ್ರ ಕೊಡುತ್ತೀರಲ್ಲಾ, ಇಡೀ ಕರ್ನಾಟಕದ ಎಲ್ಲಾ ಶಾಲೆ ಮಕ್ಕಳಿಗೆ, ಅವನು ಯಾವ ಚವರ್ಲೆಟ್ ಕಾರ್ ಇಟ್ಟುಕೊಂಡಿರಲಿ ಒಬ್ಬ ಎತ್ತಿನಗಾಡೀಲಿ ಓಡಾಡಲಿ ಎಮ್ಮೆ ಮೇಯಿಸಿಕೊಂಡು ಇರಲಿ, ಸಮಾನವಾಗಿ ಕೈಮಗ್ಗದ ಒಂದೇ ತರಹದ ಬಟ್ಟೆಗಳನ್ನು ಇಡೀ ಕರ್ನಾಟಕದಲ್ಲಿ ಯಾಕೆ ಇಂಟರ್‌ಡ್ಯೂಸ್ ಮಾಡಬಾರದು? ಯಾಕೆ ಆ ತರಹ ಮಾಡಬಾರದು? ಅವನು ಮನೆಗೆ ಹೋಗಿ ಯಾವ ತರಹ ಬೇಕಾದರೂ ಹಾಕಿಕೊಳ್ಳಲಿ. ಕೈಮಗ್ಗಕ್ಕೆ ಖರ್ಚು ಮಾಡಬೇಕು ಅನ್ನುತ್ತೇವೆ. ಕೈಮಗ್ಗಕ್ಕೆ ಅನುಕೂಲ ಮಾಡಿಕೊಟ್ಟ ಹಾಗೂ ಆಗುತ್ತದೆ. ಏಕೆ ಸಮಾನವಾಗಿ ಮಾಡಬಾರದು ತಾವು ದಯವಿಟ್ಟು ಯೋಚನೆ ಮಾಡಬೇಕು. ಆಮೇಲೆ ಬೋಧನಾ ಕ್ರಮದ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಕ್ರೀಡೆ ಸಂಸ್ಕೃತಿ ಸಂಸ್ಕೃತಿಹೋರಾಟ ಜಾತಿನಾಶಗಳು ಎಂಬ ಬಗ್ಗೆ ಯಾವುದಾದರೂ ಪಠ್ಯಪುಸ್ತಕಗಳು. ಟಿಸಿಎಚ್ ಟ್ರೈನಿಂಗ್‌ನಲ್ಲಿ ಅತ್ಯಂತವಾಗಿ ತಿಳಿದಿರಬೇಕು. ಇವತ್ತು ಯಾವನೇ ಟಿಸಿಎಚ್‌ಗೂ ಕ್ರೀಡೆ ಬಗ್ಗೆ ಗೊತ್ತಿಲ್ಲ. ಗೆಲಿಲಿಯೋ ಒಂದು ಮಾತು ಹೇಳುತ್ತಾನೆ : ಶಾಲೆ ಎಷ್ಟೇ ಕೆಟ್ಟಿರಲಿ ಕ್ರೀಡಾಂಗಣ ಇಲ್ಲದೇ ಇದ್ದರೆ that school is devil's school, ಅದು ದೆಯ್ಯಗಳು

ವಾಸ ಮಾಡತಕ್ಕಂತಹ ಸ್ಥಳ ಎಂದು. ಆ ಕ್ರೀಡೆ ಬಗ್ಗೆ ಯಾರಿಗೂ ಗೊತ್ತಿಲ್ಲ. ಆ ಟಿಸಿಎಚ್ ಟ್ರೈನಿಂಗ್‌ನಲ್ಲಿ ದೈಹಿಕ ಶಿಕ್ಷಣ ಕ್ರೀಡೆ ಎಷ್ಟೊಂದು ಮಹತ್ತರವಾದದ್ದು ಎಂಬುದನ್ನು ತಾವು ತಿಳಿದುಕೊಳ್ಳಬೇಕು ದೇಹ ಚೆನ್ನಾಗಿದ್ದರೆ ದೇಹಗಳು ಚೆನ್ನಾಗಿ ಬೆಳೆಯುವುದಕ್ಕೆ ಸಾಧ್ಯ. ಅವಾಗ ಉತ್ತಮವಾದ ವ್ಯಕ್ತಿ ಆಗುವುದಕ್ಕೆ ಸಾಧ್ಯ. ಬೇರೆ ದೇಶದಲ್ಲಿ ಮೊದಲು ದೈಹಿಕ ಶಿಕ್ಷಣದ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡುತ್ತಾರೆ. ಆದರೆ ನಾವೇನು ಮಾಡುತ್ತಿದ್ದೇವೆ? ಯಾವುಯಾವುದೋ ಕಾರ್ಯಕ್ರಮಗಳನ್ನು ಮಾಡುವುದು ವೋಟಿಗೋಸ್ಕರ. 3 ಕೆಜಿ ಅಕ್ಕಿ ಕೊಡೋ ಕಡೆ ನೋಡಿ ನೀವು, ಸ್ಕೂಲ್ ಬಿಟ್ಟು ಎಲ್ಲಾ ಮಕ್ಕಳೂ ಅಲ್ಲಿ ನಿಂತಿರುತ್ತವೆ ಕ್ಯೂನಲ್ಲಿ. ಒಂದು ದಿವಸ ಪೂರ್ತಿ. ಆಮೇಲೆ ಅಕ್ಕಿ ತೆಗೆದುಕೊಂಡ ಮನೆಗೆ ಹೊರಟುಹೋಗುತ್ತಾರೆ. ಆದ್ದರಿಂದ ಕನಿಷ್ಠ ಮಟ್ಟದಲ್ಲಿ ಸಮಾನ ವಿದ್ಯಾವ್ಯವಸ್ಥೆ ಇದ್ದರೆ ಕನಿಷ ಬದಲಾವಣೆ ಮಾಡುವುದಕ್ಕೆ ಸಾಧ್ಯ. ಆಮೇಲೆ ಇನ್ನೊಂದು. ಈಗಾಗಲೇ ಶಿಕ್ಷಣದಲ್ಲಿ ಬಿಇಒ, ಎಇಬಿ ಏಕೆ ಬೇಕು ಎಇಒ ಹುದ್ದೆ? ದಯವಿಟ್ಟು ಹೇಳಬೇಕು. ಸರ್ಕಾರದಲ್ಲಿ ಎಲ್ಲಾ ಹಣ 5 ಪರ್ಸೆಂಟ ಕಡಿಮೆ ಮಾಡಬೇಕೆಂದು ತಾವು ಪತ್ರಿಕೆಯಲ್ಲಿ ಹೇಳಿದ್ದೀರಿ. ಎಇಒ ಬೇಕಿಲ್ಲ, ಬಿಇಒ ಬೇಕಿಲ್ಲ ಅವರಿಬ್ಬರಿಗೂ ಕಾಂಪಿಟೇಷನ್. ತತ್‌ಕ್ಷಣ ತೆಗೆದುಹಾಕಬೇಕು. ಎಇಒ ನೆಸೆಸಿಟಿ ಇಲ್ಲ, ಇನ್ನೆಷ್ಟು ದಿವಸದಲ್ಲಿ ಮಾಡುತ್ತೀರಿ?

ಶ್ರೀ ಜಿ.ಎಸ್. ಶಿವನಂಜಪ್ಪ : ಇನ್ನೊಂದು ಹುದ್ದೆ ನಿರ್ಮಾಣವಾಗಿದೆ. ಗೆಜೆಟೆಡ್ ಮ್ಯಾನೇಜರ ಎಂದು, ಅದು ಏಕೆ? ಏನು ಮಾಡುತ್ತೀರಿ ಎನ್ನುವುದು ಗೊತ್ತಾಗಲಿಲ್ಲ. ಆದುದರಿಂದ ಶಿಕ್ಷಣದಲ್ಲಿ ಈಗ ಉದಾಹರಣೆಗೆ ಬಿ.ಎ., ಬಿ.ಎಸ್‌ಸಿ., ಬಿ.ಕಾಂ., ಓದುತ್ತಾರೆ. ಆದರೆ ವೃತ್ತಿಪರ ಶಿಕ್ಷಣವನ್ನು ವೃತ್ತಿ ಎಂದರೆ ಸರ್ಕಾರ ಕೆಲಸ ಕೊಡತಕ್ಕಂತಹ ಶಿಕ್ಷಣ ಅಲ್ಲ. ನಮಗೆ ನಾವೇ ಸ್ವಯಂ ಉದ್ಯೋಗವನ ಮಾಡತಕ್ಕಂತಹ ಶಿಕ್ಷಣ ಬೇಕು. ಉದಾಹರಣೆಗೆ ತಮಿಳು ನಾಡಿನಲ್ಲಿ ಬಹಳ ಐಟಿಐ ಕಾಲೇಜುಗಳ ಇವೆ ಐಟಿಐ ನಲ್ಲಿ ಹೋಂ ಇಂಡಸ್ಟ್ರೀಸ್ ಎಷ್ಟು ದೊಡ್ಡದು ಇದೆ ಎಂದರೆ, ಬಹಳ ದೊಡ್ಡ ಇಂಡಸ್ಟ್ರೀಸ ಮಾಡಿದ್ದಾರೆ. ಮನೆಯಲ್ಲಿ ಸಣ್ಣ ಸಣ್ಣ ಕೈಗಾರಿಕೆ ರೀತಿಯಲ್ಲಿ ಕೈ ಕೆಲಸದ ಮೂಲಕ ಉಪಕರಣಗಳನ ತಯಾರು ಮಾಡಿ ಬಹಳ ಉದ್ಯೋಗ ಸೃಷ್ಟಿ ಮಾಡತಕ್ಕಂತಹ ಕೆಲಸ ಮಾಡಿದ್ದಾರೆ. ತಮಿಳು ನಾಡ ಮಾದರಿಯಲ್ಲಿ ಅಂದರೆ ತಮಿಳುನಾಡಿನಲ್ಲಿ ಇರತಕ್ಕಂತಹ ಮಾದರಿ ಐಟಿಐಗಳನ್ನು ತಾವು ಮಾಡಬೇಕ ನಾನು ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಬಹಳ ದೊಡ್ಡ ಇಂಡಸ್ಟ್ರೀ ಅದು. ಆದುದರಿಂ ದಯವಿಟ್ಟು ಬಹಳ ಮುಖ್ಯವಾದುದು ಎಂದರೆ ಶಾಲಾ ಅಭಿವೃದ್ಧಿ ಸಮಿತಿ ಜೊತೆಗೆ ಶಾಲೆ ರಿಪೇ ಅತ್ಯವಶ್ಯಕ. ಶಾಲೆ ಯಾವ ಮಟ್ಟದಲ್ಲಿ ರಿಪೇರಿ ಆಗಿದೆ ಎಂದರೆ, ಹಿಂದೆ ವಿಜಯ ನಗರ ಸಾಮ್ರಾಜ್ಯ ಹಂಪೆ ಈಗ ಏನು ಆಗಿದೆಯಲ್ಲಾ ಆ ಸ್ಥಿತಿಗೆ ಎಲ್ಲಾ ಶಾಲೆಗಳು ಬಂದಿವೆ. ನಿಜವಾಗಲೂ ಹೇಳುತ್ತೇನ ಗೋವಿಂದೇಗೌಡರು ತಾವು ದಯವಿಟ್ಟು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು. ಸನ್ಮಾ ಉಪಾಧ್ಯಕ್ಷರೆ, ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದು ಏನೆಂದರೆ, ಒಟ್ಟು ರೆವಿನ್ಯೂ ಏನು ವಸೂ ಮಾಡುತ್ತೀರಿ, ಸಬ್ ರಿಜಿಸ್ಟ್ರಾರ್ ಆಫೀಸಿನಿಂದ ಬರತಕ್ಕಂತಹ ಹಣ ಇದೆಯಲ್ಲಾ ವರ್ಷಕ್ಕೆ ಒಂದೊಂಡ ತಾಲ್ಲೂಕು ಪಂಚಾಯತಿಗೆ 15 ಲಕ್ಷ ರೂಪಾಯಿ ಬರುತ್ತದೆ. ಈ 15 ಲಕ್ಷದ ಜೊತೆಗೆ ತಾವು ಒಂಡ

ಪೂರ್ತಿ ಇಡೀ ಸ್ಕೂಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯ. ಈಗ ಏನಾಗಿದೆ ತಾಲ್ಲೂಕು ಪಂಚಾಯಿತಿಯಲ್ಲಿ ಆ ಸ್ಕೂಲ್ ಆ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಬರುತ್ತದೋ ಗೊತ್ತಿಲ್ಲ. ಅಲ್ಲಿ ಏನೆಂದರೆ ನನಗೆ 50 ಸಾವಿರ, ಅಲ್ಲಿ 15 ಜನ ಮೆಂಬರ್ ಇದ್ದೀವಿ, ಒಬ್ಬೊಬ್ಬರಿಗೆ 50 ಸಾವಿರ, 50 ಸಾವಿರ. ಹಾಗಲ್ಲ, ಇಡೀ ತಾಲ್ಲೂಕಿನಲ್ಲಿ ಶಾಲೆ ರಿಪೇರಿ ಮಾಡತಕ್ಕಂತಹ ಪೂರ್ಣ ಎಸ್ಟಿಮೇಟ್ ತಯಾರು ಮಾಡಿ ಒಟ್ಟಾರೆ ಇಡೀ ಶಾಲೆಯನ್ನು ರಿಪೇರಿ ಮಾಡುವಂತಹ ಕೆಲಸ ಆಗಬೇಕು. ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಹೇಳುವುದೇನೆಂದರೆ, ದಯವಿಟ್ಟು ಹೊಸ ಬಿಲ್ಡಿಂಗ್‌ಗಳನ್ನು ಕಟ್ಟುವುದು ನಿಲ್ಲಿಸಿ. ತಮಗೆ ಗೊತ್ತಿಲ್ಲ, ಅಲ್ಲಿ ಸರ್ಕಾರಿ ಬಿಲ್ಡಿಂಗ್ ಎಷ್ಟು ಕಟ್ಟಿದ್ದಾರೆ, ಅಲ್ಲಿ ಯಾರ್ಯಾರು ವಾಸ ಆಗಿದ್ದಾರೆ, ಅಲ್ಲಿ ಯಾರು ಇದ್ದಾರೆ ಎಂದು. ನಾನು ಉದಾಹರಣೆಗೆ ಕರಗನ ಮರಡಿಯಲ್ಲಿ ನೋಡಿದ್ದೇನೆ, 3 ಬಿಲ್ಡಿಂಗ್ ಕಟ್ಟಿದ್ದಾರೆ. ಆ ಮೂರು ಬಿಲ್ಡಿಂಗ್‌ನಲ್ಲೂ ಕಿಟಕಿ ಕಿತ್ತು ಕೊಂಡು ಹೋಗಿದ್ದಾರೆ, ಬಾಗಿಲು ಕಿತ್ತುಕೊಂಡು ಹೋಗಿದ್ದಾರೆ. ಆ ಬಿಲ್ಡಿಂಗ್‌ನಲ್ಲಿ ಯಾರೂ ಇಲ್ಲ. ಅದು ಹಾಗೇ ಇದೆ. ಅದರಲ್ಲಿ ಯಾರ್ಯಾರು ವಾಸ ಮಾಡಬೇಕು ಎಂದು ನಿಯಮದ ಆಧಾರದ ಮೇಲೆ ಕಟ್ಟಿರುತ್ತೀರಿ, ಆದರೆ ಅವರ್ಯಾರು ಅಲ್ಲಿ ವಾಸ ಮಾಡುವುದಿಲ್ಲ. ಅವರ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತಾ ಇಲ್ಲ. ಸರ್ಕಾರದ ಹಣ ಕೊಡುವುದು ಬಿಲ್ಡಿಂಗ್ ಕಟ್ಟುವುದು. ಆದುದರಿಂದ ಕನಿಷ್ಟ ಸರ್ಕಾರಿ ಶಾಲೆಗಳನ್ನು ರಿಪೇರಿ ಮಾಡಿಸಿ. 50ನೇ ಸ್ವತಂತ್ರ್ಯಕ್ಕೆ ಕಡ್ಡಾಯ ಶಿಕ್ಷಣ, ಶಾಲೆ ರಿಪೇರಿ ಮಾಡತಕ್ಕಂತಹ ಕಮಿಷ್ಠ ಕೆಲಸಗಳನ್ನೂ ತಾವು ಮಾಡಬೇಕೆಂದು ಹೇಳುತ್ತಾ ಹಾಗೆಯೇ ಕ್ರೀಡೆಗೆ ಹೆಚ್ಚು ಒತ್ತು ಕೊಡಬೇಕು. ಇಲ್ಲಿ ಏನಾಗಿದೆ ಎಂದರೆ ಒಂದನೇ ತರಗತಿಯಿಂದ ಏಳನೇ ತರಗತಿ ಮಧ್ಯದಲ್ಲಿ ಆರು ಪ್ಲಸ್ ಒಂದು ಮಾಡಿದ್ದೀರಿ. ದಯವಿಟ್ಟು ಏಳು ಪ್ಲಸ್ ಒಂದು ಮಾಡಬೇಕು. ದೈಹಿಕ ಶಿಕ್ಷಕ ವಿಶೇಷವಾಗಿ ಕೆಲಸ ಮಾಡಬೇಕು. ದೈಹಿಕ ಶಿಕ್ಷಕರು ಇಲ್ಲದಿದ್ದರೆ, ನಿಜವಾಗಲೂ ಮಕ್ಕಳು ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ವ್ಯಾಯಾಮ ಮಾಡಬೇಕು, ಕಡ್ಡಾಯ ವ್ಯಾಯಾಮ ಮಾಡದೆ ಇದ್ದರೆ ಇಡೀ ಜನರೇಷನ್ ನಾಶ ಆಗುತ್ತದೆ. ಆದಕಾರಣ ನಾವು 90 ಕೋಟಿ ಜನಸಂಖ್ಯೆ ಇದ್ದರೂ ಇದೂವರೆವಿಗೂ ಒಂದು ಚಿನ್ನದ ಪದಕವನ್ನು ತರುತ್ತಾ ಇಲ್ಲ. ಆದರೆ ಒಂದರಲ್ಲಿ ಮಾತ್ರ ಚಿನ್ನದ ಪದಕವನ್ನು ತರುತ್ತಾ ಇದ್ದೇವೆ. ಯಾವುದೆಂದರೆ, ಮಕ್ಕಳನ್ನು ಸೃಷ್ಟಿ ಮಾಡುವುದರಲ್ಲಿ. ಆದರೆ ಅದಕ್ಕೆ ಮೆಡಲ್ ಇಲ್ಲ ಅಷ್ಟೆ. ಅದರಲ್ಲಿ ನಾವು ಒಂದು ಪದಕ ತೆಗೆದುಕೊಳ್ಳಬಹುದು ಅಷ್ಟೇ. ನಿಜವಾಗಲೂ ಗೋಲ್ಡ್ ಮೆಡಲ್ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ ಅಷ್ಟೇ. ವ್ಯಾಯಾಮಕ್ಕೆ ಅತ್ಯಂತ ಆದ್ಯತೆ ಕೊಡಬೇಕು ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಇಡೀ ಪ್ರಪಂಚದಲ್ಲಿ ಎಲ್ಲಾ ದೇಶಗಳು ದೈಹಿಕ ಸಂಪತ್ತಿಗೆ, ಬಹಳ ಗೌರವ ಕೊಡುತ್ತಾರೆ, ಬಹಳ ಬೆಳೆಸುತ್ತಾರೆ, ದಯವಿಟ್ಟು ತಾವು ಬೆಳೆಸಬೇಕು. ಆ ದಾರಿಯಲ್ಲಿ ತಾವು ಕೆಲಸ ಮಾಡಬೇಕು, ಎಂದು ಹೇಳುತ್ತಾ, ಸನ್ಮಾನ್ಯ... ಕ್ರೀಡೆ ಬಗ್ಗೆ ಒಂದು ಆರ್ಡಿಯೆನ್ಸ್‌ಅನ್ನು ತೆಗೆದುಕೊಂಡು ಬನ್ನಿ, ಮಂತ್ರಿಗಳು ಹೇಳುತ್ತಾ ಇದ್ದಾರೆ. ಆಮೇಲೆ ಸಿದ್ದರಾಮಯ್ಯನವರು ಹೆಚ್ಚು ಹಣ ಕೊಡಬೇಕು ತಾವು. ನೀವು ಯುವಕರಾಗಿದ್ದೀರಿ, ಆ ಕ್ರೀಡೆಗೆ ದುಡ್ಡು ಜಾಸ್ತಿ ಕೊಡಿ. ಎಲ್ಲಿ ಕೊಟ್ಟಿದ್ದೀರೀ? ಎಲ್ಲೂ ಕೊಟ್ಟೇ ಇಲ್ಲ. ನಾನು ಯೂತ್ ಸರ್ವೀಸ್

ಕೂಡ ಸ್ಪೋರ್ಟ್ಸ್‌ಮ್ಯಾನ್ ನೀವು ರೀತಿ ಕಾಣಿಸುತ್ತೀರಿ. ಆದುದರಿಂದ ಸನ್ಮಾನ್ಯ ಉಪಾಧ್ಯಕ್ಷರೆ, ಈ ಎಲ್ಲಾ ಅಮೂಲ್ಯವಾದ ವಿಷಯಗಳ ಬಗ್ಗೆ ಎಲ್ಲರೂ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಕಡ್ಡಾಯ ಶಿಕ್ಷಣದ ಬಗ್ಗೆ ಸರ್ಕಾರವು ಕಾರ್ಯಕ್ರಮ ಹಾಕಬೇಕು. ವಯಸ್ಕರ ಶಿಕ್ಷಣ ಸಮಿತಿ, ಸಿಆರ್‌ಪಿ, ಬಿಆರ್‌ಸಿ ಅಕ್ಷರ ಕಲಿಯಿರಿ, ಅಕ್ಷರದಿಂದ ಜ್ಞಾನ ಬರುತ್ತದೆ ಎಂದು ಎಲ್ಲಾ ಗೋಡೆಗಳ ಮೇಲೆ ಬರೆದು, ಬರೆದು ಇರುವ ದುಡ್ಡನ್ನೆಲ್ಲಾ ಯಾರ್ಯಾರು ತಿನ್ನಬೇಕೋ ಪೂರ್ತಿ ತಿಂದುಕೊಂಡು ಹೋಗಿದ್ದಾರೆ. ಬರೆಯುವವರೇ ಅಷ್ಟೊಂದು ದುಡ್ಡು ತಿನ್ನುತ್ತಾರೆ. ಇದು ನನಗೂ ಅರ್ಥ ಆಗುತ್ತಾ ಇಲ್ಲ. ಓದಿದವರು ಸಮಾಜ ಬದಲಾವಣೆ ಮಾಡುತ್ತಾರೆ ಎಂದು ಹೇಳುತ್ತಾರೆ, ಆದರೆ ಓದಿದವರು ಇಷ್ಟೊಂದು ದುಡ್ಡು ತಿನ್ನುತ್ತಾರೆ, ಅದು ಏಕೆ ಎಂಬುದು ಗೊತ್ತಿಲ್ಲ. ಓದಿದವರಿಗೆ ದುಡ್ಡು ತಿನ್ನುವ ಬುದ್ಧಿ ಬರುತ್ತದೆ ಎಂದು ಗೊತ್ತಾಗುತ್ತದೆ. ಕಲಿಯಿಸಿರಿ, ಕಲಿಯಿರಿ, ಸಿಕ್ಕಿದಷ್ಟು ಕದಿಯಿರಿ. ಯಾರು ಬರೆಯುತ್ತಾರೆ ಅವರು ಕದಿಯಿರಿ ಎನ್ನುವ ಸ್ಲೋಗನ್ ಮಾಡಬೇಕು.

ಶ್ರೀ ಎನ್. ರಾಜಣ್ಣ : ವರ್ಷಕ್ಕೆ ಒಂದು ಸಾರಿ ಸ್ವಾಮಿ ವಿವೇಕಾನಂದರ ಬಗ್ಗೆ ಚಿಂತನೆ ಮಾಡಿ ಆ ದಿವಸವೆಲ್ಲಾ ಡ್ರಿಲ್ ಮಾಡಿಸುತ್ತಿದ್ದರು. ಸ್ವಾಮಿ ವಿವೇಕಾನಂದರು ಏನು ಹೇಳಿದ್ದಾರೆ ಎಂದರೆ Iron body with steel nerves, ಇವತ್ತು ಕಲ್ಕತ್ತಾದಲ್ಲಿ ಏಕೆ ಫುಟ್‌ಬಾಲ್‌ನಲ್ಲಿ ಗೋಲ್ಡ್ ಮೆಡಲ್ ತೆಗೆದುಕೊಳ್ಳುತ್ತಾರೆ ಎಂದರೆ, ಅಲ್ಲಿ ಮಿನಿಮಂ ಎರಡು ಗಂಟೆ ಕಾಲ ಮಕ್ಕಳು ಆಟ ಆಡಲೇಬೇಕು. ಆದರೆ ಬೆಂಗಳೂರು ನಗರದಲ್ಲಿ ಏನಾಗಿದೆ ಎಂದರೆ ಇರುವ ಮೈದಾನ ಎಲ್ಲಾ ಖಾಲಿಯಾಗಿದೆ. ಕೆರೆ, ಕುಂಟೆ, ಮಾಯ. ಇವತ್ತು ಆಟದ ಮೈದಾನ ಇದ್ದುದ್ದನ್ನು ಲ್ಯಾಂಡ್ ಗ್ರ್ಯಾಬರ್ಸ್ ಲೂಟಿ ಮಾಡಿ, ಮಕ್ಕಳಿಗೆ ಹಿಂದೆ ಕುರಿ ದೊಡ್ಡಿ ಇತ್ತಲ್ಲಾ, ಅಂದರೆ ಶಾಲೆಗಳಲ್ಲಿ ಕುರಿದೊಡ್ಡಿಯಲ್ಲಿ ಕೂಡಿದ ಹಾಗೆ ಮಕ್ಕಳನ್ನು ಕೂಡಿಹಾಕುತ್ತಾ ಇದ್ದಾರೆ. ಇವತ್ತು ಆಟದ ಮೈದಾನವೇ ಇಲ್ಲದ ಹಾಗೆ ಆಗಿದೆ. ಮಕ್ಕಳು ಈವತ್ತು mentally, bodily disorder, ಆಗುತ್ತಾ ಇದ್ದಾರೆ. ಅದರ ಬಗ್ಗೆ ಬೆಂಗಳೂರು ನಗರದವರು ಎಚ್ಚರಿಕೆ ವಹಿಸಿ ಆಟದ ಮೈದಾನ ಕಾದಿರಿಸಬೇಕು. I support Sri Puttannaiah and what he said is hundred percent correct.

ಶ್ರೀ ಎಸ್. ಸುರೇಶ್ ಕುಮಾರ್ : ಅಧ್ಯಕ್ಷರೆ, ರಾಜಣ್ಣನವರಿಗೆ ಗೊತ್ತಿಲ್ಲ, ಅದಕ್ಕೋಸ್ಕರ ಸರ್ಕಾರ ಇವತ್ತು ವಿಡಿಯೋ ಗೇಂ, ರೀಕ್ರಿಯೇಷನ್ ಕ್ಲಬ್ ಕೊಟ್ಟಿದೆ, ಲೈವ್ ಬ್ಯಾಂಡ್ ಕೊಟ್ಟಿದೆ, ಸಿಂಗಲ್ ನಂಬರ್ ಲಾಟರಿ ಕೊಟ್ಟಿದೆ. ಇಂತಹ ಆಟಗಳನ್ನೆಲ್ಲಾ ಆಡಿ ಎಂದು ಇವತ್ತು ಸರ್ಕಾರ ಹೇಳುತ್ತಾ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಬಹಳ ಮುಖ್ಯವಾಗಿರುವುದು ಏನೆಂದರೆ ನೀವು ಹೆಂಚಿನ ಮನೆ ಸ್ಕೂಲ್‌ಗಳನ್ನು ಕಟ್ಟುವುದನ್ನು ನಿಲ್ಲಿಸಬೇಕು. ಹೆಂಚಿನ ಮನೆ ಸ್ಕೂಲ್‌ಗಳನ್ನು ಕಟ್ಟುತ್ತಾ ಹೋದರೆ, ನೀವು ಜಾಗವನ್ನು ಎಲ್ಲಿಂದ ತರುತ್ತೀರಾ? ಆದರೆ ಕಳೆದ ವರ್ಷ ಸಹ ಇದೇ ಮಾತನ್ನು ಹೇಳಿದ್ದೆ. ಆದರೆ ಈಗ ಅದೇ ಕೆಲಸ ಮಾಡುತ್ತಾ ಇದ್ದೀರಿ. ನೀವು 55 ಸಾವಿರ, 15 ಸಾವಿರ, 10 ಸಾವಿರ, 80 ಸಾವಿರ, 90 ಸಾವಿರ ಹಣ ಕೊಟ್ಟು ಹೆಂಚಿನ ಮನೆ ಶಾಲೆಗಳನ್ನು ಕಟ್ಟುತ್ತಾ ಹೋಗುತ್ತಿದ್ದೀರಿ, ಪುನಃ.

ಅದು ಬಿದ್ದು ಹೋಗುತ್ತದೆ. ಜೊತೆಗೆ ಜಾಗ ಎಲ್ಲಿಂದ ತರುತ್ತೀರಾ? ಜಾಗ ಎಲ್ಲಿ ಉಳಿದಿದೆ? ಗೋಮಾಳ ಎಲ್ಲಾ ಕೊಟ್ಟಿದ್ದೀರಿ. ಪಂಚಾಯಿತಿಯವರು ಎಲ್ಲಾ ಯಾರು ಯಾರಿಗೆ ಬೇಕೋ ಅವರಿಗೆ ಇಷ್ಟ ಬಂದವರಿಗೆಲ್ಲಾ ಸೈಟ್ ಕೊಟ್ಟುಬಿಟ್ಟಿದ್ದಾರೆ. ಮತ್ತು ಆ ಶಾಲೆ ಕಟ್ಟಿದ್ದಾರಲ್ಲಾ ಅದು ಯಾವ ರೀತಿ ಇದೆ ಎಂಬುದನ್ನು ನೋಡಿದ್ದೀರಾ? ಅದಕ್ಕೆ ಒಂದು ರೂಪ ಇದೆಯೇ, ಆ ಕಡೆ ರೂಂ ಇದ್ದರೆ ಮತ್ತೆಲ್ಲೋ ರೂಂ ಇದೆ. ಇನ್ನೆಲ್ಲೋ ರೂಂ ಇದೆ. ಸ್ವಾಮಿ ಅದು ಯಾವ ರೀತಿ ಕಟ್ಟುತ್ತಾರೆ ಅಂತ ನನಗೂ ಅರ್ಥ ಆಗುತ್ತಿಲ್ಲ. ಆದುದರಿಂದ ಆರ್.ಸಿ.ಸಿ. ಬಿಲ್ಡಿಂಗ್ ಕಟ್ಟಿದರೆ ಅಟ್‌ಲೀಸ್ಟ್ ಎರಡು ಅಂತಸ್ತು ಮೂರು ಅಂತಸ್ತು ಮಳಿಗೆಯನ್ನು ಕಟ್ಟಬಹುದು. ಸುಮಾರು ನೂರು ವರ್ಷಗಳ ಕಾಲ ಜಾಗ ಇಲ್ಲದ ಹಾಗೆ ಶಾಲೆ ಕಟ್ಟಬಹುದು. ಕಟ್ಟುವ ಸಂಖ್ಯೆಗಳನ್ನು ಬೇಕಾದರೆ ಕಡಿಮೆ ಮಾಡಿ. ಅಂದರೆ 500 ಕೊಠಡಿ ಕಟ್ಟ ಬೇಕು ಎಂದು ಇದ್ದರೆ, ಅದರಲ್ಲಿ 150 ಕೊಠಡಿ ಕಡಿಮೆ ಮಾಡಿ, 350 ಕಟ್ಟಿ. ಕೊಠಡಿ ಗಟ್ಟಿಯಾಗಿ, ಭದ್ರವಾಗಿ, ಸ್ವಚ್ಛವಾಗಿ ಇರತಕ್ಕಂತಹ ಆರ್.ಸಿ.ಸಿ. ಬಿಲ್ಡಿಂಗ್ ಕಟ್ಟಿ. ಇಲ್ಲ ಎಂದರೆ ಆ ಕಡೆಯಿಂದ ಕಟ್ಟಿಕೊಂಡು ಹೋಗುತ್ತಿರುತ್ತೀರಿ, ಈ ಕಡೆಯಿಂದ ರೀಪೇರಿ ಮಾಡತಕ್ಕಂತಹ ಕೆಲಸ ಮಾಡಬೇಕಾಗುತ್ತದೆ. ಸನ್ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಶಾಲೆಯ ಕಟ್ಟಡವನ್ನು ಭದ್ರವಾಗಿ, ವ್ಯವಸ್ಥಿತವಾಗಿ, ಕಟ್ಟಬೇಕು ಎಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಾ, ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ತರುವಂತಹ ದಿಕ್ಕಿನಲ್ಲಿ ತಾವೆಲ್ಲಾ ಕೆಲಸ ಮಾಡಬೇಕು ಎಂದು, ಸರ್ಕಾರ ಸಮರೋಪಾದಿಯಲ್ಲಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಆಶ್ಚರ್ಯ, ಅವರ ಪಕ್ಷಕ್ಕೆ ತಾವು ಯಾವಾಗ ಸೇರಿದಿರಿ? ಆ ವಿಷಯ ಪತ್ರಿಕೆಯಲ್ಲಿ ಬಂತು. ಆ ಪತ್ರಿಕೆ ಬಹಳ ಜವಾಬ್ದಾರಿಯಾದಂತಹ ಕನ್ನಡ ಪ್ರಭ ಮುಖ ಪುಟದಲ್ಲಿ ಬಂದಿದೆ. ಆದರೆ ಈಗ ನೀವೇ ಇದ್ದೀರಿಲ್ಲಾ, ಉಂಟು ಇಲ್ಲಾ ಎಂದು ಹೇಳಿಬಿಟ್ಟರೆ... ಇಲ್ಲಾ ಎಂದು ಹೇಳುತ್ತೀರಾ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಶಿಕ್ಷಣ ಸಚಿವರು, ಟಿ.ವಿ.ಯಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಅಟ್‌ಲೀಸ್ಟ್ ವಾರಕ್ಕೆ ಎರಡು, ಮೂರು ಕಾರ್ಯಕ್ರಮ ಮಾಡತಕ್ಕಂತಹ ವ್ಯವಸ್ಥೆ ತಾವು ಮಾಡಬೇಕು. ಆ ದೂರದರ್ಶನದಲ್ಲಿ ಬರೀ ಡ್ಯಾನ್ಸ್, ಕುಣಿತ, ಇವೇ ಇದೆ. ಆದರೆ ದೂರದರ್ಶನದಲ್ಲಿ ನೀವು ಶಿಕ್ಷಣದ ಮಹತ್ವ, ಶಿಕ್ಷಣದ ಹೊಣೆಗಾರಿಕೆ, ಶಿಕ್ಷಣದ ಮೂಲಕ ಸಾಂಸ್ಕೃತಿಕ ಬದಲಾವಣೆಗಳು, ವೈಜ್ಞಾನಿಕ ವಿಚಾರಗಳು ಇಂತಹದ್ದನ್ನೆಲ್ಲಾ ದೂರದರ್ಶನದಲ್ಲಿ ಪ್ರಸಾರ ಮಾಡಬೇಕು. ಮತ್ತು ಕೆಲವು ವಿಜ್ಞಾನಿಗಳ ವಿಚಾರವನ್ನು ಚರ್ಚೆ ಮಾಡುವುದು, ಮತ್ತು ಅವರು ಏನೇನು ಇನ್‌ವೆನ್‌ಷನ್ ಮಾಡಿದ್ದಾರೆ, ಎಂಬುದನ್ನು ತಿಳಿಸಬೇಕು. ಮತ್ತು ದೂರದರ್ಶನದ ಮೂಲಕ ಒಂದು ಶಿಕ್ಷಣದ ಕಾರ್ಯಕ್ರಮ ಇದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನಾವು ಈಗಾಗಲೇ ಮಧ್ಯಾಹ್ನ 1.30 ರಿಂದ 2.30 ರವರೆಗೆ ಎಲ್ಲಾ ವಿದ್ಯಾರ್ಥಿಗಳು ರೇಡಿಯೋ ಕಾರ್ಯಕ್ರಮ ಕೇಳಲು ಎಲ್ಲಾ ಸ್ಕೂಲ್‌ಗಳಿಗೆ ರೇಡಿಯೋಗಳನ್ನು ಒದಗಿಸಿದ್ದೇವೆ. ಎಲ್ಲಾ ವಿದ್ಯಾರ್ಥಿಗಳು ಮಧ್ಯಾಹ್ನ 1.30 ರಿಂದ 2.30 ರವರೆಗೆ ಕಾರ್ಯಕ್ರಮ ಕೇಳಬೇಕು ಎಂಬ ವ್ಯವಸ್ಥೆ ಇದೆ. ಆದರೆ ಅದನ್ನು ಉಪಯೋಗಿಸಿಕೊಳ್ಳತಕ್ಕಂಥದ್ದು ನಮ್ಮೆಲ್ಲರಿಗೂ ಸಂಬಂಧಪಟ್ಟಿದ್ದುದು.

11.40 ಎಎಂ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಬಹಳಷ್ಟು ಮಕ್ಕಳಿಗೆ ವಿಜ್ಞಾನಿಗಳ ಹೆಸರುಗಳು ಗೊತ್ತಿಲ್ಲ. ಯಾರ್ಯಾರು, ಯಾವ್ಯಾವ ರೀತಿ ಸಂಶೋಧಿಸಿದರು, ಎಷ್ಟು ಶ್ರಮ ಪಟ್ಟರು, ಅವರು ಇಡೀ ಮಾನವ ಕುಲಕ್ಕೆ ಎಷ್ಟೊಂದು ಅನುಕೂಲ ಮಾಡಿಕೊಟ್ಟಿದ್ದಾರೆಂಬ ವಿಚಾರವನ್ನು ಟಿ.ವಿ. ಮೂಲಕ ವಾರಕ್ಕೆ ಎರಡು-ಮೂರು ಬಾರಿ ಪ್ರಸಾರ ಮಾಡುವ ಕಾರ್ಯಕ್ರಮ ಹಮ್ಮಿಕೊಂಡರೆ ತುಂಬಾ ಅನುಕೂಲವಾಗುತ್ತದೆ.

+ ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ (ಬೀದರ್) : ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಭಾಷಣ ಮಾಡಲು ಹೋಗದೆ ಪ್ರೈಮರಿ ಎಜ್ಯುಕೇಷನ್ ಬಗ್ಗೆ ಸರ್ಕಾರಕ್ಕೆ ಒಂದು ಸಲಹೆ ಕೊಡುವುದಿದೆ. ನಮ್ಮ ರಾಜ್ಯದಲ್ಲಿ ಬಹಳಷ್ಟು ಪ್ರೈಮರಿ ಶಾಲೆಗಳಿದ್ದು, ನಮ್ಮ ಜಿಲ್ಲೆಯ ಪ್ರೈಮರಿ ಶಾಲೆಗಳಲ್ಲಿ ಟೀಚರ್ಸ್ ಇದ್ದರೆ ಫರ್ನಿಚರ್ಸ್ ಇರುವುದಿಲ್ಲ, ಫರ್ನಿಚರ್ಸ್ ಇದ್ದರೆ ಬಿಲ್ಡಿಂಗ್, ಕ್ಲಾಸ್‌ರೂಮ್ ಇರುವುದಿಲ್ಲ. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಸದನದಲ್ಲಿರುವುದರಿಂದ ಅವರಲ್ಲಿ ನನ್ನ ವಿನಂತಿಯೇನೆಂದರೆ, ನಮ್ಮ ಜಿಲ್ಲೆಯಲ್ಲಿ ಈಗ ಹೈಸ್ಕೂಲುಗಳು ಬಂದಿದ್ದು ಅವುಗಳದ್ದೇ ದೊಡ್ಡ ಸಮಸ್ಯೆಯಾಗಿದೆ. ಜಿಲ್ಲೆಯಲ್ಲಿ 15-12 ಹೈಸ್ಕೂಲುಗಳು ಪ್ರಾರಂಭವಾಗಿ ಹತ್ತು ವರ್ಷಗಳಾಗಿದ್ದರೂ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಬೋಧಿಸುವ ಉಪಾಧ್ಯಾಯರುಗಳಿಲ್ಲ. ಮೊನ್ನೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಉಪಾಧ್ಯಕ್ಷರೆ, ಎಲ್ಲರೂ ನಗುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ನಾವು ಮಾತನಾಡುವಾಗ 12-15 ಎಂದು ಹೇಳುತ್ತೇವೆ, ಆದರೆ, ಅವರು 15-12 ಎಂದು ಹೇಳಿದರಲ್ಲಾ, ಅದಕ್ಕೆ ನಗು ಬಂತು.

ಶ್ರೀ ಸಿ.ಎಂ. ಉದಾಸಿ : ಬಹುಜನ ಸಮಾಜ ಪಕ್ಷದ ಸದಸ್ಯರಾದ ಹಷ್ಮಿಯವರು ಮಾತನಾಡುವಾಗ ಬಿ.ಜೆ.ಪಿ. ಯವರು ಆಕ್ಷೇಪ ಮಾಡಬಾರದು. ಏಕೆಂದರೆ, ಅವರಿಬ್ಬರೂ ಈಗ ಒಂದೇ ಪಕ್ಷದಲ್ಲಿದ್ದಾರೆ. ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತು ಬಿಎಸ್‌ಪಿ ಮೈತ್ರಿಕೂಟದ ಸರ್ಕಾರವಿದ್ದು, ಮಾನ್ಯ ಸದಸ್ಯರು ಮಾತನಾಡುವಾಗ ಸ್ವಲ್ಪ ಹೆಚ್ಚು-ಕಡಿಮೆಯಾದರೂ ಸುಧಾರಿಸಿಕೊಳ್ಳಬೇಕು.

ಶ್ರೀ ಬಿ.ಬಿ. ಶಿವಪ್ಪ : ನಾವು ನಗುತ್ತಿಲ್ಲ, ಅವರು ಈ ಸದನಕ್ಕೆ ಪ್ರಥಮ ಬಾರಿಗೆ ಬಂದಾಗ ಕನ್ನಡ ಮಾತನಾಡುತ್ತಿರಲಿಲ್ಲ. ಆದರೂ ಇಷ್ಟು ಬೇಗ ಅವರು ಕನ್ನಡ ಕಲಿತಿದ್ದಾರಲ್ಲಾ ಎಂದು ಸಂತೋಷ ಪಡುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಉತ್ತರ ಪ್ರದೇಶದಲ್ಲಿ ಜೊತೆಗೆ ಇದ್ದಾರಲ್ಲಾ, ಈಗ ಇದ್ದಕ್ಕಿದ್ದಂತೆ ಇವರ ಮೇಲೆ ನಿಮಗೆ ಪ್ರೀತಿ ಬಂದಿದೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : .... ದೇಶ್‌ಕಿ ಮಜಬೂರಿ ಹೈ ಕಾನ್ಷಿರಾಂ ಜರೂರಿ ಹೈ. ಇದು ಇವೊತ್ತಿನ ರಾಷ್ಟ್ರದ ಪರಿಸ್ಥಿತಿ. ಒಂದು ಸಲ ನಮ್ಮ ಜೊತೆ ಕಾಂಗ್ರೆಸ್‌ನವರು ಬರುತ್ತಾರೆ, ಮತ್ತೊಂದು ಸಲ ಬಿ.ಜೆ.ಪಿ.ಯವರು ಬರುತ್ತಾರೆ, ಇನ್ನೊಂದು ಸಲ ನಿಮಗೆ ನಮ್ಮ ಸಹಕಾರ ಬೇಕು. ಸಿದ್ದರಾಮಯ್ಯನವರೇ ನಮ್ಮ ಸಹಕಾರದಿಂದ ನೀವು ಒಂದು ದಿನ ಮುಖ್ಯಮಂತ್ರಿಯಾಗುತ್ತೀರಿ. ಈ

ದೇಶ ಸ್ವಾತಂತ್ರಗೊಂಡು ಐವತ್ತು ವರ್ಷಗಳಿಗೆ ಕಾಲಿಡುತ್ತಿದ್ದು ಒಂದು ಕ್ರಾಂತಿಯಾಗುತ್ತಿದೆ, ಮುಂದೊಂದು ದಿನ ಈ ದೇಶವನ್ನು ಬಹುಜನ ಸಮಾಜ ಪಕ್ಷ ಆಳಬಹುದು, ಇದು ಗ್ಯಾರಂಟಿ. ಅದಕ್ಕೋಸ್ಕರ ತಾವು ನಮ್ಮ ಜೊತೆ ಸಹಕರಿಸಬೇಕು.

ಉಪಾಧ್ಯಕ್ಷರು : ತಾವು ಶಿಕ್ಷಣದ ಬಗ್ಗೆ ಮಾತನಾಡಬೇಕು.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ನಿರ್ದಿಷ್ಟವಾಗಿ ಗೌರ್ವನರ್ಮೆಂಟ್ ಸ್ಕೂಲುಗಳೇನಿವೆ, ಈ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರೆಲ್ಲರೂ ಬಡವರೇ ಆಗಿದ್ದಾರೆ. ಯಾವುದೇ ಗೌರ್ವನರ್ಮೆಂಟ್ ಹಾಸ್ಪಿಟಲ್ ಇರಲಿ, ಸ್ಕೂಲ್ಸ್ ಇರಲಿ, ಅದರಿಂದ ಬಡವರಿಗೆ ಸಹಾಯವಾಗಬಹುದು. ಬಡವರ ಬಗ್ಗೆ ಸರ್ಕಾರಕ್ಕೇನಾದರೂ ಚಿಂತೆಯಿದೆಯೇ? ಗೌರ್ವನರ್ಮೆಂಟ್ ಪ್ರೈಮರಿ ಮತ್ತು ಹೈಸ್ಕೂಲುಗಳಲ್ಲಿ ಒಳ್ಳೆಯ ಟೀಚರ್ಸ್ ಇರಬೇಕು, ಒಳ್ಳೆಯ ಬಿಲ್ಡಿಂಗ್, ಫರ್ನಿಚರ್, ಲ್ಯಾಬೊರೇಟರಿ ಸೌಲಭ್ಯವಿರುವಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯಿಸುತ್ತೇನೆ. ಈಗ ಕಾನ್ವೆಂಟ್‌ನಲ್ಲಿ ಅಂದರೆ ಪ್ರೈವೇಟ್ ಸ್ಕೂಲುಗಳಲ್ಲಿ ಓದುತ್ತಿರುವ ಮಕ್ಕಳಿಗೆ ಒಳ್ಳೆಯ ಯೂನಿಫಾರ್ಮ್ ಇರುತ್ತದೆ, ಆ ಶಾಲೆಗಳಲ್ಲಿ ಒಳ್ಳೆಯ ಫರ್ನಿಚರ್‌ಗಳಿದ್ದು, ಸರ್ಕಾರದ ಮತ್ತು ಪ್ರೈವೇಟ್ ಸ್ಕೂಲುಗಳ ಸಿಲಬಸ್ ಒಂದೇ ರೀತಿಯಲ್ಲಿದ್ದು ಏನೂ ಬದಲಾವಣೆಯಿಲ್ಲ. ಆದರೆ, ಸರ್ಕಾರಿ ಸ್ಕೂಲುಗಳಲ್ಲಿರುವ ಕಲ್ಚರ್ ಬೇರೆ, ಪ್ರೈವೇಟ್ ಸ್ಕೂಲುಗಳಲ್ಲಿರುವ ಕಲ್ಚರ್ ಬೇರೆ, ಮತ್ತು ಪ್ರೈವೇಟ್ ಸ್ಕೂಲುಗಳಲ್ಲಿ ಮಕ್ಕಳಿಗೆ ಕೊಡುವ ಯೂನಿಫಾರ್ಮ್ ಒಂದು ರೀತಿಯಾದರೆ ಸರ್ಕಾರಿ ಶಾಲೆಗಳಲ್ಲಿ ಓದುವ ಬಡ ಮಕ್ಕಳಿಗೆ ಕೊಡುವ ಯೂನಿಫಾರ್ಮ್ ನೋಡಿದರೆ ಉತ್ತಮ ರೀತಿಯಲ್ಲಿಲ್ಲದಿರುವುದು ಕಂಡುಬರುತ್ತದೆ. ಆದುದರಿಂದ, ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ, ತಾವು ಒಳ್ಳೆಯ ಯೂನಿಫಾರ್ಮ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ, ಯೂನಿಫಾರ್ಮ್ ಕೊಡುವಲ್ಲಿ ತೋರಿಸುತ್ತಿರುವ ತಾರತಮ್ಯದಿಂದ ಬಡವರ ಮಕ್ಕಳಲ್ಲಿ ಕೀಳರಿಮೆ ಭಾವನೆ ಬೆಳೆಯಲು ಅವಕಾಶವಾಗುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನಾವು ಬೆಲೆ ಬಾಳುವ ಪಾಲಿಯೆಸ್ಟರ್ ಬಟ್ಟೆಯನ್ನು ಐದನೇ ತರಗತಿಯಿಂದ ಏಳನೇ ತರಗತಿಯವರೆಗಿನ ಮಕ್ಕಳಿಗೆ ಕೊಡುತ್ತಿದ್ದೇವೆ.

ಶ್ರಿ ಸೈಯದ್ ಜುಲ್ಫಿಕರ್ ಹಷ್ಮಿ : ನೀವು ಕೊಡುತ್ತಿರುವ ಪಾರಿಯೆಸ್ಟರ್ ಬಟ್ಟೆಯೇನಿದೆ ಒಂದೇ ಬಣ್ಣದ್ದು ಕೊಡುತ್ತಿರುವುದರಿಂದ ಬೇರೆ ಬಣ್ಣದ ಬಟ್ಟೆ ಕೊಡುವ ಬಗ್ಗೆ ತೀರ್ಮಾನಿಸಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಶಾಲೆಯಲ್ಲಿ ಓದುತ್ತಿರುವ ಎಲ್ಲಾ ಗಂಡು-ಹೆಣ್ಣು ಮಕ್ಕಳಿಗೂ ಒಂದೇ ರೀತಿಯ, ಒಂದೇ ಬಣ್ಣದ ಯೂನಿಫಾರ್ಮ್ ಕೊಡುತ್ತಿದ್ದೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಕಾನ್ವೆಂಟ್ ಸ್ಕೂಲಿಗೆ ನೀವು ಕಂಡೀಷನ್ ಹಾಕಬೇಕು. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ನೀವು ಯಾವ ತರಹದ ಯೂನಿಫಾರ್ಮ್ ಕೊಡುತ್ತೀರೋ, ಅದೇ ತರಹದ ಯೂನಿಫಾರ್ಮ್ ಕಾನ್ವೆಂಟ್‌ನಲ್ಲೂ ಇರಬೇಕು. ಆದರೆ, ಕಾನ್ವೆಂಟಿನಲ್ಲಿ ಬೇರೆ ತರಹದ ಯೂನಿಫಾರ್ಮ್ ಏಕೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಉದ್ದೇಶವೇನೆಂದರೆ, ಇಡೀ ರಾಜ್ಯದಲ್ಲಿರುವ ಪ್ರೈಮರಿ ಸ್ಕೂಲುಗಳಲ್ಲಾಗಲೀ, ಹೈಸ್ಕೂಲುಗಳಲ್ಲಾಗಲೀ ಒಂದೇ ರೀತಿಯ ಯೂನಿಫಾರ್ಮ್ ಇರಬೇಕು. ಅದು ಕಾನ್ವೆಂಟೇ ಇರಲಿ, ಗೌವರ್ನ್ಮೆಂಟ್ ಇರಲಿ ಏಕರೀತಿಯ ಯೂನಿಫಾರ್ಮ್ ಇದ್ದರೆ ನಾವೆಲ್ಲರೂ ಒಂದೇ ಎನ್ನುವ ಭಾವನೆ ಮಕ್ಕಳಲ್ಲಿ ಮೂಡುತ್ತದೆ. ಇಲ್ಲದಿದ್ದರೆ, ಸರ್ಕಾರಿ ಮತ್ತು ಪ್ರೈವೇಟ್ ಸ್ಕೂಲುಗಳಲ್ಲಿ ಬೇರೆ ಬೇರೆ ರೀತಿಯ ಯೂನಿಫಾರ್ಮ್‌ಗಳಿದ್ದರೆ, ಮಕ್ಕಳಲ್ಲಿ ಬೇಧ-ಭಾವ ಬರುತ್ತದಾದ್ದರಿಂದ ಇಂಥ ಭಾವನೆ ಬರುವುದು ಬೇಡ, ಇಡೀ ರಾಜ್ಯಾದ್ಯಾಂತ ಇರುವ ಎಲ್ಲಾ ಪ್ರೈಮರಿ ಮತ್ತು ಹೈಸ್ಕೂಲುಗಳಲ್ಲಿ ಏಕರೀತಿಯ ಯೂನಿಫಾರ್ಮ್ ವ್ಯವಸ್ಥೆ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಸ್ನೇಹಿತರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರ ತಿಳಿಸಬಯಸುತ್ತೇನೆ. ಮಂತ್ರಿಗಳಿಗೆ ಜ್ಞಾಪಿಸುವುದೇನೆಂದರೆ, ನೂರಕ್ಕೆ ತೊಂಬತ್ತೈದರಷ್ಟು ಶಾಲೆಗಳು ಗ್ರಾಮೀಣ ಮಟ್ಟದಲ್ಲಿರುವಂಥ ಶಾಲೆಗಳಾಗಬಹುದು, ಅಥವಾ ನಗರ ಮಟ್ಟದಲ್ಲಿರುವ ಶಾಲೆಗಳಾಗಬಹುದು. ಹಿಂದೆ ನಾವು ಓದುತ್ತಿರುವಂಥ ಸಮಯದಲ್ಲಿ ಶಾಲೆಗಳಲ್ಲಿ ಸಗಣಿ ಸಾರಿಸಿದ ನೆಲದ ಮೇಲೆ ಕೂರಿಸುತ್ತಿದ್ದಂಥ ವ್ಯವಸ್ಥೆಯಿತ್ತು, ಆ ನೆಲದ ಮೇಲೆ ಕುಳಿತು ಪಾಠ ಕೇಳುತ್ತಿದ್ದೆವು. ಇವೊತ್ತು ನೂರಕ್ಕೆ ತೊಂಭತ್ತೈದರಷ್ಟು ಶಾಲೆಗಳು ಗಾರೆ, ಸಿಮೆಂಟ್‌ನಿಂದ ರಚಿತವಾದಂಥವು. ಇಂತಹ ಗಾರೆ ನೆಲದ ಮೇಲೆ ಮಕ್ಕಳು ಕುಳಿತು ಪಾಠ ಕೇಳಬೇಕು. ಮಾನ್ಯ ಸದಸ್ಯರು ಮಾತನಾಡುತ್ತಾ ಅವರ ಜಿಲ್ಲೆಯಲ್ಲಿರುವ ಶಾಲೆಗಳಿಗೆ ಫರ್ನಿಚರ್, ಬೆಂಚುಗಳು, ಟೇಬಲ್ಲುಗಳ ವ್ಯವಸ್ಥೆ ಮಾಡಿಕೊಡಬೇಕೆಂದು ಏನು ಕೇಳುತ್ತಿದ್ದಾರೆ, ಇದನ್ನು ತಕ್ಷಣ ಸರ್ಕಾರ ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ನಾನು ಅನೇಕ ಶಾಲೆಗಳಿಗೆ ಹೋಗಿ ಗಮನಿಸಿರುವಂತೆ ಗಾರೆ ನೆಲದ ಮೇಲೆ ಎರಡು ನಿಮಿಷಗಳಷ್ಟು ಕಾಲ ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಅಷ್ಟು ಶೀತವಿರುತ್ತದೆ. ಅಂತಹ ಜಾಗದಲ್ಲಿ ಮಕ್ಕಳು ಬೆಳಗ್ಗಿನಿಂದ ಸಾಯಂಕಾಲದವರೆಗೆ ಕುಳಿತು ಪಾಠ ಕೇಳಬೇಕೆಂದರೆ ಗಾರೆ ನೆಲದ ಶೀತಕ್ಕೆ ಯಾವ ರೀತಿಯ ಕಾಯಿಲೆ ಬಂದು ಮಕ್ಕಳ ಆರೋಗ್ಯ ಹಾಳಾಗುತ್ತದೆಂದು ಹೇಳಲು ಸಾಧ್ಯವಿಲ್ಲ. ಕೊನೇ ಪಕ್ಷ ಅಂತಹ ಶಾಲೆಗಳಿಗೆ ಬೆಂಚು ಮತ್ತು ಟೇಬಲ್‌ಗಳನ್ನು ಕೊಡುವುದಕ್ಕಾಗುತ್ತದೋ ಇಲ್ಲವೋ ಗೊತ್ತಿಲ್ಲ. ಆದುದರಿಂದ, ಮಂಡಳಿಗೆ, ಚಾಪೆ ಇಲ್ಲವೇ ಗೋಣಿತಾಟು ಹಾಸಿ ಮಕ್ಕಳನ್ನು ಕೂರಿಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಈಗ ಫರ್ನಿಚರ್ ಕೊಡುವ ವ್ಯವಸ್ಥೆ ಓ.ಬಿ.ಬಿ ಸ್ಕೀಮ್‌ನಲ್ಲಿದ್ದು, ಫರ್ನಿಚರ್ ಸೌಲಭ್ಯ ಸಿಗುತ್ತಿದ್ದರೂ ನಮ್ಮ ಭಾಗದಲ್ಲಿರುವ ಶಾಲೆಗಳಿಗೆ ಯಾವುದೇ ಫರ್ನಿಚರ್ ವ್ಯವಸ್ಥೆ ಇಲ್ಲದಿರುವುದರಿಂದ, ಸರ್ಕಾರಕ್ಕೆ ನನ್ನ ಸಲಹೆಯೇನೆಂದರೆ, ರಾಜ್ಯ ಮಟ್ಟದಲ್ಲೇ ತಾವು ಉತ್ತಮ ಗುಣಮಟ್ಟದ ಫರ್ನಿಚರ್‌ಗಳನ್ನು ಖರೀದಿಸಿ ಪ್ರತಿ ಸ್ಕೂಲಿಗೂ ಕಳುಹಿಸಿಕೊಡಬೇಕು

ಉದಾಹರಣೆಗೆ, ಈಗ ಒಂದೇ ಶಾಲೆಯ ಐದನೇ ತರಗತಿಯಲ್ಲಿ ಫರ್ನಿಚರ್ ಇದ್ದರೆ ನಾಲ್ಕನೇ ತರಗತಿಗೆ ಫರ್ನಿಚರ್ ಇಲ್ಲ. ಏಕೀ ತಾರತಮ್ಯ? ಇದು ಇರಬಾರದು. ಫರ್ನಿಚರ್ ಸರಬರಾಜು ಮಾಡುವುದಾದರೆ ಇಡೀ ಸ್ಕೂಲಿಗೆ ಪೂರ್ತಿಯಾಗಿ ಮಾಡಬೇಕು. ಮತ್ತೊಂದು ಸ್ಕೂಲಿಗೆ ಫರ್ನಿಚರ್ ಸರಬರಾಜು ಮಾಡದಿದ್ದರೂ ಪರವಾಗಿಲ್ಲ. ಒಂದೇ ಸ್ಕೂಲಿನ ಒಂದು ತರಗತಿಯಲ್ಲಿ ಫರ್ನಿಚರ್ ಇದ್ದರೆ ಇನ್ನೊಂದು ತರಗತಿಗೆ ಫರ್ನಿಚರ್ ಇಲ್ಲ, ಬ್ಲಾಕ್ ಬೋರ್ಡ್ ಇಲ್ಲ, ಮ್ಯಾಫ್ ಇಲ್ಲ, ಲ್ಯಾಬ್ ಈಕ್ವಿಪ್‌ಮೆಂಟ್ಸ್ ಇಲ್ಲ. ತಮಗೆ ಒಂದು ಸಂಗತಿ ಹೇಳಬೇಕೆಂದರೆ, ನನ್ನ ಕ್ಷೇತ್ರಕ್ಕೆ ಸೇರಿದ ಒಂದು ಹೈಸ್ಕೂಲಿ ನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿದ್ದು, ಹುಡುಗರು ಕಾಪಿ ಮಾಡುತ್ತಿದ್ದರು, ಆಗ ನೀವೇನು ಮಾಡುತ್ತಿದ್ದಿರಿ? ನೀವು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಎಸ್ಕಾರ್ಟ್ ಮಾಡುತ್ತೀರಿ, ಅವರು ಶಾಲೆಗಳಿಗೆ ಪರೀಕ್ಷೆ ಸಮಯದಲ್ಲಿ ಹೋಗಿ ಕಾಪಿ ಮಾಡುವವರನ್ನು ಹಿಡಿದು ಅವರನ್ನು ಡಿಸ್‌ಕ್ವಾಲಿಫೈ ಮಾಡಿ ಪೊಲೀಸಿನವರಿಗೆ ಹ್ಯಾಂಡ್ ಓವರ್ ಮಾಡುತ್ತಾರೆ. ಆದರೆ ಶಾಲೆಯ ಮಕ್ಕಳು ನಾವು ಹೇಗೆ ಲೆಕ್ಕದ, ವಿಜ್ಞಾನದ ಪತ್ರಿಕೆಗಳಿಗೆ ಉತ್ತರವನ್ನು ಬರೆಯಬೇಕೆಂದು ನನ್ನಮೇಲೆಯೇ ತಿರುಗಿಬಿದ್ದರು. ಹತ್ತು ವರ್ಷಗಳಿಂದ ನಮಗೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಶಿಕ್ಷಕರು ಇಲ್ಲ, ಹಾಗಿದ್ದಮೇಲೆ ನಾವು ಆ ಪತ್ರಿಕೆಗಳಿಗೆ ಕಾಪಿ ಮಾಡದೆ ಮತ್ತೇನು ಮಾಡಬೇಕು ಎಂದು ಕೇಳಿದರು. ಆ ಎರಡು ಪತ್ರಿಕೆಗಳನ್ನು ಬಿಟ್ಟು ಉಳಿದ ಪತ್ರಿಕೆಗಳಿಗೆ ನಾವು ಕಾಪಿ ಮಾಡಲು ಹೋಗುವುದಿಲ್ಲ. ಅದಕ್ಕೆ ಶಿಕ್ಷಕರು ಇದ್ದಾರೆ ಎಂದು ಹೇಳಿದರು ಕಳೆದ ಹಲವಾರು ವರ್ಷಗಳಿಂದ ನಮ್ಮ ಜಿಲ್ಲೆಯ ಹೈಸ್ಕೂಲ್‌ಗಳಲ್ಲಿ ಗಣಿತ ಮತ್ತು ವಿಜ್ಞಾನಕ್ಕೆ ಶಿಕ್ಷಕರು ಇಲ್ಲ. ಇದರ ಬಗ್ಗೆ ನಾನು ಹಲವಾರುಬಾರಿ ಸಚಿವರ ಮತ್ತು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಶಾಲೆಗಳು ಪ್ರಾರಂಭವಾಗಿ ಮೂರು ತಿಂಗಳುಗಳಾಗಿದೆ. ತಾವು ಈ ಕೂಡಲೇ ಹೈಸ್ಕೂಲ್‌ಗೆ ಶಿಕ್ಷಕರನ್ನು ಪೋಸ್ಟಿಂಗ್ ಮಾಡಬೇಕು.

ಶ್ರೀ ಸುಭಾಷ್‌ಗುತ್ತೇದಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ನನ್ನ ಕ್ಷೇತ್ರದ ಶಾಲೆಗಳ ಸ್ಥಿತಿಯ ಬಗ್ಗೆ ತರುವುದಾದರೆ, ನನ್ನ ಕ್ಷೇತ್ರದಲ್ಲಿ ಹಲವಾರು ಹಳ್ಳಿಗಳಲ್ಲಿ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ 400-500 ಮಕ್ಕಳಿದ್ದರೆ ಕೇವಲ ಇಬ್ಬರು ಶಿಕ್ಷಕರು ಮಾತ್ರ ಇದ್ದಾರೆ. ಆಗತ್ಯವಿರುವಷ್ಟು ಶಿಕ್ಷಕರನ್ನು ಪೋಸ್ಟಿಂಗ್ ಮಾಡಿದರೆ ಮಾತ್ರ ಮಕ್ಕಳು ಓದಲು ಬರೆಯಲು ಸಾಧ್ಯವಾಗುತ್ತದೆ. ನಮ್ಮಲ್ಲಿ ಎಸ್‌ಎಸ್‌ಎಲ್‌ಸಿ ಪಿಯುಸಿ ವರೆಗೆ ವ್ಯಾಸಂಗ ಮಾಡಿರುವ ಹಲವಾರು ಮಂದಿಗೆ ಅವರ ಹೆಸರನ್ನು ಬಿಟ್ಟರೆ ಬೇರೆ ಏನನ್ನೂ ಬರೆಯಲು ಬರುವುದಿಲ್ಲ. ಉದಾಹರಣೆಗೆ, ಒಬ್ಬನು ಅವನ ಹೆಸರಾದ ಸಾಗರ್‌ಸೇಠ್‌ಜಿ ಎಂದು ಇದೆ, ಅದನ್ನು ಬರೆಯೆಂದು ಹೇಳಿದಾಗ ಮತ್ತೊಬ್ಬ ಸಾಗರ್‌ಸೇಥ್‌ಜಿ ಎಂದು ಬರೆಯುತ್ತಾನೆ ಅವನು, ಆದರೆ ಮೂರು ಸೊನ್ನೆ ಬರುತ್ತದೆ ಅದನ್ನು ಎಲ್ಲಿ ಕೂಡಿಸುತ್ತಾನೆ ನೋಡೋಣವೆಂದು ಹೇಳುತ್ತಾನೆ. ಆಗ ಅವನು ಸಾರಂಗ್ ಸೆಂಟ್ ಜೀ ಎಂದು ಬರೆಯುತ್ತಾನೆ. ಈ ರೀತಿ ನಮ್ಮ ಭಾಗದ ವಿದ್ಯಾರ್ಥಿಗಳ ಪರಿಸ್ಥಿತಿ ಬಂದಿದೆ. ಆದ್ದರಿಂದ ಅಗತ್ಯವಿರುವಷ್ಟು ಶಿಕ್ಷಕರನ್ನು ನಮ್ಮ ಭಾಗದಲ್ಲಿರುವ ಶಾಲೆಗಳಿಗೆ ಕೊಟ್ಟು ಉತ್ತಮ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡಿಸಬೇಕೆಂದು ಶಿಕ್ಷಣ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಯದ್ ಜುಲ್ಫಿಕರ್ ಹಶ್ಮಿ: ತಮ್ಮ ಪಕ್ಷದ ಸಭೆಯಲ್ಲಿ ಈ ಸಲಹೆಯನ್ನು ತಮ್ಮ ಪಕ್ಷದವರು ಕೊಡುವಾಗ ತೆಗೆದುಕೊಳ್ಳಬೇಕು. ಜನತಾದಳದ ಎಂ.ಎಲ್.ಎ. ರವರ ಕ್ಷೇತ್ರದ ಪರಿಸ್ಥಿತಿಯನ್ನು ನೋಡಿ. ನಾವು ಏನಾದರೂ ಜಗಳ ಮಾಡಿಕೊಂಡು ಕೆಲಸ ಮಾಡಿಸಿಕೊಳ್ಳುತ್ತೇವೆ. ಅವರ ಪರಿಸ್ಥಿತಿ ನೋಡಿ.

ಶ್ರೀ ಸುಭಾಷ್ ಗುತ್ತೇದಾರ್ : ನಮ್ಮದು ನಿಮ್ಮದು ಎಲ್ಲಾ ಒಂದೇ ಸಮಸ್ಯೆ.

ಶ್ರೀ ಸಯದ್ ಜುಲ್ಫಿಕರ್ ಹಶ್ಮಿ : ತಮ್ಮ ಪಕ್ಷದ ಸಭೆಯಲ್ಲಿ ತಮ್ಮ ಸದಸ್ಯರ ಸಲಹೆಯನ್ನು ತೆಗೆದುಕೊಳ್ಳಬೇಡವೇ? ತಮ್ಮಲ್ಲಿ ಒನ್ ಮ್ಯಾನ್ ಶೋ ಇದೆಯೇ?

ಉಪಾಧ್ಯಕ್ಷರು : ತಾವು ತಮ್ಮ ಬಗ್ಗೆ ಮಾತ್ರ ಚಿಂತೆ, ಮಾಡಿ ಬೇರೆಯವರ ಬಗ್ಗೆ ಏಕೆ ಮಾಡುತ್ತೀರಿ? ನನ್ನ ಚಿಂತೆ ನನಗೆ ಸಾಲದೆ ಎಂಬಂತೆ ನಿಮ್ಮ ಚಿಂತೆ ಮಾಡಿ. ಪರರ ಚಿಂತೆ ಏಕೆ ಎಂಬಂತೆ ತಮ್ಮ ಚಿಂತೆ ಮಾತ್ರ ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಅವರು ಈ ಹಿಂದೆ ಬಿ.ಜೆ.ಪಿ. ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಮೊದಲು ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದರು. ಜನತಾದಳದವರು ಇವರು ಹೇಳಿದಂತೆಲ್ಲಾ ಕೇಳಲಿಲ್ಲವೆಂದು ಅವರ ಮೇಲೆ ಕೋಪವಿರುವುದರಿಂದ ಆ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಜೆ.ಬಿ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಸಲಹೆ, ತಾವು ಮಾನ್ಯ ಸದಸ್ಯರುಗಳಿಗೆ ಕಾಲಾವಕಾಶ ಕೊಡುತ್ತೀರಿ. ಅವರು ಯಾವ ಇಲಾಖೆಯ ಮೇಲೆ ಮಾತನಾಡುತ್ತಾರೆ, ಎಲ್ಲರಿಂದಲೂ ಸಹ ಒಂದಲ್ಲ ಒಂದು ರೀತಿ ಸಲಹೆ ದೊರೆಯುವುದನ್ನು ನಾವೆಲ್ಲರೂ ಗಮನಿಸುತ್ತಿದ್ದೇವೆ. ಆ ರೀತಿ ಮಾತನಾಡುತ್ತಿರಬೇಕಾದರೆ, ಯಾರಾದರೂ ಮಧ್ಯ ಎದ್ದು ಮಾತನಾಡಿದರೆ, ಅವರಿಗೆ ಅವಕಾಶ ಸಿಕ್ಕಿದಾಗ ಮಾತನಾಡದೆ ಮಾತನಾಡುತ್ತಿರುವವರ ಕಾಲವನ್ನು ಸಹ ಕಿತ್ತುಕೊಂಡಂತಾಗುತ್ತದೆ. ಬೇರೆ ರಾಜಕೀಯ ವಿಚಾರಕ್ಕೆ ತಿರುವುಕೊಡತಕ್ಕದ್ದರಿಂದ ಚರ್ಚೆಗೆ ಬಹಳ ನೀರಸವಾಗುತ್ತದೆ. ದಯಮಾಡಿ ಆ ರೀತಿ ಮಧ್ಯ ಮಾತನಾಡಲು ಅವಕಾಶ ಕೊಡಬೇಡಿ.

ಉಪಾಧ್ಯಕ್ಷರು : ಅದರ ಬಗ್ಗೆ ಹೇಳಿದ್ದೇನೆ. ಹಶ್ಮಿಯವರೇ, ತಾವು ಬೇಗ ಮುಗಿಸಿ.

ಶ್ರೀ ಸಯದ್ ಜುಲ್ಫಿಕರ್ ಹಶ್ಮಿ : ಮಾನ್ಯ ಉಪಾಧ್ಯಕ್ಷರೆ, ರಾಜಕೀಯ ಮಾತನಾಡುತ್ತಿಲ್ಲ. ನೀವು ಕೆಲಸ ಮಾಡಿದರೆ ನಾವೇಕೆ ರಾಜಕೀಯ ಮಾಡಬೇಕು? ಸರ್ಕಾರಿ ಶಾಲೆಗಳಲ್ಲಿ ಒಳ್ಳೆಯ ಶಿಕ್ಷಣದ ವ್ಯವಸ್ಥೆಯಾಗಬೇಕು. ಸರ್ಕಾರಿ ಶಾಲೆಗಳಲ್ಲಿ ವಿಶೇಷವಾಗಿ ಬಡವರು, ದಲಿತರು, ಅಲ್ಪ ಸಂಖ್ಯಾತರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಾರೆ. ತಾವು ಸರ್ಕಾರಿ ಶಾಲೆಗಳ ಬಗ್ಗೆ ಏಕೆ ಗಮನಕೊಡುವುದಿಲ್ಲವೆಂದು ಆರೋಪ ಮಾಡಬಯಸುತ್ತೇನೆ. ಈ ರಾಜ್ಯದಲ್ಲಿ ಕನ್ನಡ ಕಡ್ಡಾಯವೆಂದು ಹೇಳುತ್ತೀರಿ. ಅದರ ಜೊತೆಗೆ ಇಂಗ್ಲಿಷ್ ಶಾಲೆಗಳಿಗೂ ಪುರಸ್ಕಾರ ಕೊಡುತ್ತಿದ್ದೀರಿ. ಏಕೆ ಕೊಡುತ್ತೀರಿ? ದೊಡ್ಡವರ ಮಕ್ಕಳು ಆ ಶಾಲೆಯಲ್ಲಿದ್ದಾರೆಂದು ಕೊಡುತ್ತಿದ್ದೀರಾ, ಬಡವರ ಮಕ್ಕಳು ಸರ್ಕಾರಿ

ಶಾಲೆಯಲ್ಲಿದ್ದಾರೆಂದು ಗಮನಕೊಡುವುದಿಲ್ಲವೆ? ನಾನು ಇಲ್ಲಿ ಮೊದಲ ಭಾಷಣ ಮಾಡಿದಾಗಲೇ ಒಂದು ಬೇಡಿಕೆಯನ್ನು ಸರ್ಕಾರಕ್ಕೆ ಮಂಡಿಸಿದ್ದೆ, ವಿಶೇಷವಾಗಿ ಉರ್ದು ಮಾಧ್ಯಮದ ವಿದ್ಯಾರ್ಥಿಗಳು ಕನ್ನಡವನ್ನು ಕಲಿಯಬೇಕೆಂದು ನನ್ನ ಮನಸ್ಸಿನಲ್ಲಿದೆ. ಆದರೆ ತಾವು ಕನ್ನಡ ಶಿಕ್ಷಕರಹುದ್ದೆಯನ್ನು ಭರ್ತಿಮಾಡುತ್ತಿಲ್ಲ. ಈ ರಾಜ್ಯದಲ್ಲಿ ಕನ್ನಡದ ಅಭಿವೃದ್ಧಿಯಾಗಬೇಕಾದರೆ ಮರಾಠಿ ಶಾಲೆಗಳಲ್ಲಿ ಮತ್ತು ಉರ್ದು ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಕ ಮಾಡಿ. ಅನಂತರ ನೋಡಿ ನಾವೇಕೆ ಕನ್ನಡ ಕಲಿಯುವುದಿಲ್ಲವೆಂದು. ನನ್ನ ಶಿಕ್ಷಣ ಉರ್ದು ಮಾಧ್ಯಮದಲ್ಲಾಗಿದೆ. ನಾನು ಕನ್ನಡ ವ್ಯಾಸಂಗ ಮಾಡಿಲ್ಲ. ನಮ್ಮ ಮಕ್ಕಳು ಹೇಗೆ ಮಾಡಬೇಕು? ಆದ್ದರಿಂದ ಮೊದಲು ಕನ್ನಡ ಶಿಕ್ಷಕರನ್ನು ಉರ್ದು ಶಾಲೆಗಳಿಗೆ ಕೊಡಿ. ಕನ್ನಡ ಶಿಕ್ಷಕರು ಇಲ್ಲದಿದ್ದರೆ ಕನ್ನಡ ಅಭಿವೃದ್ಧಿಯಾಗುವುದಿಲ್ಲ. ಸುಮ್ಮನೆ ಕನ್ನಡ ಎಂದು ಜನರಿಗೆ ಮೋಸ ಮಾಡಬೇಡಿ. ಕನ್ನಡದ ಬಗ್ಗೆ ಅಭಿಮಾನವಿದ್ದರೆ ಉರ್ದು ಶಾಲೆಗಳಿಗೆ ಮೊದಲು ಕನ್ನಡ ಶಿಕ್ಷಕರನ್ನು ನೇಮಕ ಮಾಡಿ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅಲ್ಪಸಂಖ್ಯಾತರ ಸಲುವಾಗಿ ಐದು ವಸತಿ ಶಾಲೆಗಳನ್ನು ರಾಜ್ಯದಲ್ಲಿ ಕೊಟ್ಟಿದ್ದರು. ಎರಡು ವರ್ಷಗಳಾಗಿದೆ, ಆ ವಸತಿ ಶಾಲೆಗಳು ಡಿಸ್‌ಪ್ಯೂಟ್ ಹೋಂ ಆಗಿದೆ. ಎಷ್ಟು ಮಕ್ಕಳು ನೊಂದಾವಣಿಯಾಗಿದೆ? ಅವರ ವಿದ್ಯಾಭ್ಯಾಸವೇನಾಗುತ್ತಿದೆ? ಅಲ್ಲಿ ಮಕ್ಕಳಿಗೆ ಊಟವಿಲ್ಲ, ಕಟ್ಟಡವಿಲ್ಲ, ಶಿಕ್ಷಕರಿಲ್ಲ, ಶಿಕ್ಷಕರಿದ್ದರು, ಅವರಿಗೆ ಸಂಬಳವನ್ನು ಹಲವಾರು ತಿಂಗಳಿನಿಂದ ಕೊಟ್ಟಿಲ್ಲ. ಅವರು ಹೇಗೆ ಕೆಲಸ ಮಾಡಬೇಕು? ಆ ಐದು ವಸತಿ ಶಾಲೆಗಳ ವ್ಯವಸ್ಥೆಯಿಂದ ತಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಮುಂಬರುವ ಚುನಾವಣೆಯಲ್ಲಿ ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಆ ಒಂದು ವಿಚಾರದ ಬಗ್ಗೆ ಉತ್ತರವನ್ನು ತಾವು ಕೊಡಲು ಆಗುವುದಿಲ್ಲ. ತಾವು ಸಚಿವರಾಗಿ ಆ ಕೆಲಸವನ್ನು ಮಾಡಿದ್ದೀರಿ, ಇಲ್ಲವೆಂದು ಹೇಳುತ್ತಿಲ್ಲ, ಆದರೆ ಬೇರೆ ಜನರು ತಾವು ಮಾಡಲು ಬಿಡುತ್ತಿಲ್ಲ. ಅಲ್ಲೇನಾಗುತ್ತಿದೆಯೆಂಬುದು ತಮಗೆ ಗೊತ್ತಿದೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಹಣಕಾಸು ಸಚಿವರಾಗಿದ್ದ ಸಿದ್ದರಾಮಯ್ಯನವರು ವರ್ಷಕ್ಕೊಮ್ಮೆ ಐದು ವಸತಿ ಶಾಲೆಗಳನ್ನು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕೊಡುವುದಾಗಿ ಕೇಳಿದ್ದರು. ವರ್ಷಕ್ಕೆ ಐದು ಕೊಡುವುದಿರಲಿ ಈಗ ಇರುವ ಐದು ವಸತಿ ಶಾಲೆಗಳೇ ಸರಿಯಾಗಿ ನಡೆಯುತ್ತಿಲ್ಲ. ಆದ್ದರಿಂದ ತಾವೇನೇ ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಹೇಗೆ ಇಲಾಖೆಯಿಂದ ನಡೆಸುತ್ತಿದ್ದೀರಿ ಅದೇ ರೀತಿ ಇವನ್ನೂ ಸಹ ನಡೆಸಬೇಕು. ಬೇಕಾದರೆ ಅದಕ್ಕೆ ಒಂದು ಅಡ್ವೈಸರಿ ಕೌನ್ಸಿಲ್ ಮಾಡಿ, ಬೋರ್ಡ್ ಮಾಡಿ. ನಿಮ್ಮ ಪಕ್ಷದ ಶಾಸಕರನ್ನು ಅದಕ್ಕೆ ಸದಸ್ಯರನ್ನಾಗಿ ಮಾಡಿ. ಆದರೆ ಅದನ್ನು ಸರ್ಕಾರ ನಡೆಸಬೇಕು. ಈ ವರ್ಷ ಆ ಕೆಲಸವಾಗಬೇಕು. ಇದರ ಬಗ್ಗೆ ತಮ್ಮ ಭಾಷಣದಲ್ಲಿ ಭರವಸೆ ನೀಡಬೇಕು. ಏಕೆಂದರೆ ನಮ್ಮ ಸಮಾಜದವರಿಗೆ ಇದರಿಂದ ಮೋಸವಾಗಿದೆ. ಮುಂದೆ ಅದು ಆಗಬಾರದು. ಭಾರತ ಸರ್ಕಾರದಿಂದ ವಿಶೇಷವಾಗಿ ಅಲ್ಪಸಂಖ್ಯಾತ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಸಹ ಬರುತ್ತಿದೆ. ಏರಿಯಾ ಇನ್‌ಟೆನ್‌ಸೀವ್ ಪ್ರೋಗ್ರಾಮ್, ಮಾಡ್ರನೈಜೇಷನ್ ಆಫ್ ಮದರ್‌ಸಾ, ಮುಂತಾದ.

ಶ್ರೀ ಎನ್. ಎಂ. ನಬಿ : ಯಾವ ಕಾರಣಕ್ಕೆ ಆ ಶಾಲೆಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನುವುದನ್ನು ಅವರು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಕೇವಲ 5 ಶಾಲೆಗಳನ್ನು ಮಾತ್ರ ಕೊಟ್ಟಿದ್ದೀರಿ ಇನ್ನು ಐದು

ಶಾಲೆಗಳನ್ನು ಕೊಡಬೇಕಾಗಿತ್ತು, ಈಗ ನೀವು ಕೊಟ್ಟಿಲ್ಲ, ಕೊಡಿ ಎಂದು ಕೇಳುತ್ತಿದ್ದೀರಿ, ಆ ನಡವಳಿಯಲ್ಲಿ ಎಲ್ಲಿ ತಪ್ಪಾಗಿದೆ ಎನ್ನುವುದರ ಬಗ್ಗೆ ಸ್ಪಷ್ಟವಾದ ನಿರೂಪಾಣೆಯನ್ನು ಸರ್ಕಾರದ ಗಮನಕ್ಕೆ ತೊಂದರೆ ಅದು ಅದರ ಬಗ್ಗೆ ಗಮನ ಹರಿಸುತ್ತದೆ. ಇಲ್ಲ ಎಂದರೆ ಈ ವಿಷಯ ಸರ್ಕಾರದ ಗಮನಕ್ಕೆ ಹೇಗೆ ಬರುತ್ತದೆ ?

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಅದೇ ಸ್ಕೂಲ್‌ನಲ್ಲಿ ಹೈಕೋರ್ಟ್‌ನಿಂದ ನೋಟೀಸ್ ಬಂದಿದೆ ಮ್ಯಾನೇಜ್‌ಮೆಂಟ್‌ಗೆ. ಕೇಂದ್ರದಲ್ಲಿ ಮಂತ್ರಿಗಳಾಗಿರತಕ್ಕ ಮಾನ್ಯ ಸಿ.ಎಂ. ಇಬ್ರಾಹಿಂರವರು ಅದರ ಛೇರ್ಮನ್ ಆಗಿದ್ದಾರೆ. ನಿಮ್ಮ ಪಾರ್ಟಿಯ ಎಲ್ಲಾ ಮಂತ್ರಿಗಳು ಒಂದೊಂದು ಜಿಲ್ಲೆಗಳಲ್ಲಿ ಛೇರ್ಮನ್ ಆಗಿದ್ದಾರೆ. ಆದರೂ ಸಹ ಹೈಕೋರ್ಟ್‌ನಿಂದ ನೋಟಿಸ್ ಬಂದಿದೆ. ಅದರ ಬಗ್ಗೆ ಏನು ಆಕ್ಷನ್ ತೆಗೆದುಕೊಂಡೀರಿ, ಉಪಮುಖ್ಯಮಂತ್ರಿಗಳೇ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ, ಎಲ್ಲರನ್ನೂ ಮಂತ್ರಿಗಿರಿಯಿಂದ ಕಿತ್ತು ಮನೆಗೆ ಕಳುಹಿಸಿ. ಯಾವ ಸಮಾಜದಿಂದ ನೀವು ಗೆದ್ದು ಬಂದಿದ್ದೀರಿ ಅದೇ ಸಮಾಜಕ್ಕೆ ನೀವು ಮೋಸ ಮಾಡುತ್ತಿದ್ದೀರಿ. ಅದರ ಸಲುವಾಗಿ ಬೇಸಿಕ್‌ನಲ್ಲಿ ತಪ್ಪಿದೆ, ಸ್ಕೂಲಿಗೆ ಯಾವಾಗ ಪರ್ಮಿಷನ್ ಕೊಟ್ಟಿರಿ? ಸೊಸೈಟಿಗೆ ಯಾವಾಗ ಪರ್ಮಿಷನ್ ಕೊಟ್ಟಿರಿ? ಐದು ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ಕೊಡಬೇಕು ಎಂದು ಮೊದಲೇ ಸರ್ಕಾರದಿಂದ ಆರ್ಡರ್ ಆಗಿದೆ. ಹಿಂದಿನ ಸಲ ಸೊಸೈಟಿ ರಿಜಿಸ್ಟರ್ ಆಗಿದೆ. ಎಷ್ಟು ತಾರತಮ್ಯ ಇದೆ ಅದರಲ್ಲಿ, ಎಷ್ಟು ಬ್ರಷ್ಟಾಚಾರ ಇದೆ ಅದರಲ್ಲಿ ಅದು ಎಲ್ಲಾ ಓಪನ್ ಆಗಿ ಇದೆ. ಎರಡು ಸಲ ಇದರ ಬಗ್ಗೆ ನಾನು ಹೇಳಿದ್ದೇನೆ. ಆದರೆ ಏನೂ ಆ್ಯಕ್ಷನ್ ತೆಗೆದುಕೊಳ್ಳಲಿಲ್ಲ. ಮಾನ್ಯ ಶಿಕ್ಷಣ ಸಚಿವರ ಬಗ್ಗೆ ಗೌರವ ಇದೆ. ಆ ಮೈನಾರಿಟಿ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ಎಲ್ಲಾ ಮೈನಾರಿಟಿ ಸದಸ್ಯರು ಹಾಗು ಛೇರ್ಮನ್ ಈ ಸಮಾಜದ ಜೊತೆ ಚರ್ಚೆ ಮಾಡಿ ಒಂದು ನಿರ್ಧಾರ ತೆಗೆದುಕೊಳ್ಳಿ, ಆಗ ಯಾರು ನಿಮ್ಮ ಮೇಲೆ ಅಲಿಗೇಷನ್ ಮಾಡುತ್ತಾರೆ ನೋಡೋಣ. ಮ್ಯಾನೇಜ್‌ಮೆಂಟ್ ಬಗ್ಗೆ ಯೋಚನೆ ಮಾಡಬೇಡಿ. ಒಂದು ಸಲ ನೀವು ನಿರ್ಧಾರ ಮಾಡಿಬಿಡಿ. ಅದಕ್ಕೆ ಯಾರೂ ವಿರೋಧ ಮಾಡುವುದಿಲ್ಲ. ಅದನ್ನು ಸರ್ಕಾರವೇ ನಡೆಸತಕ್ಕ ಒಂದು ವ್ಯವಸ್ಥೆ ಆಗಲಿ ಮ್ಯಾನೇಜ್‌ಮೆಂಟ್ ನಡೆಸುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದರಲ್ಲಿ ಒಂದು ಸೀರಿಯಸ್ ಅಲಿಗೇಶನ್ ಇದೆ. ಇದನ್ನು ತಮ್ಮ ಗಮನದಲ್ಲಿ ಇಟ್ಟುಕೊಳ್ಳಿ. ಐದು ಸರ್ಕಾರಿ ಶಾಲೆಗಳನ್ನು ರೆಸಿಡೆನ್ಸಿಯಲ್ ಸ್ಕೂಲ್‌ಗಳು ಎಂದು ಕೊಟ್ಟಿದ್ದೀರಿ. ಈ ರೀತಿ ಸರ್ಕಾರಿ ಆದೇಶ ಬಂದ ಮೇಲೆ ಸೊಸೈಟಿ ರಿಜಿಸ್ಟರ್ ಮಾಡಿ, ಆ ಸೊಸೈಟಿಗಳಿಗೆ ಈ ಐದು ಸ್ಕೂಲ್‌ಗಳನ್ನು ಹ್ಯಾಂಡ್‌ಓವರ್ ಮಾಡಿದೀರಿ ಎನ್ನುವುದು ಅವರ ಅಲಿಗೇಷನ್ ಅಂದರೆ ಆ ಸೋಸೈಟಿ ಹುಟ್ಟಿದ್ದು ಆ ಸ್ಕೂಲ್‌ಗೋಸ್ಕರ ಎಂಬುದು ಅರ್ಥ ಆಯಿತು. ಇಲ್ಲಿ ಸೊಸೈಟಿ ಇದೆ ಇದಕ್ಕೆ ಸ್ಕೂಲ್ ಮಾಡಿ ಎಂದು ಅರ್ಜಿ ಇಲ್ಲ. ಮೊದಲು ಸ್ಕೂಲ್ ಆಗಿ ತದನಂತರ ಈ ಐದು ಸ್ಕೂಲ್‌ಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ಆ ಸೊಸೈಟಿ ಹುಟ್ಟಿತ್ತು. ಅದಕ್ಕೆ ತಾವು ಎನ್‌ಕ್ವೈರಿ ಮಾಡಿ, ಇಂಥದ್ದು ಕೋಟಿಗಟ್ಟಲೆ ನುಂಗೋ ಅಂಥದ್ದು ಇದೆಯಲ್ಲಾ ಅದಕ್ಕೆ ನೀವು ಜ್ಯುಡಿಷಿಯಲ್ ಪ್ರೋಬ್ ಮಾಡಿ ಬಾಕಿದ್ದು ಆಮೇಲೆ ಮಾತನಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್, ಇಲ್ಲಿ ಮಧ್ಯೆ ಪ್ರವೇಶ ಮಾಡಬೇಕು ಎಂದು ಅಲ್ಲ. ಹಿಂದೆ ಐದು ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ಅಲ್ಪಸಂಖ್ಯಾತ ಮುಸ್ಲಿಂ ಬಾಂಧವರ ಮಕ್ಕಳಿಗಾಗಿ ಯಾರು ಎಜ್ಯುಕೇಷನ್ ನಡೆಸುತ್ತಿದ್ದರು ಅಂಥವರಿಗೆ ಕೊಟ್ಟರು. ಇದಕ್ಕಾಗಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ, ಅದಕ್ಕಾಗಿ ಒಂದು ಎಜ್ಯುಕೇಷನಲ್ ಇನ್‌ಸ್ಟಿಟ್ಯೂಟ್ ಅನ್ನು ಹುಟ್ಟು ಹಾಕಿ, ಕೇಂದ್ರದ ಮಂತ್ರಿಗಳಾದ ಮಾನ್ಯ ಇಬ್ರಾಹಿಂ ಅವರ ಅಧ್ಯಕ್ಷತೆಯಲ್ಲಿ ಒಂದು ಸಂಸ್ಥೆಯನ್ನು ಮಾಡಿದರು. ಅದು ಒಳ್ಳೆಯ ರೀತಿಯಲ್ಲಿ ನಡೆದಿದ್ದರೆ, ನಾವು ಅದನ್ನು ಸ್ವಾಗತ ಮಾಡುತ್ತಿದ್ದೆವು. ಆಗಲೇ ಆ ಸಂಸ್ಥೆಯವರೆಲ್ಲಾ ಅಬ್ಜೆಕ್ಷನ್ ಮಾಡಿದರು, ಕೋರ್ಟಿಗೆ ಹೋದರು. ಈಗ ಹೇಳತಕ್ಕಂಥದ್ದು, ಈ ಐದು ರೆಸಿಡೆನ್ಸಿಯಲ್ ಸ್ಕೂಲ್‌ಗೆ ಕೊಡುತ್ತಿರುವ ಲಕ್ಷಾಂತರ ರೂಪಾಯಿ ಬೇರೆ ಯಾವ ಮಕ್ಕಳಿಗೂ ಸಿಗದಂತಹ ಸ್ಕಾಲರ್‌ಷಿಪ್ ಸೌಲಭ್ಯಗಳನ್ನು ಮಾಡಿ ಕೊಟ್ಟ ಮೇಲೂ ಸಹ ಅದು ಸರಿಯಾಗಿ ಖರ್ಚಾಗುತ್ತಿಲ್ಲ, ಅದನ್ನು ನುಂಗುತ್ತಿದ್ದಾರೆ, ಅದನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ಆ ಶಾಲೆಗಳು ಎಲ್ಲಿವೆ ಎಂದು ಹುಡುಕುವ ಪರಿಸ್ಥಿತಿ ಬಂದಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಗೋವಿಂದೇಗೌಡರು ಉತ್ತರ ಕೊಡುವಂತಹ ಕಾಲದಲ್ಲಿ ವಾಸ್ತವವಿಕವಾದ ಸ್ಥಿತಿಯನ್ನು ಹೇಳಿ, ಇಲ್ಲದಿದ್ದರೆ ಅದರ ಬಗ್ಗೆ ತನಿಖೆ ನಡೆಸಿ ಆ ಸ್ಕೂಲ್‌ಗಳನ್ನು ಸರಿಯಾದಂತಹ ಸಂಸ್ಥೆಗಳಿಗೆ ವಹಿಸಿಕೊಡಬೇಕೆಂದು ಅವರ ಕಳಕಳಿ. ಇಲ್ಲ ಅಂದರೆ ಕೇಂದ್ರದಲ್ಲಿ ಇರತಕ್ಕಂಥವರು ಅಲ್ಲೇ ನೋಡುತ್ತಾರಾ ಅಥವಾ ಇಲ್ಲಿ ಬಂದು ನೋಡುತ್ತಾರಾ? ಇದರಿಂದ ಸರ್ಕಾರಕ್ಕೆ ಎಷ್ಟು ಶೋಭೆ, ಗೌರವ ತರುತ್ತದೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ.

ಉಪಾಧ್ಯಕ್ಷರು : ಹಷ್ಮಿಯವರೇ, ನೀವು ಬೇಗ ಮುಕ್ತಾಯ ಮಾಡಿ ಬಿಡಿ. ಸಮಯ ಮುಗಿಯುತ್ತಾ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮದು 15 ನಿಮಿಷ ಸಮಯ ಕೊಡುತ್ತೇವೆ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮ್ಮ ಸ್ನೇಹಿತರಾದಂತಹ ಮಾನ್ಯ ಹಷ್ಮಿರವರು ಉರ್ದು ಶಾಲೆಗಳ ಬಗ್ಗೆ ವಸತಿ ಶಾಲೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಇದರ ವಿಷಯವಾಗಿ ಯಾರ ಮೇಲೆ ಆರೋಪ ಮಾಡುತ್ತಿದ್ದಾರೆಂದು ಬಿಜೆಪಿಯವರಿಗೆ ಗೊತ್ತಾಗಿದೆ. ಆದುದರಿಂದ 10-15 ನಿಮಿಷಗಳ ಕಾಲ ಇದೇ ರೀತಿಯಲ್ಲಿ ಮಾತನಾಡಲಿ ಎಂದು ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಶಿಕ್ಷಣದ ಬಗ್ಗೆ ಒಳ್ಳೆಯ ಸಲಹೆಗಳನ್ನು ನೀಡುತ್ತಾ ಮಾತನಾಡುತ್ತಿದ್ದಾರೆ ಅದಕ್ಕೋಸ್ಕರ ಅವರಿಗೆ ನಮ್ಮ ಸಮಯವನ್ನು ಬಿಟ್ಟು ಕೊಡಲಿಕ್ಕೆ ಮುಂದೆ ಬಂದಿದ್ದೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ನನಗೆ ಸಮಾಜದ ಬಗ್ಗೆ ಕಳಕಳಿ ಇದೆ. ಅದಕ್ಕೆ ಹೇಳುತ್ತಿದ್ದೇನೆ. ಮತ್ತೆ ಯಾವುದೇ ಸಮಾಜದಲ್ಲಿ ಜಾತಿ ಬೇಧ ಇರುವುದಿಲ್ಲ. ಮತ್ತೊಂದು ತಾವು ಹೇಳುತ್ತಿದ್ದೀರಿ, ಬಿಜೆಪಿಯವರು ನಮಗೆ ಸಹಕಾರ ಕೊಡುತ್ತಿದ್ದಾರೆ ಎಂದು. ಆದರೆ ಅದು ಹಾಗಲ್ಲ, ಇದು ಒಳ್ಳೆಯ

ಸಲಹೆ, ತಾವು ಸಹಕಾರ ಕೊಟ್ಟರೆ ತಮಗೂ ಅನುಕೂಲ. ಮುಂದೆ ಓಟು ಬುರುವುದು, ನಮಗೂ ನಿಮಗೂ ಅದರ ಸಲುವಾಗಿ ಸಹಕಾರ ನೀಡಿ ಮುಂದೆ ನಿಮಗೂ ಛಾನ್ಸ್ ಇದೆ. ಈಗ ಕೇಂದ್ರ ಸರ್ಕಾರದ ಸ್ಕೀಮ್‌ಗಳಿಂದ ಹಣ ಬರುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಆ ಹಣ ಲ್ಯಾಪ್ಸ್ ಆಗುತ್ತಿದೆ ಅದು ಇಂಪ್ಲಿಮೆಂಟ್ ಆಗುತ್ತಿಲ್ಲ. ಪುಸ್ತಕಗಳ ಖರೀದಿಗೋಸ್ಕರ, ಪೀಠೋಪಕರಣಗಳ ಖರೀದಿಗೋಸ್ಕರ ಮತ್ತು ಪರ್ಟಿಕ್ಯುಲರ್ ಆಗಿ ಮೈನಾರಿಟೀಸ್ ಸಲುವಾಗಿ ಈ ಹಣ ಬರುತ್ತಿದ್ದು ಇದು ಲ್ಯಾಪ್ಸ್ ಆಗುತ್ತಿದೆ. ಇದು ತಮ್ಮ ಗಮನಕ್ಕೂ ಬಂದಿದೆ. ತಮ್ಮ ಡೈರಕ್ಟರ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾರು ತಪ್ಪು ಮಾಡುತ್ತಿದ್ದಾರೆ ಅವರ ಮೇಲೆ ಒಂದು ಸಲ ಕ್ರಮ ತೆಗೆದುಕೊಳ್ಳಿ. ಉರ್ದು ಮತ್ತು ಅಲ್ಪ ಸಂಖ್ಯಾತರ ಶಾಲೆಗಳ ಡೈರೆಕ್ಟರ್ ಎಂದು ತಾವು ಏನು ನೇಮಕ ಮಾಡಿದ್ದೀರಿ, ಅವರಿಗೆ ಎಷ್ಟು ಸಲ ಫೋನ್ ಮಾಡಿದರೂ ಅಲ್ಲಿ ಕೆಲಸ ಆಗುತ್ತಾ ಇಲ್ಲ. ನಾನು ಎಷ್ಟು ಸಲ ಹೇಳಿದರೂ ತಾವು ಕ್ರಮ ಕೈಗೊಳ್ಳುತ್ತಿಲ್ಲ. ಸನ್ಮಾನ್ಯ ದಿವಂಗತ ದೇವರಾಜ್ ಅರಸ್‌ರವರು ಈ ರಾಜ್ಯದಲ್ಲಿ ಒಂದು ಕೆಲಸ ಮಾಡಿದರು. ನಮ್ಮ ರಾಜ್ಯದಲ್ಲಿ ಅರಬಿಕ್ ಶಾಲೆಗಳಿಗೆ ಗ್ರಾಂಟ್ ಕೊಡಲಿಕ್ಕೆ ಪ್ರಾರಂಭ ಮಾಡಿದರು. ನಂತರ ಕಾಂಗ್ರೆಸ್ ಸರ್ಕಾರದಿಂದಲೂ ನಮಗೆ ಗ್ರಾಂಟ್ ಸಿಗುತ್ತಿತ್ತು. ನಂತರ ನೀವು ಡೆಪ್ಯೂಟಿ ಸಿ.ಎಂ. ಆದ ಮೇಲೆ ಈ ಇಲಾಖೆಯಲ್ಲಿ ಸಾಕಷ್ಟು ಹಣ ಇದ್ದರೂ ಸಹಿತ ಅದನ್ನು ಬ್ಯಾನ್ ಮಾಡಿದ್ದೀರಿ. ಆ ಗ್ರಾಂಟ್ ಅನ್ನು ಬ್ಯಾನ್ ಮಾಡಿರುವುದನ್ನು ಲಿಫ್ಟ್ ಮಾಡಿ. ನಿಮ್ಮ ಭಾಷಣದಲ್ಲಿ ನನಗೆ ಆಶ್ವಾಸನೆ ಕೊಡಿ. ಉಪಮುಖ್ಯಮಂತ್ರಿಗಳೇ, ತಾವು ಏನು ಭಾಷಣ ಮಾಡುತ್ತಿದ್ದೀರಿ ಆಗ ದೀನದಲಿತರು ಹಿಂದುಳಿದವರು, ಅಲ್ಪ ಸಂಖ್ಯಾತರು ಆಯ್ಕೆ ಆಗಬೇಕು. ರಾಜ್ಯ ಆಳಬೇಕು ಅದು ಪ್ರಾಕ್ಟಿಕಲ್ ಆಗಿ ಬಿಎಸ್‌ಪಿನಲ್ಲಿ ಇದೆ.

ಶ್ರೀ ಸಿದ್ಧರಾಮಯ್ಯ : ನಾನು ಡಿಸ್ಟ್ರಿಕ್ ಯುವ ಜನತಾದಳದ ಅಧ್ಯಕ್ಷನನ್ನಾಗಿ ಮಾಡಿ ನಮ್ಮ ಪಕ್ಷದಲ್ಲಿ ಇರಪ್ಪ ಅಂದರೆ ಬಿಎಸ್‌ಪಿಗೆ ಹೋದೆ ಎಂದು ಹೇಳುತ್ತಾರೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ನಿಮ್ಮ ಮೇಲೆ ನನಗೆ ಬಹಳ ಗೌರವ ಇದೆ. ನೀವು ನಮಗೆ ಒಳ್ಳೆ ಹಾದಿ ತೋರಿಸಿದ್ದೀರಿ, ನಿಮ್ಮ ಭಾಷಣ ಕೇಳಿ ಕೇಳಿ ನನ್ನ ಮೈಂಡ್ ಛೇಂಜ್ ಆಗಿದೆ. ದೀನದಲಿತರಿಗೆ, ಅಲ್ಪಸಂಖ್ಯಾತರಿಗೆ ರಕ್ಷಣೆ ಇದೆ ಎಂದು ತಮ್ಮ ಭಾಷಣದಲ್ಲಿ ಹೇಳುತ್ತಿದ್ದೀರಿ. ಇವತ್ತು ರಕ್ಷಣೆ ಎಲ್ಲಿದೆ ಯಾವ ಪಕ್ಷದಲ್ಲಿ ಇದೆ? ನ್ಯಾಯ ಸಿಗುತ್ತಿದ್ದೀಯಾ? ಸಾಮಾಜಿಕ ನ್ಯಾಯ ಇದೆಯೇ? ಕ್ರಾಂತಿ ಆಗುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸಿದ್ದರಾಮಯ್ಯನವರ ಭಾಷಣ ಕೇಳಿ, ಕೇಳಿ ಬಿಎಸ್‌ಪಿಗೆ ಹೋದೆ ಎಂದು ಹೇಳಿದರು. ಈಗ ಏನಾಗಿದೆ ಅಂದರೆ ನೀವು ಬಿಜೆಪಿ ನವರು ಮುದ್ದಾಡುವುದನ್ನು ನೋಡಿದರೆ ಹಾವು ಮುಂಗುಸಿ ಪ್ರೀತಿ ಮಾಡಿದ ಹಾಗೆ ಕಾಣುತ್ತದೆ, ಹುಲಿ ಕುರಿ ಪ್ರೀತಿಮಾಡಿದ ಹಾಗೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಇವರು ಬಿಜೆಪಿ ಹತ್ತಿರ ಹೋಗುತ್ತಿದ್ದಾರಲ್ಲಾ ನಾವು ಅಲ್ಲಿ ಹೋಗಲಿಕ್ಕೆ ಅವಕಾಶ ಇತ್ತು. ಇವರಿಂದ ಅದು ಎಲ್ಲಿ ತಪ್ಪಿ ಹೋಗುತ್ತದೆಯೋ ಎಂದು ಭಯ ಆಗಿದೆ ಅವರಿಗೆ.

12.10 ಪಿ.ಎಂ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಆ ಬ್ಯಾನ್‌ಲಿಫ್ಟ್ ಆಗಬೇಕು. ಈ ರಾಜ್ಯದಲ್ಲಿ ಟೀಚರ್ಸ್ ಟ್ರೈನಿಂಗ್ ಶಾಲೆಗಳು ಇವೆ. ನನ್ನ ಜಿಲ್ಲೆಯದೇ ಉದಾಹರಣೆ ಕೊಡುತ್ತೇನೆ. ಒಬ್ಬರೇ ಟೀಚರ್ ಇದ್ದಾರೆ, ಒಬ್ಬರೇ ಲೆಕ್ಚರರ್ ಇದ್ದಾರೆ. ಯಾರು ಮುಂದೆ ಟೀಚರ್ ಆಗುತ್ತಾರೆ, ಅವರ ಟೀಚಿಂಗ್ ಸಲುವಾಗಿ ಸ್ಟಾಫ್ ಇಲ್ಲ. ಹೀಗಾದರೆ ಮುಂದೆ ಅವರು ಹೇಗೆ ಟೀಚರ್ ಆಗುತ್ತಾರೆ? ಮುಂದೆ ಅವರು ವಿದ್ಯಾರ್ಥಿಗಳಿಗೆ ಹೇಗೆ ವಿದ್ಯಾಭ್ಯಾಸ ಕೊಡಬೇಕು? ಅದರ ಸಲುವಾಗಿ ಕೂಡಲೇ ಟೀಚರ್ಸ್‌ಗಳ ಪೋಸ್ಟಿಂಗ್ಸ್ ಕೊಡಿ ಎಂದು ಹೇಳುತ್ತೇನೆ. ಪ್ರೈಮರಿ ಸ್ಕೂಲುಗಳಲ್ಲಿ, ಹೈ ಸ್ಕೂಲುಗಳಲ್ಲಿ ಟೀಚರ್ ಇಲ್ಲ. ಅದರ ಸಲುವಾಗಿ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ನಾನು ದೊಡ್ಡ ಭಾಷಣವನ್ನು ಮಾಡಲು ಹೋಗುತ್ತಿಲ್ಲ. ನಮ್ಮ ಉನ್ನತ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ, ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ನಮ್ಮಲ್ಲಿ ಪಾಲಿಟೆಕ್ನಿಕ್‌ಗಳು ಇವೆ. ಆ ಪಾಲಿಟೆಕ್ನಿಕ್‌ಗಳಲ್ಲಿ ಲೆಕ್ಚರರ್ಸ್ ಇಲ್ಲ. ನಮ್ಮ ಜಿಲ್ಲೆಯಲ್ಲೇ 10-12 ಲೆಕ್ಚ್‌ರರ್ಸ್ ಇಲ್ಲ. ಐಟಿಐ ನಲ್ಲಿ ಸ್ಟಾಫ್ ಇಲ್ಲ. ಐಟಿಐ ಗೆ ಕಟ್ಟಡ ಇಲ್ಲ ಮತ್ತು ಅಲ್ಲಿ ಗ್ಯಾರೇಜೂ ಇಲ್ಲ. ಐಟಿಐನಲ್ಲಿ ಗ್ಯಾರೇಜ್ ಇಲ್ಲದಿದ್ದರೆ ಕೆಲಸ ಹೇಗೆ ಮಾಡಬೇಕು? ಹೇಗೆ ಪ್ರಾಕ್ಟಿಕಲ್ ಮಾಡಬೇಕು?

ಉಪಾಧ್ಯಕ್ಷರು : ತಮ್ಮ ಸಮಯ ಮುಗಿಯಿತು. ಈಗ ಕುಮಾರಸ್ವಾಮಿಯವರೇ, ತಾವು ಮಾತನಾಡಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಶೇ. 33ರಷ್ಟು ರಿಸರ್ವೇಷನ್ ಅನ್ನು ಮಹಿಳೆಯರಿಗೆ ಕೊಡುತ್ತೇನೆ ಎಂದು ತಾವು ಹೇಳುತ್ತಿದ್ದೀರಿ. ನೀವು ಒಂದು ಕೆಲಸ ಮಾಡಿ. ಎಲ್ಲೆಲ್ಲಿ ಪಾಲಿಟೆಕ್ನಿಕ್‌ಗಳಿವೆ, ಐಟಿಐಗಳಿವೆ, ಅಲ್ಲಿ ನೀವು ಪ್ರತ್ಯೇಕ ವುಮೆನ್ ಪಾಲಿಟೆಕ್ನಿಕ್ ಮತ್ತು ವುಮೆನ್ ಐಟಿಐಗಳನ್ನು ಮಾಡಿದರೆ ಅದರಿಂದ ಬಹಳ ಅನುಕೂಲವಾಗುತ್ತದೆ. ಇನ್ನು ವೊಕೇಷನಲ್ ಕೋರ್ಸಸ್ ಸಲುವಾಗಿ ಎರಡು ವರ್ಷದಿಂದ ಈ ಸರ್ಕಾರವನ್ನು ಕೇಳುತ್ತಿದ್ದೇವೆ. ಒಂದು ವೊಕೇಷನಲ್ ಕೋರ್ಸ್ ಸಹ ನಮಗೆ ಸಿಗುತ್ತಿಲ್ಲ. ಅದು ಕೇಂದ್ರ ಸರ್ಕಾರದ ಹಣ. ಕೊಡಲು ನಿಮಗೆ ಏನು ಆಗುತ್ತಿದೆ? ಏಕೆ ಕೊಡುತ್ತಿಲ್ಲ? ತಾವು ಸಾಕ್ಷರತಾ ಆಂದೋಲನಾ ನಡೆಸುತ್ತಿದ್ದೀರಿ. ಈ ರಾಜ್ಯದಲ್ಲಿ ಮತ್ತು ಈ ದೇಶದಲ್ಲಿ ಇದು ಒಂದು ದೊಡ್ಡ ಭ್ರಷ್ಟಾಚಾರವಾಗಿದೆ. ಸಾಕ್ಷರತಾ ಆಂಧೋಲನ ಏಕೆ ಮಾಡುತ್ತಿದ್ದೀರಿ? ಮುದುಕರನ್ನು ಸಾಕ್ಷರನ್ನಾಗಿ ಏಕೆ ಮಾಡುತ್ತೀರಿ? ಚಿಕ್ಕಚಿಕ್ಕ ಹುಡುಗರಿಗೇ ಟೀಚರ್ಸ್ ಇಲ್ಲ, ಫರ್ನಿಚರ್ಸ್ ಇಲ್ಲ, ಹಾಗಿರುವಾಗ ಕಲಿಯಿರಿ ಕಲಿಸಿರಿ ಎಂದು ಮುದುಕರನ್ನು ಸಾಕ್ಷರನ್ನಾಗಿ ಮಾಡುತ್ತಿರಿ. ಏಕೆ ಇದು? ಮುದುಕರು ಕಲಿತು ಏನು ಮಾಡುತ್ತಾರೆ? ಅವರು ಸಾಯುವ ದಿನ ಬಂದಿದೆ. ಅವರಿಗೆ ಏಕೆ ಈ ಸ್ಲೋಗನ್ ? ನಿಮ್ಮ ಮನಸ್ಸಿನಲ್ಲಿ ಏನಿದೆ, ನಿಮ್ಮ ಪಾಲಿಸಿ ಏನಿದೆ, ಎಂದರೆ ಆ ಮುದುಕ ಕಲಿತು ಅವನು ಸರ್ವೀಸ್ ಮೇಲೆ ಹೋಗಲು ಆಗುವುದಿಲ್ಲ. ನೀವು ಮಕ್ಕಳಿಗೆ ಸೌಲಭ್ಯ ಕೊಡುವುದಿಲ್ಲ. ಈ ಸಾಕ್ಷರತಾ ಆಂಧೋಲನ ಏನಿದೆ, ಇದು ಸಾಕ್ಷರತಾ ಹೆಸರಿನಲ್ಲಿ ಒಂದು ದೊಡ್ಡ ಭ್ರಷ್ಟಾಚಾರ ನಡೆಯುತ್ತಿದೆ. ತಾವೇ ವಿಚಾರ ಮಾಡಿ ನೋಡಿ. ಅಲ್ಲ ಏನೇನು ಆಗುತ್ತಿದೆ ಎನ್ನುವುದನ್ನು ನಮಗೆ ಹೇಳಲು ಬರುವುದಿಲ್ಲ.

ಉಪಾಧ್ಯಕ್ಷರು : ತಾವು ಬೇಗ ಮುಗಿಸಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಸುಭಾಷ್ ಗುತ್ತೇದಾರ್‌ರವರು, ನಬಿ ಸಾಹೇಬರು, ಸಗೀರ್ ಸಾಹೇಬರು ಹೆಚ್ಚು ಸಮಯ ತೆಗೆದುಕೊಂಡು ಬಿಟ್ಟರು. ನಾನು ಹೇಗೆ ಸರ್ಕಾರದವರಲ್ಲಿ ವಿನಂತಿ ಮಾಡುತ್ತಿದ್ದೇನೆ, ನಾನು ಏನೇನು ಮಾತನಾಡಿದೆ ಎನ್ನುವುದನ್ನು ತಾವು ಯೋಚಿಸಿ ನಿಮ್ಮ ಇಲಾಖೆಯವರನ್ನು ಮತ್ತು ನಮ್ಮನ್ನು ಕರೆಸಿ, ಚರ್ಚೆ ಮಾಡಿ ಸರಿಪಡಿಸಿ. ರಾಜಕೀಯವಾಗಿ ನಾನು ಭಾಷಣ ಮಾಡುತ್ತಿಲ್ಲ. ನಾನು ಕಳಕಳಿಯಿಂದ ಹೇಳುತ್ತಿದ್ದೇನೆ, ನಿಮ್ಮ ಸಾಮಾಜಿಕ ನ್ಯಾಯ ಧೋರಣೆ ಏನಿದೆ, ಸರಿಯಾಗಿ ಅದರ ಮೇಲೆ ಕೆಲಸ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತೇನೆ. ತಾವು ಅದನ್ನು ಮಾಡುತ್ತೀರಿ ಎನ್ನುವ ಆಶೆಯೂ ನಮಗೆ ಇದೆ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಬಹಳ ಧನ್ಯವಾದಗಳು.

ಉಪಾಧ್ಯಕ್ಷರು : ಈಗ ಕುಮಾರಸ್ವಾಮಿಯವರು. ತಾವು 20 ನಿಮಿಷದಲ್ಲಿ ಮುಗಿಸಬೇಕು.

+ ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ನಾವು ಏಳುವುದೇ ಅಪರೂಪಕ್ಕೊಮ್ಮೆ. ತಾವು ಸಮಯ ನಿಗದಿ ಮಾಡಿಬಿಟ್ಟರೆ ಹೇಗೆ? ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಅನೇಕ ಮಂದಿ ನಮ್ಮ ವಿರೋಧ ಪಕ್ಷದ ಸದಸ್ಯರು ಶಿಕ್ಷಣ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡಿದ್ದಾರೆ. ಕೆಲವು ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಖಾಸಗೀ ಅನುದಾನಿತ ಶಾಲಾಕಾಲೇಜುಗಳಲ್ಲಿ ನೀಡುವ ಪ್ರವೇಶದ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕು ಎಂದು ಇಷ್ಟಪಟ್ಟಿದ್ದೇನೆ. ನಾನು ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ನಮ್ಮ ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಸಮಿತಿಯ ಅಧ್ಯಕ್ಷನಾಗಿ ನಮ್ಮ ಎಲ್ಲಾ ತಂಡದೊಡನೆ ಅನೇಕ ಜಿಲ್ಲೆಗಳಲ್ಲಿ ನಾನು ಪ್ರವಾಸ ಮಾಡಿದ್ದೇನೆ. ಈಗ ಏನಾಗಿದೆ ಎಂದರೆ, ಅನುದಾನ ಪಡೆಯುತ್ತಿರುವಂಥಾ ಶಾಲಾ ಕಾಲೇಜುಗಳವರು ಬಹುಶಃ ಶಾಲಾ ಕಾಲೇಜುಗಳು ಸಂಪೂರ್ಣ ತಮ್ಮ ಸ್ವಂತಿಕೆ ಎಂದು ಭಾವಿಸಿದ್ದಾರೆ. ಯಾವ ಶಾಲಾ ಕಾಲೇಜುಗಳಲ್ಲೂ ಕೂಡ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ಅವರು ಪ್ರವೇಶವನ್ನು ಕೊಡುತ್ತಿಲ್ಲ. ಇವತ್ತು ತಾವು ಅನುದಾನ ಪಡೆಯುತ್ತಿರುವಂಥ ಯಾವುದೇ ಶಾಲಾ ಕಾಲೇಜುಗಳಿಗೆ ಹೋಗಿ ನೋಡಿದರೆ ಅಲ್ಲಿ ಪ್ರತಿಯೊಂದಕ್ಕೂ ಡೊನೇಷನ್ ಅನ್ನು 5,000, 10,000, 15,000, 20,000 ರೂಪಾಯಿ ಎಂದು ನಿಗದಿ ಮಾಡಿಕೊಂಡಿದ್ದಾರೆ. ಬಡ ಮಕ್ಕಳಿಗೆ ಅಲ್ಲಿ ಪ್ರವೇಶವನ್ನು ಕೊಡದಿದ್ದರೆ ಸರ್ಕಾರ ಅವರಿಗೆ ಯಾವ ಕಾರಣಕ್ಕಾಗಿ ಅನುದಾನವನ್ನು ಕೊಡಬೇಕು ಎನ್ನುವುದು ಇಲ್ಲಿ ಒಂದು ಪ್ರಶ್ನೆಯಾಗಿ ನಮ್ಮ ಮುಂದೆ ನಿಂತಿದೆ. ಈಗ ಸರ್ಕಾರ ಕೋಟ್ಯಾಂತರ ರೂಪಾಯಿಗಳ ಅನುದಾನವನ್ನು ಕೊಡುತ್ತಿದೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮಕ್ಕಳು ಅರ್ಜಿ ಹಾಕಿದರೆ ಅವರಿಗೆ ಯಾರೂ ಕೂಡ ಪ್ರವೇಶವನ್ನು ಕೊಡುತ್ತಿಲ್ಲ. ಯಾರು ಡೊನೇಷನ್ ಕೊಡುತ್ತಾರೆ, ಯಾರಿಗೆ ವಂತಿಗೆಯನ್ನು ಕೊಡತಕ್ಕಂಥ ಶಕ್ತಿ ಇದೆ, ಅವರಿಗೆ ಮಾತ್ರ ಪ್ರವೇಶವನ್ನು ಕೊಡುತ್ತಿದ್ದಾರೆ. ಅದಕ್ಕಾಗಿ ಮಾನ್ಯ ಸರ್ಕಾರದಲ್ಲಿ ನನ್ನ ಮನವಿ ಮತ್ತು ಒತ್ತಾಯ ಎಂದರೆ, ಈ ಖಾಸಗಿ ಅನುದಾನಿತ ಶಾಲಾಕಾಲೇಜುಗಳಲ್ಲಿ ಪ್ರವೇಶವನ್ನು ನೀಡುವಾಗ,

ನಾವು ಇವತ್ತು ಮೆಡಿಕಲ್ ಕಾಲೇಜುಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಯಾವ ರೀತಿ ಪ್ರವೇಶವನ್ನು ಮಾಡುತ್ತಿದ್ದೇವೆಯೋ ಅದೇ ಮಾದರಿಯಲ್ಲಿ ಒಂದು ಸಿ.ಇ.ಟಿ ಪರೀಕ್ಷೆಯನ್ನು ಇಟ್ಟೋ ಅಥವಾ ಬೇರೆ ಯಾವುದೋ ಒಂದು ಆಧಾರದ ಮೇಲೆ ಪ್ರವೇಶವನ್ನು ಮಾಡಬೇಕು. ಇಲ್ಲದಿದ್ದರೆ ಇಂತಹ ಖಾಸಗೀ ಅನುದಾನಿತ ಶಾಲಾ ಕಾಲೇಜುಗಳಿಗೆ ಸಂಪೂರ್ಣವಾಗಿ ಅನುದಾನವನ್ನು ನಿಲ್ಲಿಸತಕ್ಕಂಥ ಕೆಲಸವನ್ನು ಮಾಡಬೇಕು. ಇವರು ಪ್ರವೇಶವನ್ನು ಕೊಡತಕ್ಕಂಥ ಸಮಯದಲ್ಲಿ ಪರಿಶಿಷ್ಟ ಜಾತಿ ವರ್ಗದ ಮಕ್ಕಳು ಕೊನೆಯ ಪಕ್ಷ ಸಂಬಂಧಪಟ್ಟ ಡಿ.ಡಿ.ಪಿ.ಐ ಗಳಿಗೂ ಕೂಡ ಒಂದು ಅರ್ಜಿಯನ್ನು ಸಲ್ಲಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಪ್ರತಿ ಜಿಲ್ಲೆಯ ಡಿ.ಡಿ.ಪಿ.ಐ ಗಳು ಸಂಬಂಧಪಟ್ಟಂಥ ಶಾಲಾ ಕಾಲೇಜುಗಳಿಗೆ ಹೋಗಿ ಇವರಿಗೆ ಪ್ರವೇಶವನ್ನು ಕೊಡುತ್ತಿದ್ದಾರೆಯೇ ಇಲ್ಲವೇ ಎನ್ನತಕ್ಕಂಥ ತಪಾಸಣೆ ಮಾಡಬೇಕು. ಕೊಡದೇ ಇದ್ದರೆ ಅನುದಾನವನ್ನು ನಿಲ್ಲಿಸತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಈ ವಿಷಯದಲ್ಲಿ ಸರ್ಕಾರ ಗಂಭೀರವಾಗಿ ನಡೆದುಕೊಳ್ಳಬೇಕು ಎಂದು ನಾನು ಮನವಿಯನ್ನು ಮಾಡುತ್ತಾ, ಈ ರೀತಿ ಯಾವ ಶಾಲಾ ಕಾಲೇಜುಗಳ ಮುಖ್ಯಸ್ಥರು ಪ್ರವೇಶವನ್ನು ನಿರಾಕರಿಸುತ್ತಾರೆ, ಅಂಥವರಿಗೆ ಶಿಕ್ಷೆಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಶಿಕ್ಷಕರ ನೇಮಕಾತಿ ಬಗ್ಗೆ ಬಹುಶಃ ನಮ್ಮ ಸರ್ಕಾರಕ್ಕೆ ಒಂದು ಕೀರ್ತಿ ಇದೆ ಎಂದು ನಾನು ಭಾವಿಸಿದ್ದೇನೆ. ರಾಷ್ಟ್ರದ ಯಾವುದೇ ರಾಜ್ಯ ಕೂಡ ನಮ್ಮ ಸರ್ಕಾರದಷ್ಟು ಶಿಕ್ಷಕರನ್ನು ನೇಮಕಾತಿ ಮಾಡಿಲ್ಲ. ಕಳೆದ ಒಂದೇ ಒಂದು ವರ್ಷದಲ್ಲೇ ಸುಮಾರು 18,000 ಜನ ಪ್ರಾಥಮಿಕ ಶಿಕ್ಷಕರನ್ನು ನೇಮಕ ಮಾಡಿದೆ. ಇವತ್ತು ಬಿಹಾರ, ಉತ್ತರ ಪ್ರದೇಶಗಳಂಥ ರಾಜ್ಯಗಳೂ ಕೂಡ ಇಷ್ಟು ಪ್ರಮಾಣದಲ್ಲಿ ಶಿಕ್ಷಕರ ನೇಮಕಾತಿಯನ್ನು ಮಾಡಿಲ್ಲ. ಆದರೆ ನಾನು ನಮ್ಮ ಮಾನ್ಯ ಶಿಕ್ಷಣ ಸಚಿವರಾದ ಗೋವಿಂದೇ ಗೌಡರಲ್ಲಿ ಮನವಿ ಮಾಡುವುದು ಏನೆಂದರೆ, ದಯಮಾಡಿ ನೇಮಕ ಮಾಡುವಾಗ ಇವತ್ತು ತಾವು ಏನು ಮೆರಿಟ್‌ಅನ್ನು ನೇರ ನೇಮಕಾತಿಯಲ್ಲಿ ಗಣನೆಗೆ ತೆಗೆದುಕೊಂಡಿದ್ದೀರಿ. ಅದನ್ನು ನಾನು ಮೆಚ್ಚುತ್ತೇನೆ. ಅದರ ಜೊತೆಗೆ ತಾವು ವಯಸ್ಸನ್ನೂ ಪರಿಗಣಿಸಬೇಕು. ಇವತ್ತು 20-22 ವರ್ಷದ ಹುಡುಗರು ಚೆನ್ನಾಗಿ ಓದಿದ್ದಾರೆ, ಮೆರಿಟ್ ಇದೆ. ಅದನ್ನು ನಾವು ಇಲ್ಲ ಎಂದು ಹೇಳುವುದಿಲ್ಲ. ವಿದ್ಯಾ ಕ್ಷೇತ್ರಕ್ಕೆ ಅನುಕೂಲವಾಗುವ ರೀತಿಯಲ್ಲಿ ಬುದ್ಧಿವಂತರನ್ನು ತಾವು ಆಯ್ಕೆ ಮಾಡಬೇಕು. ಜೊತೆಗೆ ಬಹಳಷ್ಟು ವರ್ಷಗಳಿಂದ ವಯಸ್ಸಾಗಿ ಮನೆಯಲ್ಲಿರುವ ಹೆಣ್ಣುಮಕ್ಕಳು ಹಾಗೂ ಹುಡುಗರನ್ನೂ ಪರಿಗಣಿಸಬೇಕು. ದಯಮಾಡಿ ಸರ್ಕಾರ ತನ್ನ ಬಿಗಿ ನಿಲುವನ್ನು ಬಿಡಬೇಕು. ಇವತ್ತು ವಯಸ್ಸಿಗೆ ಕೂಡ ಮಾನ್ಯತೆ ನೀಡಬೇಕು. ವಯಸ್ಸು ಮತ್ತು ಅರ್ಹತೆ ಎರಡನ್ನೂ ತಾವು ಪರಿಗಣಿಸಿ, ದಯಮಾಡಿ ಈ ಸದನದಲ್ಲೇ ತಾವು ತೀರ್ಮಾನವನ್ನು ಹೇಳಬೇಕು ಎಂದು ನಾನು ಬಯಸುತ್ತೇನೆ.

ಇನ್ನು ಶಿಕ್ಷಕರ ವರ್ಗಾವಣೆ ಬಗ್ಗೆ ಹೇಳಬೇಕಾದರೆ, ಹಿಂದೆ ತಾಲ್ಲೂಕಿನಿಂದ ತಾಲ್ಲೂಕಿಗೆ ವರ್ಗಾವಣೆ ಮಾಡುವುದಕ್ಕೆ ಅವಕಾಶ ಇತ್ತು. ಆದರೆ ತಾವು ಇವತ್ತು ಇದನ್ನು ತೆಗೆದು ಹಾಕಿ, ತಾಲ್ಲೂಕಿನ ಒಳಗಡೆಯೇ ವರ್ಗಾವಣೆ ಮಾಡತಕ್ಕಂಥಾದ್ದನ್ನು ಮಾಡಿದ್ದೀರಿ. ಸ್ವಾಮಿ, ದಯಮಾಡಿ ಅದನ್ನು ತೆಗೆಯಬೇಕು. ಅಂತರ ತಾಲ್ಲೂಕುಗಳಲ್ಲಿ ಶಿಕ್ಷಕರ ವರ್ಗಾವಣೆಯನ್ನು ಮಾಡತಕ್ಕಂಥ ಸಲಹೆಯನ್ನು

ಪುನಃ ಪರಿಗಣಿಸಬೇಕು ಎಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ಇನ್ನು ಶಾಲೆಗಳಲ್ಲಿ ಆರು ಜನ ಉಪಾಧ್ಯಾಯರು ಇದ್ದರೆ ಒಬ್ಬರು ದೈಹಿಕ ಶಿಕ್ಷಕರು ಇರಬೇಕು ಎನ್ನುವ ಕಾನೂನು ಹಾಲಿ ಜಾರಿಯಲ್ಲಿದೆ. ನಮ್ಮ ದೇಶ ಹಾಗೂ ರಾಜ್ಯದಲ್ಲಿ ನಾವು ಕ್ರೀಡೆಯಲ್ಲಿ ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ ಎಂದು ತಮಗೆ ಗೊತ್ತು. ಪಾಠ ಹೇಳುವಂಥ ಒಬ್ಬ ಉಪಾಧ್ಯಾಯರು ಕಡಿಮೆಯಾದರೂ ತೊಂದರೆ ಇಲ್ಲ. ದಯವಿಟ್ಟು ನೀವು ಕಡ್ಡಾಯವಾಗಿ ಪ್ರತಿ ಮಾಧ್ಯಮಿಕ ಶಾಲೆಗೆ 5ನೇ ತರಗತಿಗೆ ಬಂದ ತಕ್ಷಣ ಅಥವಾ 7ನೇ ತರಗತಿವರೆಗೆ ಇರತಕ್ಕಂಥವಕ್ಕೆ ತಾವು ಏನು 6:1 ಪ್ರಮಾಣದಲ್ಲಿ ಮಾಡುತ್ತಿದ್ದೀರಿ, ಅದನ್ನು ಕಡಿಮೆ ಮಾಡಿ ಕೊನೆಯ ಪಕ್ಷ 3:1 ಅಥವಾ 4:1 ಕ್ಕೆ ಹೆಚ್ಚಿಸಬೇಕು. ಈ ಬೇಡಿಕೆಯನ್ನು ನಾವು ಪ್ರಾರಂಭದಿಂದಲೂ ಒತ್ತಾಯ ಮಾಡಿಕೊಂಡು ಬಂದಿದ್ದೇವೆ. ನಮ್ಮ ಅನೇಕ ಜನ ಸದಸ್ಯರು ಹೇಳಿದ್ದಾರೆ. ಇವತ್ತು ದೈಹಿಕ ಶಿಕ್ಷಕರು ಮಾಮೂಲಿ ಪಾಠ ಮಾಡಬಹುದು, ಆದರೆ ಮಾಮೂಲಿ ಉಪಾಧ್ಯಾಯರಿಗೆ ದೈಹಿಕ ಶಿಕ್ಷಣ ಗೊತ್ತಿರುವುದಿಲ್ಲ. ಅದಕ್ಕಾಗಿ ದಯಮಾಡಿ ಈಗ ಇರುವ 6 :1 ಪ್ರಮಾಣವನ್ನು ಕಡಿಮೆ ಮಾಡಬೇಕು. 6 :1 ಪ್ರಮಾಣ ಏನಿದೆ ಅದನ್ನು ತೆಗೆಯಬೇಕು. ಇವತ್ತು ತಾವು ದೈಹಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡು ಶಿಕ್ಷಣವನ್ನು ಇನ್ನೂ ಸುಧಾರಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಏಕೋಪಾಧ್ಯಾಯರು ಇದ್ದಂಥ ಶಾಲೆಗಳಿಗೆ ತಾವು ಇಬ್ಬರನ್ನು ಉಪಾಧ್ಯಾಯರನ್ನಾಗಿ ಮಾಡಿದ್ದೀರಿ. ಇದು ಮಕ್ಕಳ ಹಿತದೃಷ್ಟಿಯಿಂದ ಸರಿ. ಆದರೆ ನಮ್ಮ ಮಲೆನಾಡಿನಲ್ಲಿ, ನನ್ನ ಜಿಲ್ಲೆಯಾದ ಹಾಸನದಲ್ಲಿ, ಶಿವಮೊಗ್ಗ, ಕಾರವಾರ ಈ ಕಡೆಗಳಲ್ಲಿ ಒಂದೊಂದು ಶಾಲೆ ಎಂದರೆ 8 ರಿಂದ 10 ಮಕ್ಕಳು, ಇನ್ನೂ ಹೆಚ್ಚು ಎಂದರೆ 15 ರಿಂದ 20 ಮಕ್ಕಳು ಕುಳಿತಿರುತ್ತಾರೆ. ತಾವು ಇಷ್ಟು ವಿದ್ಯಾರ್ಥಿಗಳಿಗೆ ಇಬ್ಬರು ಶಿಕ್ಷಕರನ್ನು ಕೊಟ್ಟಿದ್ದೀರಿ, ಒಳ್ಳೆಯದು. ಆದರೆ ಈ ಇಬ್ಬರು ಶಿಕ್ಷಕರು ಅವರುಗಳೇ ಹೊಂದಾಣಿಕೆ ಮಾಡಿಕೊಂಡು ನೀನು 15 ದಿನ ಶಾಲೆಗೆ ಬಂದುಬಿಡು, ನಾನು 15 ದಿನ ಶಾಲೆಗೆ ಬರುತ್ತೇನೆ ಎಂದು ಹೊಂದಾಣಿಕೆ ಮಾಡಿಕೊಂಡಿದ್ದಾರೆ. ನಾನು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡುತ್ತಿದ್ದಾಗ ಸುಮ್ಮನೇ ಹಾಗೇ ಶಾಲೆಗಳಿಗೆ ಭೇಟಿ ಕೊಟ್ಟಾಗ ಒಂದು ಶಾಲೆಯಲ್ಲಿ ಒಬ್ಬನೇ ಶಿಕ್ಷಕ ಸಹಿ ಮಾಡಿಕೊಂಡು ಇನ್ನೊಬ್ಬನದನ್ನು ಹಾಗೆಯೇ ಖಾಲಿ ಬಿಟ್ಟುಕೊಂಡಿದ್ದ. ಏಕೆ ಹೀಗೆ ಖಾಲಿ ಬಿಟ್ಟುಕೊಂಡಿದ್ದೀರಿ ಎಂದು ಕೇಳಿದರೆ ಅವರು ಬರುತ್ತೇನೆ ಎಂದು ಹೇಳಿಹೋಗಿದ್ದಾರೆ ಎಂದು ಹೇಳುತ್ತಾರೆ. ನಾನು ಭೇಟಿ ಕೊಟ್ಟಾಗಲೇ ಮದ್ಯಾಹ್ನ 3 ಗಂಟೆಯಾಗಿತ್ತು. ಇನ್ನೊಂದು ಶಾಲೆಯಲ್ಲಿ ಭೇಟಿ ಕೊಟ್ಟಾಗ ಅಲ್ಲೂ ಒಬ್ಬ ಶಿಕ್ಷಕ ಇದ್ದು ಇನ್ನೊಬ್ಬ ಎ.ಇ.ಒ. ಆಫೀಸ್‌ಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಇಬ್ಬರು ಶಿಕ್ಷಕರು ಹೊಂದಾಣಿಕೆ ಮಾಡಿಕೊಂಡು 15 ದಿವಸಗಳ ಕಾಲ ಒಬ್ಬ ಮತ್ತೆ 15 ದಿವಸಗಳ ಕಾಲ ಇನ್ನೊಬ್ಬ ಶಿಕ್ಷಕ ಇರತಕ್ಕಂಥ ವ್ಯವಸ್ಥೆ ಇದೆ. ಆದುದರಿಂದ ತಾವು ಈಗ ಏನು 15-20 ಮಕ್ಕಳಿಗೆ ಇಬ್ಬರು ಶಿಕ್ಷಕರನ್ನು ಏನು ಕೊಟ್ಟಿದ್ದೀರಿ, ಅದರ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಇದಲ್ಲದೇ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ಕಡ್ಡಾಯವಾಗಿ ನೀವು ಹೆಚ್ಚು ಉಪಾಧ್ಯಾಯರನ್ನು ಕೊಡತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿರುವಲ್ಲಿ ಒಂದು ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಖಾಸಗಿ ಅನುದಾನರಹಿತ ಶಾಲೆಗಳಿಗೆ ಅನುದಾನ ಕೊಡತಕ್ಕಂಥ ವಿಚಾರದಲ್ಲಿ ಯಾವ ಕಾರಣಕ್ಕಾಗಿ ಮಾನ್ಯ ಸಚಿವರು ಬಿಗಿ ನಿಲುವನ್ನು

ತಾಳಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ತಪ್ಪೋ ಅಥವಾ ಸರಿಯೋ, ಇವೊತ್ತು ಸರ್ಕಾರ ಶಾಲೆಗಳನ್ನು ಮಂಜೂರು ಮಾಡಿದೆ. ಮಂಜೂರು ಮಾಡುವಾಗಲೇ ಮ್ಯಾನೇಜ್‌ಮೆಂಟಿನವರು ಯಾರೂಕೂಡ ಶಾಶ್ವತ ಅನುದಾನಕ್ಕೆ ಒಪ್ಪಿಗೆ ಕೊಟ್ಟಿರಲಿಲ್ಲ. ಆದರೆ ಒಂದು ಶಾಲೆಯಾಗಲಿ ಎನ್ನುವ ದೃಷ್ಟಿಯಿಂದ ಒಂದು ಅಗ್ರಿಮೆಂಟನ್ನು ಬರೆದುಕೊಟ್ಟಿರುವುದು ನಿಜ. ಆದರೆ ಹೀಗೆ ಇನ್ನೂ ಎಷ್ಟು ದಿನ ಮುಂದುವರಿಯಬೇಕು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈಗ ಶಾಶ್ವತ ಅನುದಾನ ಶಾಲೆಗಳನ್ನು ವಿದ್ಯಾ ಸಂಸ್ಥೆಯವರು ಮುಚ್ಚಿದರೆ ಆ ಮಕ್ಕಳನ್ನು ನಾವು ಎಲ್ಲಿಗೆ ಸೇರಿಸಬೇಕು ಮತ್ತು ಅಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳ ಗತಿಯೇನು ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಇವೊತ್ತು ಸರ್ಕಾರ ಪರಿಶಿಷ್ಟ ಜಾತಿಯ ವಿಶೇಷ ಘಟಕ ಯೋಜನೆಯ ಹಣವನ್ನು ನೀರಾವರಿಗೆ, ಶಿಕ್ಷಣಕ್ಕೆ ಮತ್ತು ಔದ್ಯೋಗಿಕ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ತಾವು ಸಮಾಜ ಕಲ್ಯಾಣ ಇಲಾಖೆಯಿಂದ ವಿಶೇಷ ಘಟಕ ಯೋಜನೆಯ ಹಣವನ್ನು ಪಡೆದು ಪರಿಶಿಷ್ಟ ಜಾತಿ ವರ್ಗದವರ ಸಂಸ್ಥೆಗಳಿಗೆ ಕೊಡಬಹುದು. ಇದನ್ನು ಸರ್ಕಾರ ಬಹಳ ತೀವ್ರವಾಗಿ ಆಲೋಚನೆಯನ್ನು ಆಲೋಚನೆಯನ್ನು ಮಾಡಬೇಕು. ಈ ಹಿಂದೆ ಎಷ್ಟು ಶಾಲೆಗಳನ್ನು ತೆರೆದಿದ್ದಾರೆ ಅವೆಲ್ಲವೂ ಕೂಡ ಇಂದು ನಡೆಯುತ್ತಿಲ್ಲ. ತಾವು ಮಂಜೂರು ಮಾಡಿರುವ ಶಾಲೆಗಳ ಪೈಕಿ ಕೇವಲ ಕಾಲು ಭಾಗದಷ್ಟು ಶಾಲೆಗಳು ಮಾತ್ರ ಇವೊತ್ತು ನಡೆಯುತ್ತಿದೆ. ಅವುಗಳಲ್ಲೂ ಕೂಡ ಪೂರ್ಣ ಪ್ರಮಾಣದ ಸ್ಟ್ರೆಂಥ್ ಇಲ್ಲ, ಅನುದಾನ ಸಂಹಿತೆಯ ರೀತಿಯಲ್ಲಿ ಯಾವ ಯಾವ ಅನುಕೂಲಗಳು ಶಾಲೆಗಳಲ್ಲಿರಬೇಕೋ ಅವೂ ಕೂಡ ಇಲ್ಲ, ಸುಮಾರು 18 ರಿಂದ 20 ವರ್ಷದ ಹಿಂದಿನ ಶಾಲೆಗಳು ಏನು ಅನುದಾನವನ್ನು ಪಡೆಯುತ್ತಿವೆ ಅಂಥ ಶಾಲೆಗಳಿಗೂ ತಮ್ಮದೇ ಆದ ಸ್ವಂತ ಕಟ್ಟಡವಿಲ್ಲ. ದಯಮಾಡಿ ತಾವು ಇದರ ಬಗ್ಗೆ ರಾಜ್ಯದಾದ್ಯಂತ ಇರುವ ಇಂಥ ಶಾಲೆಗಳ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಿದರೆ ತಮಗೇ ಗೊತ್ತಾಗುತ್ತದೆ. ಸ್ವಂತ ಕಟ್ಟಡವಿಲ್ಲದಿರುವ ಇಂಥ ಶಾಲೆಗಳು ಬೇಕಾದಷ್ಟಿವೆ, ಇವೊತ್ತಿಗೂ ಕೂಡ ಆಟದ ಮೈದಾನವಿಲ್ಲ, ಆದರೆ ಇವೊತ್ತು ಅವರೆಲ್ಲಾ ಗ್ರ್ಯಾಂಟ್ ತೆಗೆದುಕೊಳ್ಳುತ್ತಿದ್ದಾರೆ. ತಾವು ಹೊಸದಾಗಿ ಈಗ ಗ್ರ್ಯಾಂಟ್ ಕೊಡಬೇಕಾದರೆ ಆಟದ ಮೈದಾನವಿರಬೇಕು, ಸ್ವಂತ ಕಟ್ಟಡ ಇರಬೇಕು ಹಾಗೂ ಇನ್ನೂ ಇತರ ಅನುಕೂಲಗಳಿರಬೇಕು ಎಂದು ಷರತ್ತನ್ನು ಹಾಕುತ್ತೀರಿ. ದಯಮಾಡಿ ಇದರ ಬಗ್ಗೆ ಪೂರ್ಣವಾಗಿ ಪರಿಶೀಲನೆ ಮಾಡಿ ಕಡ್ಡಾಯವಾಗಿ ಅನುದಾನವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಇವೊತ್ತು ತಾವು ಖಾಸಗಿ ಶಾಲೆಗಳಿಗೆ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಅಪ್ರೂವ್ ಮಾಡುತ್ತಿದ್ದೀರಿ. ಅದರ ಬದಲು ಇವೊತ್ತು ಏನು ಅನುದಾನರಹಿತ ಶಾಲೆಗಳಿಗೆ ಅವುಗಳಿಗೆ ಅನುದಾನವನ್ನು ಕೊಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಸಚಿವರು ಮಾಡಬೇಕು. ಇಂಥ ಶಾಲೆಗಳು ರಾಜ್ಯಾದ್ಯಂತ ಹೆಚ್ಚೇನೂ ಇಲ್ಲ, ಇದ್ದರೆ ಸುಮಾರು 200 ಶಾಲೆಗಳಿರಬಹುದು. ಈ ಶಾಲೆಗಳಿಗೆ ಅನುದಾನವನ್ನು ಕೊಡುವುದಕ್ಕೆ ಹೆಚ್ಚು ಖರ್ಚೇನೂ ಬರುವುದಿಲ್ಲ. ನಾವು ಅನೇಕ ಕಾರಣಗಳಿಗಾಗಿ ಇವೊತ್ತು ಬಟ್ಟೆಯನ್ನೂ, ಅಕ್ಕಿಯನ್ನು ಮಕ್ಕಳಿಗೆ ಕೊಡುತ್ತಿದ್ದೇವೆ, ದಯಮಾಡಿ ನಾನು ವಿನಂತಿ ಮಾಡುತ್ತಿದ್ದೇನೆ, ಅನುತ್ಪಾದಕ ಕಾರಣಗಳಿಗಾಗಿ ಮಕ್ಕಳಿಗಾಗಿ ನಾವು ಏನು ಕೊಡುತ್ತಿದ್ದೇವೆ ಅವೆಲ್ಲವುಗಳನ್ನೂ ನಿಲ್ಲಿಸಿಬಿಡಿ ಮತ್ತು ಶಿಕ್ಷಣಕ್ಕೆ ಅನುದಾನ ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳಬಯಸುತ್ತೇನೆ. ನಾವು ಇವೊತ್ತು ಶಿಕ್ಷಣ ಇಲಾಖೆ ಬಗ್ಗೆ ಅನೇಕ ವಿಚಾರಗಳನ್ನು ಮಾತನಾಡಿದ್ದೇವೆ. ಇನ್ನು ಕಛೇರಿಗಳಿಗೆ

ಸಂಬಂಧಪಟ್ಟ ಹಾಗೆ ಹೇಳಬೇಕೆಂದರೆ ನೀವು ಎ.ಇ.ಒ. ಮತ್ತು ಬಿ.ಇ.ಒ. ಎಂಬ ಎರಡು ಹುದ್ದೆಗಳನ್ನು ತಾವು ಸೃಷ್ಟಿಸಿದ್ದೀರಿ. ದಯಮಾಡಿ ನೀವು ಅವೆರಡರಲ್ಲಿ ಒಂದನ್ನು ಇಟ್ಟುಕೊಳ್ಳಿ. ಇದರಲ್ಲಿ ಎ.ಇ.ಒ. ಇಡಿ ಅಥವಾ ಬಿ.ಇ.ಒ. ಇಡಿ. ನನ್ನ ಪ್ರಕಾರ ಬಿ.ಇ.ಒ. ಇರಲಿ, ಏಕೆಂದರೆ ಕ್ಷೇತ್ರದ ವಿದ್ಯಾಧಿಕಾರಿಯಾಗಿ ಇವರು ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಾರೆ. ಎ.ಇ.ಒ. ಪೋಸ್ಟ್‌ನಲ್ಲಿ ಈಗ ಏನು ತಾವು ಹೆಡ್ ಮಾಸ್ಟ್‌ರನ್ನು ಮಾಡಿದ್ದೀರಿ, ಅದೇ ಸಾಕು. ಹೈಸ್ಕೂಲ್‌ಗಳಲ್ಲಿ ಆಗಲೇ ಸಾಕಷ್ಟು ಈ ಪೋಸ್ಟ್‌ಗಳು ಖಾಲಿ ಇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ಟಿ.ಸಿ.ಹೆಚ್. ಬಗ್ಗೆ ಹೇಳಬೇಕೆಂದರೆ ಇಂದು ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ತಾವು 40 ಮಕ್ಕಳಿಗೆ ತರಬೇತಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಆ 40 ಮಕ್ಕಳಿಗೆ ಸುಮಾರು 13 ರಿಂದ 14 ಉಪನ್ಯಾಸಕರುಗಳು ಇದ್ದಾರೆ. ಕೇವಲ 40 ಮಕ್ಕಳಿಗೆ 14 ಉಪನ್ಯಾಸಕರುಗಳು ಇರುವುದರಿಂದ ತಾವು ದಯಮಾಡಿ ಇನ್ನೂ 40 ಮಕ್ಕಳನ್ನು ಹೆಚ್ಚಾಗಿ ಕೊಡಿ. ಮೂರ್‍ಮೂರು, ನಾಲ್ಕು ನಾಲ್ಕು ಮೆಥಡಾಲಜಿ ಸಬ್ಜೆಕ್ಟ್ ಇಟ್ಟುಕೊಂಡು ಉಪನ್ಯಾಸಕರುಗಳು ಪಾಠ ಮಾಡಬೇಕಾಗಿದೆ. ಇನ್ನೂ 40 ಜನರನ್ನು ಅಲ್ಲಿಗೆ ಕೊಡಿ. ಆಗ ಇವರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ಎಲ್ಲಕ್ಕಿಂತ ಹೆಚ್ಚಾಗಿ ಹೇಳಬೇಕೆಂದರೆ ಕಾಲೇಜು ಶಿಕ್ಷಣದಲ್ಲಿ ಸಾಕಷ್ಟು ಉಪನ್ಯಾಸಕರುಗಳು ಇಲ್ಲ. ಇವೊತ್ತು. ನನ್ನ ಕ್ಷೇತ್ರವಾದ ಬೇಲೂರಿನ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರದ ಮೂರು ಉಪನ್ಯಾಸಕರ ಹುದ್ದೆ ಖಾಲಿ ಇದೆ, ಅದೇ ರೀತಿಯಲ್ಲಿ ಇಂಗ್ಲೀಷ್ ಉಪನ್ಯಾಸಕ ಹುದ್ದೆ 1, ಕನ್ನಡ ಉಪನ್ಯಾಸಕ ಹುದ್ದೆ 1, ಅರ್ಥಶಾಸ್ತ್ರ ಹುದ್ದೆ 1, ರಾಜ್ಯ ಶಾಸ್ತ್ರ ಉಪನ್ಯಾಸಕರ ಹುದ್ದೆ 1 ಖಾಲಿ ಇದೆ. ಈ ರೀತಿಯಲ್ಲಿ ಹಲವಾರು ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುಂಬತಕ್ಕಂಥ ಕೆಲಸವನ್ನು ಶೀಘ್ರವಾಗಿ ಸರ್ಕಾರ ಮಾಡಬೇಕು. ಇನ್ನು ಖಾಸಗಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ನೇಮಕಾತಿ ಮಾಡುವಾಗ ನೇಮಕಾತಿ ಮೀಸಲಾತಿಯನ್ನು ಬೇಕಂತಲೇ ಉಲ್ಲಂಘನೆ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ತೀವ್ರವಾಗಿ ಪರಿಗಣಿಸಿ ಅಂಥ ಶಾಲೆಗಳಿಗೆ ಅನುದಾನವನ್ನು ಕೊಡುವುದನ್ನು ಸರ್ಕಾರ ನಿಲ್ಲಿಸಬೇಕು. ನಾನು ಮತ್ತೊಮ್ಮೆ ಒತ್ತಾಯಪುರ್ವಕವಾಗಿ ಹೇಳುವುದೇನೆಂದರೆ ಅನುದಾನ ರಹಿತ ಶಾಲೆಗಳು ಏನಿವೆ ಅವುಗಳಿಗೆ ಅನುದಾನವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಕಾನೂನು ಸಚಿವರು ಮಾತನಾಡುತ್ತಾ ಕಾನೂನು ಕಾಲೇಜುಗಳಿಗೆ ಮತ್ತು ಐ.ಟಿ.ಐ. ಕಾಲೇಜುಗಳಿಗೆ ಅನುದಾನವನ್ನು ಕೊಡುತ್ತೇವೆ ಎಂದು ಹೇಳಿದ್ದನ್ನು ನಾನು ಕೇಳಿದೆ. ನಾನು ಕೇಳುತ್ತೇನೆ, ಕಾನೂನು ಶಿಕ್ಷಣಕ್ಕೆ ಏಕೆ ಅನುದಾನವನ್ನು ಕೊಡಬೇಕು? ಅಂಥ ಅರ್ಜೆಂಟ್ ಏನಿದೆ? ಕಾನೂನು ಶಿಕ್ಷಣ ಮೂಲ ಶಿಕ್ಷಣವಲ್ಲ. ಕಾನೂನು ಶಿಕ್ಷಣ ಕಡ್ಡಾಯ ಶಿಕ್ಷಣವಲ್ಲ. ಕಾನೂನು ಶಿಕ್ಷಣಕ್ಕೆ ಅನುದಾನವನ್ನು ಕೊಡತಕ್ಕಂಥ ತಮ್ಮ ತೀರ್ಮಾನ ಏನು ಇದೆ ಅದು ಸರಿಯಲ್ಲ. ದಯಮಾಡಿ ಅಂಥವುಗಳ ಬಗ್ಗೆ ತಾವು ಯೋಚನೆಯನ್ನು ಮಾಡಬೇಡಿ. ಮೂಲಭೂತ ಶಿಕ್ಷಣವಾದ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ತಾವು ಅನುದಾನವನ್ನು ಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕು. ತಾವು ಏನು ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಏನು ಕಮಿಟಿಯನ್ನು ಮಾಡಿದ್ದೀರಿ ಅದರ ಮೂಲಕ ಕೆಲಸವನ್ನು ತೀವ್ರವಾಗಿ ಮಾಡಿ ಅನುದಾನವನ್ನು ಕೊಡಬೇಕು ಮತ್ತು ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಶಿಕ್ಷಣದಲ್ಲಿ ಮಾಡಬೇಕೆಂದು ಹೇಳುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಗೌರವಾನ್ವಿತ ಉಪಾಧ್ಯಕ್ಷರೇ, ನಾವು ಸ್ವಾತಂತ್ರ್ಯವನ್ನು ಪಡೆದು ಐವತ್ತು ವಸಂತಗಳನ್ನು ಕಳೆಯುತ್ತಿದ್ದೇವೆ. ನಾವು ಇನ್ನೂ ಸ್ವಾತಂತ್ರ್ಯವನ್ನು ಪಡೆದಿಲ್ಲ. ಕಾರಣವೆಂದರೆ, ಇಂದು ದೇಶದಲ್ಲಿ ಹೆಚ್ಚುತ್ತಿರುವ ಅರಾಜಕತೆ, ದೇಶದಲ್ಲಿ ಹೆಚ್ಚುತ್ತಿರುವ ಅಸಮಾನತೆ, ದೇಶದಲ್ಲಿ ಹೆಚ್ಚುತ್ತಿರುವ ಅವಿದ್ಯಾವಂತರ ಹೆಚ್ಚಳಿಕೆ ಇನ್ನೂ ಕೂಡ ಈ ದೇಶದಲ್ಲಿ ಇರುವಾಗ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದು ತಪ್ಪು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ವಿದ್ಯೆ ಒಂದು ಗುಪ್ತವಾದಂಥ, ಸುಪ್ತವಾದಂಥ ನಿಧಿ. ಶಿಕ್ಷಣ ಮನುಷ್ಯನ ಬಾಳಿಗೆ ಒಂದು ಕೈಗನ್ನಡಿ ಇದ್ದಹಾಗೆ. ಬದುಕಿಗೆ ಒಂದು ಚೈತನ್ಯವನ್ನು ನೀಡತಕ್ಕಂಥ ಬಂಗಾರ. ಆದರೆ ಇಂದು ಶಿಕ್ಷಣ ಕೆಳಮಟ್ಟಕ್ಕೆ ಹೋಗಲು ಕಾರಣವೇನೆಂದರೆ ನಮ್ಮ ಸರ್ಕಾರದ ಅಂಧಶ್ರದ್ಧೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಶಿಕ್ಷಣದ ಮೌಲ್ಯಗಳು ಈಗ ಕುರುಡಾಗಿದೆ. ಕುರುಡನ ಮುಂದೆ ಒಬ್ಬ ಸುಂದರಿ ಬಂದು ನಾಟ್ಯವನ್ನು ಮಾಡಿದಾಗ ಕುರುಡ ಆ ಸುಂದರಿಯ ಹಾವಭಾವಗಳನ್ನು, ಅಂಗಾಂಗಳನ್ನು ನೋಡುವುದಕ್ಕೆ ಸಾಧ್ಯವಿಲ್ಲ. ನಿನ್ನೆ ಅಧ್ಯಕ್ಷರು ಮಾತನಾಡುತ್ತಾ ಶಿಕ್ಷಣದ ಬಗ್ಗೆ ನಗ್ನ ಎನ್ನುವ ಪದವನ್ನು ಹೇಳಿದರು, ಇನ್ನೂ ಕೂಡ ಶಿಕ್ಷಣ ನಗ್ನವಾಗಿಯೇ ಇದೆ. ಆದರೆ ಗೋವಿಂದೇಗೌಡರಂಥ ಪ್ರಾಮಾಣಿಕ ವ್ಯಕ್ತಿ ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣದ ಪಾರಮಾರ್ಥಕತೆಯನ್ನು ಅರ್ಥ ಮಾಡಿಕೊಂಡು ನಿಜವಾದಂಥ ಪ್ರಭುತ್ವತೆಯನ್ನು ಹಿಡಿದು ಕೆಲಸ ಮಾಡುತ್ತಿರುವುದರಿಂದ ಕೊಂಚ ಶಿಕ್ಷಣದ ಮಟ್ಟ ಏರುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳಿದರೆ ಏನೂ ತಪ್ಪಾಗಲಾರದು. ಇದು ಕೇವಲ ಹೊಗಳಿಕೆಯಲ್ಲ. ಬೇರೆ ಯಾರೇ ಆಗಿರಲಿ, ವ್ಯಕ್ತಿಯಲ್ಲಿರತಕ್ಕಂಥ ಶಕ್ತಿಯ ಬಗ್ಗೆ ಹೊಗಳಿದಾಗ ಆ ವ್ಯಕ್ತಿಯನ್ನು ಬೇರೆ ಪಕ್ಷದವರು ಎಂದು ಹೇಳುವುದಕ್ಕೆ ಬರುವುದಿಲ್ಲ. ಇವೊತ್ತು ಹಳ್ಳಿಯಲ್ಲಿ ನೇಮಕವಾದ ಉಪಾಧ್ಯಾಯರು ತಮ್ಮ ಮಕ್ಕಳನ್ನು ಸಿಟಿಯಲ್ಲಿ ಓದಿಸುವ ಸಲುವಾಗಿ ಹಳ್ಳಿಗೆ ಕೆಲಸಕ್ಕೆ ಒಂದು ತಾಸು, ಎರಡು ತಾಸು ನಿಧಾನವಾಗಿ ಶಾಲೆಗೆ ಹೋಗುತ್ತಾರೆ. ತಡವಾಗಿ ಹೋಗಿ ಏನೋ ಒಂದಷ್ಟು ಪಾಠವನ್ನು ಮಕ್ಕಳಿಗೆ ಹೇಳಬೇಕು ಎನ್ನುವ ಹಾಗೆ ಪಾಠ ಹೇಳಿ ಮಾನೀಟರ್‌ಗೆ ಮಕ್ಕಳನ್ನು ನೋಡಿಕೊಳ್ಳಲು ಹೇಳಿ ಈಚೆಗೆ ಬಂದು ಅವರು ಯಾವುದೋ ಮೋಜಿನಲ್ಲಿ ಉಳಿಯುವಂಥ ಕಾಲ ಸನ್ನಿಹಿತವಾಗಿದೆ. 'ಪ್ರಜ್ವಲಿತೋ ಜ್ಞಾನವಯಂ ಪ್ರದೀಪ' ಎಂದು ಸಂಸ್ಕೃತದಲ್ಲಿ ಹೇಳುತ್ತಾರೆ. ಜ್ಞಾನದ ಒಂದು ಹಣತೆಯಿಂದ ಸಾವಿರಾರುಜ್ಯೋತಿಗಳನ್ನು ಬೆಳಗಿಸುವ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕಾಗಿರತಕ್ಕಂಥ ಉಪಾಧ್ಯಾಯರು ಇಂದು ತಮ್ಮ ಜ್ಞಾನವನ್ನು ಉತ್ತುಂಗಕ್ಕೆ ಬೆಳೆಸಿಕೊಳ್ಳುವತ್ತ ಹೋಗುತ್ತಿಲ್ಲವೆನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇಂದು ವಿದ್ಯೆಯನ್ನು ಕೊಂಡುಕೊಳ್ಳುವಂಥ ಮಟ್ಟಕ್ಕೆ ಬರುತ್ತಿದೆ. ವಿದ್ಯೆಯನ್ನು ದುಡ್ಡು ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಆದರೆ ನಿಜವಾದ ವಿದ್ಯೆ ದುಡ್ಡನ್ನು ಕೊಟ್ಟರೆ ಸಿಗುವುದಿಲ್ಲ. ವಿದ್ಯೆ ತಾನಾಗಿಯೇ ಬರಬೇಕು. ಒಬ್ಬ ಉಪಾಧ್ಯಾಯ ತನ್ನ ಮೂರು ಜನ ಶಿಷ್ಯರನ್ನು ಕರೆದು ಅವರಿಗೆ ವಿದ್ಯಾಬುದ್ಧಿಯನ್ನು ಕೊಂಡುಕೊಂಡು ಬನ್ನಿ ಎಂದು ಹೇಳಿದರಂತೆ. ಆಗ ಮೊದಲನೇ ಶಿಷ್ಯ ಒಂದು ಲಕ್ಷ ರೂ.ಗಳನ್ನು ಕೊಟ್ಟರೆ ಯುನಿವರ್ಸಿಟಿಯವರು ಎಷ್ಟು ಬೇಕಾದರೂ ಡಿಗ್ರಿಯನ್ನು ಕೊಡುತ್ತಾರೆ ಎಂದನಂತೆ. ಎರಡನೇ ಶಿಷ್ಯ ಇನ್ನೂ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರೆ ದೊಡ್ಡ ಡಿಗ್ರಿಯನ್ನೇ ತರುತ್ತೇನೆ ಎಂದನಂತೆ. ಆದರೆ ಮೂರನೇ ಶಿಷ್ಯ, ಸ್ವಾಮಿ ವಿದ್ಯೆ ಹಾಗೆ

ಬರುವುದಿಲ್ಲ, ಆದರೂ ಕೂಡ ವಿದ್ಯೆಯನ್ನು ಕೊಂಡುಕೊಂಡು ಬರಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆಯಾದ ಕಾರಣ ಆ ಜ್ಞಾನ ಎಲ್ಲಿದೆ ಎಂಬುದನ್ನು ಕಂಡುಹಿಡಿಯಲು ನನಗೆ 90 ದಿನಗಳ ಕಾಲಾವಕಾಶ ಕೊಡಿ ಎಂದು ಹೇಳಿದ. ಈ ರೀತಿ 90 ದಿನಗಳ ಕಾಲಾವಕಾಶ ಪಡೆದು ಒಬ್ಬರ ಫಾರ್ಮ್‌ಗೆ ಹೋಗಿ ಮೂರು ಕುಂಬಳಕಾಯಿ ಬೀಜ ತಂದು ಮೂರು ಗುಳಿ ಮಾಡಿ ಇಟ್ಟ. ಅದು ಚೆನ್ನಾಗಿ ಗಿಡವಾಗಿ ಬೆಳೆದು, ಬಳ್ಳಿಯಾಗಿ ಹಬ್ಬಿ, ಹೂ ಬಂದು ಕಾಯಿ ಕಚ್ಚಿತು. ಆ ಕಾಯಿಯನ್ನು ತಳ ದೊಡ್ಡದಾಗಿರತಕ್ಕಂಥ ಮತ್ತು ಬಾಯಿ ಚಿಕ್ಕದಾಗಿರತಕ್ಕಂಥ ಮಡಕೆಯಲ್ಲಿ ಹಾಕಿ 90 ದಿವಸನಾಗಳಾದ ಮೇಲೆ ಮೂರು ಕುಂಬಳಕಾಯಿಯನ್ನು ಗೋವಿಂದೇಗೌಡರಿಗೆ ಕೊಟ್ಟ. ಆಗ ಗೋವಿಂದೇಗೌಡರು ಎಲ್ಲಯ್ಯಾ ಬುದ್ಧಿ ಎಂದಾಗ, ಆತ ಇಷ್ಟು ದೊಡ್ಡ ಕುಂಬಳ ಕಾಯಿಯ ರೀತಿಯಲ್ಲಿ ಬುದ್ಧಿ ಆ ಮಡಕೆಯಲ್ಲಿದೆ, ಈ ಬುದ್ಧಿಯನ್ನು ಕಲಿಸತಕ್ಕಂಥ ಪ್ರಾಮಾಣಿಕ ಕೆಲಸವನ್ನು ಗೋವಿಂದೇಗೌಡರು ಮಾಡುತ್ತಿದ್ದೀರಿ. ನೀವು ಅದೇ ರೀತಿಯಲ್ಲಿ ಕೆಲಸವನ್ನು ಮುಂದೆಯೂ ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಭೆಯಲ್ಲಿ ಹೇಳುತ್ತೇನೆ. ಇವೊತ್ತು ವಿದ್ಯೆ ವಿನಾಶದ ಮಟ್ಟಕ್ಕೆ ಹೋಗಲು ಕಾರಣ ಗುರು ಶಿಷ್ಯರ ಸಂಬಂಧ ಸರಿ ಇಲ್ಲದಿರುವುದೂ ಕೂಡ ಕಾರಣ. ಗುರು ಶಿಷ್ಯರಲ್ಲಿ ಸಂಬಂಧ ಕಡಿದು ಹೋಗುತ್ತಿದೆ. ಕಾರಣ, ಆಧುನಿಕತೆಯ ಅಮಲಿನಲ್ಲಿ ವಿದ್ಯಾರ್ಥಿಗಳು ಕಲಿಯಬಾರದಾಗಿರತಕ್ಕಂಥ ಚಟಗಳನ್ನು ಕಲಿತು ಉಪಾಧ್ಯಾಯರ ಮೇಲೆ ಹಲ್ಲೆ ಮಾಡತಕ್ಕಂಥ ಕಾಲ ಬಂದಿದೆ. ಇದರಲ್ಲಿ ವಿದ್ಯಾರ್ಥಿಗಳ ಮಹತ್ವವೂ ಇದೆ. ಹಿಂದೆ ಏನು ಹೇಳುತ್ತಿದ್ದರೆಂದರೆ "ಕಲಿಯುಗದಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸದೊಡಾಗೇ ಮಹಾ ಪ್ರಸಾದವೆಂದನಯ್ಯ, ತ್ರೇತಾಯುಗದಲಿ ಶ್ರೀಗುರು ಶಿಷ್ಯಂಗೆ ಬಯ್ದು ಬುದ್ಧಿಯ ಕಲಿಸದೊಡಾಗೇ ಮಹಾಪ್ರಸಾದವೆಂದನಯ್ಯ" ಎಂದು ಇದೆ. ಆದರೆ ಇಂದು ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಕೈ ಮುಗಿದು ಪಾಠ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿರತಕ್ಕಂಥ ಈ ಕಾಲದಲ್ಲಿ ಗುರು ಶಿಷ್ಯರ ಸಂಬಂಧವನ್ನು ಸರಿಪಡಿಸತಕ್ಕಂಥ ಪ್ರಾಮಾಣಿಕವಾದ ರೀತಿಯಲ್ಲಿ ಕೆಲಸವನ್ನು ಮಾಡಿದಾಗ ಮಾತ್ರ ಈ ವಿದ್ಯೆ ಪ್ರಪಂಚಕ್ಕೆ ಮೆರಗನ್ನು ಕೊಟ್ಟ ಹಾಗೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಹೊಸದಾಗಿ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಅದು ಸೋಮಶೇಖರ್‌ರವರ ಕೃಪಾಕಟಾಕ್ಷದಿಂದ ಮೈಸೂರಿನ ಕುವೆಂಪು ನಗರಕ್ಕೆ ಒಂದು ಪ್ರಥಮ ದರ್ಜೆಯ ಕಾಲೇಜನ್ನು ಕೊಟ್ಟಿದ್ದಾರೆ. ಅದು ಕಾಲೇಜು ಕಾಲೇಜಾಗಿ ಇದೆಯೇ ವಿನಹ ಅದಕ್ಕೆ ಪ್ರಾಧ್ಯಾಪಕರಿಲ್ಲ, ಪೀಠೋಪಕರಣಗಳು ಇಲ್ಲ, ಯಾವುದೇ ಉಪಕರಣಗಳು ಇಲ್ಲ. ನನ್ನನ್ನು ಬೆಟರ್‌ಮೆಂಟ್ ಕಮಿಟಿಯ ಅಧ್ಯಕ್ಷರನ್ನಾಗಿ ಮಾಡಿ ದಾಸಯ್ಯನ ಕೆಲಸವನ್ನು ಮಾಡಲು ಹಚ್ಚಿರುವುದು ಮಹಾ ಪಾಪದ ಕೆಲಸ. ಇವತ್ತು ರಾಜಕಾರಣದಿಂದ ವಿದ್ಯಾ ಕ್ಷೇತ್ರ ಹಾಳಾಗಿ ಹೋಗುತ್ತಿದೆ. ಅಧ್ಯಾಪಕರನ್ನು ಹಾಳುಮಾಡುತ್ತಿದ್ದಾರೆ, ಅಧ್ಯಾಪಕರು ಚೆನ್ನಾಗಿ ಇದ್ದರೆ ಅವರು ಚೆನ್ನಾಗಿ ಪಾಠ ಮಾಡುತ್ತಿದ್ದರು. ಅದನ್ನು ಮಾಡುವುದು ಸರ್ಕಾರದ ಕೆಲಸ. ಈ ದೇಶದಲ್ಲಿ ಮೂರು ಜನರು ಪ್ರಾಮಾಣಿಕವಾಗಿ ಕೆಲಸವನ್ನು ಮಾಡಬೇಕು. ಒಬ್ಬ ಉಪಾಧ್ಯಾಯ, ಎರಡನೆಯವನು ಅಧಿಕಾರಿ, ಮೂರನೆಯವನು ರಾಜಕಾರಣಿ. ಆದರೆ ಈ ಮೂರು ಜನರು ಪ್ರಾಮಾಣಿಕವಾಗಿ ಖಂಡಿತವಾಗಿ ಕೆಲಸ ಮಾಡುತ್ತಾ ಇಲ್ಲ. ಉಪಾಧ್ಯಾಯರು ಮಾನಿಟರ್ ಮೇಲೆ ಮಕ್ಕಳನ್ನು ಬಿಟ್ಟು ಮೋಜಿನಲ್ಲಿ

ಇರುತ್ತಾನೆ. ರಾಜಕಾರಿಣಿ ಐದು ವರ್ಷ ಬಂದಷ್ಟೇ ಗುಂಜಪ್ಪ ಎಂದು ಗುಂಜತ್ತಾ ಇರುತ್ತಾನೆ. ಇನ್ನು 15-20 ಸಾವಿರ ರೂ. ಸಂಬಳವನ್ನು ತೆಗೆದುಕೊಳ್ಳುವ ಅಧಿಕಾರಿ 11 ಗಂಟೆಗೆ ಬಂದು 11-20ಕ್ಕೆ ನಾಲ್ಕು ಕಡತಗಳನ್ನು ವಿಲೇವಾರಿ ಮಾಡಿ ಹೆಂಡತಿ ಜೊತೆಯಲ್ಲಿ ಒಂದು ಕ್ಲಬ್‌ನಲ್ಲಿ ಇರುತ್ತಾರೆ. ಹೀಗಾಗಿ ಶಿಕ್ಷಣದ ಮಟ್ಟ ಕುಸಿಯುತ್ತಾ ಇದೆ. ಕುಸಿದು ಹೋಗುತ್ತಿದೆ. ಈ ಮಟ್ಟದಲ್ಲಿ ನಮ್ಮ ದೇಶದ ಶಿಕ್ಷಣ ಕುಸಿಯುತ್ತಾ ಇದೆ. ಇದನ್ನು ಸರಿಮಾಡಬೇಕಾದರೆ ನಮ್ಮಲ್ಲಿ ಇರತಕ್ಕಂತಹ ಧ್ಯೆಯೋದ್ದೇಶಗಳು, ಮೂಲಭೂತವಾಗಿ ವಿದ್ಯೆಯನ್ನು ಕೊಡತಕ್ಕಂತಹ ನಿಧಿಯ ಕಡೆಗೆ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಬೇಕು. ಆ ಕೆಲಸವನ್ನು ನಾವು ಮಾಡುತ್ತಾ ಇಲ್ಲ. ನಮ್ಮಸರ್ಕಾರದವರು ದಾಂಧಲೆಯನ್ನು ಮಾಡುತ್ತಿದ್ದಾರೆ. ಉಪಾಧ್ಯಾಯರ ವರ್ಗಾವಣೆ ಇವತ್ತಿಗೂ ನಡೆಯುತ್ತಾ ಇದೆ. ಒಬ್ಬ ಉಪಾಧ್ಯಾಯನನ್ನು ವರ್ಗಾವಣೆ ಮಾಡುವುದು ಅವನ್ನು ಏನಾದರೂ ಕೊಟ್ಟರೆ ಮತ್ತೆ ಬೇರೆ ವರ್ಗಾವಣೆ ಮಾಡುವುದು. ಇದನ್ನು ಗೋವಿಂದೆಗೌಡರು ಮಾಡುತ್ತಿದ್ದಾರೆ ಬೇರೆ ಯಾರೇ ಮಾಡುತ್ತಿದ್ದಾರೆ ಎಂದು ನಾನು ಹೇಳುವುದಿಲ್ಲ. ಇದನ್ನು ಕೆಲವು ಕಡೆ ಮಧ್ಯವರ್ತಿಗಳು ಮಾಡುತ್ತಿದ್ದಾರೆ. ಇಂಥ ಒಂದು ಭ್ರಷ್ಟಾಚಾರದ ವ್ಯವಸ್ಥೆಯಲ್ಲಿ ಇವತ್ತಿನದಿನ ಈ ಸಮಾಜ ವಿದ್ಯೆ ಇಲ್ಲದೆ ಜನರನ್ನು ಅಂಧಕಾರದಲ್ಲಿ ಮುಳುಗಿಸುತ್ತಿದ್ದಾರೆ. ಈ ಅಂಧಕಾರದಲ್ಲಿ ಮುಳಗಿರತಕ್ಕವರಿಗೆ ವಿದ್ಯೆಯನ್ನು ಕೊಡತಕ್ಕ ದಿಕ್ಕಿನಲ್ಲಿ ಪಾಠಶಾಲೆಗಳಲ್ಲಿ ಸರಿಯಾಗಿ ಶಿಕ್ಷಕರನ್ನು ನೇಮಕ ಮಾಡಬೇಕು. ಶಿಕ್ಷಕರು ಎಂ.ಎ. ಓದಿದ ತಕ್ಷಣ ಅವರಿಗೆ ನೇರವಾಗಿ ಕೆಪಿಸಿ ಮುಖಾಂತರ ಹುದ್ದೆ ಕೊಡುತ್ತಾರೆ. ಆದರೆ ಇವರಿಗೆ ತರಬೇತಿಯನ್ನು ನೀಡಬೇಕು. ಇವತ್ತಿನದಿನ ಎಷ್ಟು ಶಿಕ್ಷಕರಿಗೆ ಕನ್ನಡ ವಿಷಯದ ಬಗ್ಗೆ ಗೊತ್ತಿಲ್ಲ. ಕನ್ನಡ ಬರೆಯಲು ಬರುವುದಿಲ್ಲ. ತನು ಕನ್ನಡ, ಮನ ಕನ್ನಡ, ನುಡಿ ಕನ್ನಡ ಕನ್ನಡಕ್ಕಾಗಿ ಕೈ ಎತ್ತಿದವನ ಕೈ ಕಲ್ಪವೃಕ್ಷವಾಗುವುದು ಎಂದು ಕುವೆಂಪು ಅವರು ತಮದ್ದೇಆದ ಧಾಟಿಯಲ್ಲಿ ಮೆರಗನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನದಿನ ಕನ್ನಡದ ಕೊಲೆಯಾಗುತ್ತಿದೆ. ಇವತ್ತಿನ ಕನ್ನಡ ಉಪಾಧ್ಯಾಯರನ್ನು ಕರೆಯಿರಿ ಯಾರು ಸರಿಯಾಗಿ ಕನ್ನಡವನ್ನು ಬರೆಯುತ್ತಾರೆ ನೋಡಿ. ಒತ್ತಕ್ಷರ ಬರುವುದಿಲ್ಲ, ಸರಿಯಾಗಿ ಅಕ್ಷರದ ಜ್ಞಾನ ಇಲ್ಲ, ಆ ಜ್ಞಾನದ ಸುಧಾರಣೆ ಆಗಬೇಕಾದರೆ, ಹಳೆಯದರಲ್ಲಿ ಹೊಸದನ್ನು ಕಾಣಬೇಕು. ಹಿಂದಿನ ಕಾಲದಲ್ಲಿ ಎಷ್ಟು ಚೆನ್ನಾಗಿತ್ತು. ದೊಡ್ಡ ದೊಡ್ಡ ವ್ಯಕ್ತಿಗಳು ರಾಷ್ಟ್ರಕ್ಕಾಗಿ ತಮ್ಮ ತನು,ಮನವನ್ನು ಅರ್ಪಿಸಿಕೊಂಡವರನ್ನು ಇವತ್ತು ನಾವು ಕೊಂಡಾಡುತ್ತಿದ್ದೇವೆ. ಆಗ ಗೋ ಕಥೆ ಇತ್ತು, ನಳ ಚರಿತ್ರೆ ಇತ್ತು, ಇವು ಎಲ್ಲಾ ಎಂಥ ನೀತಿವಂಥ ಕಥೆಗಳು. ಈಗ ಬರೀ ಅನೀತಿಯನ್ನು ತುಂಬಿ, ಈ ರಾಷ್ಟ್ರದಲ್ಲಿ ಇರುವಂತಹ ಮಕ್ಕಳ ತಲೆಯಲ್ಲಿ ಕೇವಲ ಭ್ರಮನಿರಶನವಾಗಿರತಕ್ಕಂತಹ ಆಧುನಿಕತೆಯ ಅಮಲಿನ ರಾಸಾಯನ ನೀಡುತ್ತಿರುವುದು ತಪ್ಪು. ಇವತ್ತು ಟಿವಿ ಮಾಧ್ಯಮದಿಂದ ನಿಜವಾಗಿ ಮಕ್ಕಳ ವಿದ್ಯಾಭ್ಯಾಸ ಹಾಳಾಗುತ್ತಿದೆ. ಇದು ಮಕ್ಕಳಿಗೆ ಮಾರಕವಾಗಿದೆ, ಅದರಲ್ಲಿ ಬರತಕ್ಕಂತಹ ನಗ್ನ ಚಿತ್ರಗಳು, ಅಲ್ಲಿ ಆಡತಕ್ಕಂತಹ ಅಶ್ಲೀಲ ಪದಗಳು, ಅವ್ಯಾಚ ನುಡಿಗಳು, ರಾಜಕಾರಣಿಗಳನ್ನು ಅದರಲ್ಲಿ ಬಳಸಿಕೊಳ್ಳುವುದು, ಪೋಲಿಸ್‌ರನ್ನು ಬಳಸಿಕೊಳ್ಳುವುದು, ಇದು ನಿಜವಾಗಿ ಸಾಮಾಜಿಕ ಪಿಡಗು ಎನ್ನುವಂತಹ ಮಾತನ್ನು ಹೇಳುತ್ತೇನೆ. ಖಾಸಗಿ ಶಾಲೆಗಳನ್ನು ನೂರಕ್ಕೆ ನೂರರಷ್ಟು ತೆಗೆಯುತ್ತಿದ್ದೀರಿ, ಆದರೆ ಸರ್ಕಾರಿ ಶಾಲೆಗಳನ್ನು ಏಕೆ ತೆಗೆಯುತ್ತಾ ಇಲ್ಲ. ಅಲ್ಲಿ ಉಪಾಧ್ಯಾಯ ಮತ್ತು ಅಧ್ಯಾಪಕರಿಗೆ ಕೊಡತಕ್ಕ ವೇತನ, ಬಡ್ತಿ

ಇವುಗಳನ್ನು ಸರಿಯಾಗಿ ಸಮರ್ಪಕವಾಗಿ ಕೊಡುತ್ತಾ ಇಲ್ಲ. ಇವತ್ತು ದೇಶದಲ್ಲಿ ಒಳ್ಳೆಯ ಕ್ಷೇತ್ರ ಎಂದರೆ ವಿದ್ಯಾ ಕ್ಷೇತ್ರ. ಆ ವಿದ್ಯಾಕ್ಷೇತ್ರದ ಅಧಿದೇವತೆ ಆಗಿರತಕ್ಕಂತಹ ವಿದ್ಯಾ ಮಹಾತಾಯಿಗೆ ನಾವು ನಮಸ್ಕಾರ ಮಾಡಬೇಕು. ಆ ತಾಯಿ ಅವರಲ್ಲಿ ಜ್ಞಾನದ ಭುಗ್ಗೆಯನ್ನು ಇರಿಸಿದ್ದಾಳೆ, ಕುಡಿದರೆ ಜ್ಞಾನದ ಭುಗ್ಗೆಯನ್ನು ಕಂಠಪೂರ್ತಿ ಕುಡಿ ಹೋಗಿ ಮಧ್ಯವನ್ನು ಕುಡಿ ಎಂದು ಹೇಳಬಾರದು. ಆ ಒಂದು ಕೆಟ್ಟ ಪ್ರವೃತ್ತಿ ಇವತ್ತು ಬಂದು ಬಿಟ್ಟಿದೆ. ಮಕ್ಕಳಿಗೆ ಮಾರಕವಾಗುತ್ತಾ ಇದೆ. ಇವತ್ತಿನ ಪಠ್ಯಪುಸ್ತಕಗಳಲ್ಲಿ ಹಿಂದಿನ ಸಂಸ್ಕೃತಿಯನ್ನು ತಿಳಿಸತಕ್ಕದ್ದು ಯಾವುದಾದರೂ ಇದೆಯಾ ನೋಡಿ, ಯಾವುದೂ ಇಲ್ಲ. ಧರ್ಮದ ಅರಿವು, ಸಂಸ್ಕೃತಿಯ ಅರಿವು, ವ್ಯವಹಾರವೆ ಜೀವನದ ಜೀವನಾಡಿಯಾಗಿ ನಿಂತಾಗ ಮಾನವನ ಜೀವನ ಶೂನ್ಯ ಎನ್ನತಕ್ಕಂತಹ ಮಾತನ್ನು ಪುರಾಣಗಳು ಹೇಳುತ್ತವೆ. ಕಥೆಗಳು ಹೇಳುತ್ತವೆ, ಆದರೆ ಇವತ್ತು ಪುರಾಣ ಪ್ರಸಿದ್ಧವಾಗಿರತಕ್ಕ ನಮ್ಮ ಸಂಸ್ಕೃತಿ ಮತ್ತು ಶಿಕ್ಷಣ ಶಿಕ್ಷೆಯಲ್ಲಿ ಮುಳಗುತ್ತಾ ಇದೆ. ಆ ಶಿಕ್ಷಣ ಒಂದೇ ಇವತ್ತಿನ ಮನುಷ್ಯನ ಜೀವನದ ಬಾಳು ದೀಪ. ಶಿಕ್ಷಣ ಇಲ್ಲದವನ ಬದುಕು ಮರಳುಗಾಡಿನಲ್ಲಿ ಮನೆ ಕಟ್ಟಿದಹಾಗೆ. ಗೋವಿಂದೇಗೌಡರೇ, ನಿಮಗೆ ಯಾರೇ ಎಷ್ಟೆ ಟೀಕೆ ಮಾಡಲಿ ನೀವು ಹೆದರಬೇಡಿ, ನೀವು ಮಾಡುತ್ತಿರುವ ಕೆಲಸ ಒಳ್ಳೆಯದಿದೆ, ಆನೆಯ ಮೇಲೆ ಹೋದ ಶ್ವಾನ ಕಚ್ಚಬಲ್ಲದೆ ನಮ್ಮ ಕೂಡಲ ಸಂಗನೊಳಹೊಕ್ಕ" ಎಂದು ಬಸವಣ್ಣನವರು ಹೇಳಿದ್ದಾರೆ. ಅದಕ್ಕಾಗಿ ನಿಮಗೆ ಹೆದರಿಕೆ ಬೇಕಾಗಿಲ್ಲ, ನೀವು ಈಗ ಶಿಕ್ಷಣ ಕ್ಷೇತ್ರದಲ್ಲಿ ಹಿಡಿದಿರುವ ತುಕ್ಕನ್ನು ಸಾಣೆ ಹಿಡಿದು ಸರಿ ಮಾಡುವ ದಿಕ್ಕಿನಲ್ಲಿ ಹೋಗಬೇಕು. ಆಗಮಾತ್ರ ವಿದ್ಯೆಗೆ ಬೆಲೆ ಬರುತ್ತದೆ. ನೀವು ಹಾಲು ಕೊಡಬೇಡಿ ಆಲ್ಕೋಹಾಲ್‌ನ್ನೂ ಕೊಡಬೇಡಿ, ಆದರೆ ಸಮಾಜಕ್ಕೆ ವಿದ್ಯೆಯನ್ನು ಕೊಡಿ. ಸಮಾಜಕ್ಕೆ ಬೇಕಾಗಿರತಕ್ಕದ್ದು ತಾಯಿ ತನ್ನ ಮಗನನ್ನು ಹಾಲು ಕುಡಿಸಿ ಬೆಳೆಸಿರುತ್ತಾಳೆ, ಆದರೆ ಕೊಡತಕ್ಕ ಶಿಕ್ಷಣವನ್ನು ಕೊಡುವಾಗ, ಎಷ್ಟೋ ಕಡು-ಬಡವರಿಗೆ ಶಿಕ್ಷಣವನ್ನು ಕೊಡಿಸಲು ಆಗುವುದಿಲ್ಲ. ತನ್ನ ಮಕ್ಕಳ ಫೀಸ್ ಕಟ್ಟಬೇಕಾದರೆ ಬೇರೆಯವರ ಹತ್ತಿರ ಗೋಗರೆಯುತ್ತಾರೆ. ನಮ್ಮನ್ನು ಬಂದು ಕೇಳುತ್ತಾರೆ, ನೋಡಮ್ಮ ನಾನು ಶಾಸಕ, ಶೋಷಕನಲ್ಲ ನನ್ನ ಹತ್ತಿರ ದುಡ್ಡಿಲ್ಲ, ಸರ್ಕಾರ ನನಗೆ ಏಳೂವರೆ ಸಾವಿರ ಮಾತ್ರ ಕೊಡುತ್ತದೆ. 2278ರೂ. ಕಾರಿಗೆ ಬೇಕಾಗುತ್ತದೆ. 4 ಅಥವಾ 5 ಸಾವಿರ ಟೆಲಿಫೋನ್ ಬಿಲ್ ಕಟ್ಟುತ್ತಿದ್ದೇನೆ ಎಂದು ಹೇಳುತ್ತೇನೆ. ಯಾವ ಮಟ್ಟದಲ್ಲಿ ಜನರನ್ನು ನಂಬಿಸುವುದು, ಪುಸ್ತಕ ತೆಗೆದುಕೊಳ್ಳಲು ದುಡ್ಡು ಕೊಡುತ್ತಾರೆ ಎಂದು ಹೇಳಿ ಕೇಳುತ್ತಾರೆ. ನಮ್ಮಲ್ಲಿ ಇದ್ದರೆ ಕೊಡಬಹುದು, ಸಹಾಯ ಮಾಡಬಹುದು. ಇಂದು ಸರ್ಕಾರ ಸರ್ವಸಮ್ಮತವಾಗಿ ದುಂದುವೆಚ್ಚವನ್ನು ಕಡಿಮೆ ಮಾಡಿ, ಇಲ್ಲಿ 45 ಜನರ ಮಂತ್ರಿಗಳುಇದ್ದಿರಿ, ಆ ಮಂತ್ರಿಗಳು ಖಾತೆಯನ್ನು ಸರಿಯಾಗಿ ಉಪಯೋಗಿಸಿ ಕೊಳ್ಳಿ. ಸುಮಾರು 5 ಲಕ್ಷ ರೂ. ಒಬ್ಬ ಮಂತ್ರಿಗೆ ಖರ್ಚಾಗುತ್ತದೆ. ಒಬ್ಬರಿಗೆ 5 ಲಕ್ಷ ಎಂದರೆ ಒಟ್ಟು ಎರಡೂವರೆ ಕೋಟಿ ರೂ. ರಾಜ್ಯದ ಬೊಕ್ಕಸದಿಂದ ಬರಿದಾಗುತ್ತಾ ಇದೆ. ಹಾಗೆ ಬೊಕ್ಕಸನ್ನು ಬರಿದು ಮಾಡ ಬೇಡಿ. ಆ ಬೊಕ್ಕಸದಿಂದ ಬರುವಂಥ ಹಣವನ್ನು ನಿಮ್ಮ ಸ್ವಾರ್ಥಕ್ಕೆ ಉಪಯೋಗಿಸದೆ, ಸಮಾಜಕ್ಕೆ 24 ಗಂಟೆಗಳಲ್ಲಿ 12 ಗಂಟೆಗಳ ಕಾಲ ಕಾಯಾ, ವಾಚಾ, ಮನಸಾ ದುಡಿಯಿರಿ, ಆಗ ಅದು ಸಮಾಜಕ್ಕೆ ಒಂದು ಮೆರಗನ್ನು ಕೊಡುತ್ತದೆ. "ಪದವಿ ಪೂರ್ವ ಪುಣ್ಯನಾಮ, ಪದವಿ, ಆಯಸ್ಸು, ವಿದ್ಯೆ, ಕೆಲಸ, ಅಧಿಕಾರ, ಹಣ ಎಲ್ಲವನ್ನೂ ತಾಯಿಯ ಗರ್ಭದಲ್ಲಿ ಇದ್ದಾಗಲೇ ಬರೆದಿರುತ್ತಾನೆ.

ಯಾರು ಏನು ಆಗಬೇಕು ಎನ್ನುವ ತೀರ್ಮಾನ ಅಲ್ಲೇ ಆಗಿರುತ್ತದೆ. ಡಿವಿಜಿಯವರು ಒಂದು ಮಾತನ್ನು ಹೇಳುತ್ತಾರೆ, ಅವರೆಷ್ಟು ಬಲವಂತರ್, ಇವರೆಷ್ಟು ಎದೆವಂತರ್, ಇವರೆಷ್ಟು ಧನವಂತರ್ ಎನ್ನುವ ಕೊರಗಿನಲ್ಲಿ ಭವಿಕ ನಿನಗೆ ಸ್ಥಿತಿಯು ತಿಳಿಯದೆ ಕೊರಗುವುದು ಶಿವನಿಗೆ ಎಷ್ಟು ಕೃತಜ್ಞತೆಯೋ ಮಂಕುತಿಮ್ಮ ಎಂದು. ನಮ್ಮ ಪಾಲಿಗೆ ಏನು ಬರುತ್ತದೆ ಅದರಲ್ಲಿ ತೃಪ್ತಿಪಡೆಯಬೇಕು. ಇವತ್ತು ಉಪಮುಖ್ಯಮಂತ್ರಿಗಳಾದ್ದವರು ಮುಖ್ಯಮಂತ್ರಿಗಳಾಗಲು ಬಯಸುತ್ತಾರೆ, ಮಂತ್ರಿಗಳಾದವರು ಇನ್ನೂ ಹೆಚ್ಚಿನ ಕ್ಯಾಬಿನೆಟ್ ದರ್ಜೆಗೆ ಹೋಗಬೇಕು ಎನ್ನುತ್ತಾರೆ, ಅದು ಮುಖ್ಯವಲ್ಲ ನಾವು ವಹಿಸಿಕೊಂಡ ಕಾರ್ಯಗಳಲ್ಲಿ ನಾವು ಪರಿಹಾರವನ್ನು ಕಂಡುಹಿಡಿದು ಪವಿತ್ರತೆಯನ್ನು ಕಾಪಾಡತಕ್ಕಂತಹ ದಿಕ್ಕಿಗೆ ಹೋದಾಗ ಮಾತ್ರ ಅದಕ್ಕೆ ಬೆಲೆ ಬರುತ್ತದೆ. ಶಿಕ್ಷಣ ಎನ್ನುವುದು ನಿಜವಾಗಿ ಉತ್ತಮವಾದಂತಹ ಕ್ಷೇತ್ರ, ಆ ಕ್ಷೇತ್ರದಲ್ಲಿ ಪವಿತ್ರವಾದ ಕೆಲಸವನ್ನು ಯಾರು ಮಾಡುತ್ತಿದ್ದಾರೆ, ಯಾವ ವ್ಯಕ್ತಿ ಆ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡುತ್ತಿದ್ದಾನೆ, ಆ ವ್ಯಕ್ತಿ ಸಮಾಜದ ಶಕ್ತಿಯಾಗುತ್ತಾನೆ. ನಮ್ಮನ್ನು ದನ ಕಾಯುವವನ ಮಟ್ಟಕ್ಕೆ ಶಾಸಕರನ್ನು ಕಳುಹಿಸುತ್ತಿದ್ದೀರಿ. ಹೋಗಿ ಭಿಕ್ಷೆ ಬೇಡಿದರೆ, ಹೋಗ್ರಿ ನಿಮಗೇನು ಕೆಲಸ, ಸರ್ಕಾರ ಕೊಡುತ್ತದೆ ಎಂದು ಹೇಳುತ್ತಾರೆ. ಇದು ಏಕೆ ಆಗಬೇಕು, ಅನುದಾನವನ್ನು ಇಷ್ಟು ಎಂದು ಕೊಡುತ್ತೇವಲ್ಲಾ ಅದನ್ನು ಕಾಲೇಜುಗಳಿಗೆ ಪಕ್ಷಪಾತ ಇಲ್ಲದೆ ಕೊಡಿ, ಪ್ರಾಮಾಣಿಕವಾಗಿ ಅಧ್ಯಾಪಕರನ್ನು ಸರಿಯಾಗಿ ನೋಡಿಕೊಳ್ಳಿ, ಉಪಾಧ್ಯಾಯರನ್ನು ಕಡೆಗಣಿಸಬೇಡಿ, ಇವತ್ತು ಇಲ್ಲಿ ನಾವು ಮಾತನಾಡತಕ್ಕಂತಹವರು ಯಾವುದೆ ಜನ್ಮದ ಪುಣ್ಯದ ಫಲದಿಂದ ಬಂದಿದ್ದೇವೆ. ಎಷ್ಟೋ ಜನ ಈ ಸದನಕ್ಕೆ ಬರಬೇಕು ಎಂದು ತಪಸ್ಸನ್ನು ಮಾಡಿ ತಪ್ಪಸ್ಸಿನಲ್ಲಿಯೇ ಕಳೆದು ಹೋದರು. ಆದರೆ ನಾವು ಪೂರ್ವ ಜನ್ಮದ ಪುಣ್ಯದ ಫಲದಿಂದ ಇಲ್ಲಿ ಬಂದು ಶಾಸಕರಾಗಿದ್ದೇವೆ. ನಾವು ಶಾಸಕರಾಗಬೇಕೇ ವಿನಃ ಶೋಷಕರಾಗಬಾರದು, ನಾವು ಎಲ್ಲರೂ ಸಮಾಜದ ಬಗ್ಗೆ ಕಳಕಳಿಯನ್ನು ಹೊಂದಬೇಕು. ಸಮಾಜಕ್ಕೆ ನಮ್ಮನ್ನೇ ನಾವು ಅರ್ಪಿಸಿಕೊಳ್ಳಬೇಕು. ಮನುಷ್ಯ ತನ್ನ ಶಕ್ತಿ ಮೀರಿ ಕೆಲಸವನ್ನು ಈ ಕ್ಷೇತ್ರದಲ್ಲಿ ಮಾಡಬೇಕು. ಈ ರಾಜಕೀಯ ಕ್ಷೇತ್ರದಲ್ಲಿ ಜನತೆಗೆ ಶಕ್ತಿ ಮೀರಿ ಕೆಲಸಮಾಡಿದ್ದರೆ ಮಾತ್ರ ಅದಕ್ಕೆ ಬೆಲೆ ಬರುತ್ತದೆ. ಆದ್ದರಿಂದ ನೀವು ಹೆದರಲೇ ಬೇಡಿ, ಬದಕೊಂದು ಕದನವೆದಂಜಿ ಬಿಟ್ಟೋಡುವನು ವಿಧಿಯ ಬಾಯಿಗೆ ಕವಳವಾಗದೆ ಉಳವನೆ, ಎದೆಯನ್ನು ದುಃಖವಾಗಿಸಿ ಮಂಕು ತಿಮ್ಮ ಎಂದು ಹೇಳಿದ್ದಾರೆ. ನೀವು ಜೀವನದಲ್ಲಿ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ ಗೋವಿಂದೇ ಗೌಡರೇ ಬದುಕು ಕದನವೇ ಅದಕ್ಕೆ ಹೆದರಬಾರದು ಅದೃಷ್ಟದ ಗದೆಯನ್ನು ಹಿಡಿದು, ಪ್ರಾಮಾಣಿಕತೆಯ ಚಾಟಿಯನ್ನು ಹಿಡಿದು ಮುಂದೆ ಹೊರಡಿ. ಈ ಸಮಾಜದಲ್ಲಿ ಇರತಕ್ಕ ಅಜ್ಞಾನದ ಪೊರೆಯನ್ನು ಕಳಚಿ ಆ ಜ್ಞಾನದ ಬುಗ್ಗೆಯನ್ನು ಹಚ್ಚಿ ಬಡಮಕ್ಕಳಿಗೆ ಜ್ಞಾನದ ಅಮೃತವನ್ನು ಕುಡಿಸಿ ಆಗ ಅದಕ್ಕೆ ಬೆಲೆ ಬರುತ್ತದೆ. ಸಾಕಷ್ಟು ಗಂಟೆಗಳ ಕಾಲ ಮಾತನಾಡಬಹುದು, ಆದರೆ ಮಾತಿಗಿಂತ ಕೃತಿ ಮೇಲು ಇವತ್ತು ಇಲ್ಲಿ ಎಲ್ಲಾ ಜನರು ನೋಡುತ್ತಿದ್ದಾರೆ ಇವರು ನೋಡಲಿ ಎಂದು ಮಾತನಾಡುವುದು ಅಲ್ಲ. ಆ ಮತದಾರರು ನಮ್ಮ ಮಾಲೀಕರು ನಮ್ಮನ್ನು ಏಕೆ ಕಳುಹಿಸಿದ್ದಾರೆ, ಯಾವ ರೀತಿಯ ಕೊಡುಗೆಯನ್ನು ನಾವು ಸಮಾಜಕ್ಕೆ ನೀಡಬೇಕೆಂದು ನಿರೀಕ್ಷಿಸುತ್ತಾರೆ, ಅದನ್ನು ನಾವು ಮಾಡಬೇಕು. ಈಗ ಬಿಜೆಪಿ ಪಕ್ಷದವರನ್ನು ಟೀಕೆ ಮಾಡಿದ್ದರೆ ಸರಿಯಲ್ಲ. ಬಿಜೆಪಿ ಯವರಲ್ಲಿ ಇರುವುದೇ ದಿವ್ಯಜ್ಞಾನ,

ಆ ದಿವ್ಯ ಜ್ಞಾನದ ಪರಂಪರೆಯಿಂದ ಇವತ್ತು ಬಿಜೆಪಿ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದೆ. ಅವರು ಎಷ್ಟು ಖಂಡ-ತುಂಡವಾಗಿ ನಿರ್ಗಳವಾಗಿ ಮಾತನಾಡಬೇಕಾದರೆ, ಅವರು ನಮ್ಮ ಸಂಸ್ಕೃತಿಯ ಧರ್ಮವನ್ನು ಅರ್ಥಮಾಡಿಕೊಂಡು, ಅರ್ಥೈಸಿಕೊಂಡು, ಅರ್ಥಪೂರ್ಣವಾಗಿ ಅದನ್ನು ತಿಳಿದುಕೊಂಡವರು ಎಂದರೆ ಬಿಜೆಪಿ ಯವರು ಆದ್ದರಿಂದ ಅದು ಒಂದು ನೆಲೆಯನ್ನು ಕಾಣುತ್ತಾ ಇದೆ.

12.40 ಪಿ.ಎಂ

ಅದರೆ ಬಿ.ಜೆ.ಪಿ. ಪಕ್ಷ ಅಧಿಕಾರಕ್ಕೆ ಬರುತ್ತದೆಯೇ, ಬಿಡುತ್ತದೆಯೇ ಎನ್ನುವ ಮಾತು ಬೇರೆ. ಗಂಟೆಗಟ್ಟಲೆ ಮಾತನಾಡುವುದು ಉಚಿತವಲ್ಲವಾದ ಕಾರಣ ನಾನು ಹೇಳುವುದು ಇಷ್ಟೆ, ಶಿಕ್ಷಣ ಕ್ಷೇತ್ರದಲ್ಲಿ ನೀವಿಬ್ಬರೂ ದಿಗ್ಗಜಗಳು. ನಿನ್ನೆ ಸೋಮಶೇಖರ್‌ರವರು ತಮ್ಮ ಪ್ರಾಮಾಣಿಕತೆಯನ್ನು ತೋಡಿಕೊಂಡರು. ಇಂದಿನ ದಿನಗಳಲ್ಲಿ ಏನೋ ಕಟ್ಟುಕಥೆಯನ್ನು ಕೆಲವರು ಕಟ್ಟಬಹುದು, ಆ ರೀತಿ ಆಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಆದರೆ ಅವರು ಸ್ಥೈರ್ಯವಾಗಿ ಹೇಳುತ್ತಾರಲ್ಲಾ, ನಾನು ಕಾಪಿ ಮಾಡುವುದಕ್ಕೆ ಹೋಗಿಲ್ಲ ಎಂದು ಹೇಳಿದ್ದಾರೆ ಅದು ನಿಜವಾಗಿಯೂ ಸಾಬೀತಾದರೆ ಮತ್ತು ಆ ದಿಸೆಯಲ್ಲಿ ಒಬ್ಬ ಹರಿಜನ ಮಂತ್ರಿಯಾಗಿ ನಿಜವಾಗಿ ನಿಷ್ಠಾವಂತನಾಗಿ ಪ್ರಾಮಾಣಿಕನಾಗಿ ಇದ್ದೇನೆ ಎಂದು ರುಜುವಾತು ಮಾಡಿದ್ದೇ ಆದರೆ ಆಗ ಅವರಿಗೆ ಮತ್ತಷ್ಟು ಮೆರಗು ಬರುತ್ತದೆ ಮತ್ತು ಆ ಜನಾಂಗಕ್ಕೆ ಅದು ಕಳಸಪ್ರಾಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ ಇದು ಮುಂದಿನ ಪೀಳಿಗೆಯವರ ಮೇಲೆ ಪರಿಣಾಮ ಬೀರತಕ್ಕಂಥದ್ದಾಗಿದೆ. ಅಪ್ಪ, ಒಂದು ವೇಳೆ ಕೆಟ್ಟದಾದ ಕಾರ್ಯ ಮಾಡಿದವನಾಗಿದ್ದರೆ ಮುಂದೆ ಮಗ ತಪ್ಪನ್ನು ಮಾಡಿದರೆ ಆಗ ಅವನನ್ನು ಪ್ರಶ್ನಿಸಿದರೆ ಅಪ್ಪನೇ ಕೆಟ್ಟ ಕಾರ್ಯ ಮಾಡಿಲ್ಲವೇ ಎಂದಂತಾಗುತ್ತದೆ. ಆ ರೀತಿ ಆಗಬಾರದು ನಮ್ಮಲ್ಲಿ ಈ ಮನೆಗೆ ಹಿರಿತನವಿದೆ. ಮನೆಯಲ್ಲಿ ತಾಯಿ ಮಗುವಿಗೆ ಪಾಠವನ್ನು ಹೇಳಿಕೊಡುತ್ತಾಳೆ. ಅಲ್ಲಿಂದ ನಂತರ ಗುರುವಿಗೆ ಪಾಠ ಹೇಳಿಕೊಡುವುದಕ್ಕಾಗಿ ಮಗುವನ್ನು ಒಪ್ಪಿಸುತ್ತಾಳೆ. ಆದರೆ ತಾಯಿಯೇ ಮೊದಲ ಗುರು. ಆದರೆ ಇಂದು ಮಕ್ಕಳು ಹಾಳಾಗುವುದಕ್ಕೆ ಕಾರಣ ನಮ್ಮ ಇಂದಿನ ಶಿಕ್ಷಣದ ನಿಯಮಗಳು. ಇದನ್ನು ಸಡಿಲಿಸಬೇಕು. ನಿಜವಾದ ಹಿರಿಯರ ಆತ್ಮಚರಿತ್ರೆಗಳನ್ನು ಶಿಕ್ಷಣದಲ್ಲಿ ಅಳವಡಿಸಬೇಕು. ಇಂದಿನ ಶಿಕ್ಷಣದಲ್ಲಿ ಅಂಬೇಡ್ಕರ್, ಜವಹರ್‌ಲಾಲ್ ನೆಹರು, ಮಹಾತ್ಮಗಾಂಧಿಯವರ ಚರಿತ್ರೆಗಳನ್ನು ಅಳವಡಿಸಿ. ಆದರೆ ಇಂದು ಆ ರೀತಿಯಾಗದೆ ಬರೇ ಚುಟುಕು ಸಾಹಿತ್ಯಗಳೇ ಜಾಸ್ತಿಯಾಗಿದೆ. ಮೊನ್ನೆ ನಾನೊಂದು ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದೆ ಅಲ್ಲಿ ಒಬ್ಬ ಕವಿ ಒಂದು ಚುಟುಕವನ್ನು ಬರೆದಿದ್ದ, ಏನೆಂದರೆ 'ಅಕ್ಕಾನ ಮಗಳು ಚಿಕ್ಕೋಳು ಅಂತಿದ್ದೆ, ಚಿತ್ತಾರ ಕಾಣೆ ನಿನ್ನ ಮಗಳು ಬಿಲ್ಪತ್ರೆ, ಮುತ್ತೀನ ಚೆಂಡು ಆಗೋಳೆ' ಇದರಲ್ಲಿ ಏನು ಸಾಹಿತ್ಯವಿದೆ. ನಿಜವಾಗಿ ಮಕ್ಕಳ ಮಾರ್ಮಿಕವಾದ ಮನಸ್ಸನ್ನು ಎಳೆಯತಕ್ಕಂಥ ಅಯಸ್ಕಾಂತದಂಥ ಶಕ್ತಿಯುಳ್ಳ ಪದ್ಯಗಳು ಇವಲ್ಲ. ನೆರೆ ಕೆನ್ನೆಗೆ ತೆರೆಗಲ್ಲಕೆ ಶರೀರ ಗೂಡು ಹೋಗದ ಮುನ್ನ ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ ಪೂಜಿಸೋ ಪಾದಕಮಲಗಳಲ್ಲಿ ಕೂಡಲ ಸಂಗಮದೇವ ಎಂದು ಹೇಳಿದ್ದಾರೆ. ಎಂಥ ಮಾತಿದು, ಇಂಥ ಸಾಹಿತ್ಯ ಇದ್ದರೆ ಮಾತ್ರ ನಿಜವಾದಂಥ ಸಂಸ್ಕೃತಿ ಇರುವುದು. ಸಂಸ್ಕೃತಿಗೆ ಸಾಹಿತ್ಯವೇ ಮೆರಗು.

ಇಂದು ರಾಜಕಾರಣ ಕೆಟ್ಟುಹೋಗಿದೆ. ನಾನೂ ಕೂಡ ಮೊನ್ನೆ ಚುಟುಕು ಸಾಹಿತ್ಯದಲ್ಲಿ ಬದುಕುವವನನ್ನು ರಾಜ್ಯಾಧ್ಯಕ್ಷನಾಗಿ ಹೇಳಿದೆ. 'ರಾಜಕೀಯವೆಂಬುದು ಚದುರಂಗ, ಈ ರಾಜಕೀಯವೆಂಬುದು ಚದುರಂಗ, ಯಾರಿಗೂ ತಿಳಿಯದು ಅದರ ಅಂತರಂಗ, ಯಾರಿಗೂ ತಿಳಿಯದ ಅದರ ಅಂತರಂಗ, ಅದು ಮಹಾ ಕುತಂತ್ರಿಗಳ ಸಂಘ, ಅದು ಮಹಾ ಕುತಂತ್ರಿಗಳ ಸಂಘ, ನಾನು ಮಾಡುವೆ ಅದರ ಬಹಿರಂಗ, ನಾನು ಮಾಡುವೆ ಅದರ ಬಹಿರಂಗ.' ಆ ರೀತಿಯಾಗಬಾರದು. ಈ ರಾಜಕಾರಣದಲ್ಲಿ ಸಮಾಜದ ಎಲ್ಲಾ ವರ್ಗಗಳ ಜನರ ಹಿತವನ್ನು ಕಾಪಾಡಿಕೊಂಡು ಹೋಗುವ ದಿಕ್ಕಿನಲ್ಲಿ ಕೆಲಸವನ್ನು ಮಾಡಬೇಕು. ಇದು ವಿದ್ಯಾ ಕ್ಷೇತ್ರ. ಈ ಕ್ಷೇತ್ರ ಬಹಳ ಮಹತ್ವವಾದ ಕ್ಷೇತ್ರ. ವಿದ್ಯೆಯನ್ನು ತಾಯಿ, ತಂದೆ ಮತ್ತು ಗುರುಗಳು ಮಾತ್ರ ಕೊಡತಕ್ಕಂಥವರು. ನಮಗೆ ಬೇಕಾಗಿರುವುದು ವಿದ್ಯೆ. ಮನುಷ್ಯನಿಗೆ ಸಂತೋಷವಾಗುವುದು ಒಬ್ಬ ಡಾಕ್ಟರೋ ಇಂಜಿನಿಯರೋ, ಡಿಪ್ಲೋಮೋ ಹೋಲ್ಡರ್ ಆದಾಗ ಮಾತ್ರ. ನಿಜವಾದ ನೆಮ್ಮದಿ ಮನುಷ್ಯನಿಗೆ ಇಲ್ಲಿ ವಿದ್ಯೆಯಿಂದ ದೊರೆಯುತ್ತದೆ. ಸರ್ವಜ್ಞ ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ "ಬೆಚ್ಚನೆಯ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ಇಚ್ಛೆಯನ್ನರಿತು ನಡೆವ ಸತಿಯಾಗಿ ನೆಚ್ಚಿನ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ" ಆ ಕಿಚ್ಚಲ್ಲ ಬೇಕಾಗಿರುವುದು. ಇಂದು ಮಕ್ಕಳಿಗೆ ಓದುವ ಹುಚ್ಚನ್ನು ಹಬ್ಬಿಸಿದಾಗ ಮಾತ್ರ ಅದು ನಿಜವಾಗಿ ನೆಮ್ಮದಿ ಕೊಡತಕ್ಕಂಥದ್ದು. ಕಟ್ಟಿಕೊಂಡ ಗಂಡನಾಗಲಿ ಅಥವಾ ತಾನು ಹೆತ್ತ ಮಗ ಕಳ್ಳನಾಗಲು, ಕುಡುಕನಾಗಲು, ವಿದ್ಯೆಯ ಗಂಧವನ್ನು ಅರ್ಥ ಮಾಡಿಕೊಳ್ಳದವನು ಈ ದೇಶದ ಒಬ್ಬ ಕಠೋರಿಯಾದರೆ, ಕೊಲೆಗಡುಕನಾದರೆ ಅದಕ್ಕೆಲ್ಲ ಹೊಣೆ ಯಾರು? ನಮ್ಮಲ್ಲಿ ಬರತಕ್ಕಂಥ ಪಠ್ಯ ಪುಸ್ತಕಗಳು.

ಶ್ರೀಮತಿ ಲೀಲಾವತಿ ಆರ್ ಪ್ರಸಾದ್ : ಸನ್ಮಾನ್ಯ ಉಪಾಧ್ಯಕ್ಷರೇ, ಶಂಕರಲಿಂಗೇಗೌಡರು ಬೇಡಿಕೆಯ ಮೇಲೆ ಮಾತನಾಡುತ್ತಿದ್ದಾರೋ ಅಥವಾ ಹರಿಕಥೆಯನ್ನು ಪ್ರಾರಂಭ ಮಾಡಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾನು ನಮ್ಮ ಸಮಾಜದ ಸಂಸ್ಕೃತಿಯ ಬಗ್ಗೆ ಅರ್ಥ ಮಾಡುವುದಕ್ಕಾಗಿ ಮತ್ತು ನೀವೆಲ್ಲಾ ಇದರ ಬಗ್ಗೆ ಅರ್ಥೈಸಿಕೊಳ್ಳಲಿ ಎಂದು ನನ್ನ ಅಂತಃ ಕರಣದಿಂದ ಬರುತ್ತಿರತಕ್ಕಂಥ ವಿಷಯಗಳನ್ನು ನಿಮ್ಮೆಲ್ಲರಿಗೂ ಧಾರೆ ಎರೆಯುತ್ತಿದ್ದೇನೆ. ನೀವು ಇದನ್ನೆಲ್ಲಾ ಕೇಳಿ. ಕೆಲವರಿಗೆ ಏನೂ ಮಾಡುವುದಕ್ಕಾಗುವುದಿಲ್ಲ, ಇರೋಳು ಓಲೆ ಹಾಕಿಕೊಂಡರೆ, ಇಲ್ಲದವಳು ಬರೀ ಕಿವಿ ಚುಚ್ಚಿಕೊಂಡ ಹಾಗೆ, ಮಾತನಾಡುವ ಧಾಟಿ ಒಂದೇ, ನಾನು ಹೇಳುವುದು ಇಷ್ಟೆ. ಇಂದು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರತಕ್ಕಂಥ ಬದಲಾವಣೆಗಳು ಏನು ಇವೆ ಅವುಗಳನ್ನು ನೀವು ವೈಜ್ಞಾನಿಕ ರೀತಿಯಲ್ಲಿ ಮಾಡಿ ನುರಿತ ಅಧ್ಯಾಪಕರನ್ನು ಹುದ್ದೆಗೆ ತೆಗೆದು ಕೊಳ್ಳಬೇಕು. ಶಿಕ್ಷಕರ ಮೇಲೆ ನೀವು ಕಠೋರವಾಗಿ ನಡೆದುಕೊಳ್ಳುತ್ತಿದ್ದೀರಿ ಎಂಬ ಮಾತನ್ನು ಕೇಳಿದಾಗ ನನಗೂ ನಿಜಕ್ಕೂ ವ್ಯಸನವಾಯಿತು. ಶಿಕ್ಷಕರಿಗೆ ಕೊಡತಕ್ಕಂಥ ಸಂಬಳ ಮತ್ತು ಭತ್ಯೆಗಳನ್ನು ಸರಿಯಾಗಿ ಕೊಡಿ. 15 ವರ್ಷಗಳಿಂದ ಅರೆಕಾಲಿಕ ಶಿಕ್ಷಕರ ಜೀವನ ಸರಿಯಾದ ಸಂಬಳವಿಲ್ಲದೆ ಅಂಧಕಾರದಲ್ಲಿದ್ದು ಘೋರಾರಣ್ಯದಲ್ಲಿ ತಮ್ಮ ದುಃಖವನ್ನು ತೋಡಿಕೊಳ್ಳುತ್ತಿದ್ದಾರೆ. ಇವರ ಬಗ್ಗೆ ಕಳಕಳಿ ತೋರುವುದಲ್ಲದೆ ಇಂದಿನ ಶಿಕ್ಷಣದಲ್ಲಿ ಉತ್ತಮವಾದ

ವೈಜ್ಞಾನಿಕ ಬದಲಾವಣೆಯನ್ನು ಮಾಡಿ ಸುಧಾರಣೆಗಳನ್ನು ಮಾಡಬೇಕೆನ್ನುವ ಮಾತುಗಳನ್ನು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಶಿಕ್ಷಣದ ಬಗ್ಗೆ ಬಹಳ ಧೀರ್ಘವಾಗಿ ಚರ್ಚೆಯಾಗಿದೆ. ಆದರೂ ಕೂಡ ವಿದ್ಯಾ ಕ್ಷೇತ್ರದಲ್ಲಿ ಏನೇನು ಆಗಬೇಕು ಎನ್ನುವ ಬಗ್ಗೆ ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಹಿಂದೆ ಮಾತನಾಡಿದ ಹಶ್ಮಿಯವರು 'ಸೊಸೈಟಿ' ಎಂದು ಹೇಳಿದರು. ಅದು ಸೊಸೈಟಿಯಲ್ಲ. 5 ರೆಸಿಡೆನ್ಸಿಯಲ್ ಸ್ಕೂಲ್‌ಗಳಿಗೆ ಆಗಿದಂಥದ್ದು, ಹಜರತ್‌ಕ್ವಾಜಾ ಗರೀಬ್ ನವಾಬ್ ಚಾರಿಟಬಲ್ ಟ್ರಸ್ಟ್ ಎಂದು ಹೇಳುತ್ತೇವೆ. ಟ್ರಸ್ಟ್ ರಿಜಿಸ್ಟರ್ ಆಗಿದ್ದು ಸ್ಕೂಲ್ ಕೊಟ್ಟ ನಂತರ. ಈ 5 ಸ್ಕೂಲ್‌ಗಳನ್ನು ಕೊಟ್ಟ ನಂತರ 3 ತಿಂಗಳಿಗೊಂದು ಬಾರಿ 5 ಲಕ್ಷ ರೂ.ಗಳನ್ನು ಒಂದೊಂದು ಹಾಸ್ಟೆಲ್‌ಗಳಿಗೆ ಕೊಡುತ್ತಿದ್ದಾರೆ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಇದರ ಬಗ್ಗೆ ನಿಜವೋ ಅಥವಾ ಸುಳ್ಳೋ ಎಂದು ನಮ್ಮ ಮಾನ್ಯ ಮಂತ್ರಿಗಳು ತಿಳಿಸಬೇಕಾಗಿದೆ. ಏಕೆಂದರೆ ಇಲ್ಲಿ ಅನ್ಯಾಯವಾಗುತ್ತಿದೆಯಾದ ಕಾರಣ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಸರಿಪಡಿಸಬೇಕಾಗಿರುವುದು ತಮ್ಮ ಆದ್ಯಕರ್ತವ್ಯವಾಗಿರುವುದರಿಂದ ಇದರ ಬಗ್ಗೆ ತಾವು ಗಮನ ಹರಿಸಬೇಕು. ಇನ್ನು ಮತ್ತೊಂದು ಮುಖ್ಯವಾದ ವಿಚಾರವೆಂದರೆ ದಿನಾಂಕ 31-03-1995ಕ್ಕೆ ಕನಿಷ್ಟ ಎರಡು ವರ್ಷ ಸೇವೆ ಸಲ್ಲಿಸಿದ ಮತ್ತು ಅದೇ ರೀತಿ ಒಂದು ವರ್ಷ ಸೇವೆ ಸಲ್ಲಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಖಾಯಂ ಮಾಡಲು ತೀರ್ಮಾನಿಸಲಾಗಿದೆ ಎನ್ನುವ ಮಾತನ್ನು ಕೇಳಿದ್ದೇನೆ. ಆದರೆ ಇದಾದನಂತರ ಹಿಂದುಳಿದ ವರ್ಗದವರೇನಿದ್ದಾರೆ ಶಿಕ್ಷಕರು ಅವರಿಗೂ ಕೂಡ ಈ ಸೌಲಭ್ಯವನ್ನು ವಿಸ್ತರಣೆ ಮಾಡಿ ಹಿಂದುಳಿದ ವರ್ಗದ ಶಿಕ್ಷಕರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದು ನನ್ನ ಎರಡನೆಯ ವಿಚಾರ. ಇನ್ನು ಮೂರನೆಯ ವಿಚಾರವೆಂದರೆ ಈಗ ಬಿ.ಇ. ಗೆ ಅಡ್ಮಿಷನ್ ಕಾಲ್‌ಫರ್ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅಪ್ಲಿಕೇಷನ್‌ನಲ್ಲಿ ಎಲೆಕ್ಟೀವ್ಸ್‌ಗೆ ಹಾಕಿದ್ದಾರೆ. ಆ ಎಲೆಕ್ಟೀವ್ಸ್‌ನಲ್ಲಿ ಕೆಲವು ಸಬ್ಜೆಕ್ಟ್‌ಗಳನ್ನು ಬಿಟ್ಟುಬಿಟ್ಟಿದ್ದಾರೆ. ಉದಾಹರಣಗೆ ಹೇಳಬೇಕೆಂದರೆ ಹೋಮ್ ಸೈನ್ಸ್, ಜರ್ನಲಿಸಮ್ ಸಬ್ಜೆಕ್ಟ್‌ಗಳನ್ನು ಬಿಟ್ಟುಬಿಟ್ಟಿದ್ದಾರೆ. ಅಂದರೆ ಬಿ.ಇಡಿ. ಓದತಕ್ಕಂಥ ವಿದ್ಯಾರ್ಥಿಗಳಿಗೆ ಈ ಎಲೆಕ್ಟೀವ್ಸ್‌ಗಳನ್ನು ಬಿಟ್ಟಿರುವುದರಿಂದ ಇಂಥ ವಿದ್ಯಾರ್ಥಿಗಳು ಅಪ್ಲಿಕೇಷನ್ ಹಾಕಿದರೆ ಅವರ ಅಪ್ಲಿಕೇಷನ್‌ನ್ನು ನಿರಾಕರಣೆ ಮಾಡುತ್ತಿದ್ದಾರೆ. 14ನೇ ತಾರೀಖು ಕೊನೆಯ ದಿನಾಂಕವಾಗಿದೆ. ಆದರೆ 1500 ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕ್ಷೇತ್ರದಲ್ಲಿ ವಂಚಿತರಾಗುತ್ತಿದ್ದಾರೆ. ಆದುದರಿಂದ ತಕ್ಷಣ ಇದರ ಬಗ್ಗೆ ಅಮೆಂಡ್‌ಮೆಂಟ್ ಮಾಡಿ ಈ ಎಲೆಕ್ಟೀವ್ಸ್ ಇದ್ದವರನ್ನು ಮಾತ್ರ ತೆಗೆದುಕೊಳ್ಳುತ್ತೇವೆಂದು ಏನು ಹೇಳಿದ್ದಾರೆ ಅದನ್ನು ಬದಲಾವಣೆ ಮಾಡಿ ಅದರ ಬಗ್ಗೆ ಎಲ್ಲರಿಗೂ ನಿರ್ದೇಶನವನ್ನು ಕೊಟ್ಟು ಎಲ್ಲಾ ಕ್ಷೇತ್ರಗಳಲ್ಲಿ ಯಾವ ಯಾವ ಎಲೆಕ್ಟೀವ್ಸ್ ಇದೆ, ಈ ಕ್ಷೇತ್ರದಲ್ಲಿ ಎಲ್ಲೆಲ್ಲಿ ಯಾವ್ಯಾವ ಯೂನಿವರ್ಸ್‌ನ್ನು ಸೇರಿಸಿಕೊಂಡಿದ್ದಾರೆ, ಅವೆಲ್ಲವನ್ನೂ ಸೇರಿಸಿಕೊಂಡು ವಿದ್ಯಾರ್ಥಿಗಳಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಿ 14ನೇ ತಾರೀಖಿನೊಳಗೆ ಈ ಬಗ್ಗೆ ನಿರ್ದೇಶನವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. 14ನೇ ತಾರೀಖು ಕಡೆಯ ದಿನಾಂಕವಾಗಿದೆ. ಇದನ್ನು ಮುಂದಕ್ಕೆ ಹಾಕಬೇಕು.

ಇನ್ನು ಒಂದು ಮುಖ್ಯ ವಿಚಾರವೆಂದರೆ ಶಿಕ್ಷಣ ಮೊನಾಪಲಿಯಾಗಬಾರದು. ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮೊನಾಪಲಿಯಾಗುತ್ತಿದೆ. ಅದೇ ರೀತಿ ಈ ಶಿಕ್ಷಣ ಸಂಸ್ಥೆಗಳು ಕೂಡ ಮೊನಾಪಲಿಯಾಗಿದೆ. ಇದರ ಬಗ್ಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಅದನ್ನು ಸೂಕ್ತವಾದುದೆಂದು ತಾವು ತೆಗೆದುಕೊಳ್ಳಬೇಕು. ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನ ಸೆಕ್ಷನ್ 63 : 5 ಮತ್ತು 7ರಲ್ಲಿ ಶಿಕ್ಷಣದ ಬಗ್ಗೆ ಚಾರಿಟಬಲ್ ಟ್ರಸ್ಟ್ ; ಸೊಸೈಟಿ ಅಂದರೆ ಏನು ಎಂಬ ಬಗ್ಗೆ ಡಿಫೈನ್ ಮಾಡಿದ್ದಾರೆ. ಅದರ ಪ್ರಕಾರ ಟ್ರಸ್ಟ್ : ಸೊಸೈಟಿಗಳು 20 ಎಕರೆ ಜಮೀನಿಗಿಂತ ಹೆಚ್ಚು ಜಾಗವನ್ನು ಇಟ್ಟುಕೊಳ್ಳುವ ಹಾಗಿಲ್ಲ. ಇದು ನಮ್ಮ ಕಾನೂನಿನಲ್ಲಿ ಇದೆ. ಶಿಕ್ಷಣ ಸಂಸ್ಥೆಗಳಿಗೆ ಎಷ್ಟು ಎಕರೆವರೆಗೆ ಎಕ್ಸಂಪ್‌ಷನ್ ಇದೆಯೆಂದರೆ ಅದು ಕೇವಲ 20 ಯೂನಿಟ್ ಮಾತ್ರ. ಈ 20 ಯೂನಿಟ್‌ಗಿಂತ ಹೆಚ್ಚಾಗಿ ಯಾವುದೇ ಶಿಕ್ಷಣ ಸಂಸ್ಥೆ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಲವಾರು ವಿದ್ಯಾ ಸಂಸ್ಥೆಗಳು ಈ ಕಾನೂನಿಗೆ ವಿರುದ್ಧವಾಗಿ 20 ಯೂನಿಟ್‌ಗಿಂತ ಹೆಚ್ಚಾಗಿ ಜಮೀನುಗಳನ್ನು ಇಟ್ಟುಕೊಂಡು ಡೀಮ್ಡ್ ಟು ಬಿ ಸರ್‌ಪ್ಲಸ್ ಅಂಡರ್ ಸೆಕ್ಷನ್ 66 ಅಂಡ್ 67ಕ್ಕೆ ವಿರುದ್ಧವಾಗಿ ಜಮೀನುಗಳನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ತಾವು ಈ ಬಗ್ಗೆ ಗಮನ ಹರಿಸಿ ಹೆಚ್ಚುವರಿ ಜಮೀನುಗಳನ್ನು ವಶಪಡಿಸಿಕೊಂಡು ಬೇರೆಯವರಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಮತ್ತೊಂದು ಮುಖ್ಯವಾದ ವಿಚಾರವೆಂದರೆ ಇಂದು ಹ್ಯೂಮನ್ ಬಾಂಬ್ ಯುಗವಾಗಿದೆ. ನಾವು ದಿನಬೆಳಗಾದರೆ ನೋಡುತ್ತೇವೆ, ಮನುಷ್ಯ ಬಾಂಬ್ ಆಗಿ ಸಾಯುತ್ತಿದ್ದಾನೆ, ನಾನೂ ಕೂಡ ತಮ್ಮ ಮುಖಾಂತರ ನಮ್ಮ ವಿದ್ಯಾಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ, ನಮಗೂ ಕೂಡ ಹ್ಯೂಮನ್ ಬಾಂಬ್ ಬೇಕು, ಎಂಥ ಹ್ಯೂಮನ್ ಬಾಂಬ್ ಬೇಕೆಂದರೆ ಮಕ್ಕಳಲ್ಲಿ ಸುಪ್ತವಾಗಿರತಕ್ಕಂಥ ಪೊಟೆನ್‌ಶಿಯಲ್ ಏನಿದೆ ಅದನ್ನು ಸಿಡಿದೇಳಿಸತಕ್ಕಂಥ ಬಾಂಬ್ ನಮಗೆ ಬೇಕಾಗಿದೆ. ಅಂಥ ವಿದ್ಯಾಭ್ಯಾಸ ನಮಗೆ ಬೇಕಾಗಿದೆ. ಆದರೆ ಈಗ ಏನಾಗಿದೆಯೆಂದರೆ ತಾವು ಕಂಪ್ಯೂಟರ್ ಮಾಡಿದ್ದೀರಿ. ಮನುಷ್ಯನಲ್ಲಿರತಕ್ಕಂಥ ಒಂದು ಸಣ್ಣ ಕಂಪ್ಯೂಟರ್ ಬ್ರೈನ್‌ಗೆ ಟೀಚರ್ಸ್ ಎನ್ನತಕ್ಕಂಥವರು ಕಂಪ್ಯೂಟರ್‌ಗೆ ಹೇಗೆ ಫೀಡ್ ನಾವು ಮಾಡುತ್ತೇವೆ ಸಬ್ಜೆಕ್ಟ್‌ಗಳನ್ನು, ಇನ್‌ಫರ್ಮೇಶನ್‌ಗಳನ್ನು ಆ ರೀತಿಯಲ್ಲಿ ಮಕ್ಕಳಿಗೆ ಫೀಡ್‌ಮಾಡುತ್ತಿದ್ದಾರೆ. ಇದು ಫೀಡ್ ಮಾಡಿದ್ದನ್ನು ಮಕ್ಕಳು ಹೇಳತಕ್ಕಂಥ ಪರಿಸ್ಥಿತಿ ಬಂದಿದೆ. ಇದು ನಿಜವಾದ ವಿದ್ಯಾಭ್ಯಾಸ ಆಗುವುದಿಲ್ಲ. ಮಕ್ಕಳಲ್ಲಿ ಇರತಕ್ಕಂಥ ಚೇತನವನ್ನು ಹೊರಗೆ ತರಬೇಕಾದರೆ ನಾವು ಬೇರೆ ವಿಧ್ಯಾಭ್ಯಾಸದ ದಿಕ್ಕನ್ನು ಬದಲಿಸಬೇಕಾಗುತ್ತದೆ. ಅಂತಹ ಹ್ಯೂಮನ್ ಬಾಂಬನ್ನು ತಯಾರು ಮಾಡತಕ್ಕಂಥ ಟೀಚರ್‌ಗಳನ್ನು ಇಂದು ಸೃಷ್ಟಿ ಮಾಡಬೇಕಾಗಿದೆ. ಅಂತಹವರನ್ನು ಹಾಕಬೇಕಾಗಿದೆ. ಇಲ್ಲದೇ ಹೋದರೆ ಮಕ್ಕಿ ಕಾ ಮಕ್ಕಿ ಡಿಗ್ರಿ ತೆಗೆದುಕೊಂಡು ನಮ್ಮ ವಿದ್ಯಾರ್ಥಿಗಳಿಗೆ ಯಾವುದೇ ವಿಧವಾದ ಪ್ರಯೋಜನವಾಗುತ್ತಾ ಇಲ್ಲ ಎನ್ನುವ ಮಾತನ್ನು ತಾವು ಮನಗಾಣಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ What is the need of the hour? ಎಲ್ಲರೂ ಹೇಳಿದರು ಎಜ್ಯುಕೇಷನ್, ದೇಹದ ಬಗ್ಗೆ ಗಮನ ಕೊಡಬೇಕು, ಆರೋಗ್ಯದ ಬಗ್ಗೆ ಗಮನ ಕೊಡಬೇಕು ಎಂದು. ಆದರೆ ಇದರ ಬಗ್ಗೆ ಗಮನ ಕೊಡಬೇಕಾದರೆ ಯಾವುದು ಅತಿ ಮುಖ್ಯ. ವಿದ್ಯಾರ್ಥಿಗಳು ಇವತ್ತು ಏನು ತಿಳಿದುಕೊಳ್ಳಬೇಕೆಂದರೆ need of the

hour ಏಡ್ಸ್ ಏನಿದೆ ಅದು ಒಂದು ದೊಡ್ಡ ರೋಗ ಬಂದಿದೆಯಲ್ಲಾ ಅದನ್ನು ತಡೆಗಟ್ಟಬೇಕಾದರೆ ಏನು ಮಾಡಬೇಕೆನ್ನುವುದನ್ನು ನಾವು ಸಣ್ಣ ಮಕ್ಕಳಿಗೆ ಇವತ್ತು ಹೇಳಬೇಕಾಗಿದೆ. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇದನ್ನು ತೆಗೆದು ಹಾಕಬೇಕಾದರೆ ಏನು ಮಾಡಬೇಕು ಎಂದು ಹೇಳಬೇಕಾಗಿದೆ. ನನಗೆ ಬಹಳ ದುಃಖವಾಗುತ್ತಿದೆ. ಈ ದಿಸೆಯಲ್ಲಿ ಯಾವ ಗಮನವನ್ನೂ ಕೂಡ ಯಾವ ವಿದ್ಯಾರ್ಥಿ ಕ್ಷೇತ್ರದಲ್ಲಿ ಕೂಡ ಮಾಡಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಮದ್ಯಪಾನ ಇದರ ಜೊತೆಯಲ್ಲಿ ಈ ಒಂದು ಏಡ್ಸ್‌ನ್ನು ತಡೆಗಟ್ಟಬೇಕಾದರೆ ನಮ್ಮ ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಮುಡಿ ಕೊಡುತ್ತಾರೆ. ಮುಡಿ ಕೊಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಬ್ಲೇಡ್ ಉಪಯೋಗಿಸುತ್ತಾರೆ. ಕ್ಷೌರಿಕ ಏನು ಮಾಡುತ್ತಾನೆ ಎಂದರೆ ಒಂದೇ ಬ್ಲೇಡನ್ನೇ ಹಲವಾರು ಮಕ್ಕಳಿಗೆ ಉಪಯೋಗಿಸುವುದರಿಂದ ಆ ಒಂದು ಮಗುವಿನ ರಕ್ತ ಇನ್ನೊಂದು ಮಗುವಿಗೆ ಯಾವುದಾದರೂ ಏಡ್ಸ್ ಇದ್ದಂತಹ ಮಗುವಿನದ್ದು ಹೋದರೆ ಅದರಿಂದ ಆಗತಕ್ಕಂಥ ಪರಿಣಾಮದ ಬಗ್ಗೆ ತಂದೆತಾಯಿಗಳು ಎಚ್ಚರಿಕೆ ಕೊಡಬೇಕಾಗುತ್ತದೆ. ಮಕ್ಕಳಿಗೂ ಕೂಡ ಅದೇರೀತಿ ಎಚ್ಚರಿಕೆ ಕೊಡಬೇಕಾಗುತ್ತದೆ. ಕ್ಷೌರಿಕನ ಅಂಗಡಿಯಲ್ಲಿ ಹೋಗಿ ವಿದ್ಯಾರ್ಥಿಗಳು ಕ್ಷೌರ ಮಾಡಿಸತಕ್ಕಂಥ ಸಂದರ್ಭದಲ್ಲಿ ಅವನು ಬೇರೆಬೇರೆ ಬ್ಲೇಡುಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಅದನ್ನು ಇವತ್ತು ಮಾಡುತ್ತಾ ಇಲ್ಲ. ಅದರ ಬಗ್ಗೆ ತಾವು ಗಮನ ಕೊಡಬೇಕಾಗುತ್ತದೆ. ನಮ್ಮ ವಿದ್ಯಾರ್ಥಿಗಳಿಗೆ ಎಚ್ಚರಿಕೆಯನ್ನು ನೀಡಬೇಕಾಗುತ್ತದೆ. ಇನ್ನು ಡೆಂಟಲ್ ಇನ್ಸಿಟಿಟ್ಯೂಟ್ ಇದೆ. ಹಲ್ಲು ಕೀಳಿಸತಕ್ಕಂಥ ಸಂದರ್ಭದಲ್ಲಿ ಒಂದು ಇಂಜಕ್ಷನ್ ಕೊಡತಕ್ಕಂಥ ಸಂದರ್ಭದಲ್ಲಿ ಟ್ಯೂಬನ್ನು ಮತ್ತೊಬ್ಬರಿಗೆ ಉಪಯೋಗಿಸಿದರೆ ಅದರಿಂದ ಏಡ್ಸ್ ಹರಡುವ ಸಂದರ್ಭ ಇದೆ. ಆದುದರಿಂದ ಸಮಾನ್ಯ ವಿದ್ಯಾ ಕ್ಷೇತ್ರದಲ್ಲಿ ಇರತಕ್ಕಂಥ ಟೀಚರ್‌ಗಳಿಗೆ ಇದರ ಬಗ್ಗೆ ಪರಿಜ್ಞಾನ ಕೊಡಬೇಕಾದ್ದು, ಹೇಳಬೇಕಾದ್ದು ಅತೀ ಅವಶ್ಯಕತೆ ಇದೆ. ಇದರ ಬಗ್ಗೆ ಏನಾದರೂ ಒಂದು ಕಾರ್ಯಕ್ರಮವನ್ನು ಹಮ್ಮಿಕ್ಕೊಂಡು ಅದನ್ನು ಕೂಡ ವಿದ್ಯಾಭ್ಯಾಸದಲ್ಲಿ ಹೇಳಿಕೊಡತ್ತಕಂಥ ಪರಿಪಾಠವನ್ನು ತಾವು ಹಾಕಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತೊಂದು ಈ ಡೆಂಟಲ್ ಜೊತೆಯಲ್ಲಿ moral code of conduct ಇದರ ಬಗ್ಗೆ ತಾವು ಹೇಳಬೇಕಲ್ಲಾ. ಮಿತಸಂತಾನ ಮಾಡಬೇಕೆಂದು ಹೇಳುತ್ತೇವೆ. ಆದರೆ ಮಿತಸಂತಾನ ಏತಕ್ಕೋಸ್ಕರ ಇರಬೇಕು ಎನ್ನುವುದರ ಬಗ್ಗೆ ಕೂಡ ಮಕ್ಕಳಿಗೆ ತಾವು ಹೇಳುವಂತಹ ಅವಶ್ಯಕತೆ ಇದೆ. ಮದ್ಯಪಾನ ಮಾಡಬಾರದು, ಮಿತಸಂತಾನ ಇರಬೇಕು. ಅದರ ಜೊತೆಯಲ್ಲಿ ಜೀವನ ಯೂನಿವರ್ಸಲ್ ಎಜ್ಯುಕೇಷನ್ ಆಗಬೇಕು. ನಮ್ಮ ವಿಶ್ವದ ಪ್ರಜೆ ಆಗುವುದಕ್ಕೆ ಸಾಧ್ಯವಿರುವಂತಹ ಶಿಕ್ಷಣವನ್ನು ನಾವು ಕೊಡಬೇಕು. ಇವತ್ತು ಏನು ಮಾಡಿದ್ದೇವೆ ಎಂದರೆ ಡಿಸ್ಕ್ರಿಮಿನೇಟ್ ಮಾಡಿ, ಇದು ಕಾನ್‌ವೆಂಟ್, ಇದು ಮೈನಾರಿಟಿಗೆ ಸೇರಿದಂತಹ ಸ್ಕೂಲ್, ಇದು ಸಿಂಧಿಗೆ ಸೇರಿದಂತಹ ಸ್ಕೂಲ್ ಎಂದು ಹೇಳಿ ನಮ್ಮ ಮಕ್ಕಳ ಮನಸ್ಸಿನಲ್ಲಿ ನಾವೇ ವಿಷಬೀಜ, ಜಾತಿಬೀಜವನ್ನು ಬಿತ್ತುತ್ತಿದ್ದೇವೆ. ಇದನ್ನು ತಪ್ಪಿಸಬೇಕಾದರೆ ಈ ಹೆಸರು ಇರತಕ್ಕಂಥ ಕಾನ್ವೆಂಟ್ ಆಗಲಿ ಅಥವಾ, ಸಿಂಧಿ ಅಥವಾ ಮೈನಾರಿಟಿ ಇನ್ಸಿಟಿಟ್ಯೂಷನ್ ಹೆಸರನ್ನು ತೆಗೆದುಹಾಕಿದರೆ ಸರ್ಕಾರಿ ವಲಯದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ, ವಿದ್ಯಾಕ್ಷೇತ್ರದಲ್ಲಿ ಕೇವಲ ಅವು ವಿದ್ಯಾನಿಲಯಗಳು ಆಗಬೇಕೇ ಹೊರತು ಜಾತಿ ಹೆಸರು ಸೂಚಿಸತಕ್ಕಂಥ ನಿಲಯಗಳು ಎಂದೂ ಕೂಡ ಆಗಬಾರದು. ಇದರ ಬಗ್ಗೆ

ತಾವು ಗಮನ ಹರಿಸಿ, ಅದಕ್ಕೆ ಏನು ಬಂದೋಬಸ್ತು ಮಾಡಬೇಕು. ಆ ಕೆಲಸವನ್ನೂ ಕೂಡ ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅತ್ಯಂತ ಮುಖ್ಯವಾದುದು ಏನೆಂದರೆ ನಾವೆಲ್ಲಾ ಓದುವಾಗ ಸಿವಿಕ್ಸ್ ಎಂದು ಒಂದು ಸಬ್ಜೆಕ್ಟ್ ಇತ್ತು. ಅದನ್ನು ಸಾರ್ವಜನಿಕವಾಗಿ ಓದುತ್ತಿದ್ದೆವು. ಆ ಸಬ್ಜೆಕ್ಟ್ ಎಲ್ಲಿ ಹೋಗಿದೆ ಎಂದು ಗೊತ್ತಾಗುತ್ತಾ ಇಲ್ಲ. ನಮ್ಮ ಮಕ್ಕಳಿಗೆ ಪರಿಸರ, ವಾತಾವರಣ ಹೇಗಿರಬೇಕು ಮನೆ ಮುಂದೆ ಹೇಗೆ ಇಟ್ಟುಕೊಳ್ಳಬೇಕು, ಮನೆಮುಂದೆ ಹೋಗತಕ್ಕಂಥ ರೋಡ್ ಹೇಗೆ ಇಟ್ಟುಕೊಳ್ಳಬೇಕು, ನಮ್ಮ ಕರ್ತವ್ಯ ಏನು ಇದರ ಬಗ್ಗೆ ಕೂಡ ಹೇಳುತ್ತಿಲ್ಲ. ಇದರ ಬಗ್ಗೆ ವಿದ್ಯಾಕ್ಷೇತ್ರದಲ್ಲಿ ಇರತಕ್ಕಂಥ ವಿಷಯದಲ್ಲಿ ಒಂದು ಪಾಠವನ್ನು ಹಾಕುವ ಬಗ್ಗೆ ತಮ್ಮ ಗಮನವನ್ನು ಹರಿಸತಕ್ಕಂಥ ಕೆಲಸವನ್ನು ಮಾಡಬೇಕು. ನಾವು ಏಸುಕ್ರಿಸ್ತ, ಬೈಬಲ್, ಖುರಾನ್, ಅಲ್ಲಾ ಮತ್ತು ವೇದಪಾಠಗಳು ಇವೆಲ್ಲವನ್ನೂ ಕೂಡ ಹೇಳುತ್ತಿರುತ್ತೇವೆ. ಎಲ್ಲರೂ ಹೇಳತಕ್ಕಂಥಾದ್ದು ಒಂದೇ. ಎಲ್ಲಾ ಧರ್ಮಗಳು ಹೇಳತಕ್ಕಂಥಾದ್ದು ಒಂದೇ. ಈ ಭಾವನೆಯನ್ನು ಮಕ್ಕಳ ಮನಸ್ಸಿನಲ್ಲಿ ಇವತ್ತು ಮೂಡಿಸಬೇಕು. ಮಕ್ಕಳ ಮನಸ್ಸಿನಲ್ಲಿ ಎಲ್ಲಾ ದೇವರು ಒಬ್ಬನೇ, ಹಲವು ನಾಮಗಳು ಇದೆ ಎಂದು ಹೇಳಿ ಪ್ರಪಂಚದಲ್ಲಿರತಕ್ಕಂಥ ಎಲ್ಲಾ ಜನರು ಒಂದೇ ಪ್ರಜೆಗಳು, ಎಲ್ಲರೂ ಒಂದೇ ಎಂದು ಚಿಕ್ಕಮಕ್ಕಳನ್ನು ಬೆಳೆಸುವಾಗ ಹೇಳಿದರೆ ಮಾತ್ರ ಸಾಧ್ಯವಾಗುತ್ತದೆ. ಬೆಳೆದನಂತರ ಆಗುವುದಿಲ್ಲ, ಅದಕ್ಕೋಸ್ಕರ ಇದನ್ನು ಕೂಡ ಎಲ್ಲಾ ಜಾತಿ ಒಂದೇ ಎಂದು ಮಕ್ಕಳ ಮನಸ್ಸಿನಲ್ಲಿ ತಾವು ಮೂಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಆ ಕೆಲಸವನ್ನು ತಾವು ಮಾಡಬೇಕು. ಮತ್ತೊಂದು ವಿಷಯವೇನೆಂದರೆ ಮಕ್ಕಳನ್ನು ಐದು ವರ್ಷ ಹತ್ತು ತಿಂಗಳಿಗೆ ಸ್ಕೂಲಿಗೆ ಸೇರಿಸಬೇಕಾಗಿದೆ. ಅದು ಬಹಳ ಜಾಸ್ತಿ. age limit has to be reduced. ಐದು ವರ್ಷ ಹತ್ತು ತಿಂಗಳು ಏನಿದೆ ಇದರಿಂದ ಹೆಚ್ಚು ಸ್ಕೂಲ್ ಬೆಳೆಯುವುದಕ್ಕೆ ಕಾರಣವಾಗಿದೆ. ಏನು ಹೆಸರು ಇಡುತ್ತಾರೆ ಎಂದರೆ ಪ್ಲೇ ಹೋಮ್, ನಂತರ ಯುಕೆಜಿ, ಎಲ್‌ಕೆಜಿ ಎಂದು ಕರೆಯುತ್ತಾರೆ. ಮೂರು ವರ್ಷಗಳ ಕಾಲ ವಿದ್ಯಾರ್ಥಿಗಳ ಎಕ್ಸ್‌ಪ್ಲಾಟೇಷನ್ ನಡೆಯುತ್ತದೆ. ಆದುದರಿಂದ ಐದು ವರ್ಷ 10 ತಿಂಗಳು ಏನು ಮೀಡಿಯಂ ಏಜ್ ಮಾಡಿದ್ದೀರಿ ಅದನ್ನು ತಕ್ಷಣ ಕಡಿಮೆ ಮಾಡಿ ಕಡಿಮೆ ವಯಸ್ಸಿನಲ್ಲಿ ಮಕ್ಕಳನ್ನು ಶಾಲೆಗೆ ಸೇರುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ಪರಿಪಾಠ ಏನಿದೆ ಎಲ್‌ಕೆಜಿ : ಯುಕೆಜಿ ಎಂದು ಏನು ಮಾಡುತ್ತಿದ್ದಾರೆ, ಅದಕ್ಕೆ ಯಾವರೀತಿ ನೀವು ನಿಬಂಧನೆ ಹಾಕಿ ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆ ತಾವು ಗಮನಹರಿಸಿ, ತಂದೆತಾಯಿಗಳಿಗೆ ಆಗುತ್ತಿರುವಂತಹ ಅನ್ಯಾಯವನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಉಪಾಧ್ಯಕ್ಷರೇ, ಐದು ವರ್ಷ 10 ತಿಂಗಳು ಇತಿಮಿತಿ ಏನಿದೆ ಅದನ್ನು ನಾನು ವಿದ್ಯಾ ಮಂತ್ರಿಯಾಗಿದ್ದಾಗ ಐದು ವರ್ಷ ತುಂಬಿರಬೇಕು ಹಾಗೂ ಆರು ವರ್ಷ ಮೀರಿರಬಾರದು, ಯಾವುದೇ ತಿಂಗಳು ವ್ಯತ್ಯಾಸ ಇರಬಾರದು ಅಂತಹವರು ಅಡ್ಮಿಷನ್ ಆಗಬೇಕೆಂದು ಪ್ರೈಮರಿ ಸ್ಕೂಲ್‌ಗೆ ಎಂದು ಒಂದು ಸುತ್ತೋಲೆಯನ್ನು ಹಿಂದೆ ನಾನು ಕಳುಹಿಸಿದ್ದೆ. ಐದು ವರ್ಷ 10 ತಿಂಗಳು ಎನ್ನುವುದು ತಪ್ಪು. ಐದು ವರ್ಷ ತುಂಬಿರಬೇಕು. ಆರು ವರ್ಷ ಮೀರಿರಬಾರದು. ಐದು ವರ್ಷ 2 ತಿಂಗಳು 3 ತಿಂಗಳು 4 ತಿಂಗಳು ಎಷ್ಟಾದರೂ ಆಗಿರಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕಳುಹಿಸಿದ್ದೀರಿ, ಆದರೆ ಅದು ಪ್ರಾಕ್ಟೀಕಲ್ ಆಗಿ ಆಗುತ್ತಿದೆಯೇ ಎನ್ನುವುದರ ಬಗ್ಗೆ ಗಮನಹರಿಸಬೇಕು. ಎಲ್ಲಾ ಕಡೆ ಸರ್ಕ್ಯುಲರ್ ಕಳುಹಿಸಿದ್ದೀರಿ ಏಕೆಂದರೆ ಎಲ್ಲಾ

ಕಡೆ ಆಗುತ್ತಿಲ್ಲ. ಎಲ್ಲಾ ಕಡೆ ಐದು ವರ್ಷ 10 ತಿಂಗಳು ಆದರೆ ಮಾತ್ರ ಸೇರಿಸಿಕೊಳ್ಳುತ್ತಿದ್ದಾರೆ. ಕಾರಂತರು ಬಹಳ ಚೆನ್ನಾಗಿ ಹೇಳಿದರು. ಬೆನ್ನು ಬಾಗಿ ಎಂದು ನಮ್ಮ ಮಾನ್ಯ ಶಂಕರಲಿಂಗೇಗೌಡರು ಹೇಳಿದರು. ಬೆನ್ನು ಬಾಗಿರುವುದು ವಯಸ್ಸಿನಿಂದ ಅಲ್ಲ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಬೆನ್ನು ಬಾಗುವುದಕ್ಕೆ ಪ್ರಾರಂಭವಾಗಿದೆ. ಏಕೆಂದರೆ ಎಷ್ಟು ದೊಡ್ಡ ದೊಡ್ಡ ಬ್ಯಾಗ್‌ಗಳನ್ನು ಹೊತ್ತುಕೊಂಡು ಹೋಗಬೇಕಾದರೆ ಮಕ್ಕಳ ಬೆನ್ನನ್ನು ದೇವರು ನಿಜವಾಗಿ ದೊಡ್ಡದಾಗಿ ಸೃಷ್ಟಿ ಮಾಡಿದ್ದಾನೆಯೇ ಎಂಬ ಅನುಮಾನ ಬರುತ್ತಿದೆ. ಇದರ ಬಗ್ಗೆ ತಾವು ಒಂದು ಸುತ್ತೋಲೆಯನ್ನು ಕಳುಹಿಸಿ, ಮಕ್ಕಳಿಗೆ ಈ ರೀತಿ ಹೊರಿಸಿಕೊಂಡು ಹೋಗತಕ್ಕಂಥಾದ್ದು ತುಂಬಾ ತಪ್ಪು ಎಂದು ಹೇಳಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ವಿಮೆನ್ ಪಾಲಿಟೆಕ್ನಿಕ್ ಕಾಲೇಜ್ 32 ಇದೆ. ಆದರೆ 12 ಪಾಲಿಟೆಕ್ನಿಕ್ ಕಾಲೇಜ್‌ಗಳಲ್ಲಿ ಮಾತ್ರ ಪ್ರಿನ್ಸಿಪಲ್ ಆಗಿದ್ದಾರೆ. ಉಳಿದ ಕಡೆ ಖಾಲಿ ಇದೆ. ಎಐಸಿಟಿ ಸ್ಕೇಲ್ ಅಲ್ಲಿ ಟೀಚರ್ಸ್‌ಗೆ ಕೊಡುತ್ತಾ ಇಲ್ಲ. ಕಾರಣ ಗೊತ್ತಿಲ್ಲ. ಆದೇಶ ಇದ್ದರೂ ಕೊಡುತ್ತಾ ಇಲ್ಲ. ಇದರ ಬಗ್ಗೆ ಕೋರ್ಟ್‌ಗೆ ಹೋಗಿ ಪ್ರಿನ್ಸಿಪಲ್ ಪೋಸ್ಟ್ ಕೊಡಿ ಎಂದು ಕೋರ್ಟ್‌ನಲ್ಲಿ ಆರ್ಡರ್ ತೆಗೆದುಕೊಂಡು ಬಂದರೂ, ರಿಟೈರ್ಡ್ ಆಗುವವರೆಗೂ ಕೂಡ ಆರ್ಡರ್ ಕೊಟ್ಟಿಲ್ಲ. ಅವರು ರಿಟೈರ್ಡ್ ಆಗಿ ಹೋದರು. ಏಕೆ ಈ ಪರಿಸ್ಥಿತಿ ಬಂದಿದೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದನ್ನು ಸರಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಪ್ರೈವೇಟ್ ಕಾಲೇಜುಗಳಲ್ಲಿ ಮತ್ತು ಸಿ.ಇ.ಟಿ. ಬಗ್ಗೆ ಹೇಳಬೇಕಾಗಿದೆ. ಹೋದವರ್ಷ ಸಿ.ಇ.ಟಿ. ಯಲ್ಲಿ ಸೆಲೆಕ್ಟ್ ಮಾಡಿದರು. ಸೆಲೆಕ್ಟ್ ಮಾಡಿ ವಿದ್ಯಾರ್ಥಿಗಳನ್ನು ಇಂಜಿನಿಯರಿಂಗ್ ಮತ್ತು ಎಲ್ಲಾ ಕಾಲೇಜುಗಳಿಗೆ ಕಳುಹಿಸಿಕೊಟ್ಟರು. ಆದರೆ ಪ್ರೈವೇಟ್ ಇನ್ಸ್‌ಟಿಟ್ಯೂಷನ್‌ನವರು ಅಡ್ಮಿಷನ್ ಮಾಡಿಲ್ಲ. ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಇವತ್ತು ಆ ವಿದ್ಯಾರ್ಥಿಗಳು ಮನೆಯಲ್ಲಿಯೇ ಇದ್ದಾರೆ. ಸಿ.ಇ.ಟಿ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕೋರ್ಟ್‌ನಲ್ಲಿ ಆರ್ಡರ್ ಆಗಿ ಬಂದರೂ ಕೂಡ ದಾವಣಗೆರೆ ಕಾಲೇಜ್‌ನಲ್ಲಿ ಇವತ್ತು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಸಿ.ಇ.ಟಿ. ಅಫ್‌ಡಿವೇಟ್ ಹಾಕಿದರು. ಪ್ರೈವೇಟ್ ಕಾಲೇಜು ಪ್ರತಿಬಂಧ ಹಾಕಿದರು. ಒಂದು ವರ್ಷವಾಯಿತು, ಇವತ್ತು ವಿದ್ಯಾರ್ಥಿಗಳು ಮನೆಯಲ್ಲಿ ಕುಳಿತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಇವತ್ತು ಹೇಳಬೇಕು. ಈಗಾಗಲೇ ಹಶ್ಮಿಯವರು ಕನ್ನಡದ ಬಗ್ಗೆ ಹೇಳಿದರು. ತಮಿಳುನಾಡಿನಲ್ಲಿ ಇವತ್ತು ಐದು ಎಂಜಿನಿಯರಿಂಗ್ ಕಾಲೇಜುಗಳನ್ನು ತಮಿಳು ಮೀಡಿಯಂ ತೆಗೆಯಬೇಕು ಎಂದು ಈಗಾಗಲೇ ಆದೇಶ ಹೊರಡಿಸಿದ್ದಾರೆ. ಕನ್ನಡದಲ್ಲಿ ತಾವು ಏನು ಮಾಡಿದ್ದೀರಿ? ಕರ್ನಾಟಕದಲ್ಲಿ ಒಂದಾದರೂ ಎಂಜಿನಿಯರಿಂಗ್ ಕಾಲೇಜು ಕನ್ನಡದಲ್ಲಿ ತರುವುದಕ್ಕೆ ತಾವು ಪ್ರಯತ್ನ ಪಟ್ಟಿದ್ದೀರಾ? ರಷ್ಯಾಗೆ ಎಕ್ಸ್‌ಚೇಂಜ್‌ನಲ್ಲಿ ಇವತ್ತು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಯನ್ನು ಕಳುಹಿಸುತ್ತೇವೆ. ರಷ್ಯಾ ಭಾಷೆಯನ್ನು ಕಲಿತು ಅಲ್ಲಿ ನಮ್ಮ ವಿದ್ಯಾರ್ಥಿಗಳು ಡಾಕ್ಟರ್ ಆಗುತ್ತಾರೆ. ಆದರೆ ನಮ್ಮಲ್ಲಿ ಇನ್ನೂ ಕೂಡ ಇಂಗ್ಲೀಷ್ ವ್ಯಾಮೋಹವನ್ನು ಇಟ್ಟುಕೊಂಡು, ಅದನ್ನೇ ಮುಂದುವರೆಸಿಕೊಂಡು ಬರುತ್ತಿದ್ದೀರಿ. ಇದಕ್ಕೆ ತಾವೇನೂ ಕ್ರಮವನ್ನು ಹಾಕಿಕೊಂಡಿಲ್ಲ. ಅದರ ಬಗ್ಗೆ ಕೂಡ ತಾವು ಗಮನ ಹರಿಸಬೇಕು. ಕನ್ನಡದಲ್ಲಿ ಇಂಜಿನೀಯರಿಂಗ್, ಮೆಡಿಕಲ್ ಹಾಗೂ ಡಿಗ್ರಿ ಕಾಲೇಜುಗಳನ್ನೆಲ್ಲಾ ತರುವುದಕ್ಕೆ ತಾವು ಪ್ರಯತ್ನ ಪಡಬೇಕು ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ

ತರುತ್ತಿದ್ದೇನೆ. ಇನ್ನು ನಾನು ವಿದ್ಯಾ ಮಂತ್ರಿಗಳನ್ನು ಬಿಲ್ಡಿಂಗ್ ಡೊನೇಷನ್ ಬಗ್ಗೆ ಕೇಳಿಕೊಳ್ಳತಕ್ಕಂಥಾದ್ದು. ಯಾವ್ಯಾವ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಬಿಲ್ಡಿಂಗ್ ಡೊನೇಷನ್ ತೆಗೆದುಕೊಂಡಿದ್ದಾರೆ ಆ ಬಿಲ್ಡಿಂಗ್ ಡೊನೇಷನ್ ತೆಗೆದುಕೊಂಡಿರತಕ್ಕಂಥ ಎಲ್ಲಾ ಕಟ್ಟಡಗಳು ಕೂಡ ಸಾರ್ವಜನಿಕರಿಗೆ ಸೇರಿದಂತಹ ಸ್ವತ್ತಾಗಬೇಕು. ಪ್ರೈವೇಟ್ ಮ್ಯಾನೇಜ್‌ಮೆಂಟ್ ಇರಲಿ, ಯಾವುದೇ ಇರಲಿ. ಬಿಲ್ಡಿಂಗ್ ಡೊನೇಷನ್ ಎಂದು ತೆಗೆದುಕೊಂಡಾಗ ಅದು ಸರ್ಕಾರದ ಸ್ವತ್ತು ಆಗಬೇಕು. ಅದರಲ್ಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರಿಗೆ ಬಿಲ್ಡಿಂಗ್ ಮೇಲೆ ಯಾವುದೇ ವಿಧವಾದ ಹಕ್ಕನ್ನು ಕೊಡತಕ್ಕಂಥ ಕೆಲಸವನ್ನು ಮಾಡಬಾರದು ಎನ್ನುವಂತಹ ವಿಷಯವನ್ನು ನಾನು ಹೇಳುತ್ತಿದ್ದೇನೆ. ಆ ಕೆಲಸವನ್ನು ತಾವು ಮಾಡಬೇಕು. ತಾವು ಏನು ಆದೇಶವನ್ನು ಹೊರಡಿಸಿದ್ದೀರಿ. ಬಿಲ್ಡಿಂಗ್ ಡೊನೇಷನ್‌ನ್ನು ತೆಗೆದುಕೊಳ್ಳಬಾರದು ಆದರೂ ಬಿಲ್ಡಿಂಗ್ ಡೊನೇಷನ್‌ನ್ನು ತೆಗೆದುಕೊಳ್ಳುತ್ತಿದ್ದಾರೆ. ಅದರ ಬಗ್ಗೆ ಅವರು ಹೇಳುತ್ತಿದ್ದಾರೆ. ಬಿಲ್ಡಿಂಗ್ ಡೊನೇಷನ್‌ನ್ನು ತೆಗೆದುಕೊಳ್ಳಬಾರದು ಎಂಬ ಆದೇಶವಿಲ್ಲ ಎಂದು ಅದರಿಂದ ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ನಾನು ಹೇಳುವುದು ಏನೆಂದರೆ ಬಿಲ್ಡಿಂಗ್ ಡೊನೇಷನ್‌ನ್ನು ತೆಗೆದುಕೊಳ್ಳಬಾರದು ಯಾವ ವಿಧವಾದ ಡೊನೇಷನ್‌ನ್ನು ತೆಗೆದುಕೊಳ್ಳಬಾರದು, ಎಂಬ ಆದೇಶವನ್ನು ತಾವು ಕೊಡಬೇಕು. ಯಾವ ಯಾವ ಸಂಸ್ಥೆಗಳಲ್ಲಿ ಈ ತರಹ ತೆಗೆದುಕೊಳ್ಳುತ್ತಾರೋ ಅದನ್ನು ತಾವು ಸರ್ಕಾರದ ವತಿಯಿಂದ ತೆಗೆದುಕೊಂಡು ಸರ್ಕಾರವೇ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಮತ್ತೊಂದು ವಿಷಯ ಎಂದರೆ ವಿದ್ಯಾ ವಿದ್ಯವಿನಯಂ ದಾತ್ರಿ ; ವಿನಯವನ್ನು ಕಲಿಸುವಂತಹ ವಿದ್ಯೆ ಆಗಬೇಕು. ಇವತ್ತು ನಾವು ಏನು ನೋಡುತ್ತಿದ್ದೇವೆ ಅಂದರೆ ಪೋಲೀಸ್ ಇಲಾಖೆಯಲ್ಲಿ ಏನು ಭಾಷೆ, ಯಾವ ರೀತಿ ನಡೆದುಕೊಳ್ಳುತ್ತಾರೆ, ನಮ್ಮ ಸರ್ಕಾರಿ ಕಛೇರಿಗಳಲ್ಲಿ ಸಾರ್ವಜನಿಕರನ್ನು ಯಾವ ರೀತಿಯಿಂದ ನೋಡುತ್ತಾರೆ ಅಂದಾಗ ಅವರು ವಿದ್ಯಾವಂತರೋ ಅಥವಾ ಶಾಲೆಗೆ ಹೋಗದೆ ಇಲ್ಲಿ ಬಂದಿದ್ದಾರೋ ಎಂಬ ಭಾವನೆ ನಮ್ಮ ಮನಸ್ಸಿನಲ್ಲಿ ಬರುತ್ತದೆ. ವಿನಯ ವಿಲ್ಲದ ವಿದ್ಯೆ ವಿದ್ಯೆಯಾಗುವುದಿಲ್ಲ. ಆದುದರಿಂದ ವಿನಯ ಬರತಕ್ಕಂತ ವಿದ್ಯೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುಕೊಳ್ಳುತ್ತಿದ್ದೇನೆ. ಇವತ್ತು ಡಾಕ್ಟರ್ಸ್ ಪ್ರೈವೇಟ್ ಆಗಿ ಪ್ರಾಕ್ಟೀಸ್ ಮಾಡುತ್ತಿದ್ದರೆ ಅವರಿಗೆ ನಾನ್ ಪ್ರಾಕ್ಟಿಸಿಂಗ್ ಅಲೋಯನ್ಸ್ ಕೊಡುತ್ತಿದ್ದೀರಿ. ಅದೇ ರೀತಿ ಟೀಚರ್‌ಗಳು ಮನೆಮನೆಯಲ್ಲಿ ಪ್ರೈವೇಟ್ ಆಗಿ ಪಾಠವನ್ನು ಇಟ್ಟುಕೊಂಡು ಪ್ರತಿ ಸಬ್ಜೆಕ್ಟ್‌ಗೆ ಒಂದು ವಿಷಯಕ್ಕೆ ಇಷ್ಟು ದುಡ್ಡು ಎಂದು ಇಟ್ಟುಕೊಂಡು ಭೌತಶಾಸ್ತ್ರಕ್ಕೆ ಇಷ್ಟು, ರಸಾಯನಶಾಸ್ತ್ರಕ್ಕೆ ಇಷ್ಟು, ಗಣಿತಕ್ಕೆ ಇಷ್ಟು ಎಂದು ಹೇಳಿ 1250 ರೂ ಮಿನಿಮಮ್ ತೆಗೆದುಕೊಂಡು 500 ರೂವರೆಗೆ ಕೂಡ ಪ್ರೈವೇಟ್ ಆಗಿ ಮನೆಮನೆಯಲ್ಲಿ ಪಾಠ ಹೇಳಿ ಕೊಡುತ್ತಿದ್ದಾರೆ. ಇದರ ಪರಿಣಾಮ ಏನಾಗಿದೆ ಎಂದರೆ ಇವತ್ತು ವಿದ್ಯಾರ್ಥಿಗಳು ಸ್ಕೂಲ್‌ನಲ್ಲಿ ಓದತಕ್ಕಂಥ ಮಾಸ್ಟರ್ ಹತ್ತಿರ ಪಾಠ ಹೇಳಿಸಿಕೊಳ್ಳದಿದ್ದರೆ ಅವರು ಪರೀಕ್ಷೆಯಲ್ಲಿ ಫೇಲ್ ಆಗುತ್ತಾರೆ ಎನ್ನುವಂತಹ ಪರಿಸ್ಥಿತಿ ಬಂದಿದೆ. ಎಲ್ಲಾ ವಿದ್ಯಾರ್ಥಿಗಳು ಅವರ ಪೋಷಕರಿಗೆ ಇವತ್ತು ಒಂದು ಹೊರೆ ಆಗಿದೆ ಎಂದು, ಮನೆಗೆ ಬಂದು ಮಗು ಹೇಳುತ್ತದೆ ನಾನು ಟೀಚರ್ಸ್ ಹತ್ತಿರ ಪಾಠ ಹೇಳಿಸಿಕೊಳ್ಳದಿದ್ದರೆ ನಾನು ಫೇಲಾಗುತ್ತೇನಮ್ಮ ಎಂದು ಹೇಳುತ್ತೆ. ಹೆದರಿ, ಬೆದರಿ ಪೇರೆಂಟ್ಸ್‌ಗಳು ಅವರುಗಳನ್ನು ಮನೆಯಲ್ಲಿ ಪಾಠ

ಹೇಳಿಸಿಕೊಳ್ಳುವಂತಹ ಪರಿಸ್ಥಿತಿ ಒದಗಿಬಂದಿದೆ. ನೀವು ನಾನ್‌ಪ್ರಾಕ್ಟೀಸಿಂಗ್ ಅಲೋಯೆನ್ಸ್ ಆದರೂ ಕೊಡಿ ಅವರಿಗೆ ಹೆಚ್ಚು ಸಂಬಳವನ್ನಾದರೂ ಕೊಡಿ ಆದರೆ ಪ್ರೈವೇಟ್ ಆಗಿ ಪಾಠ ಹೇಳಿಕೊಡುವಂತಹ ವಿದ್ಯಾಭ್ಯಾಸ ಏನಿದೆ, ಓದುತ್ತಾ ಇರತಕ್ಕಂಥ ಸ್ಕೂಲ್‌ನಲ್ಲಿ ಪಾಠ ಹೇಳಿಕೊಡುವಂತಹ ಟೀಚರ್ಸ್‌ನ್ನು ಇದನ್ನು ನಿಷೇಧಿಸುವುದು ಆದ್ಯಕರ್ತವ್ಯ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೋ ಅದನ್ನು ತಾವು ಕೂಡ ಮಾಡಬೇಕಂತ ನಾನು ಕೇಳಿಕೊಳ್ಳುತ್ತಿದ್ದೇನೆ. ಈ ಸರ್ಕಾರಿ ಶಾಲೆಯಲ್ಲಿ ಅಧ್ಯಕ್ಷರೆ ಇಂಟರ್‌ನೆಟ್‌ನ್ನು ಹಾಕಿ ಕೊಡಿ ಎಂದು ಕೇಳುತ್ತಿದ್ದೇನೆ. ಎಲ್ಲಾ ಸರ್ಕಾರಿ ಶಾಲೆಗೆ ಇಂಟರ್‌ನೆಟ್ ಹಾಕಿ ಕನೆಕ್ಷನ್ ಕೊಟ್ಟು ಪ್ರತಿಯೊಂದು ಸ್ಕೂಲ್‌ನಲ್ಲಿ ಕಂಪ್ಯೂಟರ್‌ನ್ನು ಅಳವಡಿಸಿ ಸರ್ಕಾರಿ ಸ್ಕೂಲ್‌ನಲ್ಲಿ ಓದತಕ್ಕಂತ ವಿದ್ಯಾರ್ಥಿಗಳಿಗೆ ಬೇರೆ ಇತರೆ ಸ್ಕೂಲ್‌ನಲ್ಲಿ ಅಂದರೆ ಕಾನ್ವೆಂಟ್ ಮತ್ತು ಬೇರೆ ಶಾಲೆಯಲ್ಲಿ ಓದುತ್ತಿರುವಂತಹ ವಿದ್ಯಾರ್ಥಿಗಳಿಗೆ ಯಾವುದರಲ್ಲೂ ನಮ್ಮ ಸ್ಕೂಲಿನ ವಿದ್ಯಾರ್ಥಿಗಳು ಕಡಿಮೆ ಇಲ್ಲ ಎಂದು ತೋರಿಸಿ ಕೊಡಬೇಕಾದರೆ ಇನ್‌ಫರ್‌ಮೇಷನ್ ಅಂಡ್ ಟೆಕ್ನಾಲಜಿಯನ್ನು ಅವರಿಗೆ ಕೊಡಬೇಕು. ಏನೇನು ಜಗತ್ತಿನಲ್ಲಿ ಆಗುತ್ತಿದೆ ಅಂತ ಅವರಿಗೂ ಕೂಡ ತಲುಪಿಸಬೇಕು. ಒಂದು ಕಾನ್ವೆಂಟ್‌ನಲ್ಲಿ ಸಿಗುತ್ತದೆ ಬೇರೆ ಕಡೆ ಸಿಗುವುದಿಲ್ಲ ಅಂದಾಗ ಆ ಮಕ್ಕಳು ಬೇರೆ ಕಡೆಗೆ ಹೋಗಿ ಕಾಂಪಿಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ತಮ್ಮಲ್ಲಿ ದಯವಿಟ್ಟು ಕೇಳಿಕೊಳ್ಳುತ್ತಿದ್ದೇನೆ. ಇದಕ್ಕೆ ಹೆಚ್ಚು ಹಣ ಏನೂ ಖರ್ಚು ಆಗುವುದಿಲ್ಲ. ಒಂದೇ ಒಂದು ಸೆಂಟರ್ ಇಂಟರ್‌ನೆಟ್‌ನ್ನು ಹಾಕಿಕೊಂಡು ಪ್ರತಿಯೊಂದು ಸ್ಕೂಲ್‌ಗೆ ಕನೆಕ್ಷನ್ ಕೊಟ್ಟು ಮಾಡಿದ್ದೇ ಆದರೆ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಹೊತ್ತು ಕಂಪ್ಯೂಟರ್ ಏನೇನು ಸೌಲಭ್ಯಗಳನ್ನು ಕೊಡಬೇಕು, ಆ ಟೀಚರ್ಸ್‌ಗಳಿಗೆ ಏನೇನು ಮಾಹಿತಿ ಕೊಡಬೇಕು ಮತ್ತು ವಿದ್ಯಾರ್ಥಿಗಳಿಗೆ ಏನೇನು ಮಾಹಿತಿ ಕೊಡಬೇಕು ಅದನ್ನು ನೋಡುವುದಕ್ಕೆ ಅವಕಾಶವಾಗುತ್ತದೆ. ಈ ಕೆಲಸವನ್ನೂ ಕೂಡ ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಆಮೇಲೆ ದೇಶದ ಬಗ್ಗೆ, ನಮ್ಮ ರಾಜ್ಯದ ಬಗ್ಗೆ ಬೇಕಲ್ಲಾ, ಮುಖ್ಯಮಂತ್ರಿ ಯಾರು ಎಂದು ನಮ್ಮ ವಿದ್ಯಾರ್ಥಿಗಳಿಗೆ ಗೊತ್ತಿರಬೇಕಲ್ಲಾ. ನಮ್ಮ ದೇಶದ ಫಾದರ್ ಆಫ್ ದಿ ನೇಷನ್ ಯಾರು ಎಂಬುದು ಗೊತ್ತಿರಬೇಕು. ಸುಭಾಷ್‌ಚಂದ್ರಭೋಸ್ ಯಾರು ಎಂಬುದು ಗೊತ್ತಿರಬೇಕು. ಇವರೆಲ್ಲರ ಬಗ್ಗೆ ಪಠ್ಯಪುಸ್ತಕದಲ್ಲಿ ದೇಶದ ಬಗ್ಗೆ, ದೇಶಾಭಿಮಾನದ ಬಗ್ಗೆ ತುಂಬತಕ್ಕಂಥ ದೇಶಾಭಿಮಾನದ ಬಗ್ಗೆ ಪಠ್ಯ ಪುಸ್ತಕದಲ್ಲಿ ಹಾಕಿಕೊಳ್ಳದಿದ್ದರೆ, ನಮ್ಮ ಮಕ್ಕಳಿಗೆ ಏನೂ ಗೊತ್ತಾಗುವುದಿಲ್ಲ. 50 ವರ್ಷಗಳ ನಂತರವೂ ಮಹಾತ್ಮಗಾಂಧಿ ಯಾರು ಎಂಬುದು ಗೊತ್ತಿರುವುದಿಲ್ಲ. ಆ ಕಾರಣದಿಂದ 50 ವರ್ಷ ಈ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ತಾವು ಈ ಪಠ್ಯಪುಸ್ತಕಗಳಿಗೆ ಈ ವಿಷಯವು ಸೇರಿಕೊಳ್ಳಬೇಕು ಮಕ್ಕಳಿಗೆ ಈ ರೀತಿ ಜ್ಞಾನ ಸಿಕ್ಕುವ ಹಾಗೆ ತಾವು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದನ್ನು ತಾವು ಮಾಡಬೇಕು ಎಂದೂ ಕೂಡ ಇವತ್ತು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅಧ್ಯಕ್ಷರೆ, ಶಿಕ್ಷಣದಲ್ಲಿ ಕನ್ನಡವನ್ನು ಕಂಪಲ್‌ಸರಿಯಾಗಿ ಮಾಡಬೇಕು. ತಮಿಳುನಾಡಿನಲ್ಲಿ, ಮಹಾರಾಷ್ಟ್ರದಲ್ಲಿ ಬೇರೆ ಕಡೆ ಇವತ್ತು ಯಾವ ರೀತಿ ಕಾನೂನನ್ನು ತಂದಿದ್ದಾರೆ. ನಮ್ಮಲ್ಲಿ ಏನು ತೊಡಕು ಇದೆ? ಗೋಕಾಕ್ ಕಮಿಟಿ ರಿಪೋರ್ಟ್ ಬಂತು ಆ ಮೇಲೆ ಕೋರ್ಟ್‌ಗೆ ಹೋಯಿತು ಎಂದು ಹೇಳಿದ್ದೀರಿ. ಈಗ ಎಲ್ಲಾ ಕಡೆ ಅಂದರೆ ಬೇರೆ ಕಡೆ ಹೇಗೆ ಮಾಡಿದ್ದಾರೋ

ಅದೇ ತರಹ ಕಾನೂನನ್ನು ತಮ್ಮಲ್ಲೂ ಕೂಡ ತಾವು ತರುವುದಕ್ಕೆ ಅತಿ ಶೀಘ್ರವಾಗಿ ಮಾಡಬೇಕು. ಅದು ಬೇರೆ ಸ್ಕೂಲ್‌ನಲ್ಲಾಗಲಿ ಅಥವಾ ಸೆಂಟ್ರಲ್ ಸ್ಕೂಲ್‌ನಲ್ಲಾಗಲಿ, ಕರ್ನಾಟಕದಲ್ಲಿರತಕ್ಕಂಥ ಪ್ರತಿಯೊಬ್ಬ ಪ್ರಜೆಗೂ ಕೂಡ ಕನ್ನಡವನ್ನು ಕಲಿಯಬೇಕು ಎಂಬುದು ಕಡ್ಡಾಯವಾಗಬೇಕು ಎಂದು ಹೇಳಿದರೆ ಈ ಕೆಲಸವನ್ನು ಮಾಡಲೇಬೇಕು. ನನಗೆ ಗೊತ್ತಿದೆ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗೆ ತಾವು ಕೊಟ್ಟಿದ್ದೀರಿ ಅದನ್ನು ಏಕೆ ಕೊಟ್ಟಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ. ಕನ್ನಡ ಮೀಡಿಯಂ ಸ್ಕೂಲ್‌ಗೆ ಆದ್ಯತೆ ಎಂದು ಹೇಳಿ ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ತರುವುದಕ್ಕೆ ಆದ್ಯತೆ ಏನು ಎಂದು ನಾನು ತಮ್ಮಲ್ಲಿ ಕೇಳಬೇಕಾಗಿದೆ. ಕೊಡಬಾರದು ಎಂಬುದು ಎಲ್ಲಾ ಕನ್ನಡಿಗರ ಒಕ್ಕೊರಲಿನ ಕೂಗು ಇದಕ್ಕೆ ತಿಲಾಂಜಲಿ ಇತ್ತು ಕೊಡಬಾರದು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) : ಅಧ್ಯಕ್ಷರೆ, ಇಂಗ್ಲೀಷ್ ಮೀಡಿಯಂ ಕೊಡಬೇಕಾದರೆ ತಾಯಿ ಭಾಷೆ ಅದು ಯಾವುದೇ ಇರಲಿ ತಾಯಿ ಭಾಷೆಯಲ್ಲಿ ಯಾರು ಮಾಡುತ್ತಾರೆ. 1 ರಿಂದ 4ರವರೆಗೆ ಕನ್ನಡ ನಮ್ಮ ದೇಶದಲ್ಲಿ ಜಾಸ್ತಿ ಇರುವುದರಿಂದ 1 ರಿಂದ 4 ರವರೆಗೂ ಎಲ್ಲಿದೆ ಅಂತಹ ಕಡೆ ಮಾತ್ರ ನಾವು ಕೊಟ್ಟಿದ್ದೇವೆ. ತಾವು ಜವಾಬ್ದಾರಿ ಸ್ಥಾನದಲ್ಲಿ ಇರುವವರು ನಾನು ತಾವು ಮಾತನಾಡುವಾಗ ಪ್ರತಿ ಸಲ ಇಂಟರಪ್‌ಷನ್ ಮಾಡಬಾರದು ಎನ್ನುವ ದೃಷ್ಟಿಯಿಂದ ನಾನು ಅನೇಕ ಸಾರಿ ಸುಮ್ಮನೆ ಕುಳಿತುಕೊಂಡಿದ್ದೇನೆ. ಈ ರೀತಿ ಬಂದಾಗ ನಾನು ಹೇಳದಿದ್ದರೆ ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಆ ರೀತಿ ಯಾರಿಗೂ ಕೊಡುತ್ತಾ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮದರ್ ಟಂಗ್ ಅಂದರೆ ಅರ್ಥ, ಮನೆಯಲ್ಲಿ ಮಾತನಾಡತಕ್ಕಂಥ ತಾಯಿ ಭಾಷೆ ಅಲ್ಲ, ಮದರ್ ಟಂಗ್ ಅಂದರೆ ಅರ್ಥ ಯಾವ ದೇಶದಲ್ಲಿ ಇರುತ್ತಾನೋ ಆ ದೇಶದ ಭಾಷೆ ಮದರ್ ಟಂಗ್, ಇದು ಇಂಗ್ಲೀಷ್ ಡಿಕ್ಷನರಿಯಲ್ಲಿ ಇರತಕ್ಕಂಥ ಇದರ ಪರಿಭಾಷೆ ದಯವಿಟ್ಟು ಅಧ್ಯಕ್ಷರೆ ಅದರಿಂದ ಕರ್ನಾಟಕದಲ್ಲಿ ತಾಯಿ ನಾಡು ಭಾಷೆ, ಕರ್ನಾಟಕದ ಭಾಷೆ ಕನ್ನಡ ಇದು ಮದರ್‌ಟಂಗ್ ತಾಯಿಭಾಷೆ ಆದ್ದರಿಂದ ಅವರ ಮನೆಯಲ್ಲಿ ಮಾತನಾಡತಕ್ಕಂಥ ಭಾಷೆ ಆಗುವುದಿಲ್ಲ. ಅದನ್ನು ದಯವಿಟ್ಟು ಪರೀಕ್ಷಿಸಿ ನೋಡಿ. ಅದರ ಅರ್ಥ ತಾಯಿನಾಡಿನ ಭಾಷೆ ಎಂದು ಇದ್ದರೆ ಇದಕ್ಕೆ ಬೆಲೆ ಕೊಡಿ ಎಂದು ಹೇಳುತ್ತಿದ್ದೇನೆ. ಎಲ್ಲರೂ ಕೇಳುತ್ತಾರೆ ಇಂಗ್ಲೀಷ್‌ನಲ್ಲಿ ಮಾತನಾಡಬೇಕು ಎಂದು ಕೇಳುತ್ತಾರೆ. ಇದು ಆಗತಕ್ಕಂಥದ್ದು ಅಲ್ಲ. ತಮಿಳುನಾಡಿನಲ್ಲಿ ಇವತ್ತು ಕೊಡುತ್ತಾ ಇಲ್ಲ. ಆಂಧ್ರಪ್ರದೇಶದಲ್ಲಿ ಕೊಡುತ್ತಾ ಇಲ್ಲ, ಮಹಾರಾಷ್ಟ್ರ ಕೊಡುತ್ತಾ ಇಲ್ಲ, ಕರ್ನಾಟಕದಲ್ಲಿ ಕೊಡುತ್ತಿದೆ. ಗುಜರಾತ್‌ನಲ್ಲಿ ಕೊಡುತ್ತಾ ಇಲ್ಲ, ಕರ್ನಾಟಕದಲ್ಲಿ ಮಾತ್ರ ಏಕೆ ಎಂದು ಕೇಳುತ್ತಿದ್ದೇನೆ. ಕರ್ನಾಟಕದಲ್ಲಿ ಕನ್ನಡ ಮಾತೆಗೆ ಕನ್ನಡ ಭಾಷೆಗೆ ಆದ್ಯತೆಯೇ ಹೊರತು ಬೇರೆ ಯಾವ ಭಾಷೆಗೂ ಇರಬಾರದು ಎಂದು ಪ್ರತಿಪಾದನೆ ಮಾಡುತ್ತಿದ್ದೇನೆ.

ಶ್ರೀ ಎಸ್. ರಾಜಣ್ಣ : ಇವತ್ತು ಅಡ್ವೋಕೇಟ್‌ಗಳು ಹೈಕೋರ್ಟಿನಲ್ಲಿ ಕನ್ನಡ ಮಾತನಾಡುತ್ತಿದ್ದಾರಾ, ಹೈಕೋರ್ಟಿನಲ್ಲಿ ಅಪೀಲ್ ಹಾಕಬೇಕಾದರೆ ಕನ್ನಡದಲ್ಲಿಯೇ ಹಾಕುತ್ತಾರಾ? ಇಂಗ್ಲೀಷ್‌ನಲ್ಲಿ ಹಾಕುತ್ತಾರೋ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಕರ್ನಾಟಕದಲ್ಲಿ ಹೈಕೋರ್ಟ್ ಬಿಟ್ಟು ಕೆಳ ನ್ಯಾಯಾಲಯದಲ್ಲಿ ಕನ್ನಡ ಭಾಷೆ, ಹೈಕೋರ್ಟಿನಲ್ಲಿ ಇಂಗ್ಲೀಷ್ ಭಾಷೆ, ಕನ್ನಡ ಭಾಷೆಯಲ್ಲಿ ಹಾಕಿದ್ದನ್ನ ಇಂಗ್ಲೀಷ್‌ಗೆ ನಾನು ತರ್ಜುಮೆ ಮಾಡಿ ಕೊಡುತ್ತೇನೆ. ಕರ್ನಾಟಕದಲ್ಲಿ ಎಲ್ಲಾ ಕಡೆ ಕನ್ನಡ ಭಾಷೆ ಇದೆ, ಎನ್ನತಕ್ಕಂಥದ್ದನ್ನು ದಯಮಾಡಿ ಹೇಳುತ್ತಿದ್ದೇನೆ. ತಾವು ಕೇಳಬೇಕು. ಮಾನ್ಯ ರಾಜಣ್ಣನವರು ನಿಮ್ಮ ಪೆಟಿಷನ್‌ನ್ನು ಕನ್ನಡದಲ್ಲಿ ದಾಖಲು ಮಾಡಿಕೊಡುತ್ತೇನೆ. ತಮ್ಮ ಅಹವಾಲುಗಳನ್ನು ಏನು ಎನ್ನತಕ್ಕಂಥನ್ನು ಹೇಳುತ್ತಿದ್ದೇನೆ, ತಾವು ಕೇಳಬೇಕು. ಆದರೆ ಕರ್ನಾಟಕದಲ್ಲಿ ಕರ್ನಾಟಕದ ಜಡ್ಜ್‌ಗಳು ಬಂದಾಗ ಮಾತ್ರ ಬೇರೆಯವರನ್ನು ತಂದಾಗ ಕನ್ನಡ ಭಾಷೆ ಬಾರದೇ ಇದ್ದಾಗ ಅವರಿಗೆ ತರ್ಜುಮೆ ಮಾಡಿ ಕೊಡುವುದು ನಮ್ಮ ಕರ್ತವ್ಯ ಆಗುತ್ತದೆ. ಭಾಷೆಯನ್ನು ಅಕ್ಸೆಪ್ಟ್ ಮಾಡಿದ್ದಾರೆ. ಆ ಭಾಷೆಯಲ್ಲಿ ಕೊಡಬೇಕಾಗುತ್ತದೆ. ಅದಕ್ಕೆ ತನ್ನಿ. ನಾವು ಹೋರಾಟ ಮಾಡುತ್ತೇವೆ. ಅದಕ್ಕೆ ಬೆಂಗಳೂರಿನಲ್ಲಿ ಸುಪ್ರೀಂಕೋರ್ಟ್ ಅನ್ನು ತನ್ನಿ ಎಲ್ಲಾ ಕನ್ನಡದಲ್ಲಿ ತರೋಣ ಏಕೆ? ಆಗುವುದಿಲ್ಲ ನೋಡೋಣ. ಕನ್ನಡದಲ್ಲಿ ಏನೂ ಕಷ್ಟ ಇಲ್ಲ ರಷ್ಯಾದಲ್ಲಿ ಇವತ್ತು ರಷ್ಯನ್ ಭಾಷೆ, ಪ್ರಾನ್ಸ್‌ನಲ್ಲಿ ಫ್ರಾನ್ಸ್, ರೋಮ್‌ನಲ್ಲಿ ರೋಮ್ ಭಾಷೆ, ಕರ್ನಾಟಕದಲ್ಲಿ ಮಾತ್ರ ಎಲ್ಲಾ ಭಾಷೆಗಳು. ಬೇರೆ ಎಲ್ಲೂ ಕೂಡ ಇಲ್ಲ. ಇಂತಹ ಪರಿಸ್ಥಿತಿ ಇವತ್ತು ಬಂದಿದೆ. ಇದನ್ನು ತಪ್ಪಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಬೇಗ ಮುಗಿಸಿ, ನಾನು ಹೇಳುತ್ತಿದ್ದೇನೆ, ತಾವು ಮಾತನಾಡುತ್ತಿದ್ದೀರಿ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ಒಬ್ಬ ಹೆಣ್ಣು ಮಗಳು ಮಾತನಾಡುವಾಗ ಟೈಮ್ ನಿಗದಿ ಮಾಡುತ್ತೀರೋ?

ಶ್ರೀ ಹೆಚ್.ಡಿ. ಬಸವರಾಜ್ : ಅಧ್ಯಕ್ಷರೆ, ಈಗ ಮಹಿಳೆಯರಿಗೆ ಮೀಸಲಾತಿ ಕೊಡುತ್ತೇವೆ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೂ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಿಮಗೆ 18 ಪರ್ಸೆಂಟ್ ನಮಗೆ 33 ಪರ್ಸೆಂಟ್ ಎಂಬುದನ್ನು ಮರೆಯಬೇಡಿ.

1.10 ಪಿ.ಎಂ.

ಅಧ್ಯಕ್ಷರೇ, ಇವೊತ್ತಿನ ದಿವಸ ಸ್ಟೂಡೆಂಟ್‌ಗಳಿಗೆ ಪರೀಕ್ಷೆಯನ್ನು ಮಾಡುತ್ತಿದ್ದಾರೆ. ಸ್ಟೂಡೆಂಟ್‌ಗಳಿಗೆ ಪರೀಕ್ಷೆಯನ್ನು ಏಕೆ ಮಾಡುತ್ತಾರೆ ಎಂದರೆ ಅವರಲ್ಲಿ ವಿದ್ಯೆ ಇದೆಯೋ ಇಲ್ಲವೋ ಎಂದು. ನನ್ನದು ಒಂದು ಸಜೇಷನ್ ಇದೆ. ಅಮೇರಿಕಾದಲ್ಲಿ ಒಂದು ಪದ್ಧತಿ ಇದೆ, ಏನೆಂದರೆ ಸ್ಟೂಡೆಂಟ್‌ಗಳನ್ನು ಪರೀಕ್ಷೆ ಮಾಡುವುದರ ಜೊತೆಯಲ್ಲಿ ಆ ಸ್ಕೂಲ್‌ನಲ್ಲಿ ಪಾಠ ಹೇಳಿಕೊಡತಕ್ಕಂಥ...

ಶ್ರೀ ಎಸ್.ಎಸ್. ಪಾಟೀಲ್ : ಉಪಾಧ್ಯಕ್ಷರೆ, ಅವರು ಸಂಪೂರ್ಣ ಕನ್ನಡ ಜಾರಿಗೆ ಬರಬೇಕು ಎಂದು ಹೇಳುತ್ತಾರೆ, ಸ್ಟೂಡೆಂಟ್ ಎಂಬ ಆಂಗ್ಲ ಶಬ್ಧವನ್ನು ಉಪಯೋಗಿಸುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಾಧ್ಯವೇ ಇಲ್ಲ. ಸ್ಟೂಡೆಂಟ್ಸ್ - ವಿದ್ಯಾರ್ಥಿಗಳು, ರೈಲ್ವೆಸ್ಟೇಷನ್ : ಉಗಿಬಂಡಿ ಹೇಳಿಕೊಂಡು ಹೋಗುತ್ತದೆ. ಕನ್ನಡದಲ್ಲಿ ತರ್ಜುಮೆ ಮಾಡತಕ್ಕಂಥ ಸಂದರ್ಭದಲ್ಲಿ

ಯಾವ್ಯಾವುದು ಸರಿಯಾಗಿದೆಯೋ ಆ ಪದಗಳನ್ನು ಉಪಯೋಗಿಸಿಕೊಳ್ಳಿ ಎಂಬ ಮಾತನ್ನು ತಾವೇ ಹೇಳಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಹೇಳುವುದು ಏನೆಂದರೆ, ಮೊದಲು ನಾವು ವಿಧಾನಸಭೆಯಲ್ಲಿ ಕನ್ನಡದ ಬಳಕೆಯನ್ನು ಸಂಪೂರ್ಣವಾಗಿ ಜಾರಿಗೆ ತಂದರೆ ನಂತರ ರಾಜ್ಯದಲ್ಲಿ ಸಂಪೂರ್ಣವಾಗಿ ಕನ್ನಡ ಜಾರಿಗೆ ಬರುತ್ತದೆ, ಅಲ್ಲಿಯವರೆಗೆ ಬರುವುದಿಲ್ಲ. ಇಲ್ಲಿ ಸಂಪೂರ್ಣವಾಗಿ ಕನ್ನಡ ಬಳಕೆಯಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಇದು ಅಭ್ಯಾಸಬಲ. ಗೋಕಾಕ್ ಚಳುವಳಿ ನಡೆಯುತ್ತಿತ್ತಲ್ಲಾ ಆಗ ಗೋಕಾಕ್ ಚಳಿವಳಿಯ ಒಬ್ಬ ಯುವಕ ಪಾಟೀಲ್‌ಪುಟ್ಟಪ್ಪನವರ ಬಳಿ ಚಂದಾ ಹಣ ಕೇಳಲಿಕ್ಕೆ ಹೋದ. ಅವರು ಹಣ ಕೊಟ್ಟರು, ಹಣ ಕೊಟ್ಟ ತಕ್ಷಣ ಥ್ಯಾಂಕ್ಯೂ ಸಾರ್ ಎಂದ. ಅವರು ಹೇಳಿದರು ಅಲ್ಲಪ್ಪ ನೀನು ಗೋಕಾಕ್ ಚಳುವಳಿಯಲ್ಲಿದ್ದೀಯೇ ಥ್ಯಾಂಕ್ಸ್ ಎಂಬ ಆಂಗ್ಲ ಶಬ್ಧವನ್ನು ಉಪಯೋಗಿಸುತ್ತಿಯಲ್ಲ ಎಂದಾಗ ಆತ ಐ ಆಮ್ ಸಾರಿ ಸಾರ್ ಎಂದ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಗ ವಿದೇಶಗಳಲ್ಲಿ ಏನು ಪದ್ಧತಿ ಇದೆಯೆಂದರೆ, ವಿಧ್ಯಾರ್ಥಿಗಳನ್ನು ಪರೀಕ್ಷೆ ಮಾಡುತ್ತಾರೆ. ಆದರೆ ಆ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವಂಥ ಟೀಚರ್ಸ್‌ಗಳನ್ನು ಯಾರು ಪರೀಕ್ಷೆ ಮಾಡುವವರು? ಆದ್ದರಿಂದ ಆ ಅಧ್ಯಾಪಕರನ್ನು ಪರೀಕ್ಷೆ ಮಾಡಬೇಕಾದರೆ ಒಂದು ಪದ್ಧತಿಯನ್ನು ಇಟ್ಟಿದ್ದಾರೆ. ಆ ಪದ್ಧತಿಯನ್ನು ತಾವೂ ಸಹ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಪರೀಕ್ಷೆಯ ಕೊನೆಯ ದಿವಸ ಒಂದು ಪ್ರೊಫಾರ್ಮ, ಪಟ್ಟಿಯನ್ನು ತಯಾರು ಮಾಡುತ್ತಾರೆ. ಆ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡತಕ್ಕಂಥ ಟೀಚರ್ ಯಾರು ಇದ್ದಾನೆ, ಅವನು ಸರಿಯಾಗಿ ಪಾಠ ಹೇಳಿಕೊಡುತ್ತಾನೋ ಇಲ್ಲವೋ ಎಂದು ನೋಡಬೇಕಾದರೆ ಒಂದು ಪ್ರೊಫಾರ್ಮ ಕೊಟ್ಟು ವಿದ್ಯಾರ್ಥಿಗಳಿಗೆ ಮಾರ್ಕ್ ಹಾಕು ಎಂದು ಹೇಳುತ್ತಾರೆ. ಟೀಚರ್ ಸರಿಯಾದ ಸಮಯಕ್ಕೆ ಸ್ಕೂಲಿಗೆ ಬರುತ್ತಿದ್ದನೋ? ಪಾಠ ಸರಿಯಾಗಿ ಮಾಡುತ್ತಿದ್ದನಾ, ಅಥವಾ ಏನಾದರೂ ಬೈಯ್ಯುತ್ತಿದ್ದನಾ, ಹೊಡೆಯುತ್ತಿದ್ದನಾ ಪಂಕ್ಚುಯಾಲಿಟಿ ಇದೆಯಾ ಇಲ್ಲವೇ? ಅದರ ಬಗ್ಗೆ ಕೆಳಗಡೆ ಸ್ಟೂಡೆಂಟ್ಸ್ ಸಹಿ ಹಾಕುವುದಿಲ್ಲ. ಆದರೆ ಪ್ರೊಫಾರ್ಮ ಕೊಟ್ಟು ಟೀಚರ್ಸ್ ಕೊನೆಗೆ ಹೋಗುವಾಗ ಅದನ್ನು ಕಲೆಕ್ಟ್ ಮಾಡುತ್ತಾರೆ. ಅದರಲ್ಲಿ ಅಂದರೆ ವಿದ್ಯಾರ್ಥಿಗಳ ದೃಷ್ಟಿಕೋನದಲ್ಲಿ ಯಾರಾದರೂ ಟೀಚರ್ ಸರಿಯಾಗಿ ಪಾಠ ಹೇಳಿಕೊಡುತ್ತಾ ಇಲ್ಲ, ಹೊಡೆಯುತ್ತಾನೆ, ಆ ಸಬ್ಜೆಕ್ಟ್ ಮೇಲೆ ಸರಿಯಾಗಿ ಆತನಿಗೆ ಜ್ಞಾನ ಇಲ್ಲ ಎಂದಾಗ ಆ ಟೀಚರ್‌ನ್ನು ಮನೆಗೆ ಕಳುಹಿಸುವಂಥ ಪಾಠವನ್ನು ವಿದೇಶದಲ್ಲಿ ಇಟ್ಟು ಕೊಂಡಿದ್ದಾರೆ. ನಾನು ಕೇಳುತ್ತಿದ್ದೇನೆ, ನಮ್ಮ ಟೀಚರ್ಸ್ ಸರಿಯಾಗಿ ಕೆಲಸ ಮಾಡಬೇಕಾದರೆ ಇಂತಹ ಒಂದು ಪದ್ಧತಿಯನ್ನು ತೆಗೆದುಕೊಂಡು ಬಂದು ನಮ್ಮ ವಿದ್ಯಾರ್ಥಿಗಳಿಗೂ ಆ ಪ್ರೊಫಾರ್ಮ ಕೊಡಿ, ಕೊಟ್ಟು ಒಂದುಸಾರಿ ಪರೀಕ್ಷೆ ಮಾಡಿನೋಡಿ. ಟೆಸ್ಟ್ ಕೇಸ್ ಒಂದು ಕಡೆ. ಯಾವುದಾದರೂ ಒಂದು ಕೇಸ್‌ನಲ್ಲಿ ಮಾಡಿನೋಡಿ. ಆ ಟೀಚರ್ಸ್‌ಗಳು ಕ್ಲಾಸಿಗೆ ಸರಿಯಾದ ಸಮಯಕ್ಕೆ ಬರುತ್ತಾರೆ, ಸರಿಯಾಗಿ ಡ್ರೆಸ್ ಹಾಕಿಕೊಂಡು ಬರುತ್ತಾರೋ ಇಲ್ಲವೋ ಎಂದು ಕೂಡ ನೋಡುತ್ತಾರೆ. ಉಪಾಧ್ಯಕ್ಷರೆ, ಇವೊತ್ತು ಟೀಚರ್

ಸರಿಯಾಗಿದ್ದರೆ ಮಕ್ಕಳು ಸರಿಯಾಗಿರುತ್ತಾರೆ. ಅವರೇ ಬಟ್ಟೆಗಳನ್ನು ಸರಿಯಾಗಿ ಹಾಕಿಕೊಂಡು ಬರದಿದ್ದರೆ ಮಕ್ಕಳು ಸಹ ಸರಿಯಾಗಿ ಬಟ್ಟೆಗಳನ್ನು ಹಾಕಿ ಕೊಂಡುಬರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಒಂದು ಡ್ರೆಸ್ ಕೋಡ್, ಇದನ್ನೂ ಸಹ ಪರಿಪಾಠಕ್ಕೆ ಇಟ್ಟುಕೊಳ್ಳುತ್ತಾರೋ ಇಲ್ಲವೋ ನೋಡಬೇಕಾದರೆ ಅವರು ಮಾಡೆಲ್ ಟೀಚರ್ ಆದಾಗ, ಸ್ಟೂಡೆಂಟ್‌ಗಳು ಮಾಡೆಲ್ ಸ್ಟೂಡೆಂಟ್‌ಗಳಾಗುತ್ತಾರೆ. ಈ ಪಂಕ್ತಿಯನ್ನು ಹಾಕಿಕೊಳ್ಳಬೇಕಾದರೆ ಅದನ್ನೂ ಕೂಡ ತಾವು ಪ್ರಯೋಗಾರ್ಥವಾಗಿ ತೆಗೆದುಕೊಂಡು ಬಂದು ಪರೀಕ್ಷೆ ಮಾಡಿನೋಡಿ. ಈ ಪರೀಕ್ಷೆಯಲ್ಲಿ ಎಷ್ಟು ಜನ ಟೀಚರ್‌ಗಳು ಉತ್ತೀರ್ಣರಾಗುತ್ತಾರೋ ಎಂಬುದು ಗೊತ್ತಾಗುತ್ತದೆ. ನಾವು ಅವರಿಗೆ ಮನೆಗೆ ಕಳುಹಿಸಿ ಎಂದು ಹೇಳುವುದಿಲ್ಲ, ಆದರೆ ನೀವು ಅವರಿಗೆ ಒಂದು ಗೈಡ್‌ಲೈನ್ಸ್ ಕೊಟ್ಟು ಈ ರೀತಿ ವಿದ್ಯಾರ್ಥಿಗಳು ಹೇಳುತ್ತಾರೆ ಅದನ್ನು ಸರಿಪಡಿಸಿಕೊಳ್ಳಿ ಎಂದು ಹೇಳುವುದಕ್ಕಾದರೂ ಬರುತ್ತದೆ. ಅದನ್ನು ಪರೀಕ್ಷೆ ಮಾಡಿ ಎಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಂಡು Education must be for the national unity. ಎಜುಕೇಷನ್ ಎಂದರೆ ಯೂನಿವರ್ಸಲ್ ಏಜ್ಯುಕೇಷನ್ ಆಗಬೇಕು. ವಿಶ್ವಮಾನವನಾಗತಕ್ಕಂಥ ಏಜುಕೇಷನ್ ಆಗಬೇಕು, ಇದನ್ನು ತಾವು ಮಾಡುವುದಕ್ಕೆ ಸಹಕಾರ ನೀಡಿ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ಮಾನ್ಯ ವಯಸ್ಕರ ಶಿಕ್ಷಣಸಚಿವರಾದ ಕೃಷ್ಣಪ್ಪನವರು ಇಲ್ಲೇ ಇದ್ದಾರೆ, ಇವೊತ್ತು ಗೌರ್ನಮೆಂಟ್ ಪ್ರೆಸ್‌ನ ಯೂನಿಯನ್‌ನಲ್ಲಿ ಯಾರ್‍ಯಾರು ಪ್ರೆಸಿಡೆಂಟ್‌ಗಳು ಇದ್ದಾರೆ ಅವರುಗಳನ್ನೆಲ್ಲಾ ಟ್ರಾನ್ಸಫರ್ ಮಾಡಿದ್ದಾರೆ. ಆ ಡೈರಕ್ಟರ್‌ರವರು ಏಕೆ ಆ ರೀತಿ ಮಾಡುತ್ತಾರೋ ಗೊತ್ತಾಗುತ್ತಿಲ್ಲ. ಗೌರ್ನಮೆಂಟ್ ಪ್ರೆಸ್‌ನಲ್ಲಿ ಇವೊತ್ತಿನ ದಿವಸ ಕೈಕಟ್ಟಿಕೊಂಡು ಕೆಲಸ ಮಾಡದೆ ಕುಳಿತಿದ್ದಾರೆ. ಎಲ್ಲಾ ಕೆಲಸಗಳನ್ನು ಹೊರಗಡೆ ಪ್ರಿಂಟ್ ಮಾಡಿಸುತ್ತಿದ್ದಾರೆ. ಈ ರೀತಿ ಏತಕ್ಕೆ ಮಾಡುತ್ತಿದ್ದಾರೆ. ಗೊತ್ತಿಲ್ಲ. ಆದ್ದರಿಂದ ಇದನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ತಮಗೆ ಅಭಿನಂದನೆ ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷರೆ ಶಿಕ್ಷಣ ಇಲಾಖೆಯ ಬೇಡಿಕೆ ಮೇಲೆ ಚರ್ಚೆಯಲ್ಲಿ ಭಾಗವಹಿಸುತ್ತಾ, ಈ ಇಲಾಖೆಯಲ್ಲಿ ಇರತಕ್ಕಂಥ ಕೆಲವು ಲೋಪ ದೋಷಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಸನ್ಮಾನ್ಯ ಸಚಿವರಾಗಿರತಕ್ಕಂಥ ಗೋವಿಂದೇಗೌಡರು ಪ್ರಾಮಾಣಿಕವಾಗಿ ಆ ಇಲಾಖೆಯಲ್ಲಿ ಕೆಲಸ ಮಾಡಿದರೂ ಸಹ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಫಲಿತಾಂಶ ಸಿಕ್ಕಿಲ್ಲ ಎನ್ನತಕ್ಕಂಥದನ್ನು ನಾವು ಒಪ್ಪಲೇ ಬೇಕಾಗುತ್ತದೆ. ಇವೊತ್ತು ಶಿಕ್ಷಣ ಇಲಾಖೆಯ ಮೇಲೆ ಬಹಳಷ್ಟು ಜನ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಗ್ರಾಮಾಂತರ ಪ್ರದೇಶದ ಶಿಕ್ಷಣ ವ್ಯವಸ್ಥೆಯಲ್ಲಿರತ್ಕಂಥ ತೊಡಕುಗಳ ಬಗ್ಗೆ ಅವ್ಯವಸ್ಥೆಗಳ ಬಗ್ಗೆ ಸನ್ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ತಾವು ಕೊಟ್ಟಂಥ ವರದಿಯಲ್ಲಿ ಹೊಸ ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಎನ್ನುವ ಮಾತನ್ನು ಹೇಳಿದ್ದಾರೆ. ಒಂದು ಹೊಸ ಶಾಲೆಯನ್ನು ಪ್ರಾರಂಭ ಮಾಡಬೇಕಾದರೆ ಅದರ ಅವಶ್ಯಕತೆಗಳು ಏನು ಎನ್ನತಕ್ಕಂಥದ್ದು, ಅದರ ಬೇಡಿಕೆಗಳು ಯಾವರೀತಿ ಬರುತ್ತದೆ ಎಂಬ ವಿಚಾರಗಳು ಬಂದಾಗ ಬಹುಶಃ ತಮ್ಮ ಇಲಾಖೆಯಲ್ಲಿರತಕ್ಕ ಶಿಕ್ಷಕರು ಸೆನ್ಸಸ್ ಮಾಡಿ ಎಲ್ಲಿ ವಿದ್ಯಾರ್ಥಿಗಳು ಇದ್ದಾರೆ, ಇಲ್ಲಿ ಹೊಸ ಶಾಲೆಯನ್ನು ಪ್ರಾರಂಭ ಮಾಡಬಹುದು

ನ್ನತಕ್ಕಂಥ ಅನಿಸಿಕೆಯನ್ನು ವ್ಯಕ್ತಪಡಿಸಿದ ಮೇಲೆ ಹಲವು ಜನಪ್ರತಿನಿಧಿಗಳು ಕೊಟ್ಟಂಥ ಪತ್ರದ ನಾರದಮೇಲೆ ತಾವು ಶಾಲೆಯನ್ನು ಪ್ರಾರಂಭ ಮಾಡುತ್ತೀರಿ. ಆದರೆ ಗ್ರಾಮಾಂತರ ಪ್ರದೇಶಗಳ ಡ್ಡಗಾಡುಗಳಲ್ಲಿ ಇರತಕ್ಕಂಥ ಅಥವಾ ಹಳ್ಳಿಗಾಡುಗಳ ಪರಿಸರದಲ್ಲಿ ಇರತಕ್ಕಂಥ ಜನರಿಗೆ ಹೊಸ ಲೆಗಳನ್ನು ಪ್ರಾರಂಭ ಮಾಡಲಿಕ್ಕೆ ಬಹಳಷ್ಟು ಕಷ್ಟ ಇದೆ. ಅಧ್ಯಾಪಕರಿಗೆ ಅಲ್ಲಿಗೆ ಹೋಗುವುದಕ್ಕೆ ನಸ್ಸೇ ಇರುವುದಿಲ್ಲ. ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೇ ಸಿಗುವುದಿಲ್ಲ ಎಂಬ ವರದಿಯನ್ನು ಕೊಡುತ್ತಾರೆ. ತಹ ಸಂದರ್ಭದಲ್ಲಿ ಶಾಲೆಗಳು ಪ್ರಾರಂಭವಾಗತಕ್ಕಂಥದ್ದು ಹೇಗೆ? ಒಂದುವೇಳೆ ಯಾವುದೇ ನಪ್ರತಿನಿಧಿಗಳು ತಮ್ಮ ಪತ್ರದ ಮುಖಾಂತರ ಆ ಪರಿಸರಕ್ಕೆ ಒಂದು ಶಾಲೆಯನ್ನು ಜಿಲ್ಲಾ ಚಾಯಿತಿಯಿಂದ ಮಂಜೂರು ಮಾಡಿದರೆ ಆ ಶಾಲೆಯನ್ನು ತಾವು ಹೇಗೆ ಪ್ರಾರಂಭ ಮಾಡುತ್ತೀರಿ? ಮ ಮೂಲಭೂತವಾದ ಪ್ರಶ್ನೆ ಅಲ್ಲಿ ತಾವು ಕೇಳುತ್ತೀರಿ, ಅದಕ್ಕೆ ಕೊಠಡಿ ಇದೆಯೇ? ಅದಕ್ಕೆ ಸ್ಥಳ ನೆಯೇ, ಅದಕ್ಕೆ ಬೇಕಾಗಿರುವಂತಹ ವ್ಯವಸ್ಥೆಗಳನ್ನು ಮಾಡಿಕೊಡುವಂಥ ಜವಾಬ್ದಾರಿಯನ್ನು ಾರಾದರೂ ಹೊತ್ತು ಕೊಳ್ಳುತ್ತಾರೆಯೇ ಎನ್ನತಕ್ಕಂಥದ್ದು. ಉದಾಹರಣೆಗೆ ಹೇಳುವುದಾದರೆ ಒಂದು ನತಾ ಕಾಲೋನಿಯ ಪರಿಸರದಲ್ಲಿ ಒಂದು ಶಾಲೆ ಪ್ರಾರಂಭ ಮಾಡಬೇಕು, ಅಲ್ಲಿ ಯಾರು ಶಾಲೆಯನ್ನು ೖಸಿ ಕೊಡಬೇಕಾಗುತ್ತದೆ, ಅಥವಾ ಅದಕ್ಕೆ ಯಾರು ಅನುಕೂಲಕರವಾದ ಬೆಂಚು, ಕುರ್ಚಿ, ಕಪ್ಪು ಲಗೆ ಏನು ಬೇಕಾಗುತ್ತದೆ ಅದನ್ನು ಕೊಡಿಸತಕ್ಕಂಥ ಕೆಲಸವನ್ನು ಯಾರು ಮಾಡಬೇಕಾಗುತ್ತದೆ. ಮಾನ್ಯವಾಗಿ ಇದಕ್ಕೆ ಶಿಕ್ಷಣ ಇಲಾಖೆಯ ಜವಾಬ್ದಾರಿ ಏನು ಇತ್ತು, ಆ ಜವಾಬ್ದಾರಿಯನ್ನು ಯಾರು ರ್ವಹಿಸಬೇಕಾಗುತ್ತದೆ, ತಮ್ಮ ಇಲಾಖೆಯೇ ನಿರ್ವಹಿಸಬೇಕಾಗುತ್ತದೆಯೆ ಅಥವಾ ಊರಿನ ನಪ್ರತಿನಿಧಿಗಳು ಎಷ್ಟು ಸಹಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥದ್ದನ್ನು ತಾವು ಚಿಂತನೆ ಾಡಬೇಕಾಗುತ್ತದೆ. ಸಾಮಾನ್ಯವಾಗಿ ಪಟ್ಟಣಗಳಲ್ಲಿ ಅಥವಾ ಶ್ರೀಮಂತವರ್ಗದ ಜನರಿರತಕ್ಕ ದೇಶಗಳಲ್ಲಿ ಇದನ್ನೆಲ್ಲಾ ವ್ಯವಸ್ಥೆ ಮಾಡುತ್ತಾರೆ. ಕೆಲವು ಗ್ರಾಮಪಂಚಾಯಿತಿಗಳ ಅಧ್ಯಕ್ಷರು ಅಥವಾ ಮಪಂಚಾಯಿತಿಯವರು ತಾತ್ಕಾಲಿಕವಾಗಿ ಬೇಕಾದಂಥ ಕೊಠಡಿಗಳು ಇರಬಹುದು ಅಥವಾ ತ್ಕಾಲಿಕವಾಗಿ ಬೇಕಾದಂಥ ಪೀಠೋಕರಣಗಳನ್ನು ಅಥವಾ ಏನಾದರೂ ತಮ್ಮ ಅವಶ್ಯಕತೆಗಳನ್ನು ರೈಸುತ್ತಾರೆ. ಆದರೆ ಪೂರೈಸಲಿಕ್ಕೆ ಆಗದೇ ಇರತಕ್ಕಂಥ ಎಷ್ಟು ಶಾಲೆಗಳು ಮಂಜೂರಾತಿಯಾಗಿ ಲ್ಲಿಯತನಕ ಪ್ರಾರಂಭವಾಗಿಲ್ಲ ಎನ್ನತಕ್ಕಂಥ ಅಂಕಿಸಂಖ್ಯೆಯನ್ನು ತಾವೇನಾದರೂ ತರಿಸಿದ್ದೀರಾ? ಆ ವಾಬ್ದಾರಿಯನ್ನು ಯಾರು ಹೊರಬೇಕಾಗುತ್ತದೆ? ಮತ್ತು ತಾವು ಒಂದು ಶಾಲೆ ಮಂಜೂರಾಗಬೇಕಾದರೆ ಶಾಲೆಯಲ್ಲಿ ಏನು ಮೂಲಭೂತವಾದಂಥ ಸೌಲಭ್ಯ ಬೇಕು, ತಾವು ಕೊಠಡಿ ಕೊಡುತ್ತೀರಿ, ಆ ಠಡಿಯನ್ನು ಮಂಜೂರಾತಿ ಮಾಡಿದ ತಕ್ಷಣ ಅದಕ್ಕೆ ಬೇಕಾದಂಥ ಆಟದ ಮೈದಾನ, ನಿವೇಶನ ತ್ತು ಅಧ್ಯಾಪಕರು. ಈ ಅಧ್ಯಾಪಕರನ್ನು ನೇಮಕ ಮಾಡಬೇಕಾದರೆ ಬಹುಶಃ ಕೋಳಿ ಹತ್ತಿರ ಕೇಳಿ ಸಾಲೆ ಅರಿದಂತೆ. ಯಾರು ಬರುತ್ತೀರಿ ಯಾರು ಬರುತ್ತೀರಿ, ಯಾರು ಬರುತ್ತೀರಿ ಎಂದು ಕೇಳಿಕೊಂಡು ೋಗುತ್ತೀರಿ ಕೊನೆಗೆ ಯಾರೂ ಬರದಿದ್ದರೆ ಆ ಶಾಲೆ ಪ್ರಾರಂಭವಾಗುವುದಿಲ್ಲ. ಯಾರಾದರೂ ವರ ಊರಿಗೆ ಹತ್ತಿರ ಇದ್ದರೆ, ಅವರ ಮನೆಗೆ ಹತ್ತಿರ ಇದ್ದರೆ ಆ ಶಾಲೆಗೆ ಡೆಪ್ಯೂಟೇಷನ್‌ನಲ್ಲಿ ೋಗಿ ಆ ಶಾಲೆಯನ್ನು ಪ್ರಾರಂಭ ಮಾಡಲಿಕ್ಕೆ ಇಚ್ಛೆಪಡುತ್ತಾರೆಯೇ ಹೊರತು ಇಲ್ಲದಿದ್ದರೆ ಯಾವುದೇ

ಪ್ರಭಾವದಿಂದ, ರಾಜಕೀಯ ಒತ್ತಡಗಳಿಂದ ಶಾಲೆಗೆ ಹೋಗದೆ ಆ ಶಾಲೆ ಪ್ರಾರಂಭವಾಗದೇ ಇರತಕ್ಕಂ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಬಹುಶಃ ನೀವು ಏನು ಮಾಡುತ್ತಿದ್ದೀರಿ ಎಂ ಹೇಳಿದರೆ ಅಧಿಕಾರಿಗಳ ಕೈಕಾಲುಗಳನ್ನು ಕಟ್ಟಿ ಅವರಿಗೆ ಈ ಕೆಲಸವನ್ನು ಮಾಡಿ, ಈ ಕೆಲಸವ ಮಾಡಿ ಎನ್ನತಕ್ಕಂಥ ಕೆಲಸವನ್ನು ನೇಮಿಸುತ್ತೀರೇ ಹೊರತು ಪ್ರಾಮಾಣಿಕವಾಗಿ ಕಾರ್ಯಗತವಾಗ ಇರುವುದನ್ನು ನಾವು ಕಾಣುತ್ತಿದ್ದೇವೆ. ಇವೊತ್ತು ಡೆಪ್ಯುಟೇಷನ್‌ನಲ್ಲಿ ತಾವು ಶಾಲೆಯನ್ನು ಪ್ರಾರಂ ಮಾಡುವುದಕ್ಕೆ ಎಷ್ಟು ಅಧ್ಯಾಪಕರನ್ನು ಕಳುಹಿಸಿದ್ದೀರಿ? ಆ ಡೆಪ್ಯೂಟೇಷನ್ ಮಾಡಿರುವಂತಹದ್ದರ ಎಷ್ಟು ಅಧ್ಯಾಪಕರು ಆ ಶಾಲೆಗೆ ಹೋಗಿದ್ದಾರೆ, ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ ಎನ್ನು ಅಂಕಿಸಂಖ್ಯೆಯನ್ನು ತಾವು ತರಿಸಬೇಕಾಗುತ್ತದೆ. ನಾವು ಸಾಮಾನ್ಯವಾಗಿ ಮಾತನಾಡತಕ್ಕಂಥ ಸಂದರ್ಭದ ಅಂಕಿಸಂಖ್ಯೆಗಳನ್ನು ಕೊಡುತ್ತೀರಿ, ಇಂತಿಷ್ಟು ಶಾಲೆಗಳು ಪ್ರಾರಂಭವಾಗಿದೆ, ಇಂತಿಷ್ಟು ಕೊಠಡಿಗ ಇದೆ, ನಾವೆಲ್ಲಾ ಪರಿಪೂರ್ಣವಾಗಿದ್ದೇವೆ ಎಂಬ ಮಾತನ್ನು ಹೇಳುತ್ತೀರೀಯೆ ಹೊರತು ಈ ಶಾಲೆ ಮೂಲಭೂತ ಬೇಡಿಕೆಗಳ ಬಗ್ಗೆ, ಒಂದು ಶಾಲೆ ಪ್ರಾರಂಭವಾಗಿ ನಡೆಯಬೇಕಾದರೆ ಏನೇ ಸೌಲಭ್ಯಗಳು ಬೇಕು ಎನ್ನತಕ್ಕಂಥದ್ದು. ಒಂದು ಶಾಲೆಗೆ ನಿವೇಶನ ಬೇಕಾದರೆ ಅದಕ್ಕಾಗಿ ಡಿ.ಡಿ.ಪಿ. ಕಛೇರಿಗೆ ಹೋಗಬೇಕಾಗುತ್ತದೆ, ಬಿ.ಇ.ಓ. ಕಛೇರಿಯಿಂದ ಆಗುವುದಿಲ್ಲ. ತಾಲ್ಲೂಕಿನಲ್ಲಿ ಇರತಕ್ಕ ಅಧಿಕಾರಿಗಳಿಗೆ ಅದಕ್ಕೆ ಅರ್ಜಿಯನ್ನು ಕೊಡುವುದಲ್ಲ, ನಮ್ಮ ಜಿಲ್ಲಾಮಟ್ಟದಲ್ಲಿರತಕ್ಕ ಅಧಿಕಾರಿಗ ಇಂತಹ ಸರ್ವೆ ನಂಬರಿನಲ್ಲಿ ಇಂತಹ ಶಾಲೆಗೆ ನಿವೇಶನವನ್ನು ಕಾದಿರಿಸಬಹುದು ಎಂಬ ಮನವಿ ಆಧಾರದಲ್ಲಿ ನಮ್ಮ ಕಂದಾಯ ಇಲಾಖೆಯವರು ಇವೊತ್ತು ಆ ಸ್ಥಳವನ್ನು ಮಂಜೂರಾತಿ ಮಾಡುತ್ತಾ ನಿಮ್ಮಲ್ಲಿರುವಂತಹ ಅಧಿಕಾರಿಗಳು ಮನವಿಯನ್ನು ಕೊಡುವುದಕ್ಕಾಗುವುದಿಲ್ಲ, ಇದೆಲ್ಲಾ ತಾಂತ್ರಿಕವಾಗಿ ಇವತ್ತು ಇದೆಲ್ಲವನ್ನೂ ಮಾಡುವಂಥವರು ಯಾರು? ನಿಮ್ಮ ಎಷ್ಟೋ ಶಾಲೆಗಳು ತಮ್ಮದೇ ಆದಂ ನಿವೇಶನಗಳನ್ನು ಹೊಂದದೆ ಇರುವಂತಹ ಶಾಲೆಗಳು ಇದೆ ಈ ರೀತಿಯಾಗಿ ಗ್ರಾಮಾಂತರ ಪ್ರದೇಶಗ ತಮ್ಮದೇ ಆದಂತಹ ನಿವೇಶನಗಳನ್ನು ಹೊಂದದೇ ಇರುವಂತಹ ಅಂಕಿಸಂಖ್ಯೆಗಳನ್ನು ತ ಗಡಿಬಿಡಿಯಲ್ಲಿ ಹೋಗಿ ಎಲ್ಲಾದರೂ ಖಾಲಿ ಸ್ಥಳಗಳು ಇದ್ದರೆ ಅದಕ್ಕೆ ಕಂದಾಯ ಇಲಾಖೆಯ ಅಥವಾ ತಮ್ಮ ಇಲಾಖೆಯವರು ಒಪ್ಪಿಗೆಯನ್ನು ಕೊಟ್ಟರೆ ಅಲ್ಲಿ ಸರ್ಕಾರಿಸ್ಥಳಗಳಲ್ಲಿ ಶಾಲಾ ಕಟ್ಟಡಗ ಕಟ್ಟುವಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇದನ್ನು ಸರಳೀಕರಣ ಮಾಡಿ, ತಾಲ ಮಟ್ಟದಲ್ಲಿ ಶಾಲಾ ನಿವೇಶನಗಳು ಇರುವಂತಹ ಕಡೆ ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ಶಾ ನಿವೇಶನ, ಕಟ್ಟಡಗಳು ಮಂಜೂರಾತಿ ಮಾಡುವಂತಹ ಅಧಿಕಾರವನ್ನು ಕೊಡಬೇಕಾಗುತ್ತದೆ. ಇ ಬ್ಲಾಕ್ ಎಜ್ಯುಕೇಷನ್ ಆಫೀಸರ್ಸ್ ಇನ್‌ಸ್ಪೆಕ್ಷನ್ ಮಾಡುತ್ತಾರೆ. ಅವರು ಇನ್‌ಸ್ಪೆಕ್ಷನ್ ಮಾಡಿ ವರದಿ ಕೊಡುತ್ತಾರೆ. ಆ ವರದಿಗೆ ಎಷ್ಟು ಬೆಲೆ ಇದೆ, ಆ ವರದಿಯ ಆಧಾರದ ಮೇಲೆ ತಾವು ಕೆಲಸವನ್ನು ಮಾಡುತ್ತಿದ್ದೀರೆನ್ನುವಂತಹ ವಿಚಾರಗಳು ಇದೆ. ಇವತ್ತು ನಮ್ಮ ವ್ಯವಸ್ಥೆಯಲ್ಲಿ ಬಹು ಸರಳೀಕರಣವಾಗಿ ತಮ್ಮ ಅಧಿಕಾರಿಗಳಿಗೆ ಆ ಅಧಿಕಾರವನ್ನು ಕೊಟ್ಟು ಮೂಲಭೂತವಾಗಿ ಶಾ ಕಟ್ಟಡಗಳ ಸೌಲಭ್ಯಗಳಿಗೆ ಏನು ಬೇಕಾಗುತ್ತದೆಯೋ ಅದನ್ನು ಒದಗಿಸಬೇಕಾಗುತ್ತದೆನ್ನುವಂತಹ ಮಾ ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನು ದಾಖಲೆಗಳ ಸಂಖ್ಯೆಯ ಬಗ್ಗೆ ಪ್ರಾಥ

ಲಾ ಶಿಕ್ಷಕರುಗಳ ನೇಮಕವನ್ನು ಮಾಡಿದ್ದೀರಿ ಎನ್ನುವ ಮಾತನ್ನು ಹೇಳಿದ್ದೀರಿ. ಇವತ್ತು ಶಾಲಾ ಕ್ಷಕರುಗಳನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ತ್ತಡಗಳು ನಡೆಯದೇ ಇರಲಿ, ಶಿಕ್ಷಣದಲ್ಲಿ ಯಾರು ಅರ್ಹರು ಇದ್ದಾರೆ, ಯಾರು ಶಿಕ್ಷಣದಲ್ಲಿ ನ್ನತ ವ್ಯವಸ್ಥೆಯಲ್ಲಿ ಪದವಿಯನ್ನು ಪಡೆದಿದ್ದಾರೆ, ಅಥವಾ ಯಾರು ಟಿ.ಸಿ.ಹೆಚ್. ತರಬೇತಿಯನ್ನು ಡೆದಿದ್ದಾರೆ, ಅವರಿಗೆ ತಾವು ಅವಕಾಶವನ್ನು ಕಲ್ಪಿಸಿದ್ದೀರಿ. ಇದರ ಜೊತಗೆ ಗ್ರಾಮಾಂತರ ದೇಶಗಳಲ್ಲಿರುವಂತಹ ಜನರಿಗೂ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ, ಪರಿಶಿಷ್ಟ ಜಾತಿ ಮತ್ತು ರಿಶಿಷ್ಟ ವರ್ಗದವರು, ಹಿಂದುಳಿದ ವರ್ಗದವರು ಇವರೆಲ್ಲರಿಗೂ ತಾವು ಅವಕಾಶವನ್ನು ಕಲ್ಪಿಸಿದ್ದೀರಿ. ವತ್ತು ಯಾವುದಾದರೂ ಅರ್ಜಿಯನ್ನು ಸಲ್ಲಿಸಿದಂತಹ ಸಂದರ್ಭದಲ್ಲಿ ನಿಮ್ಮ ಇಲಾಖೆಯವರು ದಕ್ಕೆ ಏನಾದರೂ ಅಕ್ನಾಲೆಜ್ಮೆಂಟ್ ಕೊಡುತ್ತಾರೆ? ಅವರಿಗೆ ಕೊಡಬೇಕೆನ್ನುವ ಮನಸ್ಸು ಇದ್ದರೆ ರಲ್ ಸರ್ಟಿಫಿಕೇಟ್ ತೆಗೆಯಬಹುದು, ಬಿ ಸಿ ಸರ್ಟಿಫಿಕೇಟ್ ತೆಗೆಯಬಹುದು, ದರಲ್ಲಿರುವಂಥಾದ್ದಕ್ಕೆ ವಾದ ಮಾಡುವುದಕ್ಕಾಗುತ್ತದೆಯೇ? ಈ ರೀತಿ ಶಿಕ್ಷಣ ಇಲಾಖೆಯಲ್ಲಿ ನೇಮಕಾತಿ ಾಡುವಂತಹ ಸಂದರ್ಭದಲ್ಲಿ ನಾವು ಏನು ದಾಖಲೆಗಳನ್ನು ಕೊಡುತ್ತಿದ್ದೇವೆ, ಅದಕ್ಕೆ ಅಕ್ನಾಲೆಜ್ಮೆಂಟ್ ಡಬೇಕಾಗುತ್ತದೆ, ಇಲ್ಲದಿದ್ದರೆ ಇಲ್ಲೂ ಸಹಿತ ಅವ್ಯವಹಾರಗಳಾಗುತ್ತದೆ. ಒಂದು ವೇಳೆ ಮಕಾತಿಯಾಗದೇ ಇರುವಂತಹ ಸಂದರ್ಭದಲ್ಲಿ ನೇಮಕವಾಗಿ ಅವರು ಹಾಜರಾಗದೇ ಇರುವಂತಹ ದರ್ಭದಲ್ಲಿ ಬಹಳಷ್ಟು ದಿವಸಗಳ ನಂತರ ಯಾರನ್ನೋ ಕೂರಿಸುವಂತಹ ಪ್ರಯತ್ನಗಳಾಗುತ್ತವೆ. ವುಗಳ ಬಗ್ಗೆ ತಮಗೆ ಏನಾದರೂ ದೂರುಗಳು ಬಂದಿದೆಯೇ ಇವುಗಳ ಬಗ್ಗೆ ತಾವು ಏನಾದರೂ ಖೆಯನ್ನು ಮಾಡಿಸಿದ್ದೀರಾ ಎನ್ನುವಂಥಾದ್ದನ್ನು ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಬೇರೆ ೀರೆ ಜಿಲ್ಲೆಗಳಿಂದ, ಈ ಊರುಗಳಿಗೆ ಬಂದು ಅಲ್ಲಿರುವಂತಹ ರೇಷನ್ ಕಾರ್ಡ್‌ಗಳಲ್ಲಿ ಹೆಸರುಗಳನ್ನು ಂದಾಯಿಸಿ ಈ ಜಿಲ್ಲೆಯ ಶಾಲೆಯ ಮುಖಾಂತರ ನೇಮಕಾತಿಯನ್ನು ಪಡೆದು ಒಂದೆರಡು ರ್ಷಗಳಲ್ಲೇ ಬೇರೆ ಜಿಲ್ಲೆಗಳಿಗೆ ವರ್ಗಾವಣೆಯನ್ನು ಮಾಡಿದಾಗ ಆ ಜಿಲ್ಲೆಗೆ ಕೊರತೆಯುಂಟಾಗುವ ರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಬಗ್ಗೆ ನಿಮ್ಮ ಚಿಂತನೆ ಏನು ಎನ್ನುವಂಥಾದ್ದನ್ನು ತಮ್ಮ ಗಮನಕ್ಕೆ ರಲಿಚ್ಚಿಸುತ್ತೇನೆ. ಸಾಮಾನ್ಯವಾಗಿ ಒಂದು ಜಿಲ್ಲೆಯಲ್ಲಿ ನೇಮಕವಾಗಿ ಅದೇ ವರ್ಷ ಅಥವಾ ನ್ನೊಂದು ವರ್ಷದಲ್ಲಿ ನೀವು ವರ್ಗಾವಣೆಯನ್ನು ಬೇರೆ ಜಿಲ್ಲೆಗಳಿಗೆ ಮಾಡಿದಂತಹ ದಾಖಲೆಗಳು ನ್ಮ ಹತ್ತಿರ ಇದೆ. ಆದುದರಿಂದ ಕಡಿಮೆ ಎಂದರೆ ಹತ್ತು ವರ್ಷಗಳು ಆ ಜಿಲ್ಲೆಯಲ್ಲೇ ಕೆಲಸ ಾಡಬೇಕೆನ್ನುವಂತಹ ಧೃಢ ಪತ್ರಿಕೆಯನ್ನು ಅವರಿಂದ ಪಡೆದು ಅದೇ ಆಧಾರದ ಮೇಲೆ ಕೆಲಸವನ್ನು ಾಡಿಸಬೇಕೇ ಹೊರತು, ಇಲ್ಲದಿದ್ದರೆ ಈ ವರ್ಗಾವಣೆಯ ವಿಚಾರದಲ್ಲಿ ಆಗುವಂತಹ ಕೊರತೆಯನ್ನು ಮಗೆ ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಿಮ್ಮ ಮನಕ್ಕೆ ತರಲಿಚ್ಚಿಸುತ್ತೇನೆ. ಇನ್ನು ಮತ್ತೊಂದು ವಿಚಾರವೇನೆಂದರೆ ದಾಖಲೆಗಳ ಸಂಖ್ಯೆಯಲ್ಲಿ ಪ್ರಾಥಮಿಕ ಲಾ ಕಟ್ಟಡಗಳನ್ನು ಮಾಡಿದ್ದೀರೆಂಬುದನ್ನು ನಾನು ಒಪ್ಪುತ್ತಿದ್ದೇನೆ. ಬಹುಶಃ ಅಂಕಿಸಂಖ್ಯೆಗಳ ಪ್ರಕಾರ ಖಲೆಯನ್ನು ನಿರ್ಮಾಣ ಮಾಡಿದ್ದೀರಿ. ನೀವು ಹಾಗೆ ಕೊಡುವಂತಹ ಶಾಲಾ ಕಟ್ಟಡಗಳ ಅನುದಾನ ಷ್ಟು? ತಾವು ಪೂರ್ಣ ಪ್ರಮಾಣದ ಅನುದಾನವನ್ನು ಕೊಡುತ್ತಿದ್ದೀರಾ ಅಥವಾ ಕೊಠಡಿಗೆ ಏನಾದರೂ

ಡಿಸೈನ್ ಇದೆಯಾ, ಅಥವಾ ಅಂದಾಜು ಪಟ್ಟಿ ಎಷ್ಟು? ಅದಕ್ಕೆ ಬೇಕಾದಂತಹ ಹಣ ತಾಲ್ಲೂ ಪಂಚಾಯತ್, ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾಗುತ್ತದೆಯೇ ಎನ್ನುವಂತಹದ್ದು, ತಿಳಿ ತಾವು ಶೇ. 75ರಷ್ಟು ಹಣವನ್ನು ಕೊಡುತ್ತೀರಿ, ಉಳಿದಂತಹ ಹಣವನ್ನು ಲೋಕಲ್ ಕಾಂಟ್ರಿಬ್ಯೂಷ ಮೂಲಕ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳುತ್ತೀರಿ. ಅವರು ಏನು ಮಾಡುತ್ತಾರೆಂದರೆ ಶ 75ರಲ್ಲಿ ಶಾಲಾ ಕೊಠಡಿಗಳನ್ನು ಕಳಪೆ ಮಟ್ಟದಲ್ಲಿ ನಿರ್ಮಾಣ ಮಾಡುವುದರಿಂದ ಇವತ್ತು ಪ ಪದೇ ರಿಪೇರಿ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕೆ ತಾವು ಒಂದು ಪ್ಲಾ ಮಾಡಿ, ಡಿಸೈನ್ ಮಾಡಿ, ಇದರಷ್ಟೇ ಇರಬೇಕೆನ್ನುವಂತಹ ಕಟ್ಟುನಿಟ್ಟಿನ ಆಜ್ಞೆಯನ್ನು ಹೊರಡಿಸದಿದ್ ಅಥವಾ ತಾವು ಕೊಟ್ಟಂಥ ಅಂದಾಜು ಪಟ್ಟಿ ಏನು ಇದೆ, ಅದು ಆ ಶಾಲೆಯ ಮುಖ್ಯೋಪಾಧ್ಯಾಯರಿ ಅಥವಾ ಶಾಲಾ ವರದಿ ಸಮಿತಿಯವರಿಗೆ ಹೋಗದಿದ್ದರೆ ಅವರು ಏನು ಮಾಡಿದ್ದಾರೆ, ಏನು ಬಿಟ್ಟಿದ್ದಾ ಯಾವ ಅಂದಾಜು ಪಟ್ಟಿ, ಏನು ಕೆಲಸ ನಡೆಯುತ್ತಿದೆ ಎನ್ನುವ ವಿಚಾರ ಅಧ್ಯಾಪಕರುಗಳಿ ಗೊತ್ತಾಗುವುದಿಲ್ಲ, ಶಾಲಾ ವರದಿಯ ಸಮಿತಿಯವರಿಗೆ ಗೊತ್ತಾಗುವುದಿಲ್ಲ. ಈ ವಿಷಯವಾ ಮಂಗಳೂರು ಜಿಲ್ಲಾ ಪಂಚಾಯತ್‌ನವರು ಒಂದು ನಿರ್ಣಯವನ್ನು ಮಾಡಿದರು. ಯಾವುದೇ ಶಾ ಕೊಠಡಿಗಳು ಮಂಜೂರಾಗುವಂತಹ ಸಂದರ್ಭದಲ್ಲಿ ಆ ಶಾಲೆಯ ಅಂದಾಜು ಪಟ್ಟಿಯನ್ನು, ಶಾಲೆಯ ಮುಖ್ಯೋಪಾಧ್ಯಾಯರಿಗೆ ಕಳುಹಿಸಿಕೊಡಬೇಕೆನ್ನುವಂತಹ ಒಂದು ನಿರ್ಣಯವನ್ನು ಆ ತಿಂಗಳುಗಳಿಂದ ಮಾಡಿದರು. ಇನ್ನು ಆ ನಿರ್ಣಯವನ್ನು ಕಾರ್ಯಗತ ಮಾಡುವುದಕ್ಕೆ ಆಗಿಲ್ಲ. ಅದ ಅರ್ಥ ಏನು? ಯಾವ ಹಂತದಲ್ಲಿ ನಾವು ನಡೆಯುತ್ತಿದ್ದೇವೆ, ಆ ಆದೇಶವನ್ನು ಪಾಲಿಸತಕ್ಕಂಥವ ಯಾರು ಎಂಬುದನ್ನು ತಾವು ಚಿಂತನೆ ಮಾಡಬೇಕಾಗುತ್ತದೆ. ಇದೆಲ್ಲವನ್ನು ತಾವು ಕಟ್ಟುನಿಟ್ಟಾಗಿ ಮಾಡಿ ಕಳಪೆ ಕಾಮಗಾರಿಗಳು ಆಗುವುದಿಲ್ಲ. ಆ ಶಾಲಾ ಕೊಠಡಿಗಳು ನಿರ್ಮಾಣವಾದರೆ ಅದು 25- ವರ್ಷಗಳು ಇರುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈ ವರ್ಷ ಶಾಲೆ ಕಟ್ಟಿದ್ದು ಮುಂದಿನ ವ ಬಿದ್ದು ಹೋಗುವಂತಹ ಪರಿಸ್ಥಿತಿಯನ್ನು ನಾವು ಇಲ್ಲಿ ಕುಳಿತುಕೊಂಡು ನಿರ್ಮಾಣ ಮಾಡುತ್ತೇ ಇದು ನಮ್ಮ ಸಾಧನೆಯ ಸಂಖ್ಯೆಯಲ್ಲಿ ಬರುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನು ತಾ ಉಚಿತ ಸಮವಸ್ತ್ರದ ವಿತರಣೆಯ ಬಗ್ಗೆ ಏನು ಮಾಡಿದ್ದೀರಿ, ಅದನ್ನು ನಾನು ಸಂಕ್ಷಿಪ್ತವಾ ಹೇಳಬಯಸುತ್ತೇನೆ. ತಾವು ಉಚಿತ ಸಮವಸ್ತ್ರವನ್ನು ನಿರಂತರವಾಗಿ ವಿತರಣೆ ಮಾಡುತ್ತಿದ್ದೀರಿ. ಹೋ ವರ್ಷದ್ದು ಈ ವರ್ಷ, ಈ ವರ್ಷದ್ದು ಮುಂದಿನ ವರ್ಷ, ಮುಂದಿನ ವರ್ಷದ್ದು ಇನ್ನೊಂದು ವರ್ಷ ಹೀಗೆ ಕೊಡುತ್ತೀರಿ. ಇದು ಸಕಾಲದಲ್ಲಿ ಏಕೆ ಕೊಡುವುದಿಲ್ಲ? ಇದನ್ನು ಸಕಾಲದಲ್ಲಿ ಕೊಡುವು ಏನು ಸಮಸ್ಯೆ ಇದೆ? ಬಹುಶಃ ಈ ವರ್ಷ ಕೊಡುವಂತಹ ಬಟ್ಟೆಯನ್ನು ಮುಂದಿನ ವ ಕೊಡುವಂಥಾದ್ದು ಇವತ್ತು ಅಂಗಿಯನ್ನು ಕೊಟ್ಟರೆ ನಾಳೆ ಚಡ್ಡಿಯನ್ನು ಕೊಡುವಂತಹ ಈ ವ್ಯ ಏಕೆ? ಇದರಲ್ಲಿ ಏಕೆ ಬದಲಾವಣೆಯಾಗುತ್ತಾ ಇಲ್ಲ. ಇದರಲ್ಲಿ ಏನು ಪರಿಸ್ಥಿತಿ ಇದೆ ಎನ್ನುವಂಥಾದ್ ತಾವು ಗಮನಿಸಬೇಕಾಗುತ್ತದೆ. ಈ ಒಂದು ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ತಮ್ಮ ಗಮ ತರಲಿಚ್ಛಿಸುತ್ತೇನೆ. ತಾವು ಒಂದು ಹೊಸ ಪ್ರೌಢಶಾಲೆಯನ್ನು ಮಂಜೂರು ಮಾಡುತ್ತೀರಿ. ಇದ ಮಂಜೂರು ಮಾಡುವಂತಹ ಮೂಲ ಉದ್ದೇಶವೇನು? ಅದರಿಂದ ವಿದ್ಯಾರ್ಥಿಗಳಿ

ಅನುಕೂಲವಾಗಬೇಕು. ಆದರೆ ಈ ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವಂತಹ ವಾತಾವರಣ ನಿರ್ಮಾಣವಾಗುವಂತಹ ಶಾಲೆಗಳಲ್ಲಿ ಡಿವಿಜನ್‌ಗಳನ್ನು ಮಾಡದೇ ಇರುವಂಥಾದ್ದು, ಇವತ್ತು ಎಷ್ಟು ಶಾಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಆ ಶಾಲೆಗಳು ಸುಸೂತ್ರವಾಗಿ ನಡೆಯುತ್ತಿವೆಯೆ ಅಥವಾ ಅವರು ಡಿವಿಜನ್‌ಗಳಿಗಾಗಿ ಮನವಿಯನ್ನು ಸಲ್ಲಿಸಿ ಎಷ್ಟು ವರ್ಷಗಳಾಯಿತು. ಆ ಡಿವಿಜನ್‌ಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೀರಾ? ಈ ವಿವರಗಳು ಏನಾದರೂ ಇದೆಯಾ? ನಾವು ಸ್ಥಳೀಯರು ಒತ್ತಡವನ್ನು ತರುತ್ತೇವೆ. ಒಂದು ಸರ್ಕಾರಿ ಪ್ರೌಢಶಾಲೆಯಾಗಿದೆ ಎಂದರೆ ಅಲ್ಲಿ ಪರಿಸರದಲ್ಲಿರತಕ್ಕ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆನ್ನುವಂತಹ ನಿರ್ಣಯವಾಗುತ್ತದೆ, ಜಿಲ್ಲಾ ಪಂಚಾಯತ್ ನಿರ್ಣಯವಾಗುತ್ತದೆ. ಆ ಆಧಾರದ ಮೇಲೆ 80-90-100 ಮಕ್ಕಳು ಇರುವಂತಹ ಕ್ಲಾಸ್‌ಗಳಲ್ಲಿ ಡಿವಿಜನ್‌ಗಳನ್ನಾಗಿ ಮಾಡಲೇ ಬೇಕಾದಂತಹ ಪರಿಸ್ಥಿತಿ ಬರುತ್ತದೆ. ಈ ರೀತಿ ಡಿವಿಜನ್‌ಗಳನ್ನು ಮಾಡಿದ ನಂತರ ಮಂಜೂರಾತಿಯನ್ನು ಕೊಡುವುದಕ್ಕೆ ತಾವು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ. ಹಾಗೆ ಡಿವಿಜನ್‌ಗಳಿಗೆ ಮಂಜೂರಾತಿಯನ್ನು ಕೊಡದೇ ಅಧ್ಯಾಪಕರುಗಳ ನೇಮಕಾತಿಯನ್ನು ಮಾಡದೇ ಹೊಸ ಶಾಲೆಗಳನ್ನು ಮಾಡುವಂತಹ ಔಚಿತ್ಯವೇನು? ಏನು ಸಾಧನೆಯಾಗುತ್ತದೆ? ಇರುವಂತಹ ಮಕ್ಕಳಿಗೆ ಡಿವಿಜನ್‌ಗಳನ್ನು ಮಾಡದೆ ಹುದ್ದೆಗಳನ್ನು ಮಂಜೂರು ಮಾಡದೇ ಹೊಸ ಶಾಲೆಗಳನ್ನು ಮಾಡಿದ್ದೇವೆನ್ನುವಂತಹ ಒಂದು ಘೋಷಣೆಯನ್ನು ಮಾಡಬಹುದೇ ಹೊರತು ಪ್ರಾಮಾಣಿಕವಾಗಿ ಹೇಳುವುದಾದರೆ ಎಲ್ಲಿ ನಾವು ಡಿವಿಜನ್‌ಗಳನ್ನು ಕೇಳಿದ್ದೇವೆ, ಎಲ್ಲಿ ಅಧ್ಯಾಪಕರ ಮಂಜೂರಾತಿಯನ್ನು ಕೇಳಿದ್ದೇವೆ, ಅವುಗಳನ್ನು ಪೂರೈಸಿ ಹೊಸ ಶಾಲೆಗಳನ್ನು ಮಂಜೂರು ಮಾಡುವುದು ಒಳ್ಳೆಯದು. ಅದರ ಅರ್ಥ ಹೊಸ ಶಾಲೆಗಳನ್ನು ಮಂಜೂರು ಮಾಡಬಾರದೆಂಬುದು ನನ್ನ ವಾದವಲ್ಲ. ಆದರೆ ಇಲ್ಲಿ ನಾವು ಮಾಡುವಂತಹ ಕೆಲಸವನ್ನು ಆದ್ಯತೆಯ ಮೇಲೆ ಮಾಡಬೇಕೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನು ಶಾಲೆಗಳ ರಿಪೇರಿಯ ಬಗ್ಗೆ ತಾವು ಹೇಳಿದ್ದೀರಿ. ಈ ಶಾಲೆಗಳ ರಿಪೇರಿಗೆ ತಾವು ಎಷ್ಟು ಹಣವನ್ನು ಇಡುತ್ತೀರಿ? ಈ ಹಣವನ್ನು ಯಾರಿಗೆ ಕೊಡುತ್ತೀರಿ? ಇದನ್ನು ಯಾವ ಆಧಾರದ ಮೇಲೆ ಹಂಚುತ್ತೀರಿ ಎನ್ನುವಂಥಾದ್ದು ಈಗ ಒಂದು ಶಾಲೆ ಪ್ರಾರಂಭವಾದ ಮೇಲೆ ಅದರ ಸುಧಾರಣೆಗೆ ಕಡಿಮೆ ಎಂದರೆ ವೈಟ್ ವಾಷ್ ಮಾಡುವುದಕ್ಕೆ ಯಾವತ್ತಾದರೂ ಇಷ್ಟು ದುಡ್ಡು ಇಟ್ಟಿದ್ದೀರಾ? ಸುಧಾರಣೆ ಮಾಡಿ ಎನ್ನುವಂತಹ ಮಾತನ್ನು ಹೇಳಿ ಎರಡು, ಮೂರು ಸಾವಿರ ರೂ. ಗಳನ್ನು ಕೊಟ್ಟು ಸುಧಾರಣೆ ಮಾಡಿ ಹೇಳುವುದಕ್ಕಿಂತ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳಿಗೆ ಆ ಅಧಿಕಾರವನ್ನು ಕೊಡಿ ಇಲ್ಲವೇ ಗ್ರಾಮಾಂತರ ಪ್ರದೇಶದಲ್ಲಿರುವಂತಹ ಗ್ರಾಮ ಪಂಚಾಯತ್‌ನವರಿಗೆ ಕೊಡಿ, ಆ ಗ್ರಾಮ ಪಂಚಾಯತ್‌ನವರಿಗೆ ಮೂಲಭೂತವಾದ ಜವಾಬ್ದಾರಿ ಇರುತ್ತದೆ. ತಾವು ಪರಿಸರದಲ್ಲಿರುವಂತಹ ಪ್ರಾಥಮಿಕ ಶಾಲೆಗಳನ್ನು ಅಥವಾ ಹಿರಿಯ ಪ್ರಾಥಮಿಕ ಶಾಲೆಗಳನ್ನು ಸುಸೂತ್ರವಾಗಿ ನಡೆಸುವಂತಹ ಜವಾಬ್ದಾರಿ ಇರುತ್ತದೆ. ತಾವು ಏನು ಸುಧಾರಣೆ ಮಾಡುವಂತಹ ಮಾತನ್ನು ಹೇಳುತ್ತೀರಿ. ತಾವು ಏನು ರಿಪೇರಿ ಮಾಡಬೇಕೆನ್ನುವಂತಹ ಮಾತನ್ನು ಹೇಳುತ್ತೀರಿ. ಆ ಹಣವನ್ನು ನೇರವಾಗಿ ಗ್ರಾಮ ಪಂಚಾಯತ್‌ನವರಿಗೆ ಕಳುಹಿಸಿದರೆ ನೀವು ಎಷ್ಟು ಕೊಡುತ್ತೀರೋ ಅಷ್ಟು ಕೊಡಿ ಅದನ್ನು ಅವರು ಸುಸೂತ್ರವಾಗಿ ಮಾಡಿಕೊಂಡು ಹೋಗುತ್ತಾರೆ. ಇಲ್ಲದಿದ್ದರೆ ತಾವು

ಬಿ.ಇ.ಓ. ಆಫೀಸ್‌ನಲ್ಲಾಗಲೀ ಅಥವಾ ಡಿ.ಡಿ.ಪಿ.ಐ. ಆಫೀಸ್‌ನಲ್ಲಾಗಲೀ ಎಲ್ಲೋ ಕುಳಿತುಕೊಂಡು ಆ ಶಾಲೆ ಸರಿಯಿಲ್ಲ, ಈ ಶಾಲೆ ಸರಿಯಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಬೇಕಾಗುತ್ತದೆ. ಆದರೆ ನಿಜವಾಗಿ ಹೇಳಬೇಕಾದರೆ, ಒಂದು ಶಾಲೆಯ ರಿಪೇರಿಯಾಗಬೇಕಾದರೆ, ಆ ಶಾಲೆಯ ಸುಧಾರಣೆಗೆ ಬೇಕಾದಂತಹ ಪೂರಕವಾದ ಸೌಲಭ್ಯಗಳನ್ನು ಒದಗಿಸಬೇಕಾದರೆ ನೇರವಾಗಿ ಬಿ.ಇ.ಓ.ರವರೇ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಅವರಿಗೆ ಆ ಹಕ್ಕನ್ನು ಕೊಡಬೇಕು. ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ ಅದಕ್ಕೆ ಬಿ.ಇ.ಓ.ರವರೇ ಜವಾಬ್ದಾರರಾಗಿರುತ್ತಾರೆ. ಆದುದರಿಂದ ಅವರಿಗೆ ಆ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟರೆ ಮಾತ್ರ ಶಾಲೆಯ ರಿಪೇರಿಯಾಗುತ್ತದೆ, ಸುಧಾರಣೆಯಾಗುತ್ತದೆ. ಆ ಒಂದು ನೆಲೆಯಲ್ಲಿ ಗ್ರಾಮ ಪಂಚಾಯಿತಿಯವರಿಗೆ ಅಧಿಕಾರವನ್ನು ಕೊಟ್ಟು, ಆ ಮೂಲಭೂತವಾದ ಏನು ಸುಧಾರಣೆಗಳಿವೆ, ಅವುಗಳನ್ನು ಮಾಡಿಸಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು : ತಾವು ಬೇಗ ತಮ್ಮ ಭಾಷಣ ಮುಗಿಸಬೇಕು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಇನ್ನೊಂದು ವಿಚಾರಕ್ಕೆ ನಾನು ಬರುತ್ತೇನೆ. ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಾಧನ ಸಾಮಗ್ರಿಗಳನ್ನು ಪೂರೈಸುವ ಬಗ್ಗೆ ತಾವು ಹೇಳಿದ್ದೀರಿ. ಪೀಠೋಪಕರಣಗಳನ್ನು ಕೊಡುತ್ತೇವೆ, ಬೋಧನಾ ಉಪಕರಣಗಳನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ಇವುಗಳನ್ನು ತಾವು ಎಲ್ಲಿಂದ ಖರೀದಿ ಮಾಡುತ್ತೀರಿ? ಬಹುಶಃ ತಮ್ಮ ಇಲಾಖೆಯ ಡಿ.ಡಿ.ಪಿ.ಐ. ಅಥವಾ ಬಿ.ಇ.ಓ. ಅದನ್ನು ಖರೀದಿ ಮಾಡುತ್ತಾರೆ. ಕಳಪೆ ಉತ್ಪನ್ನಗಳನ್ನು ಉತ್ಪಾದಿಸತಕ್ಕ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಅವುಗಳನ್ನು ತಾವು ಖರೀದಿ ಮಾಡಿ ಶಾಲೆಗೆ ಕಳುಹಿಸುತ್ತೀರಿ. ಆ ಶಾಲೆಯ ಮುಖ್ಯೋಪಾಧ್ಯಾಯರು ಯಾರ ಹಂಗಿನಲ್ಲಿ ಇದ್ದಾರೋ, ಅವರಿಂದ ಅನುಮಮೋದನೆಯನ್ನು ಪಡೆದು ಅವರಿಂದ ಎಲ್ಲಾ ಸರಿಯಾಗಿದೆ ಎಂಬ ಒಪ್ಪಿಗೆ ಪತ್ರವನ್ನು ಪಡೆದು ರೆಕಾರ್ಡ್ ಅನ್ನು ಬಿಲ್ಡ್ ಮಾಡಿ ತಾವು ಕಳಪೆ ಸಾಮಗ್ರಿಗಳಳನ್ನು ಕಳಪೆ ಬೋಧನಾ ಉಪಕರಣಗಳನ್ನು, ಕಳಪೆ ಪಠ್ಯಪುಸ್ತಕಗಳನ್ನು ಒದಗಿಸುತ್ತಿದ್ದೀರಿ. ಮಂಗಳೂರು ಜಿಲ್ಲಾ ಪಂಚಾಯತಿಯಲ್ಲಿ ಈ ಬಗ್ಗೆ ತನಿಖೆಯನ್ನು 2 ಲಕ್ಷ ರೂ. ಮೊತ್ತಕ್ಕೂ ಹೆಚ್ಚಿನ ಕಳಪೆ ಸಾಮಗ್ರಿಗಳನ್ನು, ಬೋಧನಾ ಉಪಕರಣಗಳನ್ನು ಒದಗಿಸಲಾಗಿದೆ ಎನ್ನುವ ಕಾರಣಕ್ಕಾಗಿ ವಾಪಸ್ಸು ಕೊಡಬೇಕೆಂದು ನಿರ್ಣಯವಾಗಿದೆ. ಸಂಬಂಧಪಟ್ಟವರು ಅದನ್ನು ಒಪ್ಪಿಕೊಂಡಿದ್ದಾರೆ. ಹಾಗಾದರೆ ನಿಮ್ಮ ಇಲಾಖೆ ಏನು ಕೆಲಸ ಮಾಡುತ್ತದೆ? ಬಹುಶಃ ಅಲ್ಲಿ ಏಕೆ ತೆಗೆದುಕೊಳ್ಳಬೇಕು? ತೆಗೆದುಕೊಳ್ಳಬಾರದು ಎನ್ನತಕ್ಕಂತಹ ವಾದ ನನ್ನದಲ್ಲ. ಕೇಂದ್ರ ಸರ್ಕಾರದಿಂದಾಗಲೀ ಅಥವಾ ರಾಜ್ಯ ಸರ್ಕಾರದಿಂದಾಗಲೀ ಯಾವ ಬೋಧನಾ ಉಪಕರಣಗಳನ್ನು ಕೊಡುತ್ತಿದ್ದಾರೆ, ಅದು ಚೆನ್ನಾಗಿ ಇರಬೇಕು. ಇಲ್ಲದಿದ್ದರೆ ಆ ಬಗ್ಗೆ ಶಾಲಾ ಅಭಿವೃದ್ಧಿ ಸಮಿತಿಯ ಶಿಫಾರಸ್ಸು ಪತ್ರವನ್ನು ಪಡೆಯಿರಿ. ಯಾವ್ಯಾವುದಕ್ಕೆ ಎಷ್ಟೆಷ್ಟು ದರದಲ್ಲಿ ಖರೀದಿಸಲಾಗಿದೆ ಎಂಬ ಬಗ್ಗೆ ಸಂಬಂಧಪಟ್ಟವರಿಗೇ ಗೊತ್ತಿರುವುದಿಲ್ಲ. ಇವತ್ತು ಮುಖ್ಯೋಪಾಧ್ಯಾಯರುಗಳನ್ನು ಈ ಬೆಂಚ್‌ಗೆ ಎಷ್ಟು ಕೊಟ್ಟಿದ್ದೀರಿ? ಈ ಡೆಸ್ಕ್‌ಗೆ ಎಷ್ಟು ಕೊಟ್ಟಿದ್ದೀರಿ? ಈ ಬ್ಲಾಕ್ ಬೋರ್ಡ್‌ಗೆ ಎಷ್ಟು ಕೊಟ್ಟಿದ್ದೀರಿ? ಈ ಮ್ಯಾಪ್‌ಗೆ ಎಷ್ಟು ಕೊಟ್ಟಿದ್ದೀರಿ ಎಂದು ಕೇಳಿದರೆ ಅದರ ಬಗ್ಗೆ ಅವರಿಗೇ ಗೊತ್ತಿಲ್ಲ. ಅದು ಡಿ.ಡಿ.ಪಿ.ಐ. ಕಛೇರಿಯಿಂದ ಬಂದಿದೆ, ಇದು ಬಿ.ಇ.ಓ.

ಕಛೇರಿಯಿಂದ ಬಂದಿದೆ ಎನ್ನತಕ್ಕಂಥ ಉತ್ತರವನ್ನು ಬಿಟ್ಟರೆ ಖರೀದಿಯ ಬಗ್ಗೆ ಆ ಶಾಲೆಯ ಮುಖ್ಯ ಉಪಾಧ್ಯಾಯರುಗಳಿಗೆ ಏನೂ ಜವಾಬ್ದಾರಿ ಇಲ್ಲ. ಇಂತಹ ಒಂದು ವ್ಯವಸ್ಥೆಯಡಿಯಲ್ಲಿ ನಾವಿದ್ದೇವೆ. ಇದನ್ನು ಸುಧಾರಣೆ ಮಾಡಲು ಏನು ಕೆಲಸವನ್ನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಸರ್ಕಾರವು ಚಿಂತನೆಯನ್ನು ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು : ಸಮಯ ಆಯಿತು, ಬೇಗ ತಮ್ಮ ಭಾಷಣ ಮುಗಿಸಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೇ, ಪ್ರಾಥಮಿಕ ಶಾಲೆಗಳಿಗೆ ನೀರು ಮತ್ತು ಶೌಚಾಲಯಗಳ ಸೌಲಭ್ಯವನ್ನು ಒದಗಿಸಿದ್ದೇವೆ ಎನ್ನತಕ್ಕಂಥ ಮಾತನ್ನು ಸರ್ಕಾರದವರು ಹೇಳಿದ್ದಾರೆ. ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ನೇರವಾಗಿ ಒಂದು ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಬಯಸುತ್ತೇನೆ. ಈ ವರ್ಷ ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡಿದ್ದೀರಿ? ಎಷ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೀರಿ? ಪದೇ ಪದೇ ಈ ವಿಚಾರವನ್ನು ನಾವು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಒಂದು ಶಾಲೆ ಪ್ರಾರಂಭ ಮಾಡತಕ್ಕ ಸಂದರ್ಭದಲ್ಲಿ ಒಂದು ಶಾಲೆಗೆ ಬೇಕಾದಂತಹ ಕುಡಿಯುವ ನೀರಿನ ಸೌಲಭ್ಯಗಳನ್ನು ನಾವು ಒದಗಿಸುತ್ತಿಲ್ಲ. ಇವತ್ತು ಒಂದು ಬೋರ್‌ವೆಲ್ ಅನ್ನು ತೋಡಬೇಕಾದರೆ ಅದು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಕಾಲೋನಿಯ ಬಳಿಯಲ್ಲಿ ಇದೆ ಅಥವಾ ಇನ್ನಾವುದೋ ಕಾಲೋನಿಯ ಬಳಿಯಲ್ಲಿ ಇದೆ ಎಂಬ ಬೇರೆ ಬೇರೆ ಕಾರಣಗಳನ್ನು ಹೇಳಿ ಶಾಲಾ ಬದಿಯಲ್ಲಿ ಬೋರ್‌ವೆಲ್‌ಗಳನ್ನು ಅಥವಾ ಬಾವಿಗಳನ್ನು ತೋಡುತ್ತಿದ್ದಾರೆಯೇ ಹೊರತು ಶಿಕ್ಷಣ ಇಲಾಖೆಗೆ ಇದರಲ್ಲಿ ಮೂಲಭೂತವಾದ ಜವಾಬ್ದಾರಿ ಏನೂ ಇಲ್ಲವೇ? ಮಕ್ಕಳು ಬುತ್ತಿ ಊಟ ಮಾಡಿದ ನಂತರ ಕೈ ತೊಳೆಯಲಿಕ್ಕೆ ನೀರಿಲ್ಲದೆ ಹಾಕಿಕೊಂಡಿರುವ ಚಡ್ಡಿಗೇ ಕೈ ಒರೆಸಿಕೊಂಡು ಹೋಗತಕ್ಕಂತಹ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಿದ್ದೇವೆ. 100 ಶಾಲೆಗಳಿಗೆ ಶೌಚಾಲಯಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿದೆ ಎಂದು ತಾವು ಹೇಳಿದ್ದೀರಿ. ಇದೆಲ್ಲಾ ಸಮಸ್ಯೆ ಒಂದೇ ದಿನದಲ್ಲಿ ನಿವಾರಣೆಯಾಗುತ್ತದೆ ಎನ್ನತಕ್ಕ ಭಾವನೆ ನನ್ನದಲ್ಲ. ಆದರೆ ಹೊಸದಾಗಿ ಶಾಲೆಗಳನ್ನು ಮಂಜೂರು ಮಾಡತಕ್ಕ ಸಂದರ್ಭದಲ್ಲಾದರೂ, ಅಂದರೆ ಈಗೇನು ತಾವು ಹೊಸ ಪ್ರೌಢಶಾಲೆಗಳನ್ನು ಅಥವಾ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡುತ್ತೀರಿ, ಅಂತಹ ಸಂದರ್ಭದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ವಿಶೇಷವಾದ ಗಮನವನ್ನು ಕೊಡಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಮುಂದಿನ ವರ್ಷ ಇಷ್ಟನ್ನಾದರೂ ತಾವು ಮಾಡುತ್ತೀರಿ ಎನ್ನತಕ್ಕಂಥ ಭಾವನೆ ನನ್ನದಾಗಿದೆ. ಶಾಲೆಗಳ ಕಡ್ಡಾಯ ಮತ್ತು ವ್ಯಾಪಕ ತಪಾಸಣೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಸರ್ಕಾರದವರು ಹೇಳಿದ್ದೀರಿ. ಸ್ವಾಮಿ, ಇದನ್ನು ಮಾಡುವ ಉದ್ದೇಶವೇನು? ಅಲ್ಲಿ ಅಧ್ಯಾಪಕರೇ ಇಲ್ಲ ಅಥವಾ ನಿಮ್ಮ ತಪಾಸಣಾಧಿಕಾರಿಗಳು ಅಲ್ಲಿಗೆ ಹೋಗಲಿಕ್ಕೆ ವ್ಯವಸ್ಥೆ ಇಲ್ಲ. ಈ ಪರಿಸ್ಥಿತಿಯಲ್ಲಿ ನೀವೇನು ತಪಾಸಣೆ ಮಾಡುತ್ತೀರಿ? ತಪಾಸಣೆ ಮಾಡಬಾರದು ಎನ್ನತಕ್ಕಂಥದ್ದು ನನ್ನ ವಾದವಲ್ಲ. ಆದರೆ ತಪಾಸಣೆ ಮಾಡಬೇಕಾದರೆ ಯಾವ ಉದ್ದೇಶದಿಂದ, ಯಾವ ಹಿನ್ನೆಲೆಯಿಂದ ಈ ತಪಾಸಣೆಯನ್ನು ಮಾಡುತ್ತಿದ್ದೀರೋ ಆ ಉದ್ದೇಶ

ಈಡೇರಬೇಕಾದರೆ ಅದು ವ್ಯವಸ್ಥಿತವಾಗಿ ಆಗಬೇಕಾಗುತ್ತದೆ. ಆ ಒಂದು ನೆಲೆಯಲ್ಲಿ ತಾವು ಖಂಡಿತವಾಗಿ ಈ ಕೆಲಸವನ್ನು ಮಾಡುತ್ತೀರಿ ಎಂದು ನಾನು ಆಶಿಸುತ್ತೇನೆ. ಶಾಲೆಗಳಲ್ಲಿರುವ ಕೊರತೆಯನ್ನು ನಿವಾರಿಸುತ್ತೀರಿ ಎಂದು ಭಾವಿಸುತ್ತೇನೆ. ಶಾಲೆಗಳ ವಿಚಾರದ ಬಗ್ಗೆ ಇವತ್ತು ಹೇಳುವುದಾದರೆ, ನಾನು ಆಗಲೇ ಹೇಳಿದೆ, ಅಧ್ಯಾಪಕರಿಗೋಸ್ಕರ ಶಾಲೆಯೇ ಅಥವಾ ಶಾಲೆಗೋಸ್ಕರ ಅಧ್ಯಾಪಕರೇ ಎಂದು. ಇವತ್ತು ಅಧ್ಯಾಪಕರಿಗೋಸ್ಕರ ಶಾಲೆ ಎನ್ನುವುದಾದರೆ ಶಾಲೆಯಲ್ಲಿರತಕ್ಕ ಮಕ್ಕಳಿಗನುಗುಣವಾಗಿ ಅಧ್ಯಾಪಕರು ಇರಬೇಕು. ಇಲ್ಲದಿದ್ದರೆ ಅಧ್ಯಾಪಕರಿಗೋಸ್ಕರ ಶಾಲೆ ಇರುವುದಾದರೆ ಅವರಿಗೆ ಎಲ್ಲಿ ಮನೆ ಇದೆ? ಅವರಿಗೆ ಎಲ್ಲಿ ಹತ್ತಿರವಾಗುತ್ತದೋ, ಎಲ್ಲಿ ಅನುಕೂಲವಾಗುತ್ತದೆಯೋ ಅಲ್ಲಿಗೆ ಕಳುಹಿಸಿ, ಅದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಈ ವಾದವನ್ನು ತಾವು ಒಪ್ಪಬೇಕಾಗುತ್ತದೆ. ಮತ್ತೊಂದು ವಿಚಾರವೇನೆಂದರೆ, ಸರ್ಕಾರದವರು ಉಚಿತ ಪಠ್ಯಪುಸ್ತಕಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಆಗಲೇ ಈ ಬಗ್ಗೆ ಹೇಳಿದೆ. ಇವು ಸಕಾಲದಲ್ಲಿ ವಿತರಣೆಯಾಗುತ್ತಿಲ್ಲ. ಇವುಗಳನ್ನು ಸಕಾಲದಲ್ಲಿ ವಿತರಣೆ ಮಾಡತಕ್ಕಂಥ ಜವಾಬ್ದಾರಿ ತಮ್ಮದು ಎನ್ನತಕ್ಕಂಥ ಮಾತನ್ನು ನಾನು ಪದೇ ಪದೇ ಹೇಳುತ್ತೇನೆ. ಇನ್ನು ಕಪ್ಪು ಹಲಗೆ ಯೋಜನೆ ಬಗ್ಗೆ ಹೇಳುವುದಾದರೆ, ಇದು ಕೇಂದ್ರ ಸರ್ಕಾರದ ಯೋಜನೆ...

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ದಯವಿಟ್ಟು ಒಂದು ನಿಮಿಷ ಯೀಲ್ಡ್ ಆಗಿ.

ಉಪಾಧ್ಯಕ್ಷರು : ಮಾನ್ಯ ಬಸವರಾಜ್‌ರವರೇ, ತಾವು ಸಮಯ ಏಕೆ ಹಾಳು ಮಾಡುತ್ತೀರಿ? ನಿಮಗೆ ಮಾತನಾಡಲು ಅವಕಾಶ ಬಂದಾಗ ನೀವು ಹೇಳಬೇಕೆಂದಿರುವುದನ್ನು ಹೇಳಿ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಯೀಲ್ಡ್ ಆಗಿದ್ದಾರೆ. ಸಮವಸ್ತ್ರದ ಬಗ್ಗೆ ಒಂದೇ ಒಂದು ನಿಮಿಷ ಮಾತನಾಡಬಯಸುತ್ತೇನೆ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸಮವಸ್ತ್ರಗಳನ್ನು ಸರ್ಕಾರದವರು ವಿತರಣೆ ಮಾಡಿದ್ದಾರೆ. ಆದರೆ ಈ ರೀತಿ ವಿತರಣೆ ಆಗಿರುವಂತಹ ಸಮವಸ್ತ್ರಗಳ ತಯಾರಿಕೆಯಲ್ಲಿ ನಿಷೇಧಿಸಿದಂತಹ ನ್ಯಾಫ್ತಾ ಎನ್ನುವಂತಹ ರಾಸಾಯನಿಕ ವಸ್ತುವನ್ನು ಬಳಸಿರುವುದರಿಂದ ಆ ಬಟ್ಟೆಗಳನ್ನು ಧರಿಸಿದವರಿಗೆ ಚರ್ಮ ರೋಗಗಳು ಬರುತ್ತವೆ. ಈ ಬಟ್ಟೆಗಳನ್ನು ತಾವು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಮಕ್ಕಳಿಗೆ ನೀಡುತ್ತಿರುವುದರಿಂದ ಅನಾಹುತ ಆಗುತ್ತದೆ. ಆದುದರಿಂದ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಇದರ ಬಗ್ಗೆ ಸೂಕ್ತ ವಿಚಾರಣೆ ಮಾಡಿದ್ದೀರೋ? ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು : ಬಟ್ಟೆಯನ್ನು ಬರೀ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಷ್ಟೇ ಕೊಡುತ್ತಾರೋ?

ಶ್ರೀ ಹೆಚ್.ಡಿ. ಬಸವರಾಜ್ : ಹೌದು.

ಉಪಾಧ್ಯಕ್ಷರು : ನಾನು ಕೇಳುತ್ತಿರುವುದೇನೆಂದರೆ, ಏನೊಂದು ಸಮವಸ್ತ್ರಗಳನ್ನು ವಿತರಣೆ ಮಾಡಲಾಗಿದೆ ಎಂದು ತಾವು ಹೇಳುತ್ತಿದ್ದೀರಿ, ಅವುಗಳನ್ನು ಕೇವಲ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗಷ್ಟೇ ಕೊಟ್ಟಿದ್ದಾರೋ ಅಥವಾ ಎಲ್ಲಾ ಮಕ್ಕಳಿಗೂ ಕೊಟ್ಟಿದ್ದಾರೋ?

ಶ್ರೀ ಹೆಚ್.ಡಿ. ಬಸವರಾಜ್ : ಎಲ್ಲಾ ಮಕ್ಕಳಿಗೆ ಅಂದರೆ ಬಡ ಮಕ್ಕಳಿಗೆ ಕೊಡುತ್ತಾರೆ.

ಉಪಾಧ್ಯಕ್ಷರು : ಹಾಗಾದರೆ ತಾವು ಹೇಳುವಾಗ ಎಲ್ಲಾ ಬಡ ಮಕ್ಕಳಿಗೆ ಎಂದು ಹೇಳಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಅವರಿಗೋಸ್ಕರ ಬೇರೆ ಬಟ್ಟೆ ಕೊಡುತ್ತಿದ್ದೇವೆ. ಎಲ್ಲಾ ಮಕ್ಕಳಿಗೂ ಒಟ್ಟಾರೆ ಬಟ್ಟೆ ಕೊಡುತ್ತಿದ್ದೇವೆ.

ಶ್ರೀ ಹೆಚ್.ಡಿ. ಬಸವರಾಜ್ : ಎಲ್ಲಾ ಬಡ ಮಕ್ಕಳಿಗೆ ನೀಡುತ್ತಿರುವಂತಹ ಬಟ್ಟೆಗಳಲ್ಲಿ ನಿಷೇಧಿಸಲ್ಪಟ್ಟ "ನ್ಯಾಫ್ತಾ" ಎನ್ನುವ ರಾಸಾಯನಿಕ ವಸ್ತುವನ್ನು ಯೂಸ್ ಮಾಡಿದ್ದಾರೆ. ಇದನ್ನು ಸುಪ್ರೀಂಕೋರ್ಟ್ ಈಗಾಗಲೇ ನಿಷೇಧ ಮಾಡಿದೆ. ಆದುದರಿಂದ ದಯವಿಟ್ಟು ನಾನು ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, 38 ಲಕ್ಷ ಮೀಟರ್ ಬಟ್ಟೆಯನ್ನು ನೀವು ಖರೀದಿ ಮಾಡಿದ್ದೀರಲ್ಲಾ, ಆ ಬಟ್ಟೆಯನ್ನು ದಯವಿಟ್ಟು ಸುಟ್ಟುಹಾಕಿ. ಆ ಬಟ್ಟೆಯನ್ನು ಯಾವುದೇ ಕಾರಣಕ್ಕೂ ತಾವು ವಿತರಣೆಗೆ ಬಿಡುಗಡೆ ಮಾಡಬೇಡಿ. ಆ ಮಕ್ಕಳಿಗೆ ಯಾವುದೇ ರೀತಿಯ ಚರ್ಮ ರೋಗ ಬರದಿರುವಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ, ತಾವು ಮಾತು ಮುಂದುವರೆಸಿ ಬೇಗ ಮುಗಿಸಿ. ಮಾನ್ಯ ಮಂತ್ರಿಗಳು ಎಲ್ಲದಕ್ಕೂ ತಮ್ಮ ಉತ್ತರದಲ್ಲಿ ಹೇಳುತ್ತಾರೆ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ಕೊಟ್ಟಿದ್ದಾರೆ. ಇದರಲ್ಲಿ ಮಕ್ಕಳಿಗೆ ಕತ್ತರಿಸಿದ ತುಂಡು ಬಟ್ಟೆಗಳನ್ನು ವಿತರಿಸಲಾಗುತ್ತಿದೆ. ಹೊಲಿಗೆ ವೆಚ್ಚವನ್ನು ಪೋಷಕರೇ ಭರಿಸಬೇಕಾಗುತ್ತದೆ. ಅದರ ಅರ್ಥ ಏನು? ಏಕೆ ಕಟ್ ಮಾಡಿ ಕಳುಹಿಸುತ್ತೀರಿ? ಆ ರೀತಿ ಏಕೆ ಕಳುಹಿಸಬೇಕು?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಮುಂಚೆ ಹೊಲಿದ ಬಟ್ಟೆಗಳನ್ನು ಕೊಡತಕ್ಕಂಥ ಒಂದು ಸಂಪ್ರದಾಯ ಇತ್ತು. ಆಗ ಸರ್ಕಾರದವರೇ ಹೊಲಿಗೆ ಖರ್ಚನ್ನೂ ಭರಿಸುತ್ತಿದ್ದರು. 6 ರಿಂದ 10 ವರ್ಷದವರೆಗಿನ ವಿವಿಧ ವಯೋಮಿತಿಯ ಮಕ್ಕಳಿಗೆ ವಿತರಿಸಲಾದ ಬಟ್ಟೆಯ ಅಳತೆ ಸರಿಯಾಗಿ ಆ ಮಕ್ಕಳಿಗೆ ಹೊಂದಾಣಿಕೆ ಆಗುತ್ತಿರಲಿಲ್ಲ. ಕೆಲವು ಮಕ್ಕಳಿಗೆ ವಿತರಿಸಲಾಗುವ ಬಟ್ಟೆ ಚಿಕ್ಕದಾಗುವುದು, ಮತ್ತೆ ಕೆಲವರಿಗೆ ದೊಡ್ಡ ಅಳತೆಯದಾಗುವುದು, ಈ ರೀತಿ ಆಗುತ್ತಿತ್ತು. ಈ ಬಗ್ಗೆ ಸಾರ್ವತ್ರಿಕವಾಗಿ ಅಭಿಪ್ರಾಯ ಸಂಗ್ರಹ ಮಾಡಿದಾಗ ಹೊಲಿಗೆ ವೆಚ್ಚ ನಾವೇ ಹಾಕಿಕೊಳ್ಳುತ್ತೇವೆ, ಏನೂ ತೊಂದರೆ ಇಲ್ಲ, ಬಟ್ಟೆ ಮಾತ್ರ ಒಳ್ಳೆಯ ಬಟ್ಟೆ ಕೊಡಿ, ಎಷ್ಟೇ ಚಾರ್ಜ್ ಆದರೂ ಹೊಲಿಗೆ ವೆಚ್ಚ ನಾವೇ ಭರಿಸುತ್ತೇವೆ, ಚಿಂತೆ ಇಲ್ಲ ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಬಂತು. ಆಮೇಲೆ

ನಾವು ಉತ್ತಮವಾಗಿರತಕ್ಕ ಪಾಲಿಯಸ್ಟರ್ ಬಟ್ಟೆಯನ್ನು ವಿತರಣೆ ಮಾಡಿದೆವು. "ನ್ಯಾಫ್ತಾ" ಎಂದು ತಾವು ಹೇಳುತ್ತಿರುವಂತಾದ್ದು ಹೊರ ದೇಶದ್ದು. ಇಲ್ಲಿ ನಾವು ಏನು ಕೊಟ್ಟಿದ್ದೇವೆ. ಅದರ ಬಗ್ಗೆ ನಾನು ನಂತರ ಹೇಳುತ್ತೇನೆ. ಪ್ರತಿಯೊಂದು ಬಟ್ಟೆಯನ್ನೂ ಪೀಸ್ ಪೀಸ್ ಆಗಿ ಕಟ್ ಮಾಡಿ ಕೊಟ್ಟಿದ್ದೇವೆ. ನಿಕ್ಕರ್ ಪೀಸ್ ಬೇರೆ, ಶರ್ಟ್ ಪೀಸ್ ಬೇರೆ ಕೊಟ್ಟಿದ್ದೇವೆ. ಇವತ್ತು ಹೇಳುವಂತಾದ್ದನ್ನು ಬಹಳ ಸುಲಭವಾಗಿ ಹೇಳಬಹುದು. ಆದರೆ ಅನುಷ್ಠಾನಕ್ಕೆ ತರುವಂತಾದ್ದರ ಬಗ್ಗೆ ಯೋಚನೆ ಮಾಡಬೇಕಾದರೆ ಬಹಳ ದೀರ್ಘವಾಗಿ ನಾವು ಯೋಚನೆ ಮಾಡಬೇಕಾಗುತ್ತದೆ, ನಾವು ಅದನ್ನು ಮಾಡುತ್ತೇವೆ.

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ಒಂದು ಸಂದರ್ಭದಲ್ಲಿ ಬಟ್ಟೆಯ ಬೇರೆ ಬೇರೆ ಭಾಗಗಳನ್ನು ಕತ್ತರಿಸಿ ಕೊಟ್ಟಿದ್ದಾರೆ. ಅದೇ ನೆಲೆಯಲ್ಲಿ ಅವರು ಕೊಡುತ್ತಿದ್ದಾರೆ ಎನ್ನತಕ್ಕಂಥ ಭಾವನೆಯನ್ನು ನಾನು ಈ ಬಗ್ಗೆ ಹೇಳುತ್ತಿದ್ದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನಿಕ್ಕರ್ ಪೀಸ್ ಮತ್ತು ಶರ್ಟ ಪೀಸ್‌ಗಳನ್ನು ಬೇರೆ ಬೇರೆಯಾಗಿ ಕೊಡುತ್ತಿದ್ದೇವೆ. ಡಿಸೈನ್ ಕಟ್ ಮಾಡಿ ಕೊಡುತ್ತಿಲ್ಲ. ಆದರೆ ಪೀಸ್ ಕೊಟ್ಟರೆ ಒಂದು ಮಗುವಿಗೆ ಒಂದು ಶರ್ಟ ಆಗುತ್ತದೆ ಮತ್ತು ಒಂದು ನಿಕ್ಕರ್ ಆಗುತ್ತದೆ. ಹಿಂದೆ ಹಳೆಯದು ಇದ್ದುದನ್ನು ಕೊಟ್ಟಿದ್ದೇವೆ.

1.40 ಪಿ.ಎಂ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಇನ್ನು ಕಪ್ಪು ಹಲಗೆ ಯೋಜನೆ ಎನ್ನುವಂಥ ಕೇಂದ್ರ ಸರ್ಕಾರದ ಒಂದ ಯೋಜನೆ ಇದೆ. ಇದರಲ್ಲಿ ಕಡಿಮೆ ಎಂದರೆ 2 ಜನ ಅಧ್ಯಾಪಕರು ಮತ್ತು 2 ಕೊಠಡಿಗಳು ಇರಲೇ ಬೇಕು ಎನ್ನುವಂಥದ್ದು ಈ ಕೇಂದ್ರದ ಯೋಜನೆಯಲ್ಲಿದೆ. ಆದರೆ ತಾವು ಕೇಂದ್ರ ಸರ್ಕಾರದ ಕಪ್ಪು ಹಲಗೆ ಯೋಜನೆಯಡಿಯಲ್ಲಿ 2 ಅಧ್ಯಾಪಕರನ್ನು ನೇಮಕ ಮಾಡುತ್ತೀರಿ. ನಂತರ ಆ ಅಧ್ಯಾಪಕರುಗಳನ್ನು ಅದೇ ಶಾಲೆಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಒಂದು ಶಾಲೆಯಲ್ಲಿ ಕಡಿಮೆ ಎಂದರೆ 2 ಕೊಠಡಿಗಳು ಇರಬೇಕು ಮತ್ತು 2 ಅಧ್ಯಾಪಕರು ಇರಬೇಕು ಎನ್ನುವಂಥದ್ದು ಸರ್ಕಾರದ ನೀತಿಯಾಗಿದೆ. ಆದರೆ ಇವತ್ತು ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದಂಥ 2 ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವಂಥದ್ದು, ಮತ್ತು ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದಂಥ ಅಧ್ಯಾಪಕರ ಹುದ್ದೆಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡದೇ ಇರತಕ್ಕಂಥದ್ದು, ಈ ರೀತಿಯ ದ್ವಂದ್ವ ನೀತಿಯನ್ನು ಅನುಸರಿಸುತ್ತಿದ್ದೀರಿ. ಯಾವುದಾದರೂ ಒಂದನ್ನು ಮಾಡಿದರೆ ನಮ್ಮದೇನೂ ಆಕ್ಷೇಪ ಇಲ್ಲ. ಕಪ್ಪು ಹಲಗೆ ಯೋಜನೆಯಡಿಯಲ್ಲಿ ಇಬ್ಬರು ಅಧ್ಯಾಪಕರನ್ನು ಒಂದು ಶಾಲೆಗೆ ಕೊಡುವುದಾದರೆ ಕೊಡಿ. ಕೊಡುವುದಿಲ್ಲ ಎನ್ನುವುದಾದರೆ, ಕಪ್ಪು ಹಲಗೆ ಯೋಜನೆಗೂ ಮತ್ತು ತಮ್ಮ ರಾಜ್ಯ ಸರ್ಕಾರದ ಯೋಜನೆಗೂ ಏನಾದರೂ ವ್ಯತ್ಯಾಸವಿದೆಯೇ? ಹಾಗಾದರೆ, ಈ ತಾರತಮ್ಯ, ದ್ವಂದ್ವ ನೀತಿಯನ್ನು ಉಂಟುಮಾಡಿರತಕ್ಕಂಥದ್ದು ಏಕೆ ಎನ್ನುವುದನ್ನು ತಾವು ಹೇಳಬೇಕಾಗುತ್ತದೆ. ಕೇಂದ್ರದ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಬಹಳಷ್ಟು ಸೌಲಭ್ಯಗಳು ರಾಜ್ಯಕ್ಕೆ ಸಿಗುತ್ತಿವೆ. ಅದರಲ್ಲಿ ಎಷ್ಟು ಪ್ರಮಾಣದಲ್ಲಿ ವಿತರಣೆಯಾಗುತ್ತಿವೆ? ಏನೇನು

ವಿತರಣೆಯಾಗುತ್ತಿದೆ ಎನ್ನತಕ್ಕಂಥದ್ದು ತಮಗೇನಾದರೂ ವರದಿ ಬಂದಿದೆಯೇ? ಏಕೆಂದರೆ ನಮ್ಮ ಜಿಲ್ಲಾ ಪಂಚಾಯತಿನಲ್ಲಿ ಬಹಳಷ್ಟು ಅವ್ಯವಹಾರಗಳು ಆಗಿವೆ ಎನ್ನತಕ್ಕಂಥ ವರದಿ ಬಂದಿದೆ. ಅದರ ಬಗ್ಗೆ ತನಿಖೆ ಆಗುತ್ತಿದೆ... ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಕೇಳುವುದೇನೆಂದರೆ, ಕಪ್ಪು ಹಲಗೆ ಯೋಜನೆಯ ಉದ್ದೇಶ ಏನು? ಈ ಯೋಜನೆಯಡಿಯಲ್ಲಿ ಇರುವ ಅಧ್ಯಾಪಕರನ್ನು ಏಕೆ ಬದಲಾವಣೆ ಮಾಡುತ್ತೀರಿ? ಆ ಬದಲಾವಣೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಸಮರ್ಪಕವಾಗಿ ವಿದ್ಯಾರ್ಥಿಗಳ ಸಂಖ್ಯೆ ಇಲ್ಲ ಎನ್ನುವ ಉದ್ದೇಶದಿಂದ ಬದಲಾವಣೆ ಮಾಡುತ್ತೀರಾ? ಆ ರೀತಿ ಬದಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲೆಲ್ಲಿ ಅಧ್ಯಾಪಕರ ಸಂಖ್ಯೆಯಲ್ಲಿ ಕಡಿತ ಆಗಿದೆ? ಏಕೆಂದರೆ ಒಟ್ಟು ವಿದ್ಯಾರ್ಥಿಗಳ ನಿಷ್ಪತ್ತಿಗನುಗುಣವಾಗಿ ಅಧ್ಯಾಪಕರ ನೇಮಕ ಮಾಡಿದರೆ ನಮ್ಮದೇನೂ ಅಭ್ಯಂತರವಿರುವುದಿಲ್ಲ. ಆ ರೀತಿ ಮಾಡಿದರೆ ಅದಕ್ಕೆ ನಾವು ಒಪ್ಪುತ್ತೇವೆ ಒಂದು ವೇಳೆ, ನೇರವಾಗಿ ವಿದ್ಯಾರ್ಥಿಗಳ ನಿಷ್ಪತ್ತಿಗನುಗುಣವಾಗಿ ಅಧ್ಯಾಪಕರು ಇಲ್ಲದೇ ಇದ್ದಲ್ಲಿ ಅದಕ್ಕೆ ನೇರವಾಗಿ ನೀವೇ ಜವಾಬ್ದಾರರು ಆಗಬೇಕಾಗುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೆ, ಕಪ್ಪು ಹಲಗೆ ಯೋಜನೆಯಡಿಯಲ್ಲಿ 2 ಉಪಾಧ್ಯಾಯರು ಇರಲೇ ಬೇಕೆನ್ನುವುದು ಅದು ಕಡ್ಡಾಯವಾಗಿದೆ. ಆದರೆ ಕೆಲವು ಕಡೆ ಐದಾರು ಮಕ್ಕಳು ಇರತಕ್ಕಂಥ ಶಾಲೆಗಳೂ ಸಹ ಇವೆ. ಅಂಥಹ ಕಡೆ 2 ಉಪಾಧ್ಯಾಯರ ಅವಶ್ಯಕತೆ ಇರುವುದಿಲ್ಲವಾದ್ದರಿಂದ, ಪಕ್ಕದಲ್ಲಿ ಎಲ್ಲಿ ಹೆಚ್ಚು ಅವಶ್ಯಕತೆಯಿದೆ ಅಂಥಹ ಕಡೆ ಅವರನ್ನು ಡೆಪ್ಯುಟೇಷನ್ ಮಾಡಿದ್ದೇವೆಯೇ ಹೊರತು ಅದು ವರ್ಗ ಮಾಡಿದ್ದಲ್ಲ. ಮಾನವೀಯತೆಯ ದೃಷ್ಟಿಯಲ್ಲಿ, ಜವಾಬ್ದಾರಿ ತಿಳಿದುಕೊಂಡು ಕೆಲಸ ಮಾಡುವಾಗ ಆ ರೀತಿಯಾಗಿ ಮಾಡಿದ್ದೇವೆಯೇ ಹೊರತು ಕೆಟ್ಟ ಅಭಿಪ್ರಾಯದಲ್ಲಿ ಅಲ್ಲ. ಒಂದು ಶಾಲೆಯಲ್ಲಿ ಐದು ಮಕ್ಕಳು ಇದ್ದರೆ ಅಂಥ ಕಡೆಗೆ 2 ಉಪಾಧ್ಯಾಯರನ್ನು ಕಳುಹಿಸುವುದು ಸರಿ ಆಗುವುದಿಲ್ಲ. ಅಲ್ಲಿ 1 ರಿಂದ 4ನೇ ತರಗತಿಯವರೆಗೆ ಮಾತ್ರ ಇರುವುದು ಅಲ್ಲಿ ಒಬ್ಬ ಉಪಾಧ್ಯಾಯರು ಸಾಕಾಗುತ್ತದೆ. ಇನ್ನೊಬ್ಬ ಉಪಾಧ್ಯಾಯರನ್ನು ಸಧ್ಯಕ್ಕೆ ತಾತ್ಕಾಲಿಕವಾಗಿ ಡೆಪ್ಯುಟೇಷನ್ ಮಾಡುತ್ತೇವೆ. ಬಹುಶಃ ಪುನಃ 10-15 ಮಕ್ಕಳು ಬಂದರೆ ಪುನಃ ಅವರನ್ನು ಇಲ್ಲಿಗೆ ವಾಪಸ್ಸು ಕರೆಸಿಕೊಳ್ಳತಕ್ಕಂಥ ಸಂಪ್ರದಾಯ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಡೆಪ್ಯೂಟೇಷನ್ ಮಾಡತಕ್ಕಂಥ ಅಧಿಕಾರ ಡೆಪ್ಯೂಟಿ ಡೈರೆಕ್ಟರ್‌ರವರಿಗೆ ಏನು ಇತ್ತೋ ಅದನ್ನು ಸರ್ಕಾರ ವಿತ್‌ಡ್ರಾ ಮಾಡಿಬಿಟ್ಟಿದೆ.

(ಗೊಂದಲ)

ಶ್ರೀ ಹೆಚ್.ಜಿ. ಗೋವಿಂದೇಗೌಡ : ... ಡೆಪ್ಯುಟೇಷನ್ ಮಾಡತಕ್ಕಂಥದ್ದನ್ನು ವಿತ್‌ಡ್ರಾ ಮಾಡಿರುವುದನ್ನು ನಿಲ್ಲಿಸಿ ಈಗ ಮಾಡುತ್ತಿದ್ದೇವೆ. ಡೆಪ್ಯೂಟೇಷನ್ ಮಾಡತಕ್ಕಂಥ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಇದರಲ್ಲಿ ಕಷ್ಟ ಸುಖ ಎಲ್ಲವನ್ನೂ ನಾವು ಅನುಭವಿಸಿ ನೋಡಿದ್ದೇವೆ. ಡೆಪ್ಯೂಟೇಷನ್ ಮಾಡಿದ್ದರಿಂದ ಎಷ್ಟು ಅನುಕೂಲವಾಗಿದೆ, ಎಷ್ಟು ಅನಾನುಕೂಲವಾಗಿದೆ ಎನ್ನುವುದನ್ನು

ವಿಮರ್ಶೆ ಮಾಡಿ ಇಡೀ ಆಯಾ ಕ್ಷೇತ್ರದ ಲಿಸ್ಟ್‌ನ್ನು ಡಿ.ಇ.ಓ.ಗಳ ಮುಖಾಂತರ ಬಿ.ಇ.ಓ.ಗಳು ಇಮ್ಮಿಡೀಯೇಟ್ ಆಗಿ ಡಿ.ಡಿ.ಪಿ.ಐ.ಯವರಿಗೆ ಕೊಡಬೇಕು. ಡಿ.ಡಿ.ಪಿ.ಐ. ಇವರು ಬೆಂಗಳೂರಿಗೆ ಬಂದು ಕಮಿಷನರ್ ಅವರ ಹತ್ತಿರ ಆರ್ಡರ್ ಮಾಡಿಸಿಕೊಂಡು ಹೋಗಬೇಕು. ಆ ರೀತಿಯಾಗಿ ಡೆಪ್ಯೂಟೇಷನ್‌ಗಳನ್ನು 2 ದಿವಸದೊಳಗೆ ಮಾಡಿಸುತ್ತೇವೆ. ಇದರಲ್ಲಿ ಯಾವುದೇ ರೀತಿಯ ತೊಂದರೆ ಆಗಿಲ್ಲ. ಡೆಪ್ಯುಟೇಷನ್ ಮಾಡುವುದು ತಡ ಆಗುತ್ತದೆ ಎಂದು ಹೇಳಿದರೆ, ಹಿಂದಿನ ಹಾಗೆ 6 ತಿಂಗಳು 3 ತಿಂಗಳು ಆಗುತ್ತದೆಂದು ತಾವು ದಯಮಾಡಿ ತಿಳಿದುಕೊಳ್ಳಬೇಡಿ. ನಾವು ಕೇವಲ 2 ರಿಂದ 4 ದಿವಸದೊಳಗೆ ಈ ಡೆಪ್ಯುಟೇಷನ್‌ಗಳನ್ನೆಲ್ಲಾ ಮಾಡುವ ವ್ಯವಸ್ಥೆ ಮಾಡಿದ್ದೇವೆ.

ಉಪಾಧ್ಯಕ್ಷರು : ಶ್ರೀ ಪ್ರತಾಪಚಂದ್ರ ಶೆಟ್ಟರೆ, ತಾವು ಬೇಗ ಮಾತನಾಡಿ ಮುಗಿಸಬೇಕು. ಸದಸ್ಯರೆಲ್ಲಾ ಎದ್ದು ಹೋದ ಮೇಲೆ ನಿಮ್ಮ ಸಲಹೆ ಉಪಯೋಗವಾಗುವುದಿಲ್ಲ. ಆದಷ್ಟು ಬೇಗ ಮಾತನಾಡಿ ಮುಗಿಸಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಈ ರಾಜ್ಯದಲ್ಲಿ ನಡೆಯತಕ್ಕಂಥದ್ದರ ಮೇಲೆ ಮಾತ್ರ ನಾನು ಚರ್ಚೆ ಮಾಡುತ್ತಿದ್ದೇನೆ. ನಾನು ನೇರವಾಗಿ ಅವರ ಮೇಲೆ ಒಂದೂ ಸಹ ಆಪಾದನೆಯನ್ನು ಮಾಡಿಲ್ಲ. ಏಕೆಂದರೆ ಅವರ ಮೇಲೆ ನನಗೆ ಅಪಾರವಾದ ಗೌರವವಿದೆ. ಮತ್ತು ಪ್ರಾಮಾಣಿಕವಾದ ಪ್ರಯತ್ನವನ್ನೂ ಸಹ ಮಾಡುತ್ತಿದ್ದಾರೆ. ಆದರೆ ನಿಮ್ಮ ಪ್ರಾಮಾಣಿಕವಾದ ಪ್ರಯತ್ನಕ್ಕೆ ಸರಿಯಾದ ಫಲಿತಾಂಶ ಬಂದಿಲ್ಲ ಎನ್ನತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನೆ. ನೀವು ಮಾಡಿರತಕ್ಕಂಥ ಪ್ರಾಮಾಣಿಕವಾದ ಪ್ರಯತ್ನಕ್ಕೆ ತಕ್ಕಂತೆ ಫಲಿತಾಂಶ ಬಂದಿಲ್ಲ ಎನ್ನತಕ್ಕಂಥ ಮಾತನ್ನು ಬಿಟ್ಟರೆ ನಿಮ್ಮ ಮೇಲೆ ಯಾವುದೇ ಒಂದು ಆಪಾದನೆಯನ್ನು ಇಷ್ಟರವರೆಗೆ ನಾನು ಮಾಡಿಲ್ಲ. ನಾನು ಹೇಳತಕ್ಕಂಥದ್ದು ನಿಮ್ಮ ಮನಸ್ಸಿಗೆ ನೋವು ಆಗುವುದಾದರೆ ನಾನು ಕುಳಿತುಕೊಳ್ಳುತ್ತೇನೆ. ಏಕೆಂದರೆ, ನನಗೆ ಅಷ್ಟು ಮಾತನಾಡಲೇ ಬೇಕು ಎನ್ನುವ ಚಟ ಇಲ್ಲ. ಆದರೆ, ನಾನು ಹೇಳತಕ್ಕಂಥದ್ದು ಏನೆಂದರೆ, ಈ ವಿದ್ಯಾರ್ಥಿಗಳ ನಿಷ್ಪತ್ತಿಗನುಗುಣವಾಗಿ ಅಧ್ಯಾಪಕರುಗಳನ್ನು ಡೆಪ್ಯುಟೇಷನ್ ಮಾಡತಕ್ಕಂಥದ್ದಕ್ಕೆ ನನ್ನ ಆಕ್ಷೇಪವಿಲ್ಲ. ಕಪ್ಪು ಹಲಗೆ ಯೋಜನೆ ಅಡಿಯಲ್ಲಿ ಏನು ರಕ್ಷಣೆ ಪಡೆಯುತ್ತಿರುತ್ತೀರಿ, ಕೆಲವು ಸಲ ಕಪ್ಪು ಹಲಗೆ ಯೋಜನೆ ಅಡಿಯಲ್ಲಿದ್ದಂಥ ಅಧ್ಯಾಪಕರನ್ನು ಬೇರೆ ಕಡೆಗೆ ವರ್ಗಾಯಿಸಬಹುದೆಂದು ಹೇಳುತ್ತೀರಿ. ಕೆಲವು ಸಲ ಕಪ್ಪು ಹಲಗೆ ಯೋಜನೆಯಿಂದ ಅಧ್ಯಾಪಕರನ್ನು ಡೆಪ್ಯುಟೇಷನ್ ಮಾಡಬಹುದೆಂದು ಹೇಳುತ್ತೀರಿ. ಒಟ್ಟಿನಲ್ಲಿ ಮೊದಲೇ ಹೇಳಿದ ಹಾಗೆ ವಿದ್ಯಾರ್ಥಿಗಳ ನಿಷ್ಪತ್ತಿಗನುಗುಣವಾಗಿ, ಅಧ್ಯಾಪಕರನ್ನು ಎಲ್ಲಿಂದೆಲ್ಲಿಗೂ ಬೇಕಾದರೆ ವರ್ಗಾವಣೆ ಮಾಡಿ, ಡೆಪ್ಯುಟೇಷನ್ ಮಾಡಿ ಅದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಒಂದು ಕ್ಷೇತ್ರದ ಜವಾಬ್ದಾರಿ ನಿಮಗೆ ಎಷ್ಟು ಇದೆಯೋ? ಅದಕ್ಕಿಂತ ಸ್ವಲ್ಪವಾದರೂ ಜವಾಬ್ದಾರಿ ನಮ್ಮ ಕ್ಷೇತ್ರದ ಶಾಸಕರಿಗೆ ಇರುತ್ತದೆ. ಏಕೆಂದರೆ ನಾವು ಆ ಶಿಕ್ಷಕರಿಗೆ ಉತ್ತರ ಕೊಡಬೇಕಾಗುತ್ತದೆ. ನಾವು ನಿಮ್ಮ ಹತ್ತಿರ ಬಂದು ಅವರ ತೊಂದರೆಗಳನ್ನು ಹೇಳಬೇಕಾಗುತ್ತದೆ. ಆ ಒಂದು ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ಆ ಜವಾಬ್ದಾರಿಯನ್ನು ನೇರವಾಗಿ ಬಿ.ಇ.ಓ.

ರವರಿಗೆ ಕೊಡಿ, ಬೇಕಾದರೆ ನಿಮ್ಮ ಡಿ.ಡಿ.ಪಿ.ಐ. ಯವರಿಗೆ ಕೊಡಿ. ಆದರೆ ಬೇಕಾಬಿಟ್ಟಿ ವರ್ಗಾವಣೆ ಮತ್ತು ಡೆಪ್ಯುಟೇಷನ್‌ಗೆ ಆಸ್ಪದ ಕೊಡಬೇಡಿ. ವಿದ್ಯಾರ್ಥಿಗಳ ಸಂಖ್ಯೆ ಇದ್ದಾಗ ವರ್ಗಾವಣೆ ಅಥವಾ ಡೆಪ್ಯುಟೇಷನ್‌ನ್ನು ಮಾಡಬಾರದು ಎನ್ನತಕ್ಕಂಥದ್ದನ್ನು ನಾನು ಮತ್ತೊಮ್ಮೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನು ವರ್ಗಾವಣೆ ಸಂದರ್ಭದಲ್ಲಿ ಒಂದು ನೇಮಕಾತಿ ನೀತಿಯನ್ನು ಅನುಸರಿಸುತ್ತಿದ್ದೀರಿ. ಒಂದು ತಾಲ್ಲೂಕಿನವರಿಗೆ ಅದೇ ತಾಲ್ಲೂಕಿನಲ್ಲಿ ಕೆಲಸ ಕೊಡಬಾರದು ಅವರಿಗೆ ಬೇರೆ ತಾಲ್ಲೂಕಿನಲ್ಲಿ ಕೆಲಸ ಕೊಡಬೇಕು ಎನ್ನುವ ನೀತಿ ಇದೆ. ಇದನ್ನು ಸರ್ಕಾರ ಒಳ್ಳೆಯ ಅಭಿಪ್ರಾಯದಲ್ಲಿ ಮಾಡಿರಬಹುದು. ಆದರೆ ಇದರ ಪರಿಸ್ಥಿತಿ ಏನಾಯಿತು ಎಂದರೆ, ಅದೇ ತಾಲ್ಲೂಕಿನಲ್ಲಿ ಅವಕಾಶ ಇದ್ದರೂ ಸಹ ಅವರನ್ನು ಬೇರೆ ತಾಲ್ಲೂಕಿಗೆ ವರ್ಗಾವಣೆ ಮಾಡಿದಿರಿ. ಅದರಲ್ಲಿಯೂ ಸಹ ಹತ್ತಿರದ ತಾಲ್ಲೂಕನ್ನು ಬಿಟ್ಟು ಅದಕ್ಕಿಂತಲೂ ದೂರ ಇರತಕ್ಕಂಥ ತಾಲ್ಲೂಕುಗಳಿಗೆ ವರ್ಗಾವಣೆ ಮಾಡಿದಿರಿ. ಈ ಸಾಲಿನ ಸರ್ಕಾರದ ವರ್ಗಾವಣೆಯ ಆದೇಶ ಬಂದಾಗ ಅದರಲ್ಲಿ ನೋಡಿದರೆ ಬಹುತೇಕ ವರ್ಗಾವಣೆಗಳು ಪ್ರೀ-ಮೆಚ್ಯೂರ್ ಕೇಸುಗಳು ಆಗಿವೆ. ಅದರ ಅರ್ಥ ಏನೆಂದರೆ, ಸರ್ಕಾರದ ಉದ್ದೇಶ ಏನು ಇದೆಯೋ ಆ ಉದ್ದೇಶ ಈಡೇರಲಿಲ್ಲ. ತಾವು ಮೊದಲೇ ವರ್ಗಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಆಲೋಚನೆ ಮಾಡಬೇಕಾಗಿತ್ತು. ಅವರು ಯಾವ ತಾಲ್ಲೂಕಿನವರೋ ಅಲ್ಲಿಯೇ ಅವರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟು ಅಥವಾ ಅದೇ ತಾಲ್ಲೂಕಿಗೆ ವರ್ಗಾವಣೆ ಮಾಡಬೇಕು, ನಿಮ್ಮ ಬಿಗು ನೀತಿಯನ್ನು ಸಡಿಲಿಸಿ ಅವರನ್ನು ಸರಿಪಡಿಸಬೇಕೇ ಹೊರತು ಈ ವರ್ಷ ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದು ಬರುವ ವರ್ಷ ಅವರು ಅಲ್ಲಿಂದ ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಮಾಡಿಕೊಂಡು ಮತ್ತೊಂದು ಕಡೆಗೆ ಹೋಗುವುದು, ಈ ದೊಂಬರಾಟ ಬೇಡ. ಈ ಸರ್ಕಾರ ಯಾವುದೇ ನೀತಿಯನ್ನು ತೆಗೆದು ಕೊಳ್ಳುವುದಿದ್ದರೆ ಅದನ್ನು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು ಒಳ್ಳೆಯದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಪ್ರೌಢ ಶಾಲೆಗಳಿಗೆ ಶಾಲಾ ಸಿಬ್ಬಂದಿಯನ್ನು ನೇಮಕ ಮಾಡುತ್ತಾರೆ. ಆ ಶಾಲೆ ಯಾವ ಕ್ಷೇತ್ರದಲ್ಲಿ ಇದೆ, ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಲೋಕಸಭಾ ಸದಸ್ಯರು ಇದ್ದರೆ ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು ಮತ್ತು ಜಿಲ್ಲಾ ಪಂಚಾಯತ್‌ನವರಿಗೂ ಸಹ ಸಿಬ್ಬಂದಿ ನೇಮಕಾತಿ ಸಮಿತಿಯಲ್ಲಿ ಸದಸ್ಯರಾಗುವ ಅವಕಾಶ ಇದೆ. ಆದರೆ ಇದರಲ್ಲಿ ಗ್ರಾಮ ಪಂಚಾಯತಿಯವರಿಗೆ ಏಕೆ ಅವಕಾಶ ಇಲ್ಲ? ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಇವತ್ತು ಅಧಿಕಾರ ವಿಕೇಂದ್ರೀಕರಣದ ಅಡಿಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಒಬ್ಬ ಗ್ರಾಮ ಪಂಚಾಯತಿ ಅಧ್ಯಕ್ಷ ಅದೇ ಗ್ರಾಮದಲ್ಲಿ ಇದ್ದು, ಅದೇ ಗ್ರಾಮದಲ್ಲಿ ಇರತಕ್ಕಂಥ ಪ್ರೌಢ ಶಾಲೆಯ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯನಲ್ಲ. ಇದರಿಂದ ಅವನಿಗೆ ಏನು ಅನಿಸುತ್ತದೆ ಎಂದರೆ, ಈ ಸಮಿತಿಯಿಂದ ನನ್ನನ್ನು ಹೊರಗಿಟ್ಟು ಶಾಸಕರು ಏನೋ ರಾಜಕಾರಣ ಮಾಡುತ್ತಿದ್ದಾರೆ, ಜಿಲ್ಲಾಪಂಚಾಯತ್‌ನವರು ರಾಜಕಾರಣ ಮಾಡುತ್ತಿದ್ದಾರೆ ಎನ್ನತಕ್ಕಂಥ ಭಾವನೆ ಮೂಡುತ್ತದೆ. ಆದ್ದರಿಂದ ಈ ಭಾವನೆ ಅವನಲ್ಲಿ ಮೂಡದ ಹಾಗೆ ಆ ಪ್ರೌಢ ಶಾಲೆಗಳು ಯಾವ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಇರುತ್ತದೆಯೋ? ಅವರನ್ನೂ ಸಹ ಒಬ್ಬ ಸದಸ್ಯನಾಗಿ ನೇಮಕ ಮಾಡುವುದು ಒಳ್ಳೆಯದು ಎನ್ನುವಂಥ ನನ್ನ ಅನಿಸಿಕೆಯನ್ನು ತಮ್ಮ ಮುಖಾಂತರ ಹೇಳಿಲಿಕ್ಕೆ ಬಯಸುತ್ತೇನೆ.

ಶ್ರೀ ಬಿ.ಎ. ಮೊಯಿದ್ದೀನ್ : ಮಾನ್ಯ ಉಪಾಧ್ಯಕ್ಷರೆ, ಗ್ರಾಮಪಂಚಾಯತಿಯ ಅಧ್ಯಕ್ಷರನ್ನು ಆ ಪ್ರೌಢ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುವುದು ಒಳ್ಳೆಯದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಗ್ರಾಮಪಂಚಾಯತಿಯ ಅಧ್ಯಕ್ಷರನ್ನು ಪ್ರಾಢ ಶಾಲೆಯ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ನಮ್ಮದೇನೂ ಆಕ್ಷೇಪ ಇಲ್ಲ. ಇನ್ನು ಎಷ್ಟೋ ಪದವಿಪೂರ್ವ ಕಾಲೇಜುಗಳು ಪ್ರಾರಂಭವಾಗಿವೆ. ಕೆಲವು ಪದವಿಪೂರ್ವ ಕಾಲೇಜುಗಳು ಪ್ರಾರಂಭವಾಗಿ 4 ರಿಂದ 10 ವರ್ಷಗಳು ಆದರೂ ಸಹ ಅವುಗಳಿಗೆ ಸರಿಯಾದ ಕೊಠಡಿಗಳು ಇಲ್ಲ. ಇವತ್ತು ನನ್ನ ಕ್ಷೇತ್ರದಲ್ಲಿ 7 ಕಾಲೇಜುಗಳಿವೆ. ನಾನು ಮಾನ್ಯ ಶಿಕ್ಷಣ ಸಚಿವರ ಮೇಲೆ ಟೀಕೆ ಮಾಡುತ್ತಿಲ್ಲ. ನಮ್ಮ ವ್ಯವಸ್ಥೆಗಳ ಮೇಲೆ ಟೀಕೆ ಮಾಡುತ್ತೇವೆ ನಾನು ಕೇಳದೆ ಇರತಕ್ಕಂಥ ಪ್ರಶ್ನೆ ಅಲ್ಲ. ನಾವು ಬಹಳಷ್ಟು ಪ್ರಭಾವವನ್ನು, ಒತ್ತಡವನ್ನು ತಂದರೂ ಸಹ ಪದವಿಪೂರ್ವ ಕಾಲೇಜುಗಳಿಗೆ ಕೊಠಡಿ ಆಗಿಲ್ಲ. ಇದು ಏಕೆ ಆಗಲಿಲ್ಲವೆಂದರೆ, ಕೊಠಡಿ ಮಂಜೂರು ಮಾಡಬೇಕಾದರೆ ಅಂದಾಜು ಪಟ್ಟಿ ಬೇಕು ಎಂದು ಕೇಳುತ್ತಾರೆ. ಇವತ್ತು ಎಸ್ಟಿಮೇಟ್ ಕಾಪಿಯ ಆಧಾರದ ಮೇಲೆ ಕೊಠಡಿಗಳನ್ನು ಮಂಜೂರು ಮಾಡುತ್ತೀರಾ ಅಥವಾ ಶಾಲೆಗಳ ಅವಶ್ಯಕತೆಯಿದೆಯೆಂದು ಕೊಠಡಿಗಳಿಗೆ ಹಣವನ್ನು ಮಂಜೂರು ಮಾಡುತ್ತೀರಾ? ಜ್ಯೂನಿಯರ್ ಕಾಲೇಜುಗಳಿಗೆ ಕೊಠಡಿಯು ಅವಶ್ಯಕತೆಯಿದೆಯೆಂದು ಈ ಆಧಾರದ ಮೇಲೆ ಕೊಠಡಿಗೆ ಮಂಜೂರಾತಿ ಮಾಡುತ್ತೀರಾ ಅಥವಾ ಅಂದಾಜು ಪಟ್ಟಿ ಬಂದಿಲ್ಲ ಎನ್ನತಕ್ಕಂಥ ಹಿನ್ನೆಲೆಯಲ್ಲಿ ಕೊಠಡಿಯ ಮಂಜೂರಾತಿಯನ್ನು ತಡೆಹಿಡಿಯುತ್ತೀರಾ? ಇಂಥಹ ಪದಿವಿಪೂರ್ವ ಕಾಲೇಜುಗಳಿಗೆ ಮಂಜೂರಾತಿ ಆಗಿ ಎಷ್ಟು ಪದವಿಪೂರ್ವ ಕಾಲೇಜುಗಳು ಪ್ರಾರಂಭವಾಗಿಲ್ಲ ಎನ್ನತಕ್ಕಂಥ ಚಿಂತನೆಯನ್ನು ಮಾಡಬೇಕಾಗುತ್ತದೆ. ಕಾಲೇಜು ಪ್ರಾರಂಭವಾಗಿ ಐದು ವರ್ಷವಾದರೂ ಸಹ ಒಂದು ಕೊಠಡಿ ಇಲ್ಲವೆಂದಾದರೆ ನಮ್ಮ ಕ್ಷೇತ್ರದವರಿಗೆ ನಾವು ಏನು ಉತ್ತರ ಕೊಡುವುದು? ಒಂದು ವೇಳೆ ಕಾಲೇಜುಗಳನ್ನು ನಡೆಸುತ್ತಿರುವಲ್ಲಿ ಅವರು ಪ್ರೌಢ ಶಾಲೆಗಳಲ್ಲಿ ಅಡ್ಜಸ್ಟ್ ಮಾಡಿಕೊಂಡಿದ್ದರೂ ಸಹ ಹೈಸ್ಕೂಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಆದರೆ ಸ್ವಾಭಾವಿಕವಾಗಿ ಪದವಿಪೂರ್ವ ಕಾಲೇಜುಗಳನ್ನು ಬೇರೆ ಕಡೆ ನಡೆಸುವ ಹಾಗೆ ಹೇಳಲೇ ಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ತಾವು ಅದರ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಹಾಗೆಯೇ ವರ್ಗಾವಣೆ ಸಮಯದಲ್ಲಿ ಅಧ್ಯಾಪಕರುಗಳನ್ನು ವರ್ಗಾವಣೆ ಮಾಡುತ್ತಾರೆ? ಅದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ. ಆದರೆ ಅದಕ್ಕೆ ಬದಲಿ ವ್ಯವಸ್ಥೆ ಇರಬೇಕು. ವರ್ಗಾವಣೆ ಮಾಡಿದ ತಕ್ಷಣ ಜಾರಿಗೊಳಿಸಬೇಕು ಎನ್ನುವ ಹಿನ್ನೆಲೆಯಲ್ಲಿ ಬದಲಿ ವ್ಯವಸ್ಥೆಯನ್ನು ಮಾಡದಿದ್ದರೆ ಉಪಾಧ್ಯಾಯರುಗಳು ಇಲ್ಲದೆ ಪಾಠಪ್ರವಚನ ಸರಿಯಾಗಿ ನಡೆಯದೆ ಆ ಶಾಲೆಯಲ್ಲಿ ವರ್ಷದ ಕೊನೆಯಲ್ಲಿ ಸರಿಯಾದ ಫಲಿತಾಂಶ ಬರುವುದಿಲ್ಲ. ನಮ್ಮ ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಚೆನ್ನಾಗಿ ಬರಬೇಕು, ಅದರ ಗುಣಮಟ್ಟ ಹೆಚ್ಚಾಗಬೇಕು ಎಂದು ಹೇಳಿಕೊಂಡು ಇರುವ ಅಧ್ಯಾಪಕರನ್ನು ಅವರವರ ಊರಿಗೆ ವರ್ಗ ಮಾಡಿದರೆ ಆ ಶಾಲೆಯ ಪರಿಸ್ಥಿತಿ ಏನು? ಅಲ್ಲಿಯ ಶಾಸಕರ ಪರಿಸ್ಥಿತಿ ಏನು? ಅಲ್ಲಿಯ ಜನಪ್ರತಿನಿಧಿಗಳ ಪರಿಸ್ಥಿತಿ ಏನಾಗಬೇಕು? ಶಿಕ್ಷಣ ಇಲಾಖೆಯವರು ಏನು ಮಾಡಿದ್ದಾರೆಂದರೆ, ನಮ್ಮ ಒಂದು ಜ್ಯೂನಿಯರ್ ಕಾಲೇಜಿನಲ್ಲಿ ಇರತಕ್ಕಂಥ 10 ಜನ ಉಪನ್ಯಾಸಕರಲ್ಲಿ

5 ಜನರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದಾರೆ. ಆ ವಿದ್ಯಾರ್ಥಿಗಳೆಲ್ಲಾ ಸೇರಿ ಸಹಿ ಮಾಡಿ ಬೆಂಗಳೂರಿಗೆ ಒಂದು ಕಳುಹಿಸಿದ್ದಾರೆ ಮತ್ತು ಇನ್ನೊಂದನ್ನು ಊರಿನ ವಿಳಾಸಕ್ಕೆ ಕಳುಹಿಸಿದ್ದಾರೆ. ಆ ಉಪಾಧ್ಯಾಯರನ್ನು ರಿಲೀವ್ ಮಾಡಿದವರು ಆ ಕಾಲೇಜಿನ ಪ್ರಾಂಶುಪಾಲರು. ಆ ಪ್ರಾಂಶುಪಾಲರೂ ಸಹ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಇಲ್ಲಿ ಕೊರತೆ ಇದೆ ಎಂದು. ಇದು ನಮ್ಮನ್ನು ಇಕ್ಕಟ್ಟಿಗೆ ಸಿಗಿಸುತ್ತೀರಿ. ಬದಲಿ ವ್ಯವಸ್ಥೆಯೂ ಇಲ್ಲದೇ ಯಾವುದೇ ವರ್ಗಾವಣೆಯನ್ನು ಮಾಡಬಾರದು. ಒಂದು ವೇಳೆ ಹೆಲ್ತ್ ಗ್ರೌಂಡ್ ಮೇಲೆ ಆದ್ಯತೆಯನ್ನು ಕೊಡಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಉಳಿದ ವೇಳೆಯಲ್ಲಿ ಬದಲಿಯ ವ್ಯವಸ್ಥೆಯು ಇಲ್ಲದೆ ವರ್ಗಾವಣೆಯನ್ನು ಮಾಡಿದರೆ ಬಹುಶಃ ಆ ಸಮಸ್ಯೆಯು ನಮಗೆ ಬರುತ್ತದೆ. ಸಮಸ್ಯೆಯನ್ನು ನಿಭಾಯಿಸಬೇಕಾದಂತಹ ಜವಾಬ್ದಾರಿಯು ಬರುತ್ತದೆ. ನಾವು ಈಗಾಗಲೇ ಶಂಕರನಾರಾಯಣದ ಬಗ್ಗೆ ಹೇಳಿದ್ದೇವೆ. ಹತ್ತಿರದ ಕಾಲೇಜಿನಿಂದ ಅದನ್ನು ಸರಿಪಡಿಸುತ್ತೇವೆಂದು ಹೇಳಿರುತ್ತೀರಿ. ಆ ಕಾಲೇಜಿನ ಅಟೆಂಡೆನ್ಸ್ ತಾವು ನೋಡಿದರೆ ಕಳೆದ ವರ್ಷ ಎಷ್ಟು ವಿದ್ಯಾರ್ಥಿಗಳು ಅಲ್ಲಿಗೆ ಸೇರಿದ್ದರು, ಈ ವರ್ಷ ಎಷ್ಟು ವಿದ್ಯಾರ್ಥಿಗಳು ಸೇರಿದ್ದಾರೆ ಎಂಬ ಬಗ್ಗೆ ಬೇಕಾದರೆ ನಾನು ಅಂಕಿ ಅಂಶಗಳನ್ನು ತರುತ್ತೇನೆ. ಆಗ ನಾನು ಹೇಳಿರತಕ್ಕಂಥದ್ದು ಸರಿಯೇ ಎನ್ನುವುದನ್ನು ಪರಿಶೀಲನೆ ಮಾಡಿ ನಂತರ ಆ ಕೆಲಸವನ್ನು ಮಾಡಬೇಕೆಂದು ಹೇಳಿ, ಪದವಿ ಕಾಲೇಜಿನ ಬಗ್ಗೆ ಸನ್ಮಾನ್ಯ ಸಚಿವರ ಹತ್ತಿರ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಯನ್ನು ಪಡುತ್ತೇನೆ. ತಮ್ಮಲ್ಲಿ ಶಂಕರನಾರಾಯಣದಲ್ಲಿ ಒಂದು ಪದವಿ ಪೂರ್ವ ಕಾಲೇಜು ಇದೆ. ಇದಕ್ಕೆ ಕಳೆದ ಸಾರಿ ಒಂದು ಕಟ್ಟಡವನ್ನು ಕೊಡಿ, ಕೊಠಡಿಗಳನ್ನಾದರೂ ಕೂಡಿ ಎಂದು ಕೇಳಿದ್ದೆ. ಕಾಲೇಜು ಪ್ರಾರಂಭವಾಗಿ 4 ವರ್ಷವಾಗಿದೆ. ಈ ವರ್ಷ ಬಹುಶಃ ಮೂರು ಕೊಠಡಿಗಳನ್ನು ಮಂಜೂರು ಮಾಡಿದ್ದಾರೆ. ಏಕೆಂದರೆ ಅವರುಗಳು ಓದದೇ ಏನು ಮಾಡುತ್ತಾರೆಂಬುದು ನಮಗೆ ಗೊತ್ತಿದೆ ಆದುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಎಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದ್ದೀರಿ, ಅದಕ್ಕೆ ಕೊಠಡಿಗಳನ್ನು ಹಾಗೂ ಇತರ ಎಲ್ಲಾ ಸೌಲಭ್ಯಗಳನ್ನು ಆದಷ್ಟು ಶೀಘ್ರವಾಗಿ ಮಾಡಿಕೊಡಿ ಎನ್ನುವಂತಹ ಮಾತನ್ನು ಹೇಳಿ ಅಧ್ಯಕ್ಷರಿಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಆರ್. ಪಾಟೀಲ್ (ಬಿಜಾಪುರ) : ಮಾನ್ಯ ಉಪಾಧ್ಯಕ್ಷರೇ, ಶಿಕ್ಷಣ ಖಾತೆಯು ಬಹಳ ಮುಖ್ಯವಾದುದು. ಆ ಖಾತೆಯನ್ನು ವಹಿಸಿಕೊಂಡಂತಹ ಸಚಿವರ ಬಹಳ ಕಳಕಳಿಯಿಂದ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ ಮತ್ತು ಈಗಲೂ ಸಹ ಮಾಡುತ್ತಾ ಇದ್ದಾರೆ. ಇದು ಬಹಳ ಸಂತೋಷವಾಗಿದೆ. ಆದರೆ ಇನ್ನು ಹಳ್ಳಿಗಳಲ್ಲಿರತಕ್ಕಂತಹ ಸಮಸ್ಯೆಗಳನ್ನು ಸಹ ಪರಿಹರಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಲಂಬಾಣಿ ತಂಡಗಳಲ್ಲಿಯೂ ಸಹಿತ ಪ್ರಾಥಮಿಕ ಶಾಲೆಗಳನ್ನು ತೆರೆದಿರುತ್ತಾರೆ. ಆದರೆ ನಾನು ಇದರ ಬಗ್ಗೆ ಸಾಕಷ್ಟು ಸಾರಿ ಹೇಳಿದ್ದೇನೆ. ಕಳೆದ ವರ್ಷ ನಾನು ಶಿಕ್ಷಣ ಇಲಾಖೆಯ ವಿಷಯ ಸಮಿತಿಯಲ್ಲಿಯೂ ಸಹ ಸದಸ್ಯನಾಗಿದ್ದಾಗ ನಾನು ಮತ್ತು ಹಾರ್ನಳ್ಳಿ ರಾಮಸ್ವಾಮಿಯವರು ಸೇರಿ ಪ್ರಪೋಸಲ್‌ನ್ನು ಕೂಡ ಮಾಡಿದ್ದೇವೆ. ಅಲ್ಲಿ ಯಾವ ಶಿಕ್ಷಕರೂ ಸಹ ಹೋಗುವುದಿಲ್ಲ. ಇಲ್ಲಿಗೆ ಡೆಪ್ಯೂಟೇಷನ್ ಮಾಡಿ ನೇಮಿಸಿ ಅವರಿಗೆ 4-5 ರೂಪಾಯಿಗಳನ್ನು

ಪಗಾರವನ್ನು ಕೊಟ್ಟು ವಾರಕ್ಕೆ ಒಮ್ಮೆ 15 ದಿವಸಕ್ಕೆ ಒಮ್ಮೆ ಅಲ್ಲಿ ಹೋಗಿ ಸಹಿಯನ್ನು ಮಾಡಿ ಬರುತ್ತಾರೆ. ಹೀಗಾದರೆ ಅಲ್ಲಿಯ ಹುಡುಗರು ಯಾವ ರೀತಿಯಲ್ಲಿ ಸುಧಾರಣೆಯಾಗಬೇಕು? ಅದರ ಬಗ್ಗೆ ಸಚಿವರು ಗಮನವನ್ನು ಹರಿಸಬೇಕು. ಇನ್ನು ಕೆಲವೊಂದು ಹಳ್ಳಿಗಳಲ್ಲಿ ಶಾಲೆಗಳು ಬಸ್ ಸ್ಟ್ಯಾಂಡ್ ಬಳಿ, ದೊಡ್ಡ ದೊಡ್ಡ ಚಹಾ ಅಂಗಡಿಗಳ ಹತ್ತಿರ ಇದೆ. ಆ ಚಹಾ ಅಂಗಡಿಯಲ್ಲಿ ಚಹಾವನ್ನು ಕುಡಿದು ಶಾಲೆಯ ವರಾಂಡದಲ್ಲಿ ಜನರು ಕುಳಿತುಕೊಂಡಿರುತ್ತಾರೆ. ಇದರಿಂದ ಶಿಕ್ಷಕರಿಗೆ ಮಕ್ಕಳಿಗೆ ಪಾಠವನ್ನು ಹೇಳುವುದಕ್ಕೆ ತೊಂದರೆಯಾಗುತ್ತದೆ. ಆದುರಿಂದ ಆ ವರಾಂಡಕ್ಕೆ ಒಂದು ಕಾಂಪೌಂಡನ್ನು ಕಟ್ಟಬೇಕೆಂದು ಹೇಳಬಯಸುತ್ತೇನೆ. ಶಿಕ್ಷಕರ ವರ್ಗಾ ವರ್ಗಿಯನ್ನು ಮೂರು ವರ್ಷಕ್ಕೆ ಕಡ್ಡಾಯ ಮಾಡಬೇಕು ಏಕೆಂದರೆ ಆರು ತಿಂಗಳಿಗೆ ವರ್ಗಾವೆಂದು ಶಿಕ್ಷಕರು ಡಿ.ಡಿ.ಪಿ.ಐ. ಆಫೀಸ್‌ಗೆ ಇನ್ನೊಂದು ಆಫೀಸ್‌ಗೆ ಎಂದು ಓಡಾಡುತ್ತಾರೆ. ದೊಡ್ಡ ಕಂಪ್ಲೇಟ್ ಇದ್ದವರನ್ನು ಬಿಟ್ಟು ಬೇರೆ ಯಾರನ್ನೂ ಕೂಡ ವರ್ಗಾವಣೆ ಮಾಡಬಾರದು. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳು ಬಹಳ ಜರೂರು ಇದೆ. ಶಿಕ್ಷಕರು ಬಹಳ ಅವಶ್ಯಕವಾಗಿದ್ದಾರೆ. ಒಂದೇ ಕೊಠಡಿಯಲ್ಲಿ ಮೂರು ನಾಲ್ಕು ತರಗತಿಗಳು ಒಟ್ಟಿಗೆ ಒಬ್ಬರೇ ಶಿಕ್ಷಕರು ಕಲಿಸುತ್ತಾರೆ. ಆದುದರಿಂದ ಪ್ರತಿಯೊಂದು ಕ್ಲಾಸ್‌ಗೂ, ಪ್ರತಿಯೊಬ್ಬ ಶಿಕ್ಷಕರು ಅವಶ್ಯಕವಾಗಿ ಬೇಕು. ಈ ರೀತಿಯಾಗಿ ಮಾಡಿದರೆ ಸುಧಾರಣೆಯಾಗುತ್ತದೆ. ಮೂರು ನಾಲ್ಕು ತರಗತಿಗಳನ್ನು ಒಬ್ಬರೇ ನಡೆಸಿದರೆ ಅದು ಯಶಸ್ವಿಯಾಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಇನ್ನು ಅನುದಾನ ರಹಿತ ಶಾಲೆಗಳಿಗೆ ಸ್ವಲ್ಪ ಅನುದಾನವನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಪ್ರೈವೇಟ್‌ನವರಿಗೆ ಶಾಲೆಯನ್ನು ತೆರೆಯಲು ಅನುಕೂಲವನ್ನು ಮಾಡಿಕೊಟ್ಟರೆ ಅವರು ಡೊನೇಷನ್ ತೆಗೆದುಕೊಂಡು ಎಂಥವರನ್ನು ಬೇಕಾದರೂ ಅಂಥವರನ್ನು ಶಿಕ್ಷಕರನ್ನಾಗಿ ಮಾಡಿ ಶಿಕ್ಷಣ ಮಟ್ಟವನ್ನು ಕುಂಠಿತ ಮಾಡುತ್ತಾರೆ. ಆದುದರಿಂದ ಹೆಚ್ಚು ಸಂಖ್ಯೆಯಲ್ಲಿ ಖಾಸಗಿಯವರಿಗೆ ಶಾಲೆಗಳನ್ನು ತೆರೆಯಲು ಅವಕಾಶವನ್ನು ಕೊಡಬಾರದೆಂದು ನಾನು ಹೇಳಬಯಸುತ್ತೇನೆ. ಗ್ರಾಮೀಣ ಪ್ರದೇಶಗಳಿಗೆ ನೀವು ಏನು ಪ್ರಮೋಷನ್ ಕೊಟ್ಟು ಹೆಡ್‌ಮಾಸ್ಟರನ್ನು ಹಾಕುತ್ತೀರಿ, ಅವರುಗಳು ಅಲ್ಲಿಗೆ ಹೋಗುವುದಿಲ್ಲ. ನನ್ನ ಮತ ಕ್ಷೇತ್ರದೊಳಗೆ 4-5 ಕಡೆಗಳಲ್ಲಿ ಹಳ್ಳಿಗಳಿಗೆ ಹೆಡ್‌ಮಾಸ್ಟರ್‌ಗಳು ಹೋಗೇ ಇಲ್ಲ. ಅವರ ಮೇಲೆ ಏನು ಕ್ರಮವನ್ನೂ ಸಹ ತೆಗೆದುಕೊಳ್ಳದೆ ಹಾಗೆಯೇ ಬಿಟ್ಟು ಬಿಡುತ್ತೀರಿ. ಮೂರು ನಾಲ್ಕು ವರ್ಷಗಳಿಂದ ಡಿ.ಡಿ.ಪಿ.ಐ.ಯವರಿಗೆ ಹೇಳಿಕೊಳ್ಳುತ್ತಾ ಬಂದಿದ್ದೇವೆ. ಅವರು ಪ್ರಮೋಷನ್ ಮಾಡಿ ಹಾಕುತ್ತಾರೆ. ಆದರೆ ಅಲ್ಲಿಗೆ ಯಾರೂ ಸಹ ಹೋಗುವುದೇ ಇಲ್ಲ. ಹಾಗಾದರೆ ಏನು ಮಾಡುವುದು? ಆದುದರಿಂದ ದಯವಿಟ್ಟು ಅಲ್ಲಿಗೆ ಹೋಗುವಂತೆ ಮಾಡಬೇಕು. ಇಲ್ಲದೇ ಹೋದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಂಡು ಅಲ್ಲಿಗೆ ಅನುಕೂಲವನ್ನು ಮಾಡಿಕೊಡಬೇಕು. ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಹೆಚ್ಚು ಹೈಸ್ಕೂಲ್‌ಗಳನ್ನು ತೆರೆಯಬೇಕು. ಈ ರೀತಿಯಾಗಿ ಮಾಡಿದರೆ ಬಡ ವಿದ್ಯಾರ್ಥಿಗಳಿಗೆ, ಬಡವರು ಇರಲಿ ಶ್ರೀಮಂತರು ಇರಲಿ ಹೆಣ್ಣು ಮಕ್ಕಳು ಕಲಿಯುವುದಕ್ಕೆ ಅನುಕೂಲವಾಗುತ್ತದೆ. ಹಳ್ಳಿಯಲ್ಲಿ ಹೆಣ್ಣು ಮಕ್ಕಳನ್ನು ಕಲಿಯುವುದಕ್ಕೆ ಒಂದು ಕಡೆಯಿಂದ ಇನ್ನೊಂದು ಕಡೆ ಕಳುಹಿಸುವುದಕ್ಕೆ ಬಹಳ ತೊಂದರೆ ಇರುತ್ತದೆ. ಪ್ರತಿಯೊಬ್ಬ ಹೆಣ್ಣು ಮಕ್ಕಳೂ ಸಹ ವಿದ್ಯಾಭ್ಯಾಸವನ್ನು ಮಾಡಬೇಕೆಂದು ಸರ್ಕಾರದ ಭಾವನೆಯಾಗಿದ್ದರೆ ಹಳ್ಳಿಗಳಿಗೆ ಹೈಸ್ಕೂಲ್‌ಗಳನ್ನು ತೆರೆಯಬೇಕೆಂದು

ಂಡು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಸುತ್ತೇನೆ.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಕ್ತಾಯಗೊಳಿಸಿ ಮತ್ತೆ ಮಧ್ಯಾಹ್ನ 3.00 ಗಂಟೆಗೆ ವೇಶಗೊಳ್ಳೋಣ.

(ಸದನವು ಮಧ್ಯಾಹ್ನ 1.58ಕ್ಕೆ ಮುಕ್ತಾಯವಾಗಿ ಮತ್ತೆ
ಮಧ್ಯಾಹ್ನ 3.00 ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದು)

ಸದನವು ಪುನಃ : 3-10 ಗಂಟೆಗೆ ಸಮಾವೇಶಗೊಂಡಿತು

(ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ್ ಎಂ. ಮಾಮನಿ)ರವರು ಪೀಠವನ್ನು ಅಲಂಕರಿಸಿದರು)

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೆ, ನನಗೆ 2 ನಿಮಿಷ ಮಾತನಾಡಲು ಶ ಕೊಡಿ, ಈಗ ಪುಸ್ತಕಗಳನ್ನು ಶಾಲಾ ಕಾಲೇಜುಗಳು ಉಪಯೋಗ ಮಾಡತಕ್ಕಂಥದ್ದು, ಕಾಲೇಜಿನಲ್ಲಿ ಅವಾಚ್ಯ ಶಬ್ದಗಳಿಂದ ಕೂಡಿರುವಂತಹ ಒಂದು ಕತೆ ಪುಸ್ತಕ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಚಿವರು ಉತ್ತರ ಕೊಡಲಿ ನಾವೇನೂ ಬೇಡವೆಂದು ವುದಿಲ್ಲ. ಅವರು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದರು ಬಹುಶಃ ಅದು ಏಕೆ ಲ್ಲ ಎಂಬುದು ಗೊತ್ತಿಲ್ಲ, ಇದನ್ನು 15 ದಿವಸದ ಹಿಂದೆಯೇ ಕಳುಹಿಸಿದರು. ಅದು ಇವತ್ತು ದೆ ನಾಳೆ ಬರುತ್ತದೆ ಎಂದು ಕಾಯುತ್ತಿದ್ದಾರೆ, ಅದನ್ನು 2 ನಿಮಿಷದಲ್ಲಿ ಹೇಳುತ್ತಾರೆ. ಅದಕ್ಕೆ ಶ ಕೊಡಿ.

ಉಪಾಧ್ಯಕ್ಷರು : ಅವರು ಈ ವಿಷಯವನ್ನು ನಾಳೆ, ನಾಡಿದ್ದು ಅಥವಾ ಶೂನ್ಯ ವೇಳೆಯಲ್ಲಿ ಮಾಡಲಿ. ಈಗ ಬೇಡಿ, ಕ್ಲಾರಿಫಿಕೇಷನ್‌ನಲ್ಲಿ ಕೇಳಬಹುದು. ಸದನವನ್ನು 2 ಗಂಟೆಗೆ ಮುಕ್ತಾಯ ಹೋಗಿದ್ದೇವೆ, ಮತ್ತೆ ಇದರ ಬಗ್ಗೆ ಚರ್ಚೆ ಇಲ್ಲವೆಂದು ಹೇಳಿದ್ದೇವೆ. ಮತ್ತೆ ಈಗ ಹೇಳುತ್ತಾ

ವಿತ್ತೀಯ ಕಾರ್ಯಕಲಾಪ

-98ನೇ ಸಾಲಿನ ಉನ್ನತ ಶಿಕ್ಷಣ ಹಾಗು ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ ಕೆಗಳ ಮೇಲಿನ ಚರ್ಚೆಗೆ ಉತ್ತರ :

+ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಸನ್ಮಾನ್ಯ ಧ್ಯಕ್ಷರೆ, ಗೌರವಾನ್ವಿತ ಸದಸ್ಯರುಗಳು, ನಮ್ಮ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಂಡು ಅನೇಕ ಉತ್ತಮವಾಗಿರತಕ್ಕಂಥ ಸಲಹೆಗಳನ್ನು ನೀಡಿದ್ದಾರೆ. ಅವರಿಗೆ ಪ್ರಪ್ರಥಮವಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ ಹೆಚ್ಚು ಕಾಲ ನಾನು ತೆಗೆದುಕೊಳ್ಳುವುದಿಲ್ಲ. ಇವತ್ತು ಹೊಸ

ಶಾಲೆಗಳು ಆರಂಭವಾಗಿರತಕ್ಕದ್ದು 1996-97ರಲ್ಲಿ, 877 ಕಿರಿಯ ಪ್ರಾಥಮಿಕ ಪಾಠಶಾ ಪ್ರಾರಂಭವಾಗಿವೆ. ಹಿರಿಯ ಪ್ರಾಥಮಿಕ ಪಾಠಶಾಲೆಗಳು 978 ಪ್ರಾರಂಭವಾಗಿವೆ. ಪ್ರೌಢಶಾ 737, ಪದವಿಪೂರ್ವ ಕಾಲೇಜುಗಳು 60, 1997-98ರಲ್ಲಿ 2000 ಕಿರಿಯ ಪ್ರಾಥಮಿಕ ಪಾಠಶಾ ಮತ್ತು ಹಿರಿಯ ಪ್ರಾಥಮಿಕ ಪಾಠಶಾಲೆಗಳು ರಾಜ್ಯದಾದ್ಯಂತ ಪ್ರಾರಂಭವಾಗಿರತಕ್ಕಂಥದ್ದು, ನೇಮಕ 1996-97ರಲ್ಲಿ 17997 ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಈ ವರ್ಷ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಆಗಿದೆ. 9 ಸಾವಿರ ಕೇಂದ್ರಮ ಕೇಳಿದ್ದೇವೆ, ಅಲ್ಲಿಂದ ಬಂದರೆ ಹೆಚ್ಚು ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಅನುಕೂಲವಾಗುತ್ತದೆ. ಪ್ರೌಢಶಾಲೆಗಳಲ್ಲಿ ಕಳೆದ ವರ್ಷ 1996-97ರಲ್ಲಿ 2500 ಪ್ರೌಢಶಾ ಕೊಟ್ಟಿದ್ದೇವೆ. ಈ ವರ್ಷ 3500 ಉಪಾಧ್ಯಾಯರುಗಳನ್ನು ನೇಮಕ ಮಾಡುವಂತಹ ಹಂತದ ಪದವಿಪೂರ್ವ ಕಾಲೇಜಿನಲ್ಲಿ 864 ಉಪಾಧ್ಯಾಯರುಗಳನ್ನು ಕಳೆದ ವರ್ಷ ನೇಮಕ ಮಾ ಈ ವರ್ಷ ಮುಖ್ಯೋಪಾಧ್ಯಾಯರು ಹಿರಿಯ ಪ್ರಾಥಮಿಕ ಪಾಠಶಾಲೆಗಳಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡುವ ಹಂತದಲ್ಲಿದ್ದೇವೆ. ಸಧ್ಯದಲ್ಲೇ ಅವರನ್ನು ಮಾಡುತ್ತೇವೆ. ಈ ಉಪಾಧ್ಯಾಯರುಗಳನ್ನು ನೇಮಕ ಮಾಡುವಾಗ ಪ್ರಾಥಮಿಕ ಪಾಠಶಾ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವಾಗ ರೋಸ್ಟರ್ ಮತ್ತು ಮೆರಿಟ್‌ಗೆ ಕೊಟ್ಟಿದ್ದೇವೆ. ಅರ್ಧ ಭಾಗ ಮಹಿಳೆಯರಿಗೆ ಅವಕಾಶ ಕೊಟ್ಟಿದ್ದೇವೆ. ಎಲ್ಲಾ ಉಪಾಧ್ಯಾಯ ಹಳ್ಳಿಗಳಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ. ಟೌನ್‌ನಲ್ಲಿ ಕೆಲಸ ಮಾಡ ಯಾರಿಗೂ ಅವಕಾಶ ಕಲ್ಪಿಸಿಕೊಟ್ಟಿಲ್ಲ. ಗ್ರಾಮಾಂತರ ಮಟ್ಟದಲ್ಲಿ ಅನೇಕ ಉಪಾಧ್ಯಾಯರುಗ ಎಂದು ಸ್ನೇಹಿತರುಗಳು ಮೊದಲಿನಿಂದಲೂ ಹೇಳುತ್ತಿದ್ದಾರೆ. ಆ ದೃಷ್ಟಿಯಲ್ಲಿ ಎಲ್ಲಾ ಉಪಾಧ್ಯಾ ಕಳೆದ ವರ್ಷ ಮತ್ತು ಈ ವರ್ಷ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ, ಇವ ಹಳ್ಳಿಗಳಲ್ಲಿ ಕೆಲಸ ಮಾಡತಕ್ಕಂತಹ ರೀತಿಯಲ್ಲಿ ವರ್ಗಮಾಡಿದ್ದೇವೆ. ಶಾಲಾ ಕೊಠಡಿಗಳ ನಿ ನಿರ್ಮಾಣ 1996-97ರಲ್ಲಿ 23970 ಕೊಠಡಿಗಳನ್ನು 40 ಕೋಟಿ ರೂಪಾಯಿಗಳ ಅಂದ ಕೊಠಡಿಗಳ ಕಟ್ಟಡ ಆಗಿದೆ. 1997-98ರಲ್ಲಿ 42 ಕೋಟಿ ರೂಪಾಯಿಗಳ ಹಣವನ್ನು ಒದಗಿ ಈ ವರ್ಷ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಅದೇ ರೀತಿ ಪರಿಶಿಷ್ಟ ಜಾತಿ ಹೆಣ್ಣು ಉಚಿತವಾಗಿರತಕ್ಕಂತಹ ಬ್ಯಾಗನ್ನು ಹಂಚಿಕೆ ಮಾಡಿದ್ದೇವೆ. ಸನ್ಮಾನ್ಯ ಲಿಂಗಪ್ಪನವರು ಉತ್ತಮವಾಗಿ ಬಟ್ಟೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ತಮ್ಮ ಕಮಿಷನರ್ ಇಡೀ ಪೇಟೆಯನ್ನೆಲ್ಲಾ ಉತ್ತಮವಾಗಿರತಕ್ಕಂಥ ಬ್ಯಾಗ್‌ಗಳನ್ನು ಒದಗಿಸತಕ್ಕಂತ ಉಪಕಾರ ಮಾಡಿದ್ದಾರೆ ಎಂದು ಹೆ ಅದಕ್ಕೆ ಅವರಿಗೆ ನಾನು ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಟಿಸಿಹೆಚ್ ಮತ್ತು ಕೋರ್ಸುಗಳಿಗೆ ಈಗ ಸೀಟಿನಲ್ಲಿ ಏನು ಮಾಡುತ್ತಿದ್ದೇವೆ. ಅದೇ ಒಂದು ವ್ಯವಸ್ಥಿತವಾದ ಕಾ ಹಮ್ಮಿಕೊಂಡು ಅದೇ ರೀತಿ ಸೀಟ್‌ಗಳನ್ನು ಅಲಾಟ್ ಮಾಡತಕ್ಕಂತಹ ಕೆಲಸ ನಡೆಯುತ್ತಾ ವರ್ಷ 7ನೇ ತರಗತಿ ಪಬ್ಲಿಕ್ ಪರೀಕ್ಷೆ ಮಾಡಿರತಕ್ಕಂಥದು ತಮಗೆ ಗೊತ್ತಿದೆ. ಈ ವರ್ಷ ರಾಜ್ಯ 7ನೇ ತರಗತಿ ಪರೀಕ್ಷೆಯನ್ನೂ ಮಾಡಿದ್ದೇವೆ. ಇನ್ನು ಉಚಿತವಾಗಿರತಕ್ಕಂತಹ ಸಮವ

ತಕ್ಕಂಥದಲ್ಲಿ ಸ್ವಲ್ಪ ತಡವಾಗಿದೆ. ನಾವು ಈಗ ಕೈಮಗ್ಗದಿಂದ ಇದನ್ನು ತೆಗೆದುಕೊಳ್ಳುವಂಥದ್ದು ಯಾರಿಂದಲೂ ತೆಗೆದುಕೊಳ್ಳುವಂಥದ್ದು ಇಲ್ಲ. ನಮಗೆ ಸರ್ಕಾರದ ಕೈಮಗ್ಗದ ಕಾರ್ಖಾನೆ ಏನು ಅದರ ಮುಖಾಂತರ ತೆಗೆದುಕೊಳ್ಳುವಂಥದ್ದು ಹೆಚ್ಚು ಬಟ್ಟೆ ನಮಗೆ ಬೇಕಾದುದರಿಂದ ಹೆಚ್ಚು ಅವರಿಗೆ ಒದಗಿಸುವುದಕ್ಕೆ ಆಗಲಿಲ್ಲ. ಈಗಾಗಲೇ 70 ಭಾಗ ಶಾಲೆಗಳಿಗೆ ಸಮವಸ್ತ್ರವನ್ನು ದ್ದೇವೆ. ಇನ್ನು 30 ಭಾಗ ಸೆಪ್ಟೆಂಬರ್ ಒಳಗೆ ಇದನ್ನು ಹಂಚತಕ್ಕ ವ್ಯವಸ್ಥೆ ಮಾಡುತ್ತೇವೆ ಎಂದು ಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಮ್ಮ ಸಾರ್ವಜನಿಕ ಶಿಕ್ಷಣ ಖೆಯಲ್ಲಿ 21 ಉಪನಿರ್ದೇಶಕರ ಕಛೇರಿಗಳು ಇದೆ. ಅವರಿಗೆಲ್ಲಾ ಕಂಪ್ಯೂಟರ್ ಒದಗಿಸಿದ್ದೇವೆ. ್ಯಟರ್‌ಗಳನ್ನು ಒದಗಿಸುವುದರಿಂದ ಕೆಲಸ ಜಾಗ್ರತೆಯಾಗಿ ಆಗುತ್ತದೆ, ಏನೂ ತಪ್ಪಾಗುವುದಿಲ್ಲ ದೃಷ್ಟಿಯಿಂದ ಎಲ್ಲಾ 21 ಉಪನಿರ್ದೇಶಕರ ಕಛೇರಿಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲಾಗಿದೆ. ಕೊಠಡಿಗಳ ದುರಸ್ಥಿ 1996-97ರಲ್ಲಿ 520 ಲಕ್ಷದ ಹಣವನ್ನು ಒದಗಿಸಿದ್ದೇವೆ. ಈ ವರ್ಷ -98ರಲ್ಲಿ 631 ಲಕ್ಷ ಒದಗಿಸಿದ್ದೇವೆ. ಮಾನ್ಯ ಸ್ನೇಹಿತರುಗಳೆಲ್ಲ ಹೇಳುತ್ತಿದ್ದಾರೆ. ಶಾಲಾ ಕೊಠಡಿಗಳ ರಿ ಅಗತ್ಯವಾಗಿ ಆಗಬೇಕಾಗಿದೆ. ಎಲ್ಲಿ ನೋಡಿದರೂ ಶಾಲಾ ಕೊಠಡಿಗಳ ರಿಪೇರಿ ೇಕಾಗಿರುವುದು ತುಂಬಾ ಇದೆ. ಅದಕ್ಕೋಸ್ಕರ ಈ ವರ್ಷ 6 ಕೋಟಿ 31 ಲಕ್ಷ ಹಣವನ್ನು ಸಿದ್ದೇವೆ. ಶಾಲೆಗಳಿಗೆ ಸಾಧನ ಸಾಮಾಗ್ರಿಗಳನ್ನು ಅನೇಕ ಶಾಲೆಗಳಲ್ಲಿ ಸ್ನೇಹಿತರು ತ್ತಿರಬೇಕಾದರೆ ಕೂರುವುದಕ್ಕೆ ಬೆಂಚು ಇಲ್ಲ, ಕಾಲುಮಣೆಗಳು ಇಲ್ಲ, ವಾಲ್‌ಪೋಸ್ಟಸ್‌ಗಳು ಏನೇನು ಬೇಕಾಗಿರತಕ್ಕಂಥ ಸಾಮಾನುಗಳು ಬಹಳ ವರ್ಷಗಳಿಂದ ಇಲ್ಲದೇ ಇದ್ದುದ್ದರಿಂದ 7 ರ ರೂಪಾಯಿಗಳ ಅಂದಾಜಿನಲ್ಲಿ 7 ಸಾವಿರ ರೂಗಳ ಮೊತ್ತದಲ್ಲಿ 5 ಸಾವಿರ ಶಾಲೆಗಳಿಗೆ ಈ ಉಪಕರಣಗಳನ್ನು ಒದಗಿಸತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ, ಮತ್ತು 224 ಮಾದರಿಶಾಲೆಗಳು, ್ಬಬ್ಬ ಶಾಸಕರುಗಳು ಇರತಕ್ಕಂತಹ ಪ್ರದೇಶದಲ್ಲಿ ಎಲ್ಲಿ ಇದೆ, ಅಲ್ಲಿ ಒಂದೊಂದು ಮಾದರಿ ಗಳನ್ನು ತೆಗೆದಿದ್ದೇವೆ. ಈ ಒಂದು ಶಾಲೆಗಳಲ್ಲಿ ಎಲ್ಲಾ ಉಪಕರಣಗಳ ಜೊತೆಗೆ ಟಿ.ವಿ. ಮತ್ತು ರ್ ಗಳನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಶಾಲೆಗಳಿಗೆ ನೀರು ಮತ್ತು ಶೌಚಾಲಯದ ಭ್ಯ ಇದು ಬಹಳ ಅಗತ್ಯವಾಗಿ ಬೇಕಾಗಿರತಕ್ಕಂಥದ್ದು, ಬಹಳ ವರ್ಷಗಳಿಂದ ನಮಗೆ 7ನೇ ತಿಯಿಂದ ಪಾಸಾದ ಮೇಲೆ 7ನೇ ತರಗತಿಯಲ್ಲಿರತಕ್ಕಂಥ ಹೆಣ್ಣು ಮಕ್ಕಳು ಅಲ್ಲಿರತಕ್ಕಂತಹ ಧ್ಯಾಯಿನಿರುಗಳು ಹೈಸ್ಕೂಲ್‌ಗಳಲ್ಲಿ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಮಕ್ಕಳಿಗೆ ಬಹಳ . ನಾನು ಅನೇಕ ಕಡೆ ಹೋಗಿ ನೋಡಿದಾಗ ಮೊದಲು ಮಾಡಬೇಕಾಗಿರತಕ್ಕಂತಹ ಕೆಲಸ ಇದನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. 50 ಸಾವಿರ ರೂಪಾಯಿಗಳಂತೆ ಒಟ್ಟು 3 ಶಾಲೆಗಳಿಗೆ ವನ್ನು ಒದಗಿಸಿದ್ದೇವೆ. ಈ ಶೌಚಾಲಯಗಳನ್ನು ಕಟ್ಟುವುದಕ್ಕೋಸ್ಕರ ಅದು ಕಿರಿಯ ಪ್ರಾಥಮಿಕ ಶಾಲೆಗಳಿಗೆ 300 ಪ್ರೌಢಶಾಲೆಗಳಿಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಪ್ರೌಢಶಾಲೆಗಳಿಗೆ ಲಯಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಕನಿಷ್ಟ ಅಧಿಕ ಸಾಮರ್ಥ್ಯಗಳು 2000 ಶಾಲೆಗಳಿಗೆ ಕಲಿಕೆಗಳ ಸಾಮಗ್ರಿಗಳನ್ನು ಒದಗಿಸುವಂತಹ ಕೆಲಸವನ್ನು ಸರ್ಕಾರದವರು ಕೈಗೊಂಡಿದ್ದೇವೆ. ಗಳ ಕಡ್ಡಾಯ ಮತ್ತು ವ್ಯಾಪಕ ತಪಾಸಣೆ, ಇದನ್ನು ಇನ್‌ಸ್ಪೆಕ್ಟರ್‌ಗಳು ಎಇಒಗಳು ಮತ್ತು

ಬಿಇಒಗಳು ವ್ಯಾಪಕವಾಗಿ ತಿಂಗಳಿಗೆ ಎರಡು-ಮೂರು ಸಾರಿ ತಪಾಸಣೆ ಮಾಡಿ ಸರ್ಕಾರಕ್ಕೆ ಕಳುಹಿಸಬೇಕೆಂದು ಹೇಳಿದ್ದೇವೆ. ಆ ಕೆಲಸಗಳನ್ನು ಈಗಾಗಲೇ ಮಾಡುತ್ತಾ ಇದ್ದಾರೆ. ಬಿಇಒ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈಗಾಗಲೇ 120 ಜೀಪುಗಳನ್ನು ಒದಗಿಸಿದ್ದೇವೆ ಇನ್ನು ಉಳಿದಿರತಕ್ಕಂ ಹಂತ ಹಂತವಾಗಿ ಜೀಪುಗಳನ್ನು ಒದಗಿಸತಕ್ಕಂಥ ವ್ಯವಸ್ಥೆ ಮಾಡಲಾಗುತ್ತದೆ. ಉಚಿತ ಪಠ್ಯ ಪು ಹಂಚಿಕೆ : 52 ಲಕ್ಷ ಈ ವರ್ಷ ಮಕ್ಕಳಿಗೆ ಜೂನ್ 2ನೇ ತಾರೀಖಿನೊಳಗೆ ಹಂಚತಕ್ಕಂಥ ಇಡೀ ರಾಜ್ಯಾದ್ಯಾಂತ ಮಾಡಿರತಕ್ಕಂಥದ್ದು ತಮಗೆಲ್ಲಾ ಗೊತ್ತಿರತಕ್ಕಂಥ ವಿಷಯ. ಅಕ್ಷಯ ಆಹಾರ ಯೋಜನೆಯಲ್ಲಿ ನಗರ ಪ್ರದೇಶದ ಮಕ್ಕಳಿಗೆ ವರ್ಷಕ್ಕೆ 8 ಕೆಜಿ ಪೌಷ್ಠಿಕ ಆಹಾ ಕೊಡತಕ್ಕಂಥದ್ದನ್ನು ಮಾಡಿದ್ದು, ಈ ವರ್ಷ 10 ಲಕ್ಷ ಮಕ್ಕಳಿಗೆ ಈ ಸವಲತ್ತುಗಳನ್ನು ಕೊಡತ ವ್ಯವಸ್ಥೆ ಮಾಡಿದ್ದೇವೆ. ಕೇಂದ್ರ ಸರ್ಕಾರದ ನೆರವಿನಿಂದ ಮಧ್ಯಾಹ್ನ ಉಪಹಾರದ ಯೋಜನೆ 3ಕೆಜಿ ಅಕ್ಕಿ, 3 ಕೆಜಿ ಗೋಧಿಯನ್ನು 80 ಪರ್ಸೆಂಟ್ ಅಟೆಂಡೆನ್ಸ್ ಇರತಕ್ಕಂಥ ಗ್ರಾಮಾಂತರ ಪ್ರದ ಮಕ್ಕಳಿಗೆ ಈ ಸವಲತ್ತನ್ನು ಒದಗಿಸತಕ್ಕಂಥ ಕೆಲಸ ಸರ್ಕಾರದವರು ಕೈಗೊಂಡಿದ್ದಾರೆ. ಕೇಂದ್ರ ಸಕಾ ನೆರವಿನಿಂದ ಕಪ್ಪು ಹಲಗೆ ಯೋಜನೆಯಲ್ಲಿ 163.41 ಲಕ್ಷ ಹಣವನ್ನು ಕೇಂದ್ರ ಸರ್ಕಾರದ ನೆರವಿ ಕಪ್ಪು ಹಲಗೆ ಯೋಜನೆಯಲ್ಲಿ ಕೆಲಸ ಮಾಡತಕ್ಕಂತಹ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ವರ್ಷ 18699 ಉಪಾಧ್ಯಾಯರುಗಳು, ಶಾಲಾಕೊಠಡಿಗಳು, 21712 ಬೋಧನ ಸಾಮಗ್ರಿ 23859 ಶಾಲೆಗಳಿಗೆ ಈ ಸಾಮಗ್ರಿಗಳನ್ನು ಒದಗಿಸತಕ್ಕಂಥದ್ದು ಮತ್ತು ಡಿಪಿಇಪಿ ಯೋಜನೆಯಡಿ 1996-97ರಲ್ಲಿ ಮಂಡ್ಯ, ಕೋಲಾರ, ರಾಯಚೂರು, ಬೆಳಗಾಂ ಇಲ್ಲಿ ಡಿಪಿಇಪಿ ಯೊ ಕಾರ್ಯಗತವಾಗಿದೆ. 1997-98ನೇ ಸಾಲಿನಲ್ಲಿ ಬೀದರ್, ಗುಲ್ಬರ್ಗಾ, ಬಳ್ಳಾರಿ, ಮೈಸೂರು, ಬಿಜಾ ಬೆಳಗಾಂ ಈ ಪ್ರದೇಶಗಳನ್ನು ಸೇರಿಸಿದೆ. ಈ ಪ್ರದೇಶಗಳಲ್ಲಿ ಡಿಪಿಇಪಿ ಪ್ರೋಗ್ರಾಮ್ ಸೆಪ್ಟಂಬರ್ ಕೆಲಸ ಮಾಡುತ್ತಾ ಇದೆ. ವಿಶೇಷ ದಾಖಲಾತಿ ಆಂಧೋಲನ : ಅನೇಕ ಜನ ಮಕ್ಕಳು ಶಾಲೆ ಬಿಡತಕ್ಕಂಥದ್ದು, ಕೆಲವು ಮಕ್ಕಳು ಮನೆಯಲ್ಲಿಟ್ಟುಕೊಂಡು ಶಾಲೆಗೆ ಬರದೇ ಇರತಕ್ಕಂಥದ್ದು, ಇ ಇರುವುದರಿಂದ ಇದರ ವಿಶೇಷವಾದ ಆಂಧೋಲನಾ ಅಧಿಕಾರಿಗಳ ಮುಖಾಂತರ ಉಪಾಧ್ಯಾಯರು ಮತ್ತು ಸಂಬಂಧಪಟ್ಟ ಶಾಸಕರುಗಳು ಚುನಾಯಿತ ಪ್ರತಿನಿಧಿಗಳು, ಇವರ ಮುಖಾಂತರ ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿದ್ದೇವೆ. 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಉತ್ತಮ ನಡೆಯುತ್ತಿದೆ ಎಂದು ಶಾಸಕರುಗಳು ಮತ್ತು ಕೆಲವರೆಲ್ಲರೂ ಹೇಳಿದ್ದಾರೆ. ತಾವೂ ಸಹ ಆಗಿಂ ಹೋಗಿ ನೋಡಿ ಅಲ್ಲೇನಾದರೂ ನ್ಯೂನ್ಯತೆಗಳಿದ್ದರೆ ಸಂಬಂಧಪಟ್ಟಿರತಕ್ಕಂಥ ಇಲಾಖೆಯ ಅಧಿಕಾ ಗಮನಕ್ಕೆ ಅಥವಾ ನನ್ನ ಗಮನಕ್ಕೆ ತರಬೇಕೆಂದು ಹೇಳಿ ಪ್ರಸ್ತಾಪಮಾಡುತ್ತೇನೆ. ಮುಸಲ್ಮಾನ್ ಮ 5 ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದೇವೆ. ಪ್ರೌಢ ಶಾಲಾ ಕಟ್ಟಡಗಳು 1996-97ರಲ್ಲಿ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಪ್ರೌಢಶಾಲೆಗಳ ಕಟ್ಟಡಗಳನ್ನು ಕಟ್ಟಿದ್ದೇವೆ. 1997-98ರ ಕೋಟಿ ಹಣವನ್ನು ಒದಗಿಸಲಾಗಿದೆ. ಪ್ರೌಢ ಶಾಲೆಗಳ ಕಟ್ಟಡದ ದುರಸ್ಥಿ 96-97ರಲ್ಲಿ *1* ಕೋ ಇಟ್ಟಿದ್ದೇವೆ. ಈ ವರ್ಷ ಹಣ ಕಡಿಮೆಯಾಗುತ್ತದೆಂದು ಹೇಳಿ 1997-98ರಲ್ಲಿ 3 ಕೋಟಿ ಹಣ ಒದಗಿಸಲಾಗಿದೆ. ಪ್ರೌಢ ಶಾಲಾ ಸಾಧನ ಸಾಮಗ್ರಿಗಳಿಗೆ ಪ್ರತಿ ಶಾಲೆಗೆ 50 ಸಾವಿರ ರೂಪಾಯಿಗಳ

200 ಶಾಲೆಗಳಿಗೆ ಪ್ರೌಢಶಾಲಾ ಸಾಧನ ಸಾಮಾಗ್ರಿಗಳನ್ನು ಒದಗಿಸತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಎಸ್.ಎಸ್.ಎಲ್.ಸಿ., ಮತ್ತು ಪಿ.ಯು.ಸಿ., ವಿಷಯಗಳ ಸುಧಾರಣೆ ಮಾಡುವ ಬಗ್ಗೆ ರಿಟೈರ್ಡ್ ಆಗಿರತಕ್ಕಂಥ ಸುರೇಂದ್ರನಾಥ್ ಎನ್ನುವ ಶಿಕ್ಷಣ ತಜ್ಞರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಲಾಗಿತ್ತು. ಆ ಸಮಿತಿಯವರು ನೀಡಿರುವ ವರದಿಯಂತೆ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕಂಥ ವ್ಯವಸ್ಥೆ ನಡೆಯುತ್ತಿದೆ. ಪಿ.ಯು.ಸಿ., ಪರೀಕ್ಷೆಯಲ್ಲಿ ಮರು ಮೌಲ್ಯ ಮಾಪನ ಮಾಡತಕ್ಕಂಥ ವ್ಯವಸ್ಥೆಯನ್ನು ಜಾರಿಗೆ ತಂದಿರುವುದು ತಮಗೆಲ್ಲರಿಗೂ ಗೊತ್ತಿದೆ. ಸೆಕೆಂಡ್ ಇಯರ್ ಪಿ.ಯು.ಸಿ., ಯ ಸೈನ್ಸ್ ಮತ್ತು ಮೆಥಮೆಟಿಕ್ಸ್ ಸಬ್ಜೆಕ್ಟ್‌ನ್ನು ಮರುಮೌಲ್ಯಮಾಪನಗೊಳಿಸಲಾಗುತ್ತಿದೆ. ಮರುಮೌಲ್ಯಮಾಪನ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ. ಈ ತರಹದ ಮರುಮೌಲ್ಯಮಾಪನದ ವ್ಯವಸ್ಥೆಯನ್ನು ಇಡೀ ಇಂಡಿಯಾ ದೇಶದಲ್ಲಿ ಯಾವ ರಾಜ್ಯದವರೂ ಮಾಡಿಲ್ಲ. ನಮ್ಮ ಕರ್ನಾಟಕದಲ್ಲಿ ಪ್ರಪ್ರಥಮಬಾರಿಗೆ ಈ ವ್ಯವಸ್ಥೆಯನ್ನು ಜಾರಿಗೆ ತಂದು ಮರು ಮೌಲ್ಯ ಮಾಪನ ಮಾಡಿದ ಜೆರಾಕ್ಸ್ ಪ್ರತಿಯನ್ನು ವಿದ್ಯಾರ್ಥಿಗಳಿಗೆ ಕೊಡುವಂಥ ಕೆಲಸ ಮಾಡಿದ್ದೇವೆ. ಈ ರೀತಿ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಪದವಿಪೂರ್ವ ಕಾಲೇಜುಗಳಲ್ಲಿ ಏನಾದರೂ ಸಮಸ್ಯೆ ಬಂದರೆ ಅದನ್ನು ಬೆಂಗಳೂರಿಗೇ ಬಂದು ಸರಿಮಾಡಿಕೊಳ್ಳಬೇಕಾಗಿದ್ದುದರಿಂದ ಬಹಳ ತೊಂದರೆಯಾಗುತ್ತದೆಂದು ತಿಳಿದುಕೊಂಡು ಪ್ರತಿಯೊಂದು ಜಿಲ್ಲೆಯಲ್ಲೂ ಒಬ್ಬೊಬ್ಬ ಹೆಚ್ಚುವರಿ ಡಿ.ಡಿ.ಪಿ.ಐ.ನ್ನು ನೇಮಕ ಮಾಡಿ ಆಯಾ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ಸಮಸ್ಯೆಗಳನ್ನು ಇತ್ಯರ್ಥ ಪಡಿಸುವಂಥ ವ್ಯವಸ್ಥೆ ಮಾಡಿದ್ದೇವೆ. ಈ ಡಿ.ಡಿ.ಪಿ.ಐ., ಗಳನ್ನು ಹಾಲಿ ಇರತಕ್ಕಂಥ ಅಧಿಕಾರಿಗಳಲ್ಲೇ ಮಾಡಿರುವುದರಿಂದ ಖರ್ಚು ವೆಚ್ಚವನ್ನು ಉಳಿಸಿದಂತೆ ಕೂಡಾ ಆಗಿದೆ. ಎ.ಇ.ಓ., ಗಳು ಇದ್ದಾಗ ಪ್ರೌಢ ಶಾಲೆಗಳ ಸಮಸ್ಯೆಗಳನ್ನು ಡಿ.ಡಿ.ಪಿ.ಐ. ಗಳೇ ನೋಡಿಕೊಳ್ಳಬೇಕಾಗಿತ್ತು. ಆದುದರಿಂದ, ಈಗ ಬಿ.ಇ.ಓ., ಗಳೆಂದು ನೇಮಕ ಮಾಡಿರುವುದರಿಂದ ಮತ್ತು ಅವರುಗಳಿಗೆ ಜೀಪ್ ವ್ಯವಸ್ಥೆ ಮಾಡಿರುವುದರಿಂದ ಆಯಾ ಬಿ.ಇ.ಓ.ಗಳ ವ್ಯಾಪ್ತಿಗೆ ಬರುವ ಎಲ್ಲಾ ಪ್ರೌಢ ಶಾಲೆಗಳ ಸಮಸ್ಯೆಗಳನ್ನು ಅವರೇ ನೋಡಿಕೊಳ್ಳುತ್ತಾರೆ. ಆಮೇಲೆ, ಇಲಾಖೆಯಲ್ಲಿ ಸುಧಾರಣೆ ತರಬೇಕೆನ್ನುವ ದೃಷ್ಟಿಯಿಂದ ನಮ್ಮ ಇಲಾಖೆಯ ಅಧಿಕಾರಿಗಳ ಮಟ್ಟದಲ್ಲೇ ಒಂದು ಜಾಗೃತಿ ದಳವನ್ನು ರಚನೆ ಮಾಡಿದ್ದೇವೆ. ಶಿಕ್ಷಣ ಇಲಾಖೆಯಲ್ಲಿ ಏನಾದರೂ ಸಮಸ್ಯೆಗಳು ಕಂಡು ಬಂದಲ್ಲಿ ಅವುಗಳನ್ನು ಸರಿಮಾಡುವುದು ಮತ್ತು ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರತಕ್ಕಂಥ ಕೆಲಸವನ್ನು ಈ ಜಾಗೃತ ದಳದವರು ಮಾಡುತ್ತಿದ್ದಾರೆ. ಈಗಾಗಲೇ. ಅನೇಕ ಸಮಸ್ಯೆಗಳನ್ನು ಈ ಜಾಗೃತ ದಳದವರು ಬಗೆಹರಿಸಿದ್ದಾರೆ. ಆಮೇಲೆ, ನಾನು ಮತ್ತು ಇಲಾಖೆಯ ಕಾರ್ಯದರ್ಶಿಯವರು ಹಾಗೂ ಆಯುಕ್ತರು ಎಲ್ಲಾ 20 ಜಿಲ್ಲೆಗ್ಗಳಲ್ಲೂ ಸಂಚಾರ ಮಾಡಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಶಿಕ್ಷಣ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುತ್ತಿವೆಯೇ? ಕೊಟ್ಟಿರುವ ಹಣ ಸರಿಯಾಗಿ ವಿನಿಯೋಗ ಆಗಿದೆಯೇ ಎಂಬ ಬಗ್ಗೆ ಪರಿಶೀಲನೆ ಮಾಡಿದ್ದೇವೆ. ಜೊತೆಗೆ ಆಯಾ ಕ್ಷೇತ್ರದ ಶಾಸಕರುಗಳೊಡನೆ ಚರ್ಚೆ ಮಾಡಿ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಅವರಿಂದ ಸಲಹೆಗಳನ್ನು ಪಡೆದು ಅದರಂತೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ರೀತಿ ಮಾಡಿರುವುದರಿಂದ ನಮಗಂತೂ

ಬಹಳ ಅನುಭವ ಬಂದಿದೆ. ಆಮೇಲೆ, ಶಾಶ್ವತ ಅನದಾನ ರಹಿತ ಶಾಲೆಗಳವರು ಅನುದಾನ ಕೊಡಬೇಕೆಂದು ಬಹಳ ವರ್ಷಗಳಿಂದ ಕೇಳುತ್ತಿದ್ದಾರೆ. ಅವರು ಕೇಳುತ್ತಿರುವುದರಲ್ಲಿ ತಪ್ಪು ಇದೆಯೆಂದು ನಾನಂತೂ ಹೇಳುವುದಿಲ್ಲ. ಶಾಶ್ವತ ಅನುದಾನ ರಹಿತ ಶಾಲೆಗಳಿಗೆ ಅನುದಾನ ಕೊಡಬೇಕಾದರೆ ಸುಮಾರು 200 ಕೋಟಿ ರೂಪಾಯಿಗಳು ವರ್ಷಕ್ಕೆ ಬೇಕಾಗುತ್ತದೆಂದು ಒಂದು ಅಂದಾಜು ಇದೆ. ಆದುದರಿಂದ, ಈ ಬಗ್ಗೆ ಒಂದು ಕ್ಯಾಬಿನೆಟ್ ಉಪ ಸಮಿತಿಯನ್ನು ಉಪ ಮುಖ್ಯ-ಮಂತ್ರಿಗಳ ನೇತೃತ್ವದಲ್ಲಿ ರಚಿಸಲಾಗಿದೆ. ಆ ಸಮಿತಿಯಲ್ಲಿ ನಾನು, ಉನ್ನತ ಶಿಕ್ಷಣ ಸಚಿವರು ಹಾಗೂ ಮಾನ್ಯ ಎಂ.ಪಿ. ಪ್ರಕಾಶ್ ಅವರು ಸದಸ್ಯರುಗಳಾಗಿದ್ದೇವೆ. ಆ ಸಮಿತಿಯಲ್ಲಿ ನಾವುಗಳು, ಆಗುಹೋಗುಗಳ ಬಗ್ಗೆ ಆಲೋಚನೆ ಮಾಡಿ ಯಾವುದಕ್ಕೆ ಕೊಡಬೇಕು? ಯಾವುದಕ್ಕೆ ಕೊಡುವುದಕ್ಕಾಗುವುದಿಲ್ಲವೆಂದು ಚರ್ಚೆ ಮಾಡಲಾಗುತ್ತಿದೆ. ಇನ್ನು ಮಾನ್ಯ ಸಿ.ಎಂ. ಲಿಂಗಪ್ಪನವರು ಶಿಕ್ಷಣ ಇಲಾಖೆಯ ಒಟ್ಟಾರೆ ಕಾರ್ಯ ನಿರ್ವಹಣೆ ಬಗ್ಗೆ ಮಚ್ಚುಗೆ ವ್ಯಕ್ತಪಡಿಸಿದ್ದಾರೆ, ಅದಕ್ಕಾಗಿ ಅವರಿಗೆ ಧನ್ಯವಾದಗಳು. ಅವರು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಈ ರೀತಿಯ ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ಈಗಾಗಲೇ ನಮ್ಮ ಇಲಾಖೆ ವತಿಯಿಂದ ನಾಲ್ಕು ಕಡೆ ಅಂದರೆ, ಮಾಯಕೊಂಡ, ನಂಜನಗೂಡು, ಬಾಗಲಕೋಟೆ ಮತ್ತು ಗುಲ್ಬರ್ಗಾದಲ್ಲಿ ನಡೆಯುತ್ತಿವೆ. ಈ ರೆಸಿಡೆನ್‌ಷಿಯಲ್ ಶಾಲೆಗಳ ನಿರ್ವಹಣೆಗಾಗಿಯೇ ಯೋಜನೆಯಲ್ಲಿ 11.60 ಲಕ್ಷ ಯೋಜನೇತರ ಬಾಬಿನಲ್ಲಿ 34.88 ಲಕ್ಷ ಹೀಗೆ ಒಟ್ಟು 46.08 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಆಮೇಲೆ ಡಾ: ಎಂ.ಪಿ. ಕರ್ಕಿಯವರು ಮಾತನಾಡುತ್ತಾ, ಎ.ಇ.ಒ., ಗಳು ಇರುವಾಗ ಮತ್ತೆ ಬಿ.ಇ.ಒ.ಗಳನ್ನು ಸೃಷ್ಟಿ ಮಾಡಿರುವುದು ಸರಿಯಲ್ಲವೆಂದು ಸಲಹೆ ಮಾಡಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ತಪಾಸಣೆ ಮಾಡಬೇಕೆಂದು ಸೂಚಿಸಲಾಗಿದೆ, ಎ.ಇ.ಒ.ಗಳು ಹಿರಿಯ ಪ್ರಾಥಮಿಕ ಶಾಲೆಗಳ ತಪಾಸಣೆಯನ್ನು ಮಾಡುತ್ತಾರೆ. ಪ್ರತಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಿಗೆ ಪ್ರತಿ ವರ್ಷ ಎರಡು ಸಾರಿ ಭೇಟಿ ನೀಡಿ ಒಂದು ವಿವರವಾದ ತಪಾಸಣೆ ಆಗಬೇಕೆಂದು ನಿರ್ಧರಿಸಲಾಗಿದೆ. ಒಟ್ಟು ಸರ್ಕಾರಿ ಹುದ್ದೆಗಳಲ್ಲಿ 5 ಪರ್‌ಸೆಂಟ್ ಕಡಿಮೆ ಮಾಡಬೇಕೆಂದು ಏನು ಆಲೋಚನೆ ಮಾಡಲಾಗುತ್ತಿದೆಯೋ ಆ ಸಂದರ್ಭದಲ್ಲಿ ಈ ಎ.ಇ.ಒ., ಹುದ್ದೆಗಳನ್ನು ತೆಗೆದುಹಾಕುವ ಬಗ್ಗೆಯೂ ಯೋಚನೆ ಮಾಡಲಾಗುತ್ತದೆ. ಜೊತೆಗೆ ಶಾಂತಯ್ಯ ನೇತೃತ್ವದ ಸಮಿತಿ ಶಿಫಾರಸ್ ಮಾಡಿರುವಂಥ ತಪಾಸಣೆ ಮತ್ತು ಭೇಟಿಯ ಕಾಲದಲ್ಲಿ ನೀಡಬೇಕಾದ ನಮೂನೆಗಳನ್ನು ಪರಿಷ್ಕರಿಸಿ ಬದಲಿಸಲಾಗಿದೆ. ಈ ವರ್ಷ ಅಧಿಕಾರಿಗಳ ಕಾರ್ಯಚಟುವಟಿಕೆಗಳನ್ನು ಗಮನಿಸಿ ಈ ಎ.ಇ.ಒ., ಹುದ್ದೆಗಳನ್ನು ಕೈಬಿಡುವ ಬಗ್ಗೆ ಪರಿಶೀಲಿಸಲಾಗುವುದು. ಈ ಬಗ್ಗೆ ಕ್ಯಾಬಿನೆಟ್ ಉಪ ಸಮಿತಿಯಲ್ಲಿ ಏನು ತೀರ್ಮಾನವಾಗುತ್ತದೆಯೋ ಅದರಂತೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಇನ್ನು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳನ್ನು ಜಿಲ್ಲಾ ಮಟ್ಟದಲ್ಲಿ ನೇಮಿಸುವ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಈ ಅಧಿಕಾರಿಗಳು ವಿಭಾಗೀಯ ಸಹ ನಿರ್ದೇಶಕರುಗಳ ಕಾರ್ಯಾಲಯಗಳಲ್ಲಿ ವಿಷಯ ತಜ್ಞರುಗಳಾಗಿ ಕಾರ್ಯ ನಿರ್ವಹಿಸುತ್ತಾ ಇದ್ದರು. ಇದರಿಂದಾಗಿ ಪದವಿಪೂರ್ವ ಕಾಲೇಜುಗಳಲ್ಲಿ ತಪಾಸಣೆ ಕಾರ್ಯ ಸರಿಯಾಗಿ ನಡೆಯುತ್ತಿರಲಿಲ್ಲ. ರಾಜ್ಯದಲ್ಲಿ

ಒಟ್ಟು 1792 ಸಂಯುಕ್ತ ಪದವಿಪೂರ್ವ ಕಾಲೇಜುಗಳಿದ್ದು ಸುಮಾರು 5 ಲಕ್ಷ ವಿದ್ಯಾರ್ಥಿಗಳು ಈ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇದಕ್ಕಾಗಿ ವಿಷಯ ತಜ್ಞರುಗಳನ್ನು ಜಿಲ್ಲಾ ಮಟ್ಟದ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳನ್ನಾಗಿ ನೇಮಕ ಮಾಡಲಾಗಿದೆ. ಇವರಿಗೆ ವಿವರವಾದ ಕಾರ್ಯಸೂಚಿಯನ್ನು ನಿಗದಿಪಡಿಸಿದ್ದು ಪ್ರತಿ ವರ್ಷ ಕನಿಷ್ಟ 30 ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ಕೊಟ್ಟು ತರಗತಿ ತಪಾಸಣೆ ಮಾಡಬೇಕೆಂದು ನಿಗದಿಪಡಿಸಲಾಗಿದೆ. ಆಮೇಲೆ, ಮಾನ್ಯ ಡಾ|| ಎಂ.ಪಿ. ಕರ್ಕಿಯವರು, ಶಿಕ್ಷಣ ಇಲಾಖೆಯ ಕೆಲವು ಬಾಬುಗಳಲ್ಲಿ ಹಣ ಕಡಿಮೆ ಖರ್ಚಾಗಿದೆಯೆಂದು ತಿಳಿಸಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಆಯವ್ಯಯದ ಶೇಕಡಾ 90ರಷ್ಟು ವೆಚ್ಚವಾಗಿದೆ. ಆಮೇಲೆ ಪುಸ್ತಕಾಲಯ ಕಾರ್ಯಕ್ರಮದಲ್ಲಿ ಯೋಜನೇತರ ಬಾಬಿನಲ್ಲಿ ಹಣ ಬಳಸಿದ್ದು, ಯೋಜನೆಯಲ್ಲಿ ನಿಗದಿಯಾಗಿದ್ದ ಹಣದಲ್ಲಿ ಕಡಿಮೆ ಆಗಿದೆಯೆಂದು ಹೇಳಿದ್ದಾರೆ. ನಂತರ ಆಹಾರ ಯೋಜನೆಯಲ್ಲಿ 1996-97ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಯು ರಾಜ್ಯದ 147 ತಾಲ್ಲೂಕುಗಳಲ್ಲಿ ಅನುಷ್ಠಾನಗೊಂಡ ಕಾರಣ ರಾಜ್ಯದ ಯೋಜನೆಯು 28 ತಾಲ್ಲೂಕುಗಳಿಗೆ ಮಾತ್ರ ಸೀಮಿತಗೊಂಡಿದ್ದರಿಂದ ಇದರಲ್ಲಿ ಕಡಿಮೆ ವೆಚ್ಚವಾಗಿದೆ. ಕೇಂದ್ರ ಸರ್ಕಾರವು ಈ 147 ತಾಲ್ಲೂಕುಗಳ ಮಕ್ಕಳಿಗೆ ತಲಾ ಮೂರು ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದುದರಿಂದ ನಮ್ಮ ಸ್ಟೇಟ್ ಬಜೆಟ್‌ನಲ್ಲಿ ಇಟ್ಟಿದ್ದ ಹಣ ಉಳಿತಾಯವಾಗಿದೆ. ಆಮೇಲೆ, ಸಂಸ್ಕೃತ ಶಿಕ್ಷಣದ ಅಡಿಯಲ್ಲಿ ಸಂಸ್ಕೃತವನ್ನು ಪ್ರಥಮವಾಗಿ ತೆಗೆದುಕೊಂಡಂಥ ವಿದ್ಯಾರ್ಥಿಗೆ ಮಾಸಿಕ 10 ರೂಪಾಯಿ ವಿದ್ಯಾರ್ಥಿವೇತನ ನೀಡುತ್ತಿದ್ದು, ಇದು ಕಡಿಮೆಯಾಗಿರುವುದರಿಂದ ಇದನ್ನು ಹೆಚ್ಚಿಸಲು ಪರಿಶೀಲಿಸಲಾಗುತ್ತಿದೆ. ಕಪ್ಪು ಹಲಗೆ ಕಾರ್ಯಕ್ರಮದಡಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳಿಗೆ ವೇತನ ನೀಡಿಕೆಯಲ್ಲಿ ವಿಳಂಬವಾಗುತ್ತಿರುವುದನ್ನು ಸರ್ಕಾರ ಗಮನಿಸಿದ್ದು ಕೇಂದ್ರ ಸರ್ಕಾರದ ನೆರವನ್ನು ಇದಕ್ಕೆ ನಿರೀಕ್ಷಿಸಿದ್ದು ಅವರುಗಳಿಗೆ ಸಕಾಲದಲ್ಲಿ ಸಂಬಳ ನೀಡುವುದಕ್ಕಾಗಿ ಆರ್ಥಿಕ ಇಲಾಖೆ ಮತ್ತು ಜಿಲ್ಲಾ ಪಂಚಾಯತಿಗಳೊಡನೆ ಶೀಘ್ರ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಆಮೇಲೆ ವರ್ಗಾವಣೆ ಮಾಡುವಂಥ ಸಂದರ್ಭದಲ್ಲಿ ಪತಿ - ಪತ್ನಿ ಪ್ರಕರಣಗಳಲ್ಲಿ ಅವಧಿಪೂರ್ವ ವರ್ಗಾವಣೆಗಳನ್ನು ಮಾಡಬಹುದಾಗಿತ್ತೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ವರ್ಗಾವಣೆಯ ಕೇಂದ್ರೀಕರಣದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಈ ಎಲ್ಲಾ ಸಲಹೆಗಳನ್ನು ನಾವು ಗಮನದಲ್ಲಿಟ್ಟುಕೊಂಡು ಮುಂದಿನಸಾರಿ ಕಾರ್ಯರೂಪಕ್ಕೆ ತರುವಲ್ಲಿ ಪ್ರಯತ್ನ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಆಮೇಲೆ, ಅನೇಕ ಮಾನ್ಯ ಸದಸ್ಯರುಗಳು, ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ಶಾಲೆಗಳ ನಡುವಿನ ಅಂತರವನ್ನು ತಗ್ಗಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದು ಬಹಳ ಅಗತ್ಯವೂ ಆಗಿದೆ. ಗ್ರಾಮೀಣ ಪ್ರದೇಶಗಳ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸುತ್ತಿದೆ. ಈ ಬಗ್ಗೆ ಹೆಚ್ಚು ಶಿಕ್ಷಕರುಗಳನ್ನು ನೇಮಕ ಮಾಡಲಾಗುತ್ತಿದೆ, ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲು ಹೆಚ್ಚು ಆಯವ್ಯಯವನ್ನು ಒದಗಿಸಲಾಗುತ್ತಿದೆ. ಈ ಸಾರಿ ನೇಮಕ ಮಾಡಿಕೊಂಡಿರುವ 28 ಸಾವಿರ ಶಿಕ್ಷಕರುಗಳೆಲ್ಲರನ್ನೂ ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಗಳಿಗೇ ಪೋಸ್ಟಿಂಗ್ಸ್ ಕೊಡಲಾಗಿದೆ. ಇವರಲ್ಲಿ ಯಾರೊಬ್ಬರನ್ನೂ ಪಟ್ಟಣ ಪ್ರದೇಶದ ಶಾಲೆಗಳಿಗೆ ಹಾಕಿಲ್ಲ. ಆಮೇಲೆ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಹೆಚ್ಚು ಮಾಡಿಸಿ

ಸತ್ಪ್ರಜೆಗಳನ್ನಾಗಿ ಮಾಡುವ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಅನೇಕ ಮಾನ್ಯ ಸದಸ್ಯರುಗಳು ಸಲಹೆ ಕೊಟ್ಟಿದ್ದಾರೆ. ನಿಜ. ಈ ದಿವಸಗಳಲ್ಲಿ ನೈತಿಕ ಅಧಃಪತನವಾಗುತ್ತಿದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆ. ಮಾನ್ಯ ಸದಸ್ಯರಾದ ಫರ್ನಾಂಡೀಸ್ ಅವರು, ಸಾಕ್ಷರತೆಯನ್ನು ಹೆಚ್ಚು ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಹಾಗೆಯೇ ಆಂಗ್ಲೋ ಇಂಡಿಯನ್ ಮಕ್ಕಳಿಗೆ ಶುಲ್ಕದಲ್ಲಿ ರಿಯಾಯಿತಿಯನ್ನು ಕೊಡಲಾಗಿದೆ. ಈಗಾಗಲೇ ಕಟ್ಟಿರುವ ಹಣವನ್ನು ಮರುಪಾವತಿ ಮಾಡಲಾಗಿದೆ. ಆಮೇಲೆ ಮಾನ್ಯ ಸದಸ್ಯರಾದ ಮಂಜುನಾಥ್ ಕುನ್ನೂರ್‌ರವರು ಹಿಂದಿನ ಪಠ್ಯಪುಸ್ತಕಗಳ ಅಂದರೆ 1993-94, 1994-95ನೇ ಸಾಲಿಗೆ ಸಂಬಂಧ ಪಟ್ಟಂಥಾದ್ದರ ಬಗ್ಗೆ ಮಾತನಾಡಿದ್ದಾರೆ. ಪಠ್ಯಪುಸ್ತಕಗಳ ವಿಲೇವಾರಿಯ ಅವ್ಯವಹಾರಗಳ ಬಗ್ಗೆ ಶ್ರೀ ವೇಣುಗೋಪಾಲ್ ನೀಡಿದ ಮನವಿಯನ್ನು ಪ್ರಸ್ತಾಪಿಸಿದ್ದಾರೆ. ಅದು ಹಿಂದೆ ಅಲ್ಲಿ ಕೆಲಸ ಮಾಡುತ್ತಿದ್ದಂಥವರು ಪ್ರಸ್ತಾಪ ಮಾಡಿದ್ದು, ಈ ಬಗ್ಗೆ ಪೋಲೀಸ್ ಇಲಾಖೆಯು ತನಿಖೆ ನಡೆಸಿ 4-9-96ರಲ್ಲಿ ಡೆಪ್ಯೂಟಿ ಕಮಿಷನರ್ ಆಫ್ ಪೋಲೀಸ್ - ಬೆಂಗಳೂರು ನಗರ. ಇವರು ತಮ್ಮ ತನಿಖಾ ವರದಿಯನ್ನು ಸಲ್ಲಿಸಿದ್ದು ವರದಿಯ ಮುಖ್ಯಾಂಶಗಳು ಈ ರೀತಿಯಲ್ಲಿವೆ. ವಿಚಾರಣಾಧಿಕಾರಿಗಳು ಪಠ್ಯಪುಸ್ತಕಗಳ ವ್ಯವಹಾರಕ್ಕೆ ಸಂಬಂಧಪಟ್ಟ ಕಡತ ಮತ್ತು ಸ್ಟಾಕ್ ಪುಸ್ತಕಗಳನ್ನು ಪರಿಶೀಲಿಸಿರುತ್ತಾರೆ. ಪಠ್ಯಪುಸ್ತಕಗಳ ಸಿಲೆಬಸ್ ಬದಲಾವಣೆಯಾಗಿದ್ದರಿಂದ ಹಿಂದಿನ ವರ್ಷಗಳಲ್ಲಿ ಮುದ್ರಿಸಿದ ಪಠ್ಯಪುಸ್ತಕಗಳನ್ನು ಅನುಪಯುಕ್ತವೆಂದು ಪರಿಗಣಿಸಿ ಅವುಗಳನ್ನು ಜಾಹೀರಾತಿನ ಮೂಲಕ ವಿಲೇವಾರಿ ಮಾಡಿರುತ್ತಾರೆ. ಇದರಿಂದ ಬಂದ ಹಣವನ್ನು ರಿಸರ್ವ್‌ಬ್ಯಾಂಕ್‌ನ ಮೂಲಕ ಸರಕಾರಕ್ಕೆ ಕಟ್ಟಿರುತ್ತಾರೆಂದು ವರದಿ ಮಾಡುತ್ತಾ ಈ ಕಾರಣದಿಂದ ಅನುಪಯುಕ್ತ ಪಠ್ಯಪುಸ್ತಕದ ವಿಲೇವಾರಿಯಲ್ಲಿ ಯಾವುದೇ ವಿಧವಾದ ಅವ್ಯವಹಾರವು ಕಂಡು ಬಂದಿಲ್ಲವೆಂದು ಮೇಲಧಿಕಾರಿಗಳ ಆದೇಶದಂತೆ ಎಲ್ಲಾ ವಿಲೇವಾರಿ ಕಾರ್ಯಕ್ರಮಗಳನ್ನು ಹಾಗೂ ಎಚ್ಚರಿಕೆಯನ್ನು ತೆಗೆದುಕೊಂಡು ಪಠ್ಯಪುಸ್ತಕಗಳನ್ನು ವಿಲೇವಾರಿ ಮಾಡಿರುವುದು ದಾಖಲಾತಿಗಳಿಂದ ಕಂಡು ಬಂದಿರುತ್ತದೆಂದು ವರದಿ ಮಾಡಿರುತ್ತಾರೆ. ಇದು 1993-94, 1994-95ರ ಹಿಂದಿನದ್ದು. ಸಿಲೆಬಸ್ ಚೇಂಜ್ ಆಯಿತು. ಚೇಂಜ್ ಆದಮೇಲೆ ಪುಸ್ತಕಗಳು ರಾಶಿ ಬಿದ್ದುದನ್ನು ಆಕ್ಷನ್ ಮಾಡಿದರು. ಇದು ಇತ್ತೀಚೆಗೆ ಆಗಿರತಕ್ಕಂಥಾದ್ದು ಅಲ್ಲ. ಆದರೆ ಯಾವಾಗ ಆಗಿದ್ದರೂ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವ ಜವಾಬ್ದಾರಿಯು ನಮಗೆ ಇದೆ. ಮಾನ್ಯ ಮುದ್ದಹನುಮೇಗೌಡರು ಎಸ್‌ಎಸ್‌ಎಲ್ ಸಿ ಮತ್ತು ಪಿಯುಸಿಗಳಲ್ಲಿ ರ್‍ಯಾಂಕ್ ನೀಡುವ ಪದ್ಧತಿಯನ್ನು ಕೈಬಿಡಲು ಕೋರಿದ್ದಾರೆ. ಅವರ ಭಾಷಣದಲ್ಲಿ ಸೆವೆಂಥ್‌ಗೆ ಹೇಗೆ ಕೈಬಿಟ್ಟಿದ್ದೀರಿ ಅದೇ ರೀತಿಯಲ್ಲಿ ಇಲ್ಲಿಯೂ ಕೈಬಿಡಿ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳಿಗೆ ತಿಳಿದಿರುವಂತೆ ಸೆವೆಂಥ್ ಸ್ಟ್ಯಾಂಡರ್ಡ್‌ನಲ್ಲಿ ಡಿಸ್ಟಿಂಕ್ಷನ್‌ಕ್ಲಾಸ್ ಎಂದು ಮಾಡಿದ ಹಾಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಹಂತಗಳಲ್ಲಿಯೂ ಯಾವ ಕ್ರಮವನ್ನು ಅನುಸರಿಸಬೇಕೆಂಬ ಬಗ್ಗೆ ತಜ್ಞರುಗಳು ಅಭಿಪ್ರಾಯಗಳನ್ನು ಪಡೆದುಕೊಂಡು ಕ್ರಮ ಜರುಗಿಸಲು ಪರಿಶೀಲಿಸುತ್ತೇವೆ ಎಂದು ಹೇಳಬಯಸುತ್ತೇನೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಗಳಲ್ಲಿ ಕಡಿಮೆ ಫಲಿತಾಂಶ ಬರುವ ಶಾಲೆಗಳಿಗೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದ್ದಾರೆ. ಈಗಾಗಲೇ ಆ ಬಗ್ಗೆ ಕ್ರಮಗಳನ್ನು ಕೈಗೊಳ್ಳುತ್ತಾ ಇದ್ದೇವೆ.

ಎಸ್‌ಎಸ್‌ಎಲ್‌ಸಿ ಹಂತದಲ್ಲಿ ಗಣಿತ ವಿಷಯದಲ್ಲಿ ಹೆಚ್ಚು ವಿದ್ಯಾರ್ಥಿಗಳು ಫೇಲ್ ಆಗುತ್ತಿದ್ದು, ಗಣಿತ ಭೋದನೆಯನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಎಲ್ಲೆಲ್ಲಿ ಗಣಿತ ವಿಷಯದಲ್ಲಿ ಹೆಚ್ಚು ವಿದ್ಯಾರ್ಥಿಗಳು ಫೇಲ್ ಆಗತಕ್ಕಂತಹ ಶಾಲೆಗಳು ಯಾವುವು ಇವೆ ಅಲ್ಲಿ ಸ್ಪೆಶಲ್ ಕೋಚಿಂಗ್ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಗ್ರಾಮಾಂತರ ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲು ಸಲಹೆ ಮಾಡಿದ್ದು ಈ ಬಗ್ಗೆ ಕೇಂದ್ರ ಸರಕಾರದ ನೆರವಿನಿಂದ ಕ್ಲಾಸ್ ಪ್ರಾಜೆಕ್ಟ್ ಅಡಿಯಲ್ಲಿ ಈ ವರ್ಷ 200 ಪ್ರೌಢಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿಯೂ ತನಿಖಾದಳ ಮಾಡಲು ಇನ್ಸ್‌ಪೆಕ್ಷನ್ ಟೀಮ್ ಮಾಡಲು ಹೇಳಿದ್ದಾರೆ. ಇದನ್ನು ಪರಿಶೀಲಿಸಲಾಗುವುದು. ಇದನ್ನು ಮಾಡಲು ಹೆಚ್ಚಿಗೆ ಬರ್ಡನ್ ಇಲ್ಲದ ಹಾಗೆ ನಮ್ಮಲ್ಲಿರುವ ಒಳ್ಳೆಯ ಅಧಿಕಾರಿಗಳನ್ನು ನೇಮಿಸಿ ಮಾಡಲು ಪರಿಶೀಲಿಸಲಾಗುತ್ತಿದೆ. ಶ್ರೀ ಸುರೇಶ್ ಕುಮಾರ್‌ವರು ಖಾಸಗಿ ಶಾಲೆಗಳವರು ಸರಕಾರಿ ಶಾಲೆಗಳನ್ನು ಅಡಾಫ್ಟ್ ಮಾಡಿಕೊಳ್ಳುವಂತೆ ಕ್ರಮ ಕೈಗೊಳ್ಳಲು ಸಲಹೆ ಮಾಡಿದ್ದಾರೆ. ಈ ಬಗ್ಗೆಯೂ ಪರಿಶೀಲಿಸಲಾಗುವುದು. ತಮ್ಮ ಸಲಹೆಗಳನ್ನು ಈಗ ಮಾಡದಿದ್ದರೂ ಕ್ರಮೇಣ ಮಾಡಲಾಗುವುದು. ನಮಗೆ ತಮ್ಮೆಲ್ಲರ ಅಭಿಪ್ರಾಯಗಳು ಮುಖ್ಯ. ಈ ವರ್ಷ ಎಸ್‌ಎಸ್‌ಎಲ್‌ಸಿ ಬೋರ್ಡ್‌ನ್ನು ವಿಕೇಂದ್ರೀಕರಣಗೊಳಿಸಲು ವಿಭಾಗೀಯ ಮಟ್ಟದಲ್ಲಿ ವಿಕೇಂದ್ರೀಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು ಶೀಘ್ರವೇ ಆದೇಶವನ್ನು ಹೊರಡಿಸಲಾಗುವುದು. ಈಗ ಸ್ಟೇಟ್‌ಮಟ್ಟದಲ್ಲಿತ್ತು. ಈಗ ವಿಭಾಗಮಟ್ಟದಲ್ಲಿ ಮಾಡತಕ್ಕಂಥಾದ್ದಕ್ಕೆ ಏರ್ಪಾಟು ಮಾಡುತ್ತಿದ್ದೇವೆ. ಶ್ರೀ ಚಂದ್ರಕಾಂತ್ ಬೆಲ್ಲದ್‌ರವರು ಕನ್ನಡ ಮಾಧ್ಯಮ ಶಾಲೆಗಳಿಗೆ ಉತ್ತೇಜನ ನೀಡಬೇಕೆಂದು ಹೇಳಿದ್ದಾರೆ. ಧಾರವಾಡದ ಹೆಣ್ಣುಮಕ್ಕಳ ಶಿಕ್ಷಣ ಉಪಾಧ್ಯಾಯರ ತರಬೇತಿ ಶಿಕ್ಷಣ ಕೇಂದ್ರದ ಶತಮಾನೋತ್ಸವದ ಅಂಗವಾಗಿ ಕಟ್ಟಡಕ್ಕೆ ಧನಸಹಾಯ ನೀಡಲು ಕೋರಿದ್ದಾರೆ. ಅವರು ಕಳೆದ ಸಾರಿ ನನಗೆ ಹೇಳಿದ್ದಾರೆ. ಇದರ ಅವಶ್ಯಕತೆಯು ಇದೆ ಎಂದು ನನಗನ್ನಿಸುತ್ತದೆ. ಅವರು ಹೇಳಿದಷ್ಟು ಹಣವನ್ನು ಕೊಡಲು ಆಗದಿದ್ದರೂ ಸಹ ನಮ್ಮದೂ ಜವಾಬ್ದಾರಿ ಇರುವುದರಿಂದ ನಾವು ಎಷ್ಟು ಕೊಡಬೇಕೆಂದು ಯೋಚನೆ ಮಾಡಿ ಈ ವರ್ಷದಲ್ಲಿ ಕೊಡಲು ವ್ಯವಸ್ಥೆ ಮಾಡುತ್ತೇವೆ. ಮಾನ್ಯ ವಿಜಯಶಂಕರ್‌ರವರು ಮೀಸಲಾತಿಯ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದ್ದಾರೆ. ಈ ಬಗ್ಗೆ ಸರಕಾರವು ನಿರ್ಧಾಕ್ಷಿಣ್ಯವಾಗಿ ಕ್ರಮಕೈಗೊಳ್ಳುತ್ತವೆ. ಇಂಥಾದ್ದರ ಬಗ್ಗೆ ಯಾವುದೇ ರೀತಿಯಲ್ಲಿ ಶಾಮೀಲಾಗ ಬೇಕಾದ ಅಗತ್ಯವಿಲ್ಲ. ಆ ದಿಸೆಯಲ್ಲಿ ನಾವು ಹೋಗುವುದೂ ಇಲ್ಲ. ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಡುತ್ತಾ ಇದ್ದೇನೆ. ಮಾನ್ಯ ಪುಟ್ಟಣ್ಣಯ್ಯನವರು ಶಿಕ್ಷಣ ವ್ಯಾಪಾರೀಕರಣವಾಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಶಿಕ್ಷಣ ಕಾಯ್ದೆ ಜಾರಿಗೆ ತಂದು ಅದರಡಿಯಲ್ಲಿ ನಿಯಮಾವಳಿಗಳು ರಚಿತವಾಗುತ್ತಿವೆ. ನಂತರ ಡೊನೇಷನ್ ತೆಗೆದು ಕೊಳ್ಳುವ ಹಾವಳಿಯನ್ನು ನಿಯಂತ್ರಿಸಬಹುದು. ಈ ವಿಚಾರವನ್ನು ಪ್ರತಿಯೊಬ್ಬರೂ ಹೇಳುತ್ತಾ ಇದ್ದೇವೆ. ಈ ಡೊನೇಷನ್ ಹಾವಳಿಯು ಯಾರನ್ನೂ ಬಿಟ್ಟಿಲ್ಲ. ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ, ಪ್ರತಿಷ್ಟಿತ ಶಾಲೆಗಳಿಗೆ ಕಳುಹಿಸಬೇಕೆಂದು ಇಷ್ಟಪಡತಕ್ಕಂಥ ಜನ ನಾವ್ಯಾರು ಇದ್ದೇವೆ ಅಲ್ಲಿಯತನಕ ಈ ಹಾವಳಿಯು ಅಲ್ಲಿ ಇದ್ದೇ ಇದೆ. ಇದನ್ನು ನಿಯಂತ್ರಣ ಮಾಡಬೇಕೆಂದು ಸರಕಾರದವರು

ಈಗಾಗಲೇ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ ಇದ್ದೇವೆ. ರೂಲ್ಸ್ ಫ್ರೇಮ್ ಆಗುತ್ತಾ ಇದೆ. ಅದು ಪಬ್ಲಿಷ್ ಆಗುತ್ತಾ ಇದೆ. ಈ ರೂಲ್ಸ್ ಎಲ್ಲವೂ ಪಬ್ಲಿಷ್ ಆದಮೇಲೆ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಸರಕಾರದವರು ಕೈಗೊಳ್ಳುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶಾಲಾ ಅಭಿವೃದ್ಧಿ ಸಮಿತಿಯಲ್ಲಿ ರಾಜಕೀಯ ಬೇಡ ಎಂಬುದನ್ನು ಸರಕಾರವೂ ಒಪ್ಪುತ್ತದೆ. ಶಾಲಾ ಅಭಿವೃದ್ಧಿ ಸಮಿತಿಯನ್ನು ನೇಮಕ ಮಾಡುವಾಗ ಜ್ಯೂನಿಯರ್ ಕಾಲೇಜಿಗೆ ಯಾರು ಅಧ್ಯಕ್ಷರಾಗಿರಬೇಕು? ಹೈಸ್ಕೂಲ್‌ಗೆ ಯಾರು ಅಧ್ಯಕ್ಷರಾಗಿರಬೇಕು? ಇದೆಲ್ಲವನ್ನೂ ನಾವು ಪಕ್ಷಾತೀತವಾಗಿ ಮಾಡಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಶಿಕ್ಷಣದಲ್ಲಿ ಜ್ಞಾನ ಇರುವವರಿಗೆ ಆಯಾಯ ಪಂಚಾಯತಿಯಲ್ಲಿ ಗುರುತಿಸಿ ಆ ಸಮಿತಿಯ ಅಧ್ಯಕ್ಷರನ್ನು ಜವಾಬ್ದಾರರನ್ನಾಗಿ ಮಾಡಿದರೆ, ಅದಕ್ಕೆ ಏನು ಕಾರ್ಯವ್ಯಾಪ್ತಿ ಎಂದು ನಿರೂಪಿಸಿಕೊಟ್ಟರೆ, ಆ ದಿಕ್ಕಿನಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಯಾವ ರಾಜಕಾರಣಿಯೂ ಬೇಡ, ಯಾವ ಪಂಚಾಯತ್ ಚೇರ್ಮನ್ ಬೇಕಾಗಿಲ್ಲ. ಶಿಕ್ಷಣರಂಗದಲ್ಲಿ ಕೆಲಸ ಮಾಡಿರತಕ್ಕಂಥವರನ್ನು ನೇಮಿಸುವುದು ಬಹಳ ಒಳ್ಳೆಯದು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅದನ್ನು ಮಾಡಿದ್ದೇವೆ. ಸಮಿತಿಯಲ್ಲಿ ಶಿಕ್ಷಣ ತಜ್ಞರನ್ನು ನೇಮಕ ಮಾಡಬೇಕೆಂದು ಮಾಡಿದ್ದೇವೆ. ನಮ್ಮ ಆದೇಶವನ್ನೂ ಕೂಡ ಅದೇ ರೀತಿಯಲ್ಲಿ ಕಳುಹಿಸಿದ್ದೇವೆ. ಶಾಲಾ ಅಭಿವೃದ್ಧಿ ಸಮಿತಿಯಲ್ಲಿ ಶಾಸಕರು, ಲೋಕಸಭಾಸದಸ್ಯರು, ನುರಿತ ಮಹಿಳೆಯರು ಬೇಕಾಗುತ್ತಾರೆ, ಪರಿಶಿಷ್ಟ ಜಾತಿ ಜನಾಂಗದವರು ಒಬ್ಬರು ಬೇಕಾಗುತ್ತದೆ. ಮತ್ತು ಶಿಕ್ಷಣ ತಜ್ಞರೊಬ್ಬರನ್ನು ಮಾಡಿ ಎಂದು ನಾವು ಕಳುಹಿಸಿರತಕ್ಕಂಥಾದ್ದು.

ಶ್ರೀ ಕುಂಬ್ಳೆ ಸುಂದರರಾವ್ : ಶಾಲಾ ಅಭಿವೃದ್ಧಿ ಸಮಿತಿಗಳನ್ನೇ ಮಾಡದವರಿಗೆ ನಿಮ್ಮ ಕ್ರಮಗಳೇನು? ಎರಡೂವರೆ ವರ್ಷಗಳಾದರೂ ಇನ್ನೂ ಶಾಲಾ ಅಭಿವೃದ್ಧಿ ಸಮಿತಿಗಳೇ ಆಗಿಲ್ಲ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಎಲ್ಲಿ ಆಗಿಲ್ಲ ಎಂದು ತಾವುಗಳು ತಿಳಿಸಿದರೆ ಕೂಡಲೇ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಸೂಚಿಸುತ್ತೇವೆ.

ಶ್ರೀ ಕೆ. ಜಯರಾಮ ಶೆಟ್ಟಿ : ಶಾಲಾ ಅಭಿವೃದ್ಧಿ ಸಮಿತಿಗಳನ್ನು ಯಾರು ಮಾಡುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಡಿಡಿಪಿಐಗಳು ಸಂಬಂಧಪಟ್ಟವರಿಗೆ ಆದೇಶವನ್ನು ಕಳುಹಿಸುತ್ತಾರೆ. 1997-98ನೇ ಸಾಲಿನ ಶಾಲಾ ಕಟ್ಟಡಗಳಿಗೆ ವಿಶೇಷ ಪ್ರಾಶಸ್ತ್ಯ ನೀಡುವ ದೃಷ್ಟಿಯಿಂದ ರಾಜ್ಯ ವಲಯ ಯೋಜನೆಯಡಿಯಲ್ಲಿ, 500 ಲಕ್ಷ ಯೋಜನೇತರ 231 ಲಕ್ಷ ಹೀಗೆ ಒಟ್ಟು 731 ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಎಲ್ಲಾ ಮಕ್ಕಳಿಗೆ ಒಂದೇ ರೀತಿಯ ಸಮವಸ್ತ್ರಗಳನ್ನು ಒದಗಿಸುವ ಬಗ್ಗೆ ಮಾನ್ಯ ಸದಸ್ಯರು, ಮಾನ್ಯ ವಿರೋಧ ಪಕ್ಷದ ನಾಯಕರು ಸೂಚಿಸಿರುವುದು ಒಳ್ಳೆಯ ಸಲಹೆಯಾಗಿದ್ದು ಇದನ್ನು ಜಾರಿಗೊಳಿಸುವ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ. ರಾಜ್ಯದಾದ್ಯಂತ ಎಲ್ಲಾ ಮಕ್ಕಳೂ ಒಂದೇ ರೀತಿಯ ಬಟ್ಟೆಯನ್ನು ಹಾಕಿಕೊಂಡು ಬರಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಲು ನಮಗೂ ಬಹಳ ಸಂತಸವಾಗುತ್ತದೆ. ಮಕ್ಕಳಲ್ಲಿ ಹೊರಗಡೆ ಬಂದಾಗ ಯಾವುದೇ

ಭಿನ್ನಾಭಿಪ್ರಾಯಗಳು ಇರುವುದಿಲ್ಲ, ಆ ಶಾಲೆ, ಈ ಶಾಲೆ ಎಂಬ ವ್ಯತ್ಯಾಸವು ಇರುವುದಿಲ್ಲ. ಆ ಜಾತಿ ಈ ಜಾತಿ ಎಂಬ ವ್ಯತ್ಯಾಸವೂ ಇರುವುದಿಲ್ಲ. ಮೇಲ್ವರ್ಗ, ಕೆಳವರ್ಗ ಎಂಬ ವ್ಯತ್ಯಾಸವೂ ಇರುವುದಿಲ್ಲ. ಶ್ರೀಮಂತರು ಒಳ್ಳೆಯ ಬಟ್ಟೆ ಹಾಕಿಕೊಂಡು ಬರುವುದು, ಬಡವರು ಸಾಮಾನ್ಯ ಬಟ್ಟೆ ಹಾಕಿಕೊಂಡು ಬರುವುದು ಮುಂತಾಗಿ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲದ ರೀತಿಯಲ್ಲಿ ಎಲ್ಲಾ ಶಾಲೆಗಳಲ್ಲಿಯೂ ಇದನ್ನು ಮಾಡಬೇಕೆಂದು ಸಲಹ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಲಾಗುತ್ತದೆ. ಮಾನ್ಯ ಪುಟ್ಟಣ್ಣಯ್ಯನವರು ಕ್ರೀಡೆ ಮತ್ತು ದೈಹಿಕ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಸರಕಾರವು ಪ್ರಯತ್ನಿಸಿ ಈಗಿರುವ ರೀತಿಯಂತೆ ಏಳು ಶಿಕ್ಷಕರಲ್ಲಿ ಒಂದು ಹುದ್ದೆಯನ್ನು ದೈಹಿಕ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸಲಾಗುತ್ತಿದೆ. ಇತ್ತೀಚೆಗೆ ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದಮೇಲೆ 6+1 ಎಂದು ಮಾಡಿರತಕ್ಕಂಥಾದ್ದು. ಅದನ್ನು ಇತ್ತೀಚೆಗೆ ಮಾಡಿದ್ದೇವೆ. ಮಾನ್ಯ ಸದಸ್ಯರು ಕೋರಿರುವಂತೆ ಏಳು ಶಿಕ್ಷಕರ ಹುದ್ದೆಗಳ ಜೊತೆಗೆ ಒಂದು ಹೆಚ್ಚುವರಿ ದೈಹಿಕ ಶಿಕ್ಷಕರ ಹುದ್ದೆಯನ್ನು ನೀಡುವಂತೆ ಕೋರಿದ್ದಾರೆ. ಇದನ್ನು ಸದ್ಯದ ಪರಿಸ್ಥಿತಿಯಲ್ಲಿ ಮಕ್ಕಳ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ. ಆದರೆ ಹಣದ ದೃಷ್ಟಿಯಿಂದ ನಾವು ನೋಡಿದಾಗ ಪ್ಲಸ್‌ಒಂದನ್ನು ಇತ್ತೀಚೆಗೆ ಮಾಡಿದ್ದೇವೆ. ಈಗ ಏಳು ಪ್ಲಸ್ ಒಂದು ಮಾಡುವಾಗ ಸ್ವಲ್ಪ ಹಣದ ಕೊರತೆ ಬರುತ್ತದೆ. ಆದರೂ ಕೂಡ ಇದರ ಬಗ್ಗೆ ಪರಿಶೀಲನೆ ಮಾಡಿ ನೋಡತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತೇವೆ. ಮಾನ್ಯ ಹಷ್ಮಿಯವರು ಪ್ರೌಢ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರುಗಳನ್ನು ನೇಮಿಸುವ ಬಗ್ಗೆ, ಶಾಲೆಗಳಲ್ಲಿ ಶಿಕ್ಷಕರುಗಳು, ಕಟ್ಟಡ, ಉಪಕರಣಗಳು ಮುಂತಾಗಿ ಅಗತ್ಯತೆಗಳನ್ನು ಒದಗಿಸಿಕೊಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕಡ್ಡಾಯ ಶಿಕ್ಷಣದಲ್ಲಿ ಮುಖ್ಯವಾಗಿ ಆಶ್ರಯಮನೆಗಳು, ಹಸಿರು ಕಾರ್ಡ್, ಬ್ಯಾಂಕ್‌ಸಾಲವನ್ನು ಕೊಡುವವರನ್ನು ನೀವು ಕಡ್ಡಾಯಶಿಕ್ಷಣಕ್ಕೆ ಒತ್ತು ಕೊಡಬೇಕು. ಏಕೆಂದರೆ ಮೂಗು ಹಿಡಿದುಕೊಂಡರೆ ಬಾಯಿ ಬಿಡುತ್ತಾರೆ. ಆಗ 50 ಪರ್‌ಸೆಂಟ್‌ನಷ್ಟು ಶಿಕ್ಷಣ ಬೆಳೆಯುವುದಕ್ಕೆ ಸಾಧ್ಯ. ಇಲ್ಲವಾದರೆ ವಯಸ್ಕರ ಶಿಕ್ಷಣ ಸಮಿತಿ ಇನ್ನೂ ಎರಡು ಅಂತಸ್ತು ಕಟ್ಟಬೇಕಾಗುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಪುಟ್ಟಣ್ಣಯ್ಯನವರು ಸರಕಾರದ ಸೌಲಭ್ಯಗಳನ್ನು ಪಡೆಯುವವರಿಗೆ ಶಿಕ್ಷಣ ಕಡ್ಡಾಯ ಮಾಡಿ ಎಂದು ಹೇಳಿದ್ದಾರೆ.

3.40 ಪಿಎಂ

ಈ ವರ್ಷ ಆದಷ್ಟು ಹೆಚ್ಚಿಗೆ ಹಣ ಒದಗಿಸಲು ಪ್ರಯತ್ನ ಮಾಡಲಾಗುವುದು. 5 ಉರ್ದು ವಸತಿ ಶಾಲೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದರ ಬಗ್ಗೆ ನ್ಯಾಯಾಲಯದ ಮುಂದೆ ಮೊಕದ್ದಮೆ ಇದೆ. ಇದರ ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಏರಿಯಾ ಇಂಟೆನ್ಸೀವ್ ಪ್ರೋಗ್ರಾಮ್ ಮತ್ತು ಮದರ್‌ಸ್ ಅಧುನಿಕರಣ ಕಾರ್ಯಕ್ರಮದ ಅಡಿ ಇನ್ನು ಹೆಚ್ಚಿನ ಕೇಂದ್ರಗಳನ್ನು ತೆರೆಯಬೇಕೆಂದು ಹೇಳಿದ್ದಾರೆ, ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಮುಸ್ಲಿಂ ಅಲ್ಪಸಂಖ್ಯಾತರಿಗೆ ವಸತಿ ಶಾಲೆ, ಮಾನ್ಯ ಹಶ್ಮಿಯವರು 5 ಉರ್ದು ವಸತಿ ಶಾಲೆ ಬಗ್ಗೆ ಪ್ರಸ್ತಾಪಿಸಿ ಇವನ್ನು ಸರ್ಕಾರ ವಹಿಸಿಕೊಳ್ಳುವಂತೆ ಒತ್ತಾಯಿಸಿದ್ದಾರೆ. ಈ ಶಾಲೆಗಳನ್ನು ಪ್ರಾರಂಭಿಸಲು ಇದ್ದ ಮೂಲ ಉದ್ದೇಶ

ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಕರ್ನಾಟಕದಲ್ಲಿ ಪ್ರಥಮ ಪ್ರಯೋಗ ಮಾಡಲು ಸರ್ಕಾರದ ವತಿಯಿಂದ 14-8-1995ರ ಸರ್ಕಾರದ ಆದೇಶದಂತೆ ಪ್ರಾರಂಭಿಸಲು ಉದ್ದೇಶಿಸಿತು. ಆದರೆ ಶಾಲೆಗಳನ್ನು ಸರ್ಕಾರ ನಡೆಸುವ ಬದಲು ಅದೇ ಸಮುದಾಯಕ್ಕೆ ಸೇರಿದ ಒಂದು ಟ್ರಸ್ಟ್ ಮುಂದೆ ಬಂದಿದ್ದರಿಂದ ಜೊತೆಗೆ ಸರ್ಕಾರವೇ ಅವಶ್ಯಕವಾಗಿ ಇದ್ದ ಸಿಬ್ಬಂದಿಗಳ ಸಂಬಳ ಮತ್ತು ವಿದ್ಯಾರ್ಥಿಗಳ ಆಹಾರ ಭತ್ಯೆಗಳನ್ನು ಮಾತ್ರ ಕೊಡುತ್ತಿದೆ. ನಾವು ಮುರಾರ್ಜಿ ಶಾಲೆಗೆ ಕೊಟ್ಟ ಹಾಗೆ ನಾವು ಕೊಡುವುದಿಲ್ಲ ಅವರಿಗೆ ಕೊಡತಕ್ಕಂಥ ಸಂಬಳ ಮತ್ತು ಉಪಾಧ್ಯಾಯರನ್ನು ಕೊಡತಕ್ಕಂಥದ್ದು ಮತ್ತು ಆಹಾರ ಮಾತ್ರ ಅವರಿಗೆ ಒದಗಿಸುವಂಥದ್ದು. ಮುರಾರ್ಜಿ ಶಾಲೆಗೆ ಒದಗಿಸುವಂತೆ...

ಶ್ರೀ ಕಾಗೋಡು ತಿಮ್ಮಪ್ಪ : ಬೇರೆಯವರೂ ಕೇಳುತ್ತಾರೆ ಅವರಿಗೆ ಕೊಡುತ್ತೀರೋ ನಿಮಗೆ ಅವರಿಗೆ ಮಾತ್ರ ಅವಶ್ಯಕತೆ ಕಾಣಿಸಿತಾ?

ಶ್ರೀ ಹೆಚ್.ಜಿ. ಗೋವಿಂದೇಗೌಡರು : ಹಿಂದಿನ ಸರ್ಕಾರದ ಆದೇಶವನ್ನು ಮಾರ್ಪಡಿಸಿ 4-9-1996ರಲ್ಲಿ ಸದರಿ ಟ್ರಸ್ಟ್‌ಗೆ 5 ಉರ್ದು ವಸತಿ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿ ಆದೇಶ ಹೊರಡಿಸಿದೆ. 5 ವಸತಿ ಶಾಲೆಗಳನ್ನು ಕಾರ್ಯಾರಂಭ ಮಾಡಿರುವುದು ಈ ರೀತಿ ಇದೆ. ರಾಮನಗರದಲ್ಲಿ 148 ಮಕ್ಕಳು ಇದ್ದಾರೆ, ಶ್ರೀರಂಗಪಟ್ಟಣದಲ್ಲಿ 85 ಮಕ್ಕಳಿದ್ದಾರೆ, ಮಂಗಳೂರಿನಲ್ಲಿ 154 ಮಕ್ಕಳಿದ್ದಾರೆ ಅವರು ಕನ್ನಡ ಮಾಧ್ಯಮವನ್ನು ತೆಗೆದುಕೊಂಡಿದ್ದಾರೆ. ಮಂಗಳೂರಿನಲ್ಲಿ ಕನ್ನಡ ಮಾಧ್ಯಮದಲ್ಲಿ ಪಾಠಪ್ರವಚನದಲ್ಲಿ ತೊಡಗಿಸಿದ್ದಾರೆ. ಬಿಜಾಪುರದಲ್ಲಿ 241 ಮಕ್ಕಳಿದ್ದಾರೆ, ಗುಲ್ಬರ್ಗಾದಲ್ಲಿ 200 ಮಕ್ಕಳಿದ್ದಾರೆ. ಈಗಾಗಲೇ ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ ಗುಲ್ಬರ್ಗಾದಲ್ಲಿ 14 ಸಿಬ್ಬಂದಿ ವರ್ಗಕ್ಕೆ ಅನುಮತಿ ನೀಡಿದ್ದಾರೆ, 7 ಸಿಬ್ಬಂದಿ ವರ್ಗಕ್ಕೆ ನಿಗದಿತ ವಿದ್ಯಾರ್ಹತೆ ಇಲ್ಲದೇ ಇರುವುದರಿಂದ ಅನುಮೋದನೆ ನೀಡಿಲ್ಲ. ಮಂಗಳೂರು ಶಾಲೆಗೆ ಸಂಬಂಧಿಸಿದ 17 ಸಿಬ್ಬಂದಿ ವರ್ಗದ ಪೈಕಿ 4 ಸಿಬ್ಬಂದಿ ವರ್ಗಕ್ಕೆ ಅನುಮೋದನೆ ನೀಡಿಲ್ಲ. ಉಳಿದ ಮೂರು ಶಾಲೆಗಳ ಸಿಬ್ಬಂದಿ ವರ್ಗಕ್ಕೆ ಅನುಮೋದನೆ ನೀಡಿಲ್ಲ. ಹೌದು, ಬಾಕಿ ಉಳಿದ ಶಾಲೆಗಳಿಗೆ ಅನುಮೋದನೆ ನೀಡಿಲ್ಲ, ಶಾಲೆಗಳಿಗೆ ಹಣ ದುರುಪಯೋಗ ಸೇರಿದಂತೆ ನಿರ್ದಿಷ್ಟ ಆಪಾದನೆಗಳು ಇದ್ದಲ್ಲಿ ಇಲಾಖೆ ಅಧಿಕಾರಿಗಳಿಂದ ತನಿಖೆ ನಡೆಸಿ ವರದಿಯ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಅನುಮತಿ ನೀಡಿರುವ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿದ್ದು ವಿಚಾರಣೆ ನಡೆಯುತ್ತಿರುವುದರಿಂದ ಈ ಬಗ್ಗೆ ಈ ಹಂತದಲ್ಲಿ ಹೆಚ್ಚಿನ ವ್ಯಾಖ್ಯಾನ ಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಹಿಂದಿನ ವರ್ಷ ಶ್ರೀರಂಗ-ಪಟ್ಟಣ ಬಿಟ್ಟು ಉಳಿದ 4 ಶಾಲೆಗಳಿಗೆ ಒಟ್ಟು 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಬಾಕಿ ಉಳಿದಂಥ ಎಲ್ಲಾ ಶಾಲೆಗಳು ಸೇರಿ. ಮಾನ್ಯ ಶ್ರೀರಾಮರೆಡ್ಡಿಯವರು 7ನೇ ತರಗತಿ ಪಬ್ಲಿಕ್ ಪರೀಕ್ಷೆಗಳಲ್ಲಿ ಹಿಂದಿ ಭಾಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆದಿರುವ ಮಕ್ಕಳಿಗೆ ತೊಂದರೆ ಆಗಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಿಂದಿ ಭಾಷೆ ಅಥವಾ ಯಾವುದೇ ತೃತೀಯ ಭಾಷೆಯಲ್ಲಿ 15 ಅಂಕಗಳನ್ನು ಕೃಪಾಂಕಗಳನ್ನಾಗಿ ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲ

ವಾಗುವುದಿಲ್ಲ. 15 ಗ್ರೇಸ್ ಮಾರ್ಕ್ಸ್‌ಗಳನ್ನು ನಾವು ಕೊಡುತ್ತಿದ್ದೇವೆ. ಹೌದು ಥರ್ಡ್ ಲಾಂಗ್ವೇಜ್‌ಗೆ ಕೊಡುತ್ತಿದ್ದೇವೆ, ಹಿಂದಿಗೆ ಅಥವಾ ಯಾವುದಕ್ಕೆ 15 ಮಾರ್ಕ್ಸ್‌ಗಳನ್ನು ಕೊಡತಕ್ಕಂಥ ಸಂಪ್ರದಾಯ ಇದೆ, ಅದರಲ್ಲಿ ಮಾಡಿರತಕ್ಕಂಥದ್ದು. ಮಾನ್ಯ ಪ್ರತಾಪಚಂದ್ರ ಶೆಟ್ಟರು ಹೊಸ ಶಾಲೆಗಳ ಆರಂಭದ ಬಗ್ಗೆ ಪ್ರಸ್ತಾಪಿಸಿ ಅವುಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ವ್ಯವಸ್ಥೆಯ ಬಗ್ಗೆ ಸರಳೀಕರಣ ಮಾಡುವಂತೆ ಸೂಚಿಸಿದ್ದಾರೆ. ಈ ಬಗ್ಗೆ ಕೆಲವು ವಿಷಯಗಳನ್ನು ನಾವು ಪರಿಶೀಲನೆ ಮಾಡಲಾಗುತ್ತದೆಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ನಾನು ಇಚ್ಛಿಪಡುತ್ತೇನೆ. ಶಿಕ್ಷಕರ ನೇಮಕಾತಿ ಆಗುವಾಗ ಅಭ್ಯರ್ಥಿಗಳ ದಾಖಲಾತಿಗಳಿಗೆ ಅಕನಾಲೆಡ್ಜ್‌ಮೆಂಟ್ ಕೊಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ ಇದಕ್ಕೆ ನಿಜವಾಗಿಯೂ ಉತ್ತಮವಾಗಿರತಕ್ಕಂಥದ್ದು. ಕೆಲವು ಕಡೆ ಯಾವುದಾದರೂ ಸೀಟು ಇಟ್ಟೇ ಇಲ್ಲ ಎನ್ನತಕ್ಕಂಥದ್ದು, ಯಾವುದು ಅಲ್ಲಿ ಅವಶ್ಯಕತೆ ಇಲ್ಲ ಎನ್ನತಕ್ಕಂಥದ್ದನ್ನು ಹೇಳುತ್ತಾರೆ ಇವರನ್ನು ನೀವು ಕೇಳಿ ಅವರಿಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಅಕನಾಲೆಡ್ಜ್‌ಮೆಂಟ್ ಕೊಡುವುದಕ್ಕೆ ನಾನು ಸೀಟುಗಳನ್ನು ಕೊಟ್ಟಿರುತ್ತೇನೆ ಅದಕ್ಕೆ ಅಕನಾಲೆಡ್ಜ್‌ಮೆಂಟ್ ತೆಗೆದುಕೊಳ್ಳುವಂಥ ಸಂಪ್ರದಾಯವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನೇಮಕವಾದ ಶಿಕ್ಷಕರು 10 ವರ್ಷ ಅದೇ ಜಿಲ್ಲೆಯಲ್ಲಿ ಕೆಲಸ ಮಾಡುವಂತೆ ಸೂಚಿಸಿದ್ದಾರೆ. ಮಾನ್ಯ ಪ್ರತಾಪಚಂದ್ರ ಶೆಟ್ಟರು ಒಂದೇ ಕಡೆ 10 ವರ್ಷ ಇರಬೇಕೆಂದು ಹೇಳಿದ್ದಾರೆ. ನೀವೆಲ್ಲಾ ಇಷ್ಟಪಡುವುದಾದರೆ ನನ್ನ ಅಭ್ಯಂತರ ಏನೂ ಇಲ್ಲ. ಖಂಡಿತವಾಗಿ ತಾವು ಚುನಾಯಿತ ಪ್ರತಿನಿಧಿಗಳು ಹೇಳಿದರೆ ಅನುಷ್ಠಾನಕ್ಕೆ ತರುವುದಕ್ಕೆ ನಾನು ಯಾವುದೇ ರೀತಿ ಹಿಂದೇಟು ಹಾಕುವುದಿಲ್ಲ. ಬೇಡ ಇದು ಹೆಚ್ಚು ಆಯಿತು ಮಾಡಲೇಬೇಕು. ಅಂದರೆ ನಿಮ್ಮ ಅಭಿಪ್ರಾಯವೇ ನಮ್ಮ ಅಭಿಪ್ರಾಯ. ಚುನಾಯಿತ ಪ್ರತಿನಿಧಿಗಳು ಹೇಳುವುದನ್ನೇ ನಾನೂ ಸಹ ಕಾರ್ಯರೂಪದಲ್ಲಿ ತರಬೇಕಾಗುತ್ತದೆ. ಇದನ್ನು ಪರಿಶೀಲನೆ ಮಾಡಿ ನೋಡೋಣ ಎಂದು ಹೇಳುತ್ತಿದ್ದೇನೆ. ಶಾಲಾ ಕಟ್ಟಡಗಳಲ್ಲಿ ಕಳಪೆ ಕಾಮಗಾರಿ ಆಗಿರುವ ಬಗ್ಗೆ ಶಾಲಾ ಅಭಿವೃದ್ಧಿ ಸಮಿತಿಯವರು ನೀಗಾ ವಹಿಸುವಂತೆ ಮತ್ತೆ ಉತ್ತಮ ಕಟ್ಟಡಗಳ ಕಾಮಗಾರಿ ನೋಡಿಕೊಳ್ಳುವಂತೆ ಮಾಡಬೇಕಾಗುತ್ತದೆ ಇದು ಶಾಲಾ ಅಭಿವೃದ್ಧಿ ಸಮಿತಿಯುವರ ಜವಾಬ್ದಾರಿ ಕೊಟ್ಟರೆ ಮತ್ತು ಅಧಿಕಾರಿಗಳ ಜೊತೆಯಲ್ಲಿ, ಉಪಾಧ್ಯಾಯರುಗಳು, ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರು, ಅಧ್ಯಕ್ಷರು ಜವಾಬ್ದಾರಿ ವಹಿಸಿದರೆ ಕಳಪೆ ಕಾಮಗಾರಿಗಳು ಆಗುವುದಿಲ್ಲವೆಂದು ನಾನು ಒಪ್ಪುತ್ತೇನೆ. ಕೆಲಸ ಯಾವರೀತಿ ಆಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಉಚಿತ ಸಮವಸ್ತ್ರಗಳನ್ನು ಸಕಾಲದಲ್ಲಿ ನೀಡುವ ಬಗ್ಗೆ ಪ್ರಸ್ತಾಪಿಸಿ ಈ ಸಲ ಸೆಪ್ಟೆಂಬರ್ ಅಂತ್ಯದೊಳಗೆ ವಿತರಿಸಲು ಕಾರ್ಯಕ್ರಮಕೈಗೊಳ್ಳಲಾಗುತ್ತದೆ. ಇದು ಸರ್ಕಾರದಿಂದ ಸರಬರಾಜು ಆಗತಕ್ಕಂಥದ್ದು, ನಮಗೆ ಬೇಕಾಗಿರುವಷ್ಟು ಬಟ್ಟೆಯನ್ನು ಅವರಿಗೆ ಒದಗಿಸಲು ಸಾಧ್ಯವಾಗಲಿಲ್ಲ. ಉತ್ತಮ ಬಟ್ಟೆ ಕೊಡೋಣ ಎಂದು ತೀರ್ಮಾನ ಮಾಡಿದ್ದೇವೆ, 75 ಭಾಗ ಸಪ್ಲೈ ಮಾಡಿದ್ದಾರೆ ಇನ್ನು 25 ಭಾಗ ಸಪ್ಲೈ ಮಾಡುತ್ತಿದ್ದಾರೆ. ದಿನದಿಂದ ದಿನಕ್ಕೆ ಸಪ್ಲೈ ಮಾಡುತ್ತಿದ್ದಾರೆ. ಇದು ಸೆಪ್ಟೆಂಬರ್ ಅಂತ್ಯದೊಳಗೆ ರಾಜ್ಯಾದ್ಯಾಂತ ಎಲ್ಲಾ ಮಕ್ಕಳಿಗೂ ಸಮವಸ್ತ್ರಗಳನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆಂದು ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ. ಮಾನ್ಯ ಪ್ರತಾಪಚಂದ್ರ ಶೆಟ್ಟರು ತಿಳಿಸಿದಂತೆ ಈ ವರ್ಷ ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರನ್ನು

ನೀಡಲು ಆದ್ಯತೆ ನೀಡಬೇಕೆಂದು ಕೇಳಿದ್ದಾರೆ. ಹೊಸ ಶಾಲೆಗಳನ್ನು ಈ ವರ್ಷ ಯಾರಿಗೂ ಕೊಡುತ್ತಿಲ್ಲ. ಕಳೆದ ವರ್ಷ ಕೊಟ್ಟಿರುವಂಥ ಶಾಲೆಗಳಿಗೆ ಕಟ್ಟಡದ ಸಲುವಾಗಿ ಒಂದೊಂದು ಶಾಲಾ ಕಟ್ಟಡ ಕಟ್ಟುವುದಕ್ಕೆ 9 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ತಮ್ಮ ಮನಸ್ಸಿನಲ್ಲಿರುವಂಥದ್ದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ನಾವು ಈ ವರ್ಷ ಶಾಲೆಗಳನ್ನು ಕೊಡುವುದು ಅಲ್ಲಿ ಉಪಾಧ್ಯಾಯರು ಇಲ್ಲ, ಕಟ್ಟಡ ಇಲ್ಲ ಉಪಕರಣಗಳು ಇಲ್ಲ ಸರಿಯಾಗಿ ಇದು ಆಗುವುದಿಲ್ಲವೆಂದು ಈ ಸಲ ರಾಜ್ಯದಲ್ಲಿ ಪ್ರೌಢಶಾಲೆಯಾಗಲಿ ಪದವಿಪೂರ್ವ ಕಾಲೇಜುಗಳಾಗಲಿ ತೆರೆಯುತ್ತಿಲ್ಲ. ಅದಕ್ಕಾಗಿ 9 ಲಕ್ಷ ರೂಪಾಯಿಗಳನ್ನು ಒದಗಿಸಿ ಪ್ರತಿಯೊಬ್ಬ ಶಾಸಕರ ಕ್ಷೇತ್ರದಲ್ಲಿ ಶಾಲಾ ಕಟ್ಟಡಗಳನ್ನು ಪ್ರಪೋಸಲ್ ಮಾಡಿ ಇಂಥ ಕಡೆ ಕಟ್ಟಡಗಳನ್ನು ಕಟ್ಟಿ ಎಂದು ಹೇಳಿದರೆ ಅಂಥ ಕಡೆ ಕಟ್ಟಲು ವ್ಯವಸ್ಥೆ ಮಾಡಿದ್ದೇವೆ. ತಾವು ಏನು ಸಲಹೆ ಕೊಟ್ಟಿದ್ದೀರಿ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಇನ್ನು ಶಿಕ್ಷಕರನ್ನು ನೇಮಕ ಮಾಡುವುದರ ಬಗ್ಗೆ ಅವರು ಹೇಳಿದ್ದಾರೆ. ಈ ಸಲ 3500ಪ್ರೌಢಶಾಲಾ ಶಿಕ್ಷಕರನ್ನು ನೇಮಕ ಮಾಡಿದ್ದೇವೆ. ಶಾಲಾ ದುರಸ್ತಿಗಾಗಿ ಈ ವರ್ಷ ಪ್ರಾಥಮಿಕ ಶಾಲೆಗಳಿಗೆ 731 ಲಕ್ಷ ರೂಪಾಯಿಗಳನ್ನು, ಪ್ರೌಢಶಾಲೆಗಳಿಗೆ 260ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಹಿರಿಯ ಪ್ರಾಥಮಿಕ ಶಾಲೆಗಳಿಗೆ ಖರೀಸಿದ ಉಪಕರಣಗಳು ಉತ್ತಮ ಗುಣಮಟ್ಟದ್ದು ಆಗಿರಬೇಕು ಎಂಬುದೇ ಸರ್ಕಾರದ ಆಶಯ. ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನ್ಯ ಸದಸ್ಯರು ತಿಳಿಸಿರುವಂತೆ ಆಗಿರುವ ತಪ್ಪುಗಳ ಬಗ್ಗೆ ತನಿಖೆ ನಡೆಸಲಾಗುವುದು. ನಾವು ಸಾಮಾನ್ಯವಾಗಿ ಒಳ್ಳೆಯ ಉಪಕರಣ ಕೊಡಬೇಕೆನ್ನುವ ಬಗ್ಗೆ ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಪಟ್ಟ ಡಿ.ಡಿ.ಪಿ.ಐ. ಗಳಿಗೆ ಇವರೆಲ್ಲರಿಗೂ ಹೇಳಿದ್ದೇನೆ. ಕಳಪೆ ವಸ್ತುಗಳನ್ನು ತೆಗೆದುಕೊಳ್ಳಬಾರದೆಂದು ಹೇಳಿರುವುದರಿಂದಲೇ ಉತ್ತಮವಾದ ಸಲಕರಣೆಗಳನ್ನು ಸಪ್ಲೈ ಮಾಡಿದ್ದಾರೆ. ಇನ್ನು ಕೆಲವು ಇಂಥವುಗಳು ಏನಾದರೂ ಇದ್ದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ನೀವು ಹೇಳಿ, ಚುನಾಯಿತ ಪ್ರತಿನಿಧಿಗಳಿಗೆ ಅಂತಹ ಕಳಪೆ ಮಾಲುಗಳು ಏನಾದರೂ ಇರುವುದು ಕಂಡು ಬಂದರೆ ಡಿ.ಡಿ.ಪಿ.ಐ. ಗಳಿಗೆ ಮೊದಲೇ ತಿಳಿಸಿ ಸಿ.ಇ.ಓ. ಗಳಿಗೆ ಜವಾಬ್ದಾರಿ ಕೊಟ್ಟಿದ್ದೇವೆ ಇದಕ್ಕೆ ಸಿ.ಇ.ಓ. ಅವರು ಅಧ್ಯಕ್ಷರಾಗಿರುತ್ತಾರೆ. ಡಿ.ಡಿ.ಪಿ.ಐ.ಗಳು ಸಪೋರ್ಟ್ ಆಗಿ ಇರುತ್ತಾರೆ. ಅವರು ಇದನ್ನು ಪರ್ಸೇಸ್ ಮಾಡಿ ಕೊಡತಕ್ಕಂಥದ್ದನ್ನು ನೋಡಿ ಅದರಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ಅದನ್ನು ಸರಿಪಡಿಸತಕ್ಕಂಥದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಶಂಕರಲಿಂಗೇಗೌಡರು ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ, ಕೆಲವು ಸಾಧ್ಯವಾದಮಟ್ಟಿಗೆ ಶಾಶ್ವತ ಅನುದಾನ ರಹಿತ ಶಾಲೆಗಳನ್ನು ಸೇರಿಸಬೇಕೆಂದು ಹೇಳಿದ್ದಾರೆ. ನಾನು ಅದನ್ನು ಮೊದಲೇ ಹೇಳಿದ್ದೆ. ನನ್ನ ಅಭಿಪ್ರಾಯದ ಜೊತೆ ತಮ್ಮ ಅಭಿಪ್ರಾಯ ಕೂಡ ಇದರಲ್ಲಿ ಅಡಕವಾಗಿದೆ ಎಂದು ಹೇಳುತ್ತೇನೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮೂರುನಾಲ್ಕು ಸಲಹೆಗಳನ್ನು ಹೇಳಿದ್ದಾರೆ ಅದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಇದರ ಬಗ್ಗೆ ಯಾವುದು ಮಾಡುವುದಕ್ಕೆ ಸಾಧ್ಯ ಅದನ್ನೆಲ್ಲಾ ನಾನು ಯೋಚನೆ ಮಾಡಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಎಲ್ಲಾ ಶಾಲೆಗಳಿಗೆ ಕಂಪ್ಯೂಟರ್ ಒದಗಿಸಲು ಮತ್ತು ವಿದ್ಯುಚ್ಛಕ್ತಿ ಒದಗಿಸಲು ಹಾಗು ಆಂಗ್ಲಭಾಷಾ ಶಾಲೆಗಳಿಗೂ ಕನ್ನಡವನ್ನು ಕಡ್ಡಾಯ ಮಾಡುತ್ತಿದ್ದೇವೆ. ಹಂತಹಂತವಾಗಿ ಕಂಪ್ಯೂಟರ್‌ಗಳನ್ನು ಎಲ್ಲಾ

ಶಾಲೆಗಳಿಗೆ ಒದಗಿಸಲು ಪ್ರಯತ್ನ ಮಾಡಲಾಗುವುದು. ಒಂದರಿಂದ 4ನೇ ತರಗತಿಯಲ್ಲಿ ಕನ್ನಡ ಭಾಷೆ ಮತ್ತು ಮಾತೃ ಭಾಷೆ ಮಾಧ್ಯಮದಲ್ಲಿ ನಡೆಯುತ್ತಿರುವ ಶಾಲೆಗಳಿಗೆ ಮಾತ್ರ 5ನೇ ತರಗತಿಯಿಂದ ಆಂಗ್ಲ ಮಾಧ್ಯಮ ಶಾಲೆಗಳಿಗೆ ಕೊಡತಕ್ಕಂಥದ್ದು ಇದೆ. ಒಂದರಿಂದ 4ನೇ ತರಗತಿಯವರೆಗೆ ಮಾತ್ರ ನಾವು ಮಾತೃಭಾಷೆ ಎಂದು ಇಟ್ಟಿದ್ದೇವೆ. ಅದೇರೀತಿ ಬಂದಿದೆ. ನಮ್ಮರಾಜ್ಯದಲ್ಲಿ ಹೆಚ್ಚು ಕನ್ನಡದಲ್ಲಿ ಇದೆ. ಕೆಲವರು ಉರ್ದು, ತಮಿಳು, ಮರಾಠಿ ಈ ರೀತಿ ಕೇಳುವಂಥದ್ದು ಇದೆ, ಅವರಿಗೂ ನಾವು ಒಂದು ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಎಲ್ಲಾ ಶಾಲೆಗಳಿಗೆ ಸರ್ಕಾರದ ವತಿಯಿಂದ ವಿದ್ಯುಚ್ಛಕ್ತಿ ಒದಗಿಸುವುದು ಕಷ್ಟವಾಗುತ್ತಿರುವುದರಿಂದ ಶಾಲಾ ಅಭಿವೃದ್ಧಿ ಸಮಿತಿಯವರು ಕಲ್ಪಿಸುವಂತೆ ಮಾಡಬಹುದು, ಸಾರ್ವಜನಿಕರೂ ಮಾಡಬಹುದು. ನನಗೆ ಒಂದು ಸಂತೋಷ ಆಗತಕ್ಕಂಥದ್ದು ಅಂದರೆ, ಕಟ್ಟಡ ಏನೇ ಆಗಿರಲಿ ಶಿಕ್ಷಣದಲ್ಲಿ ಕೆಲಸ ಮಾಡಲು ಸಾರ್ವಜನಿಕರೂ ಇವತ್ತೂ ಮುಂದೆ ಬರುತ್ತಿದ್ದಾರೆ. ಕಟ್ಟಡವನ್ನು ಕಟ್ಟಿಸಿ ಕೊಡುವುದಕ್ಕೆ ದುಡ್ಡನ್ನು ಒದಗಿಸುತ್ತಿದ್ದಾರೆ. ಬೇಕಾಗಿರುವಂಥ ಸೌಲಭ್ಯಗಳನ್ನು ಇಲ್ಲೂ ನೋಡಿದ್ದೇನೆ ಬೇರೆ ಜಿಲ್ಲೆಗಳಲ್ಲೂ ಕೂಡ ನೋಡಿದ್ದೇನೆ ಸಾರ್ವಜನಿಕರು ಸಂಪಾದನೆ ಮಾಡಿದ್ದರಲ್ಲಿ ಸ್ವಲ್ಪವಾದರೂ ಇದಕ್ಕೆ ಕೊಡಬೇಕೆಂದು ಇವತ್ತು ಮುಂದೆ ಬರುತ್ತಿದ್ದಾರೆ. ಶಾಸಕರು ತಮ್ಮ ಕ್ಷೇತ್ರದಲ್ಲಿ ಎಲ್ಲೆಲ್ಲಿ ಹಣ ಕಡಿಮೆಯಾಗುತ್ತದೆ ಅಲ್ಲಿ ಸಾರ್ವಜನಿಕರಿಂದ ವಂತಿಗೆ ಪಡೆದು ಕಟ್ಟಡಗಳನ್ನು ಕಟ್ಟಲು ತಾವು ಆಸಕ್ತಿವಹಿಸಬೇಕೆಂದು ಹೇಳುತ್ತೇನೆ. ಪದವಿ ಪೂರ್ವ ಕಾಲೇಜುಗಳ ಕಟ್ಟಡ ಬಹಳ ಬೇಕಾಗುತ್ತದೆ. ರಿಪೇರಿ ತುಂಬಾ ಆಗಬೇಕಾದದ್ದು ಇದೆ. ಪ್ರೌಢ ಶಾಲಾ ಕಟ್ಟಡಗಳು ಇಲ್ಲವೇ ಇಲ್ಲ. ಇವುಗಳನ್ನೆಲ್ಲ ಸರಕಾರ ಎಷ್ಟು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸತಕ್ಕಂತಹ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತದೆ. ನನಗೆ ತುಂಬಾ ಸಂತೋಷವಾಗುತ್ತದೆ 2112 ಕೋಟಿ ರೂಪಾಯಿಗಳನ್ನು ಶಿಕ್ಷಣ ಇಲಾಖೆಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒದಗಿಸತಕ್ಕಂತಹ ಕೆಲಸ ಮಾಡಿದ್ದಾರೆ. 28,000 ಉಪಾಧ್ಯಾಯರನ್ನು ನೇಮಕ ಮಾಡಿದ್ದೇವೆ. ಮತ್ತೆ 2500 ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಮತ್ತೆ 3500 ನೇಮಕ ಮಾಡುತ್ತೇವೆ. ಇದಕ್ಕೆಲ್ಲಾ ತುಂಬಾ ಭಾಗ ಖರ್ಚಾದರೂ ಸಹ ಇದು ಅವಶ್ಯಕತೆ ಇದೆ. ಪ್ರಾಥಮಿಕ ಶಿಕ್ಷಣಕ್ಕೆ ನಾವು ಎಷ್ಟೇ ಖರ್ಚು ಮಾಡಿದರೂ ಸಹ ಇದು ಅವಶ್ಯಕತೆ ಇದೆ ಎಂದು ನಾನು ತಿಳಿದಿದ್ದೇನೆ. 2112 ಕೋಟಿ ಕೊಟ್ಟಿದ್ದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಅರ್ಪಿಸಿದ್ದೇನೆ. ಆದರೂ ಹಣ ಸಾಕಾಗುವುದಿಲ್ಲ. ಎಷ್ಟು ಕೊಟ್ಟರೂ ಸಾಲದು. ಈ ರಾಜ್ಯದ ಒಟ್ಟು ಉತ್ಪತ್ತಿಯಲ್ಲಿ ಶೇಕಡಾ 30 ಪರ್ಸೆಂಟ್ ಹಣವನ್ನು ನಮಗೆ ಕೊಟ್ಟರೂ ಕೂಡ ಸಾಕಾಗುವುದಿಲ್ಲ. ಆ ಮಟ್ಟದಲ್ಲಿ ಜನಸಂಖ್ಯೆ ಹೆಚ್ಚಿದೆ ಮತ್ತು ಇದರ ಬಗ್ಗೆ ಒತ್ತಡ ಕೂಡ ಹೆಚ್ಚಾಗಿದೆ. ಜವಾಬ್ದಾರಿಯೂ ಕೂಡ ಅದೇ ರೀತಿಯಲ್ಲಿ ಜಾಸ್ತಿಯಾಗುತ್ತಿರುವುದರಿಂದ ಈ ಎಲ್ಲಾ ಕೆಲಸಗಳನ್ನು ಮಾಡಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ. ಮಾನ್ಯ ಪಾಟೀಲರವರು ಶಿಕ್ಷಕರುಗಳು ಶಾಲೆಗಳಿಗೆ ಸರಿಯಾಗಿ ಹೋಗುತ್ತಿಲ್ಲ. ಡೆಪ್ಯುಟೇಷನ್ ಮಾಡಿಸಿಕೊಂಡು ಹೋಗುತ್ತಿದ್ದಾರೆಂದು ಹೇಳಿದ್ದಾರೆ. ಶಿಕ್ಷಕರುಗಳು ಶಾಲೆಗಳಿಗೆ ನಿಯಮಿತ ಕಾಲದಲ್ಲಿ ಹೋಗಬೇಕು. ಡೆಪ್ಯುಟೇಷನ್ ಬಗ್ಗೆ ಎಲ್ಲಾ ಸ್ನೇಹಿತರೂ ಹೇಳಿದ್ದಾರೆ. ಹಿಂದೆ ಡೆಪ್ಯುಟೇಷನ್ ಮಾಡುವ ಅಧಿಕಾರವನ್ನು ಡಿಡಿಪಿಐ ಗಳಿಗೆ ಕೊಟ್ಟಿದ್ದೆವು. ಆದರೆ ಅದು ನನ್ನ ಮನಸ್ಸಿಗೆ ಅಷ್ಟೊಂದು ತೃಪ್ತಿಯಾಗಲಿಲ್ಲ.

ಅನೇಕ ಜನರಿಗೆ ನಿಮಗೂ ತೃಪ್ತಿಯಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಡೆಪ್ಯುಟೇಷನ್ ಮಾಡಬೇಕು. ಡೆಪ್ಯುಟೇಷನ್ ಮಾಡತಕ್ಕಂತಹ ಅಧಿಕಾರವನ್ನು ಕಮಿಷನರಿಗೆ ಕೊಟ್ಟಿದ್ದೇವೆ. ಈಗ ನಮಗೆ ಫೋನ್ ಇದೆ ಟ್ರೈನ್, ಕಾರು, ಬಸ್ಸು ಇದೆ. ಮನಸ್ಸು ಇದ್ದರೆ ಏನು ಬೇಕಾದರೂ ಮಾಡುವುದಕ್ಕೆ ಸಾಧ್ಯಾವಾಗುತ್ತದೆ. ಮನಸ್ಸು ಇಲ್ಲದಿದ್ದರೆ ಡಿಡಿಪಿಐಗಳಿಗೇ ಆಗಲೀ ನನಗೂ ಆದರೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಡಿಡಿಪಿಐ ಗಳು ಎಲ್ಲೆಲ್ಲಿ ಅವಶ್ಯಕತೆ ಇದೆ ಇಂತಹ ಕಡೆ ಮಾಡಬೇಕೆಂದು ಒಂದು ಲಿಸ್ಟ್ ತಂದು ಕಮಿಷನರಿಗೆ ಕೊಟ್ಟ ತಕ್ಷಣ ಅವರು ವಿಥಿನ್ ನೋ ಟೈಂ ಅವರು ಅಪ್ರೂವ್ ಮಾಡಿ ಕೊಡುತ್ತಾರೆ. ಮಾರನೇ ದಿವಸ ಹೋಗಿ ಅವರು ಇಂಪ್ಲಿಮೆಂಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಡೆಪ್ಯುಟೇಷನ್ ವ್ಯವಸ್ಥೆ ಆಗಬೇಕಾಗುತ್ತದೆ. ಕೆಲವು ಕಡೆ ಉಪಾಧ್ಯಾಯರುಗಳು ಬಹಳ ಕಡಿಮೆ ಇದ್ದಾರೆ. ಕೆಲವು ಕಡೆ ಜಾಸ್ತಿ ಇದ್ದಾರೆ. ಜಾಸ್ತಿ ಇರತಕ್ಕಂತಹ ಉಪಾಧ್ಯಾಯರುಗಳನ್ನು ಕಡಿಮೆ ಇರತಕ್ಕಂತಹ ಪ್ರದೇಶಗಳಿಗೆ ಹಾಕಬೇಕಾಗುತ್ತದೆ. ಇದನ್ನು ನಾವು ಮಾಡುವುದಕ್ಕೆ ಆಗುವುದೇ ಇಲ್ಲವೆಂದು ಕುಳಿತುಕೊಂಡರೆ ಶಿಕ್ಷಣ ಇಲಾಖೆಗೆ ಒಳ್ಳೆಯ ಹೆಸರು ಬರುವುದಿಲ್ಲ. ಉಪಾಧ್ಯಾಯರಿಗೆ ಮಕ್ಕಳಿಗೂ ಸಹ ತೊಂದರೆಯಾಗುತ್ತದೆ. ಡೊಪ್ಯುಟೇಷನ್‌ನಿಂದ ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ಇಲಾಖೆಯವರು ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಎಸ್. ಶಿವಪ್ಪ : ಅಧ್ಯಕ್ಷರೇ, Piecemeal deputation, immediate relief will not be secured. Piece-meal ಡೆಪ್ಯುಟೇಷನ್ ಕಷ್ಟವಾಗುತ್ತದೆ. ಏಕೆಂದರೆ ಅವಶ್ಯಕತೆ ಇದ್ದಾಗ ಮಾಡಬೇಕಾಗುತ್ತದೆ. ಅದೊಂದನ್ನೇ ಡಿಡಿಪಿಐ ನವರು ಇಲ್ಲಿಗೆ ತೆಗೆದುಕೊಂಡು ಬರುವುದಿಲ್ಲ. ಅವಶ್ಯಕತೆ ಇದ್ದಾಗ ನಾನು ಹೇಳುತ್ತೇನೆ. ಬಂದ ತಕ್ಷಣ ಇಲ್ಲಿ ಸಿಗುವುದಿಲ್ಲ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನೀವೇನು ಜವಾಬ್ದಾರಿಯಿಂದ ಮಾಡಬೇಕೆಂದು ಹೇಳುತ್ತೀರಿ ಇದೇ ಜವಾಬ್ದಾರಿ ಆ ಡಿಡಿಪಿಐಗಳಿಗೂ ಇರಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ : ಡೆಪ್ಯುಟೇಷನ್ ಮಾಡುವ ಉದ್ದೇಶವೇನೆಂದರೆ ತಕ್ಷಣ ಪರಿಹಾರ ಕಂಡುಕೊಳ್ಳುವುದಕ್ಕೋಸ್ಕರ ಮಾಡುತ್ತೇವೆ. ಇದು ಡ್ಯೂಪ್ಲಿಕೇಷನ್ ಆಗುತ್ತದೆ. You are not going to trust your own DDPI? He is also an officer. What is our concept? ನಮ್ಮ ಕಾನ್‌ಸೆಪ್ಟ್ ಏನು ಎಂದರೆ ಡೀ ಸೆಂಟ್ರಲೈಸೇಷನ್ ಆಫ್ ಪವರ್. You are again advocating concentration of power. I think, it holds water. It appears that it is the common opinion of the House.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದೊಂದು ವರ್ಷ ವೇಟ್ ಮಾಡಿ ನೋಡಿ. ನಾನು ಹೇಳುತ್ತೇನೆ ಕೇಳಿ. ಆಡಳಿತ ಮಾಡುವಾಗ ಕೆಲವು ನ್ಯೂನತೆಗಳೇನು ಬರುತ್ತವೆ ಅವುಗಳನ್ನು ಸರಿಪಡಿಸಬೇಕೆಂದು ಯೋಚನೆ ಮಾಡಿ ಇದನ್ನು ಮಾಡಿರತಕ್ಕಂಥಾದ್ದು. ಬೇರೆ ಯಾವುದೇ ಕೆಟ್ಟ ಉದ್ದೇಶದಿಂದ ಅಲ್ಲ.

್ರೀ ಎಸ್. ಶಿವಪ್ಪ : ಡಿಡಿಪಿ ಲೋಕಲ್ ಅಧಿಕಾಗಳು ಅವರಿಗೆ ಕೊಟ್ಟರೆ ಏನಾಗುತ್ತದೆಂದರೆ liate relief will be secured.

್ರೀ ಎಲ್.ಆರ್. ಶಿವರಾಮೇಗೌಡ : ಡಿಡಿಪಿಐ ಗಳಿಗೆ ಕೊಡುವುದೇ ಸೂಕ್ತವಾದ ವಿಚಾರ.

್ರೀ ಹೆಚ್.ಜಿ. ಗೋವಿಂದೇಗೌಡ : ಡಿಡಿಪಿಐ ಗಳಿಂದ ಯಾವುದೇ ರೀತಿಯಿಂದ ತೊಂದರೆ ರ ಹಾಗೆ ಈ ಕೆಲಸ ನಿರ್ವಹಣೆ ಮಾಡತಕ್ಕಂತಹ ಜವಾಬ್ದಾರಿಯಿಂದ ನಾನು ಕೆಲಸ ತ್ತಿದ್ದೇನೆ.

್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹೌಸ್ ಓಪೀನಿಯನ್ ಎಂದು ತಾವು ಹೇಳುತ್ತಾರೆ. ಇದು ?? ಅವರು ನನ್ನ ಒಪೀನಿಯನ್ ಎಂದು ಹೇಳಬೇಕು.

್ರೀ ಎಸ್. ಶಿವಪ್ಪ : ಸಬ್ಜೆಕ್ಟ್ ಟು ಕರೆಕ್ಷನ್, I think, you will all support me for this ie cause ಎಂದು ನಾನು ಮಾತನಾಡಿದೆ.

್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನೇನು ಹೇಳುವುದು ಎಂದರೆ, you cannot take it d everybody with you. ಮಾನ್ಯ ಮುಖ್ಯ ಮಂತ್ರಿಗಳು ನಿಮಗೆ ಗ್ರ್ಯಾಂಟೆಡ್ ಎಂದು ಂಡಿದ್ದಾರೆ. Shivappa will be always with me ಎಂದು. ಹಾಗೇ ನೀವು ನಮ್ಮ ರುಲ್ಲಿ ಇದ್ದೇವೆಂದು ಹೇಳಿ ಹಾಗೆ ಎಲ್ಲರಿಗೂ ಕೌಂಟ್ ಮಾಡಲಿಕ್ಕೆ ಬರುವುದಿಲ್ಲ.

್ರೀ ಎಸ್. ಶಿವಪ್ಪ : ಒಳ್ಳೆಯ ಕಾಸ್‌ಗೆ ನೀವೆಲ್ಲಾ ನಮ್ಮ ಜೊತೆಯಲ್ಲಿದ್ದೀರೆಂಬುದು ನಮ್ಮ . ಆ ಕಾಸ್‌ಗೂ ವಿರೋಧ ಮಾಡುತ್ತೇವೆಂದು ಹೇಳಿದರೆ ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ.

್ರೀ ಹೆಚ್.ಜಿ. ಗೋವಿಂದೇಗೌಡ : ಆಡಳಿತದಲ್ಲಿ ಸುಧಾರಣೆ ತರುವುದನ್ನು ಮಾಡಬೇಕಾಗುತ್ತದೆ. ರ ವಿಕೇಂದ್ರೀಕರಣವನ್ನು ನಾವು ಬಂದ ತಕ್ಷಣವೇ ಮಾಡಿದ್ದೇವೆ. ಅಧಿಕಾರ ವಿಕೇಂದ್ರಿಕರಣ ವುದನ್ನು ನಾವು ಒಪ್ಪಿಕೊಂಡವರು ತಾನೇ ಅದ್ದರಿಂದ ಅದರಲ್ಲಿ ವಿರೋಧವಾಗಿರತಕ್ಕಂತಹ ಇಲ್ಲ. ತಡವಾಗದ ರೀತಿಯಲ್ಲಿ ಕೆಲಸ ಮಾಡತಕ್ಕಂತಹ ಜವಾಬ್ದಾರಿಯನ್ನು ನಾನು ಳ್ಳುತ್ತೇನೆ ಅದರಲ್ಲಿ ಏನೂ ತೊಂದರೆಯಾಗುವುದಿಲ್ಲ. ಡಿಡಿಪಿಐ ಗಳು ಬಂದ ಕೂಡಲೇ ದಿವಸದಲ್ಲಿ ಇದರ ಕಡೆಗೆ ಗಮನ ಕೊಡುತ್ತೇನೆ. ತಾವು ಪೀಸ್ ಮೀಲ್ ಮಾಡಕೂಡದೆಂದು ರಿ. ಎಲ್ಲಿ ಅವಶ್ಯಕತೆ ಇದೆ ಅದನ್ನೆಲ್ಲಾ ಒಂದೇ ಸಾರಿ ಇಡೀ ಜಿಲ್ಲೆಯ ವ್ಯಾಪ್ತಿಯಲ್ಲಿನ ಎಲ್ಲಾ ಕುಗಳಲ್ಲಿ ಎಲ್ಲಿ ಅವಶ್ಯಕತೆ ಇದೆ ಅದನ್ನೆಲ್ಲಾ ಪಟ್ಟಿ ಮಾಡಿ ತರಿಸುತ್ತೇವೆ.

್ರೀ ಎಲ್.ಆರ್. ಶಿವರಾಮೇಗೌಡ : ಖಾಸಗೀ ಶಾಲೆಗಳನ್ನೆಲ್ಲಾ ನೀವು ಬಿಇಓ ಗಳಿಗೆ ಕೊಡುವುದು ಡಿಡಿಪಿಐ ಗಳಿಗೆ ಅಲ್ಲ.

್ರೀ ಹೆಚ್.ಜಿ. ಗೋವಿಂದೇಗೌಡ : ಅದೆಲ್ಲಾ ನನಗೆ ಗೊತ್ತಿದೆ. ಅವರ ಅಭಿಪ್ರಾಯವನ್ನು ಸಂತೋಷದಿಂದ ಸ್ವೀಕಾರ ಮಾಡುತ್ತೇನೆ. ನಾನೇನು ಮಾಡಬೇಕೆಂದು ಯೋಚನೆ ಮಾಡಿಯೇ

ಕೆಲಸ ಮಾಡುತ್ತೇನೆ. ಇಷ್ಟು ಹೇಳಿ ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಅ
ಪುಸ್ತಕಗಳನ್ನು ನಾನು ಎಲ್ಲಾ ಕೊಟ್ಟಿದ್ದೇವೆ. ಏನೇನು ಮಾಡುತ್ತೇವೆ ಎಂಬುದನ್ನು ತಾವು ನಿ
ನೋಡಬಹುದು. ತುಂಬಾ ಉಪಯುಕ್ತವಾದ ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ನನಗೂ
ಹೆಚ್ಚು ಉಪಯೋಗವಾಗಿದೆ ಎಂದು ತಿಳಿದಿದ್ದೇನೆ. ಇದರಲ್ಲಿ ಯಾವುದನ್ನು ಕಾರ್ಯರೂಪಕ್ಕೆ
ಅದನ್ನು ತರುವುದಕ್ಕೆ ನಿಜವಾಗಿಯೂ ಪ್ರಯತ್ನ ಪಡುತ್ತೇನೆಂದು ಹೇಳಿ ನನಗೆ ಅವಕಾ
ಉಪಾಧ್ಯಕ್ಷರಿಗೆ ವಂದಿಸಿ ಈ ಬಡ್ಜೆಟ್ ಅನ್ನು ಪಾಸ್ ಮಾಡಿಕೊಡಬೇಕೆಂದು ವಿನಂತಿಸು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಒಂದೇ ಒಂದು ಕ್ಲಾರಿಫಿಕೇಷನ್ ಕೆ
ಎಲ್ಲವನ್ನೂ ಬರೆದುಕೊಂಡು ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರಗಳನ್ನು ಕೊ
ಕೇಳದೇ ಇರುವುದಕ್ಕೂ ಕೂಡ ಅವರು ಪ್ರಿಂಟೆಡ್ ಸ್ಪೀಚ್ ಅನ್ನೂ ಕೂಡ ಕೊಟ್ಟಿದ್ದಾರೆ
ವಿಚಾರಗಳ ಬಗ್ಗೆ ಸ್ಪಷ್ಟವಾಗಿ ಆಶ್ವಾಸನೆ ಕೊಡಲಿಲ್ಲ. ಕಂಪಲ್ಸರಿ ಶಿಕ್ಷಣ ಆ್ಯಕ್ಟ್ ಇದು 19
ಜಾರಿಯಲ್ಲಿ ಇದೆ. ಆದರೆ ಇದಕ್ಕೆ ರೂಲ್ಸ್ ಫ್ರೇಮ್ ಮಾಡಿಲ್ಲವೆಂದು ಅದು ಹಾಗೇ
ಇತ್ತೀಚೆಗೆ ಪುನಃ ಎಜ್ಯುಕೇಷನ್ ಆ್ಯಕ್ಟ್ ಎಂದು ತಾವು ಮಾಡುತ್ತಿದ್ದೀರಿ. ಅದರ ಪ್ರಕಾರ
ಫ್ರೇಮ್ ಮಾಡಬೇಕಾಗುತ್ತದೆ. ರೂಲ್ಸ್ ಫ್ರೇಮ್ ಮಾಡದೇ ಕ್ರಮ ತೆಗೆದುಕೊಳ್ಳಲಿಕ್ಕೆ ಬ
ಕಂಪಲ್ಸರಿ ಎಜ್ಯುಕೇಷನ್ ಆ್ಯಕ್ಟ್ ಕೆಳಗೆ ಯಾವಾಗ ರೂಲ್ಸ್ ಫ್ರೇಮ್ ಮಾಡುತ್ತೀರಿ ಅದನ್ನು ಎ
ಜಾರಿಯಲ್ಲಿ ಕೊಡುತ್ತೀರಿ? ಅದಕ್ಕೇನಾದರೂ ದಿನಾಂಕವನ್ನು ನಿಗದಿ ಮಾಡಿ ಇಂತಹ ದಿನಾ
ಜಾರಿಯಲ್ಲಿ ಬರುತ್ತದೆ ಪೇರೆಂಟ್ಸ್ ತಮ್ಮ ಮಕ್ಕಳನ್ನು ಶಾಲೆಗೆ ಹಾಕದಿದ್ದರೆ ಶಿಕ್ಷೆ ಕೊಡು
ಏನಾದರೂ ಅನೌನ್ಸ್ ಮಾಡುತ್ತೀರೋ ಹೇಗೆ ಎಂಬುದನ್ನು ಹೇಳಬೇಕು. ಎಸ್‌ಸಿ ಹಾಗ
ಮ್ಯಾನೇಜ್‌ಮೆಂಟ್‌ನವರು ಸುಮಾರು 5-6 ವರ್ಷದಿಂದ ಕೇಳಿಕೊಂಡಿದ್ದಾರೆ. ನಮಗೆ ಪ್ರಾರಂಭ
ಗ್ರ್ಯಾಂಟ್ಸ್ ಕೊಡಬೇಕೆಂದು ಎಜ್ಯುಕೇಷನ್ ರೂಲ್ಸ್‌ನಲ್ಲೇ ಹಿಂದೆ ಅಮೆಂಡ್‌ಮೆಂಟ್ ಮಾ
ನಡೆಸತಕ್ಕಂತಹ ಸಂಸ್ಥೆಗಳಿಗೆ ಅನುಕೂಲವಾಗಲಿ ಎಂದು ಇದನ್ನು ಮಾಡಿದ್ದಾರೆ. ಏಕೆಂದರೆ
ಕೆಟಗರಿ ಸಂಸ್ಥೆಗಳಿಗೆ 7 ವರ್ಷವೆಂದು ಇದೆ. ಇವರಿಗೆ ಬಿಗಿನಿಂಗ್‌ನಿಂದ ಎಂದು ಇದೆ. ಕಾರಣಾಂ
1994ರಲ್ಲಿ ನಮ್ಮ ಸರಕಾರವಿದ್ದಾಗ ಕೊನೆ ಕೊನೆಯಲ್ಲಿ ಹೆಚ್ಚಿಗೆ ಕೆಲವು ಪ್ರೈಮರಿ ಶಾಲೆಗಳನ್
ಕಾಲೇಜುಗಳನ್ನು ಕೊಡುವುದಕ್ಕೆ ಹೋಗಿ ಅದು ನೋ ಗ್ರ್ಯಾಂಟ್ ಎಂದು ಮಾಡಿದರು. ಅದ
ಮುಂದುವರಿಸಿಕೊಂಡು ಬಂದಿರಿ. ಕನಿಷ್ಟ ಎರಡು ಆಪ್‌ಷನ್ ಇದೆ. ರೂಲ್ಸ್ ಪ್ರಕಾರ ಅದ
ಕೊಡಲೇ ಬೇಕು, ನೀವೇನೂ ರೂಲ್ಸ್ ಅನ್ನು ಅಮೆಂಡ್ ಮಾಡಿಲ್ಲ. ಜನರಲ್ ರೂಲ್ಸ್ ಪ್ರಕಾರ
7 ವರ್ಷ ಇತ್ತು. ಹಾಗಾದರೂ ಅವರು ಏಡೆಡ್ ಕೇಟಗರಿಯಲ್ಲಿ ಬರುತ್ತಾರೆ. ಮತ್ತು ಯಾ
ಇಲ್ಲ, ಅದನ್ನು ಕ್ಲೋಸ್ ಮಾಡಿ. ಯಾರು ಫ್ರಾಡ್ ಮಾಡಿದ್ದಾರೆ ಅವರನ್ನು ಪ್ರಾಸಿಕ್ಯೂಟ್
ಆದರೆ ನ್ಯಾಯವಾಗಿ ನಡೆಸತಕ್ಕಂತಹವರಿಗೆ ಅನ್ಯಾಯ ಮಾಡಬೇಡಿ. ನೀವು ಯಾವಾಗಲೂ ಅ
ಪರ ಮಾತನಾಡುತ್ತೀರಿ, ನ್ಯಾಯವಾಗಿರತಕ್ಕಂತಹವರಿಗೆ ನ್ಯಾಯವಾಗಿ ನಡೆಸತಕ್ಕಂತಹವರಿಗೆ
ಮಾಡಬೇಡಿ. ಅವರಿಗೆ ಸಹಾಯ ಮಾಡಿ, ಆದರೆ ಫ್ರಾಡ್ ಮಾಡತಕ್ಕಂತಹವರನ್ನು ಜೈಲಿ
ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇವೆರಡನ್ನೂ ತಾವು ಯಾವಾಗ ಮಾಡುತ್ತೀರಿ ಎ
ಹೇಳಬೇಕು.

ೀ ಹೆಚ್.ಜಿ. ಗೋವಿಂದೇಗೌಡ : ಕಂಪಲ್ಸರಿ ಶಿಕ್ಷಣದ ಬಗ್ಗೆ ತಾವು ಹೇಳಿದಿರಿ. ಕೇಂದ್ರದವರು ೇಶವಾದ್ಯಂತ ಪ್ರತಿ ರಾಜ್ಯಗಳಲ್ಲೂ ಕಂಪಲ್ಸರಿ ಶಿಕ್ಷಣ ಜಾರಿಗೆ ತರಬೇಕೆಂಬ ದೃಷ್ಟಿಯಿಂದ ಕ್ರಮವನ್ನು ಕೈಗೊಳ್ಳುತ್ತಿದ್ದಾರೆ. 60 ರಿಂದ ಇದು ಜಾರಿಗೆ ಬರಬೇಕಾಗಿತ್ತು. ಅದು ಬಂದಿಲ್ಲ. ು ಸಹ ಹಿಂದೆ ಬಂದಿಲ್ಲವೆಂದು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಅದು ಜಾರಿಗೆ ಾಗುತ್ತದೆ. ಇದರ ಬಗ್ಗೆ ಏನು ಮಾಡಬೇಕು ಹೇಗೆ ಎಂಬ ಬಗ್ಗೆ ಯೋಚನೆ ಮಾಡುತ್ತೇವೆ. ಸರಕಾರದವರು ಕಾರ್ಯಕ್ರಮ ಕೈಗೊಂಡಿದ್ದರಿಂದ ಅವರು ಯಾವ ರೀತಿ ಅಭಿಪ್ರಾಯ ರೆಂದು ನೋಡಿಕೊಂಡು ನಾವು ಇದನ್ನು ಆದಷ್ಟು ಜಾಗ್ರತೆ ಏನು ಮಾಡುವುದಕ್ಕೆ ಸಾಧ್ಯವೋ ಮಾಡುತ್ತೇವೆ.

ೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಸಬ್ಜೆಕ್ಟ್ ನಿಮ್ಮದು. 22 ವರ್ಷದ ಹಿಂದೆ ನಾನು ು ಹಾಗು ಸೆಕೆಂಡರಿ ಶಿಕ್ಷಣದ ಮಂತ್ರಿಯಾಗಿದ್ದೆ. ಆಗ ನಾನು ಪ್ರಯತ್ನ ಮಾಡಿದ್ದೆ. ಆಗ ್ನಿ ಇದ್ದ ಕಾರಣ ಇದನ್ನು ಮಾಡುವುದಕ್ಕೆ ಹೋದರೆ ತೊಂದರೆಯಾಗುತ್ತದೆಂದು ನಮ್ಮ ಒತ್ತಡ ತಂದುದಕ್ಕಾಗಿ ಡ್ರಾಪ್ಟ್ ಆಯಿತು. ಡೈರೆಕ್ಟೀವ್ ಪ್ರಿನ್ಸಿಪಲ್ ಅನ್ನು ನೀವು ಇಂಪ್ಲಿಮೆಂಟ್ ರ ಹಾಗಾಗುತ್ತದೆ. ಈಗಾಗಲೇ ಈ ಯೋಜನೆ ಸಾಕ್ಷರತ ಯೋಜನೆ ಕೆಳಗೆ ಕೋಟ್ಯಾಂತರ ಯಿ ಖರ್ಚು ಮಾಡುತ್ತೇವೆ. ಅದರ ಸಂಬಂಧವಾಗಿ ಕಂಪಲ್ಸರಿ ಎಜ್ಯುಕೇಷನ್ಸ್‌ಗೆ ಪೇರೆಂಟ್ಸ್ ಒತ್ತಾಯ ಮಾಡಬೇಕು. ಹೆದರಿಕೊಂಡು ಬೆದರಿಕೊಂಡು ಏನಾದರೂ ಮಾಡಿ ಸುತ್ತಾರೆಂಬುದು ನನ್ನ ಅಭಿಪ್ರಾಯ. ಇದಕ್ಕೆ ಯಾವುದು, ಅಡ್ಡಬರುವುದಿಲ್ಲ. ಕನ್‌ಕರೆನ್ಸ್ ಲಿಸ್ಟ್‌ನಲ್ಲಿ ೇಷನ್ ಬಂದಕಾರಣ ನಾವು ಫಾರ್ಮಲ್ ಆಗಿ ಅವರ ಅಪ್ರೂವಲ್ ತೆಗೆದುಕೊಳ್ಳಬೇಕೇ ಾಗಿ ಬಾಕಿಯದ್ದು ಅಡ್ಡ ಬರುವ ಪ್ರಶ್ನೆಯೇ ಇಲ್ಲ. ನಿಮಗೆ ಎಕ್ಸ್‌ಕ್ಲೂಸೀವ್ ರೈಟ್ ಇದೆ. ನಮ್ಮ ನಲ್ಲಿ ಅದನ್ನು ಇಂಪ್ಲಿಮೆಂಟ್ ಮಾಡಬಹುದು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಅನುದಾನ ರಹಿತ ಶಾಲೆಗಳನ್ನು ಜಾಗ್ರತೆಯಾಗಿ ಸೇರಿಸಿ ಎಂದು ಕೇಳುತ್ತಿದ್ದಾರೆ. ಇದು ಅವಶ್ಯಕತೆ ಇದೆ ಎಂದು ಎಲ್ಲರಿಗೂ ೆ. ಅದಕ್ಕೋಸ್ಕರವೇ ಕ್ಯಾಬಿನೆಟ್‌ನಲ್ಲಿ ಒಂದು ಉಪಸಮಿತಿಯನ್ನು ಮಾಡಿದ್ದೇವೆ. ಯಾವುದು ಕವಾಗಿ ನಡೆಯುತ್ತಾ ಇದೆ, ಯಾರಿಗೆ ತೊಂದರೆಯಾಗಿದೆ, ಚೆನ್ನಾಗಿ ನಡೆಸುವ ಶಾಲೆಗಳು ಎಂದು ಈಗಾಗಲೇ ನೋಡಿ ಅದರ ಲಿಸ್ಟ್ ತರಿಸಿಕೊಂಡು ಉಪಸಮಿತಿಯಲ್ಲಿ ಇದರ ಬಗ್ಗೆ ್ನ ಮಾಡುತ್ತೇವೆ. ಉಪಸಮಿತಿ ರಚನೆಯಾಗಿದೆ. ಈ ಉಪಸಮಿತಿಯ ಅಧ್ಯಕ್ಷರು ನಮ್ಮ ್ಸ್ ಮಿನಿಸ್ಟರೇ ಇದ್ದಾರೆ. ಉಪಸಮಿತಿಯಲ್ಲಿ ಎರಡು - ಮೂರು ಮೀಟಿಂಗ್ ಆಗಿದೆ. ಅದರ ್ಯವಸ್ಥೆ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೇ, ನಮ್ಮ ಕುಮಾರಸ್ವಾಮಿಯವರು ಒಂದು ನ್ನು ಹೇಳಿದರು, ಒಂದು ಕಡೆ ಬಿಇಓ, ಎ.ಇ.ಓ. ಇಬ್ಬರು ಇರಬಾರದು, ಹೆಡ್‌ಮಾಸ್ಟರ್‌ನ್ನು ೇಕು ಎಂದು. ನಾವು ಮಂತ್ರಿಯವರ ಹತ್ತಿರ ಕ್ಲಾರಿಫೈ ಮಾಡಿದೆವು. ನಮಗೆ ಎ.ಇ.ಓ. ಪೋಸ್ಟ್

ಬೇಕು ಎಂದು ಅವತ್ತು ನಮ್ಮ ಮಂತ್ರಿಯವರು ಏನು ಹೇಳಿದರು ಎಂದರೆ ಬಿ.ಇ.ಓ. ಕೊಡ ಎ.ಇ.ಓ. ಇದ್ದರೆ ಕೊಡುವುದಿಲ್ಲ ಎಂದು ಹೇಳಿದರು. ಸಧ್ಯಕ್ಕೆ ಅದನ್ನು ಸ್ಟಾಪ್ ಮಾಡಿದ್ದೇವೆ ಎ ಮತ್ತೆ ನಮ್ಮ ಕಡೆ ಬರುವುದಕ್ಕೆ ಎ.ಇ.ಓ. ಅವರು ಕೇಳುತ್ತಿದ್ದಾರೆ. ಆ ಜನರಿಗೆ ಏನು ಉತ್ತರ ಹೇಳ ಮಂತ್ರಿಗಳು ಹೇಳಿದ್ದಾರೆ, ಎ.ಇ.ಓ. ತೆಗೆದಿದ್ದಾರೆ ಎಂದು. ಮುಳುಬಾಗಿಲಿನ ಕಡೆಯಿಂದ ಬಂದು ನನ್ನ ಹತ್ತಿರ ನಿಮ್ಮೂರಿಗೆ ಎ.ಇ.ಓ. ಆಗಿ ಬರುತ್ತೇನೆ ಎನ್ನುತ್ತಾನೆ. ನಾವು ಜನರಿ ಹೇಳುವುದು? In what way I should be answerable? You should clarify clearly in this House as to whether you are admitting this AEO post o ಸಧ್ಯಕ್ಕೆ ಖಾಲಿ ಇರುವ ಹುದ್ದೆಗಳನ್ನು ತಾವು ಫಿಲಪ್ ಮಾಡುತ್ತೀರೋ ಇಲ್ಲವೇ ಎಂಬುದನ್ನು ಹೇ Therefore, you should convince me here to-day.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಎ.ಇ.ಓ. ಪೋಸ್ಟ್ ಹೇಳಿದೆ. ಬಿ.ಇ.ಓ. ಎ.ಇ.ಓ. ಅವಶ್ಯಕತೆ ಇಲ್ಲ ಎಂದು ಹೇಳಿ ನನಗೂ ಗೊತ್ತಿದೆ. ನಿಮಗೂ ಗ ಉಪಸಮಿತಿಯಲ್ಲಿ ಅದರ ಬಗ್ಗೆ ಎರಡು-ಮೂರು ಮೀಟಿಂಗ್‌ಗಳು ಆಗಿವೆ. ಅನೇಕ ಇಲಾಖ ಮುಚ್ಚಬೇಕು ಎಂದು ಇದೆ. ಬರೀ ಎ.ಇ.ಓ. ಮಾತ್ರ ಅಲ್ಲ. ರೆವಿನ್ಯೂ ಇಲಾಖೆಯ ಲೋಕೋಪಯೋಗಿ ಇಲಾಖೆಯಲ್ಲೂ ಇದೆ, ಹಣಕಾಸು ಇಲಾಖೆಯಲ್ಲೂ ಇದೆ, ಪಂಚಾಯತಿಯಲ್ಲೂ ಇದೆ, ಅನೇಕ ಇಲಾಖೆಯ ಅಧಿಕಾರಿಗಳನ್ನು ವಾಪಸ್ ತೆಗೆದುಕೊಳ್ಳ ಬೇಕಾಗಿಲ್ಲ ಎನ್ನುವುದರಲ್ಲಿ ಎ.ಇ.ಓ. ಒಂದು ಇದೆ. ಅದನ್ನು ನಾನು ನೋಡಿ ಸ್ನೇಹಿತರಿಗೆ ಎ.ಇ.ಓ. ಪೋಸ್ಟ್ ಬಗ್ಗೆ ಸಧ್ಯದಲ್ಲಿಯೇ ಬರಬಹುದು. ಮೂರು ಮೀಟಿಂಗ್ ಆಯಿತು. ಮೀಟಿಂಗ್ ಆಯಿತು. ಇನ್ನೂ ಒಂದು ಅಭಿಪ್ರಾಯಕ್ಕೆ ಬಂದಿಲ್ಲ. ಇದರ ಬಗ್ಗೆ ಯೋಚನೆ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಇದು ಇಂಡಿವಿಜುಯಲ್ ಪ್ರಶ್ನೆ. ನಾವು ಈಗ ಮಾತನಾಡ ಜನಸಾಮೂಹಿಕವಾಗಿ ಏನು ಆಗಬೇಕು, ಎಂದು ಪಾಲಿಸಿ ಮ್ಯಾಟರ್‌ನಲ್ಲಿ ನಾವು ಮಾಡುತ್ತಿರುವುದು.

SRI S. RAJENDRAN : It is not an individual question. It is a ge one. Even now there is a vacancy of AEO's post. Whether you are filling up or not? Whether you are stopping?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅವಶ್ಯಕತೆ ಇದ್ದರೆ ಅದನ್ನು ಮಾಡೋಣ. ವಿರೋಧ ಮಾಡಬೇಕೆಂದೇನೂ ಇಲ್ಲ.

ಉಪಾಧ್ಯಕ್ಷರು : ರಾಜೇಂದ್ರನ್‌ರವರೇ, ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಕ್ಯಾ ಉಪಸಮಿತಿ ಮುಂದೆ ಮೂರು ಸಭೆಗಳು ಆಗಿವೆ ಎಂದು.

SRI. S. RAJENDRAN : That means you are interested in picking a p and posting him.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹಿರಿಯರು ಇದ್ದೀರಿ. ಅವರ ಪಾಯಿಂಟನ್ನು ದಯಮಾಡಿ ಅರ್ಥಮಾಡಿಕೊಳ್ಳಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಕೆಲವು ಕಡೆ ಬಿ.ಇ.ಓ. ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಮೊದಲನೆಯದು ಎ.ಇ.ಓ. ಇದ್ದಕಡೆ ಅದು ಯಾರು ಪೂಣ್ಯಾತ್ಮರು ಸಲಹೆ ಕೊಟ್ಟರೋ ಬಿ.ಇ.ಓ. ಎಂದು ಹೆಸರು ಮಾಡಿ ಒಬ್ಬರನ್ನು ಹಾಕಿದಿರಿ. ನಮಗೆ ಒಂದು ಪೋಸ್ಟ್ ಸಾಕು. ನನ್ನ ಸ್ಪಷ್ಟವಾದ ಅಭಿಪ್ರಾಯ. ನಾನು ಹೇಳುವುದು ಈಗ ಎ.ಇ.ಓ. ನಮ್ಮಲ್ಲಿದ್ದಾರೆ. ಬಹುತೇಕ ಕಡೆ ಎಇಓ, ಬಿ.ಇ.ಓ. ಇಬ್ಬರೂ ಇದ್ದಾರೆ. ಅವರ ಕ್ಷೇತ್ರಕ್ಕೆ ಮಾತ್ರ ಎ.ಇ.ಓ. ಇಲ್ಲ. ಆ ರೀತಿ ಕೆಲವು ಕಡೆ ಇಲ್ಲ. ಒಂದು ಸಾರಿ ಎಲ್ಲಾ ಕಡೆ ಎ.ಇ.ಓ. ಭರ್ತಿ ಮಾಡಿ ಇಲ್ಲದಿದ್ದರೆ ಎಲ್ಲಾ ಕಡೆ ಎ.ಇ.ಓ.ಗಳನ್ನು ಕಿತ್ತೊಗೆದು ಬೇರೆ ಕಡೆ ಅವರನ್ನು ಅಕಾಮಡೇಟ್ ಮಾಡಿ ಕೆಲಸ ತೆಗೆದುಕೊಳ್ಳಿ. ಅವರು ಏನು ಹೇಳುತ್ತಿದ್ದಾರೆ ಎಂದರೆ ಬಹುತೇಕ ಕಡೆ ಎ.ಇ.ಓ. ಇದ್ದಾರೆ, ನನ್ನೊಬ್ಬನಿಗೆ ಏತಕ್ಕೆ ಕಾಡಿಸುತ್ತೀರಿ? ನನಗೂ ಕೊಡಿ ಎಂದು ಕೇಳುತ್ತಿರುವುದು. ನೀವು ಪಾಲಿಸಿ ಡಿಸಿಷನ್ ತೆಗೆದುಕೊಂಡಾಗ ಒಬ್ಬನನ್ನೇ ಇಟ್ಟುಕೊಳ್ಳಿ. ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಹಲವಾರು ಕಡೆ ಖಾಲಿ ಇದೇ ಅವರಿಗೆ ಅವಶ್ಯಕತೆ ಇದೆ ಎಂದು ಹೇಳುವುದಾದರೆ ಬೇಡ ಎನ್ನುವುದಿಲ್ಲ. ಅವರಿಗೆ ವೈಯಕ್ತಿಕವಾಗಿ ಬೇಡ ಎನ್ನುವ ಪ್ರಶ್ನೆಯಲ್ಲ ಇದು. ಹಲವಾರು ಕಡೆ ಎ.ಇ.ಓ. ಪೋಸ್ಟ್ ಖಾಲಿ ಇದೆ. ಅದೇ ರೀತಿ ಅವರಿಗೂ ಇದೆ. ನೀವು ನಿಜವಾಗಿ ಅವಶ್ಯಕತೆ ಇದೆ ಎನ್ನುವುದಾದರೆ ಕೊಡೋಣ. ಅದರಲ್ಲೇನೂ ತಪ್ಪಿಲ್ಲ.

ಶ್ರೀ ಹೆಚ್. ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರ ಪ್ರಕಾರ 1997-98ರಲ್ಲಿ 177 ಖಾಸಗಿ ಪ್ರೌಢಶಾಲೆಗಳನ್ನು ಕೊಟ್ಟಿದ್ದಾರೆ.. 96-97ರಲ್ಲಿ 266 ಖಾಸಗಿ ಪ್ರೌಢಶಾಲೆಗಳನ್ನು ಕೊಟ್ಟಿದ್ದಾರೆ. ತಮಗೆ ಹೇಳುವುದಾದರೆ, ಒಂದು ಫರ್ಲಾಂಗ್ ರೇಡಿಯಸ್‌ನಲ್ಲಿ ನಮ್ಮ ಹಾಸನ ನಗರದಲ್ಲಿ 9 ಖಾಸಗಿ ಪ್ರೌಢಶಾಲೆಗಳು ಇವೆ. ಒಂದು ಫರ್ಲಾಂಗ್ ರೇಡಿಯಸ್‌ನಲ್ಲಿ 9 ಪ್ರೌಢಶಾಲೆಗಳು. ನಮ್ಮ ಬೇಲೂರು ಪಟ್ಟಣದಲ್ಲಿ ಎರಡು ಫರ್ಲಾಂಗ್ ರೇಡಿಯಸ್‌ನಲ್ಲಿ 6 ಖಾಸಗಿ ಪ್ರೌಢಶಾಲೆಗಳಿವೆ. 50-60 ಸ್ಟ್ರೆಂಥ್ ಇರುವಂಥ ಕಡೆಗೆ ಇವತ್ತು ತಾವು ಪರ್ಮಿಷನ್ ಕೊಟ್ಟಿರುವುದರಿಂದ 15-20ಕ್ಕೆ ಇಳಿದಿವೆ. ದಯಮಾಡಿ ಯಾವ ಮಾನದಂಡ, ಯಾವ ಆಧಾರದಮೇಲೆ ಏತಕ್ಕೆ ಈ ರೀತಿ ಖಾಸಗಿ ಶಾಲೆಗಳನ್ನು ಮಂಜೂರು ಮಾಡುತ್ತೀರಿ ಎಂಬುದು ಅರ್ಥವಾಗುವುದಿಲ್ಲ. ಎರಡನೆಯದು ತಾವೇನು 200 ಕೋಟಿ ರೂಪಾಯಿ ಅನುದಾನರಹಿತ ಶಾಲೆಗಳಿಗೆ ಅನುದಾನ ಕೊಡುವುದಕ್ಕೆಂದು ಹೇಳುತ್ತೀರ, ಇದು ಏಕ್ಸಾಗರೇಟೆಡ್ ಸ್ಟಾಟಿಸ್ಟಿಕ್ಸ್. 200 ಕೋಟಿ ರೂಪಾಯಿ ಬೇಕಾಗಿಲ್ಲ. ಬಹುಶಃ ತಮಗೆ ಇಲಾಖೆಯವರು ತಪ್ಪಾಗಿ ಮಾಹಿತಿ ಕೊಟ್ಟಿದ್ದಾರೆ. 50 ಕೋಟಿ ರೂಪಾಯಿ ಮೇಲೆ ಬೇಕಾಗುವುದಿಲ್ಲ. ತಾವು ಇಡೀ ರಾಜ್ಯದ್ದೇ ಲೆಕ್ಕಹಾಕಿ. ಎಷ್ಟು ಕೋಟಿ ಕೊಡುತ್ತಿದ್ದೀರಿ ತಾವು. 200 ಕೋಟಿ ಎನ್ನುವುದು ಸುಳ್ಳು. ಅದನ್ನು ದಯಮಾಡಿ ಪರಿಗಣಿಸಬೇಕು. ಆಮೇಲೆ ದೈಹಿಕ ಶಿಕ್ಷಕರನ್ನು ನೇಮಕ ಮಾಡುವಾಗ 6:1 ಏನು ಇದೆ, ಅದನ್ನು ದಯಮಾಡಿ 3:1 ಕ್ಕೆ ಇಳಿಸಿ. ದೈಹಿಕ ಶಿಕ್ಷಕನು ಈ ಪಾಠವನ್ನು ಮಾಡುತ್ತಾನೆ. ಆದರೆ ಈ ಪಾಠ ಮಾಡುವವನು ದೈಹಿಕ ಶಿಕ್ಷಣ ಪಾಠ

ಮಾಡುವುದಕ್ಕಾಗುವುದಿಲ್ಲ. ದಯಮಾಡಿ ದೈಹಿಕ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡಬೇಕು. ನಂತರ ಈ ಖಾಸಗಿ ಅನುದಾನಿತ ಶಾಲಾಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಮಕ್ಕಳಿಗೆ ಅವರು ಪ್ರವೇಶ ಕೊಡುತ್ತಿಲ್ಲ. ಒಂದು ಪರ್‌ಸೆಂಟೂ ಕೊಡುತ್ತಿಲ್ಲ. ಅದಕ್ಕೆ ನೀವೇನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ದಯಮಾಡಿ ಹೇಳಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಅನುದಾನರಹಿತ ಶಾಲೆಗಳ ಬಗ್ಗೆ ಮಾನ್ಯ ಸ್ನೇಹಿತರು ಮಾತನಾಡುವಾಗ ಹೇಳಿದ್ದಾರೆ, ನನ್ನ ಹತ್ತಿರ ಕೂಡ ಚರ್ಚೆ ಮಾಡಿದ್ದಾರೆ. ಇದರ ಸೀರಿಯಸ್‌ನೆಸ್ ಅರ್ಥಮಾಡಿಕೊಂಡು ನಾವು ಉಪಸಮಿತಿ ಮಾಡಿದ್ದೇವೆ. ಉಪಸಮಿತಿ ಮಾಡಿರುವುದು ಕ್ಯಾಬಿನೆಟ್‌ನಲ್ಲಿ. ಇಡೀ ಕ್ಯಾಬಿನೆಟ್ಟೇ ಇದರ ಬಗ್ಗೆ ಯೋಚನೆ ಮಾಡುವ ವ್ಯವಸ್ಥೆ ಇದೆ. ಇದು ಎಲ್ಲಿ ಅವಶ್ಯಕತೆ ಇದೆ ಎಂದು ಅವರು ಹೇಳಿದ್ದಾರೆ, ಈಗಾಗಲೇ 200 ಕೋಟಿ ರೂಪಾಯಿ ಬೇಡ ಎಂದು ತಾವು ಏನು ಹೇಳುತ್ತಿದ್ದೀರಿ, ರಿಪೋರ್ಟ್‌ಗಳನ್ನೆಲ್ಲಾ ತರಿಸಿಕೊಂಡಮೇಲೆ ಎಲ್ಲೆಲ್ಲಿ ಅವಶ್ಯಕತೆ ಇದೆ, ಎನ್ನುವ ರಿಪೋರ್ಟ್ ಬಂದಮೇಲೆ ಯಾವುದನ್ನು ಚನ್ನಾಗಿ ನಡೆಸುತ್ತಿದ್ದಾರೆ, ಯಾರಿಂದ ಇದರ ಉಪಯೋಗ ಆಗುತ್ತದೆ, ಇದನ್ನೆಲ್ಲಾ ನೋಡಿಕೊಂಡು ಇದರ ಬಗ್ಗೆ ಉಪಸಮಿತಿಯವರು ತೀರ್ಮಾನ ತೆಗೆದುಕೊಳ್ಳುತ್ತೇವೆ. ಎರಡನೆಯದು ಶಾಲೆಗಳನ್ನು ಮಂಜೂರು ಮಾಡುವುದು ಶಾಲೆಗಳನ್ನು ಸಾಮಾನ್ಯವಾಗ ಮಂಜೂರು ಮಾಡುವಾಗ ಕೆಲವು ಕಡೆ ನಾವು ಗೌರ್ನಮೆಂಟ್ ಶಾಲೆಗಳು ಇಲ್ಲದೇ ಇರುವ ಪ್ರದೇಶದಲ್ಲಿ ಅವರು ಅರ್ಜಿಗಳನ್ನು ತಂದುಕೊಡುತ್ತಾರೆ. ಅಲ್ಲಿ ನಾವು ಕೊಡುವುದಕ್ಕಾಗುವುದಿಲ್ಲ ಎಂದರೆ ಅವರಿಗೂ ತೊಂದರೆಯಾಗುತ್ತದಲ್ಲಾ, ಮಕ್ಕಳ ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗಬಾರದು ಎನ್ನುವ ದೃಷ್ಟಿಯಿಂದ ಕೊಟ್ಟಿದ್ದೇವೆ. ಇನ್ನು ಚುನಾಯಿತ ಪ್ರತಿನಿಧಿಗಳು ಸಹ ಅವಶ್ಯಕತೆ ಇದೆ ಎಂದು ಹೇಳಿ ಅವರು ರೆಕಮೆಂಡ್ ಮಾಡಿ ಕಳುಹಿಸುತ್ತಾರೆ. ಚುನಾಯಿತ ಪ್ರತಿನಿಧಿಗಳಿಗೂ ಗೌರವ ಕೊಟ್ಟು ಕೆಲವು ಸಂದರ್ಭಗಳಲ್ಲಿ ನಾವು ಮಾಡುತ್ತೇವೆ. ಇದೆಲ್ಲಾ ಇರುವುದರಿಂದ ಸ್ವಲ್ಪ ಗೊಂದಲವಾಗಿರಬಹುದು. ಅಷ್ಟೇ ಹೊರತು ಮತ್ತೆ ಯಾವುದೇ ಉದ್ದೇಶದಿಂದ ಒಂದು ಮೈಲಿಗೆ, ಅರ್ಧ ಕಿಲೋ ಮೀಟರ್‌ಗೆ ಕೊಡಬೇಕೆನ್ನುವ ಆಸೆ ಸರ್ಕಾರಕ್ಕಿಲ್ಲ. ಇದರಲ್ಲಿ ಆಕಸ್ಮಾತ್ ಹೆಚ್ಚುಕಡಿಮೆ ಏನಾದರೂ ಆಗಿದ್ದರೆ ದಯವಿಟ್ಟು ಹೇಳಿ. ಅದನ್ನು ಯಾವ ರೀತಿ ಸರಿಪಡಿಸಬೇಕು ಎನ್ನುವ ಬಗ್ಗೆ ಯೋಚನೆ ಮಾಡೋಣ. ಅನುದಾನಿತ ಶಾಲೆಗಳಲ್ಲಿ ರೋಸ್ಟರ್ ಸಿಸ್ಟಂನ್ನು ಫಾಲೋ ಮಾಡಬೇಕು ಎಂದು ಹೇಳಿ ಈಗಾಗಲೇ ನಾನು ಆದೇಶವನ್ನು ಕಳುಹಿಸಿದ್ದೇನೆ. ಎರಡು ಮೂರು ಕಡೆ ಶಾಲೆಗಳಲ್ಲಿ ಹೋಗಿ ನೋಡಿದಾಗ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಇದ್ದಾರೆ ಎಂದರೆ ಎರಡು ಜನ ಇದ್ದಾರೆ ಎನ್ನುತ್ತಾರೆ. ನಾವು ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಅನುದಾನ ಕೊಡುವುದು ಎಲ್ಲರಿಗೂ ಅವಕಾಶ ಕೊಡಬೇಕು. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಮಕ್ಕಳಿಗೂ ಅಲ್ಲಿ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ಮಾಡಿದ್ದೇವೆ. ಇದರ ಬಗ್ಗೆ ಈಗಾಗಲೇ ನಾವು ನೋಟೀಸ್ ಕೊಟ್ಟಿದ್ದೇವೆ. ಮತ್ತು ಎಲ್ಲಾ ಶಾಲೆಗಳಿಗೂ ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಈಗಾಗಲೇ ಅನುದಾನಿತ ಶಾಲೆಗಳಲ್ಲಿ ಈ ರಿಸಲ್ಟ್ ಮೇಲೆ ಗ್ರಾಂಟ್ ಬಿಡುಗಡೆ

ಾಡುವ ಒಂದು ಅವಕಾಶ ಇದೆ. ಇದರಿಂದ ಏನಾಗುತ್ತಿದೆ ಎಂದರೆ ಗ್ರಾಂಟ್ ಸಿಗುವುದಿಲ್ಲ ಎಂದು ಿದುಕೊಂಡು ಅಲ್ಲಿ ಸ್ವತಃ ಶಿಕ್ಷಕರೇ ಮಕ್ಕಳಿಗೆ ಕಾಪಿ ಮಾಡಿಸಿ ಪಾಸ್ ಮಾಡುವ ಉದಾಹರಣೆಯನ್ನು ಕಷ್ಟು ನಾವು ನೋಡಿತ್ತಿದ್ದೇವೆ. ಅದಕ್ಕೆ ನೀವು ಒಂದಕ್ಕೊಂದು ಕನೆಕ್ಷನ್ ಇಟ್ಟರೆ ತಪ್ಪಾಗುತ್ತದೆ. ಂದು ಕಡೆ ಏನು ಮಾಡುತ್ತೀರಿ ಎಂದರೆ ಪರೀಕ್ಷೆ ಸರಿಯಾಗಿ ನಡೆಯಬೇಕು. ಯಾವುದೇ ಕಾಪಿ ಲ್ಲಿ ನಡೆಯಬಾರದು ಎನ್ನುತ್ತೀರಿ, ಇನ್ನೊಂದು ಕಡೆ ರಿಸಲ್ಟ್ ಮೇಲೆ ತಾವು ಗ್ರಾಂಟನ್ನು ಬಿಡುಗಡೆ ಾಡುತ್ತೇವೆ ಎಂದು ಹೇಳುತ್ತೀರಿ ಇದರಿಂದ ಏನಾಗುತ್ತದೆ ಎಂದರೆ ಸ್ವತಃ ಶಿಕ್ಷಕರೇ ಕಾಪಿ ಾಡಿಸುವುದರಿಂದ ಎಷ್ಟರಮಟ್ಟಿಗೆ ಇದು ಸಮಂಜಸವಾಗುತ್ತಿದೆ, ಆದ್ದರಿಂದ ಒಂದಕ್ಕೊಂದು ಕನೆಕ್ಟ್ ಾಡಬೇಡಿ ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

4.10 ಪಿ.ಎಂ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೆ, ಎಸ್‌ಎಸ್‌ಎಲ್‌ಸಿ ಮತ್ತು ಯುಸಿಯಲ್ಲಿ ಕಾಪಿ ಹೊಡೆಯತಕ್ಕಂಥದ್ದು ಈ ರಾಜ್ಯದಲ್ಲಿ ಬಹಳ ಜಾಸ್ತಿಯಾಗಿ ನಡೆಯುತ್ತಿತ್ತು, ಂಬುದು ತಮಗೆ ಗೊತ್ತಿದೆ. ಇದರ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಕೆಲವು ಸೆನ್ಸಿಟೀವ್ ಂಟರ್ಸ್‌ಗಳನ್ನು ಗುರುತಿಸಿದ್ದು ಅಲ್ಲಿ ಅವರು ಓದುವುದಕ್ಕಿಂತ ಕಾಪಿ ಮಾಡುವುದೇ ಜಾಸ್ತಿಯಾಗಿದ್ದಂಥ ಾಲೆಗಳೇ ಬಹಳ ಜಾಸ್ತಿ ಇದ್ದವು. ಅಂಥ 160 ಸೆನ್ಸಿಟೀವ್ ಸೆಂಟರ್‌ಗಳನ್ನು ಈ ವರ್ಷ ಗುರುತಿಸಿದ್ದೇವೆ. ಷ್ಟೇ ಪ್ರತಿಷ್ಠಿತ ಸಂಸ್ಥೆಯಾಗಿದ್ದರೂ, ರೆಕಮೆಂಟ್ ಇದ್ದರೂ ಸಹ ನಾವು ಅವರಾರಿಗೂ ಸೆಂಟರ್ ೊಟ್ಟಿಲ್ಲ. ಎಲ್ಲಿ ಅನ್ಯಾಯ ಆಗಿಲ್ಲ ಎಂದು ಕಂಡುಬಂದಿದೆ ಅಂಥ ಕಡೆ ಕೊಟ್ಟಿದ್ದೇವೆ. ಉದಾಹರಣೆಗೆ ಲವು ಜಿಲ್ಲೆ ಫಲಿತಾಂಶದಲ್ಲಿ ಎರಡನೇ ಸ್ಥಾನದಲ್ಲಿದ್ದಂಥವು 20ನೇ ಸ್ಥಾನಕ್ಕೆ ಬಂದಿರತಕ್ಕಂಥದ್ದನ್ನು ಾವು ನೋಡಿದ್ದೇವೆ. ಪತ್ರಿಕೆಯಲ್ಲಿ ತಾವು ಓದಿದ್ದೀರಿ. ಏಕೆಂದರೆ ಕಠಿಣವಾದ ಕಾರ್ಯಕ್ರಮಗಳನ್ನು ಲ್ಲಿ ತೆಗೆದುಕೊಂಡಿದ್ದರಿಂದ ಈ ರೀತಿ ಅಗಿದೆ. ಮಾನ್ಯ ಸ್ನೇಹಿತರು ಇನ್ನೂ ಒಂದು ವಿಷಯವನ್ನು ೇಳಿದ್ದಾರೆ. ಅದೇನೆಂದರೆ ನಾವು ಏಡ್ ಕೊಡತಕ್ಕಂಥ ಸಂದರ್ಭದಲ್ಲಿ ಪಾಠ ಪ್ರವಚನಗಳಲ್ಲಿ ಸರಿಯಾಗಿ ೊಡಗಿಸಿಕೊಂಡು ಅವರೂ ಸಹ ಮಕ್ಕಳಿಗೆ ಸರಿಯಾಗಿ ಪಾಠ ಹೇಳಬೇಕು. ಮತ್ತು ನಾವು ಕೊಡತಕ್ಕಂಥ ಂಬಳ ಸಾರ್ಥಕವಾಗಬೇಕಾದರೆ ಅವರೂ ಸಹ ಪಾಠಪ್ರವಚನಗಳಲ್ಲಿ ಸರಿಯಾಗಿ ತೊಡಗಿಸಿಕೊಳ್ಳಲಿ ಂಬ ಉದ್ದೇಶದಿಂದ ನಾವು ಆ ರೀತಿ ಮಾಡಿದ್ದೇವೆ. ಬೇರೆ ಯಾವ ಕೆಟ್ಟ ಅಭಿಪ್ರಾಯದಿಂದಲೂ ಲ್ಲ.

ಶ್ರೀ ಜೆ.ಟಿ. ಪಾಟೀಲ್: ನಾನು ಕೇಳಿದ್ದುದು ಆ ರೀತಿ ಅಲ್ಲ, ತಾವು ಗ್ರಾಂಟ್ ಮತ್ತು ರಿಸಲ್ಟ್ ರಡನ್ನೂ ಒಂದಕೊಂದು ಟ್ಯಾಗ್ ಮಾಡಿದರೆ ಅವರು ಏನು ಮಾಡುತ್ತಾರೆ ಎಂದರೆ ನೀವು ರಿಸಲ್ಟ್ ಡಿಮೆ ಬಂದರೆ ಗ್ರಾಂಟ್ ಕಟ್ ಮಾಡುತ್ತೀರಿ ಎಂದು ತಿಳಿದುಕೊಂಡು ಶಿಕ್ಷಕರೇ ಅನುದಾನಿತ ಾಲೆಗಳಲ್ಲಿ ಕಾಪಿ ಮಾಡಿಸುವುದಕ್ಕೆ ಹೊರಟಿದ್ದಾರೆ. ದಯಮಾಡಿ ಈ ರೀತಿ ರಿಸಲ್ಟ್ ಮತ್ತು ನುದಾನವನ್ನು ಒಂದಕ್ಕೊಂದಕ್ಕೆ ಟ್ಯಾಗ್ ಮಾಡಬಾರದೆಂದು ನಾನು ಕೋರುತ್ತೇನೆ. ಇದಕ್ಕೆ ತಾವು ರಿಯಾಗಿ ಉತ್ತರ ಹೇಳಿಲ್ಲ.

ಶ್ರೀ ಸಿ.ಹೆಚ್. ವಿಜಯಶಂಕರ್ : ನಿನ್ನೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಈಗ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಈ ರೀತಿಯ ಕಾಲೇಜುಗಳಲ್ಲಿ ಡೊನೇಷನ್ ತೆಗೆದುಕೊಳ್ಳುವಂಥದ್ದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಹಂತದಲ್ಲೂ ಕೂಡ ಅಂದರೆ ಅನುದಾನಿತ ಶಾಲೆಗಳು ಮತ್ತು ಖಾಸಗಿ ಅನುದಾನಿತ ಶಾಲೆಗಳು ಮತ್ತು ಸರ್ಕಾರದಿಂದ ಅನುದಾನವನ್ನು ಪಡೆಯತಕ್ಕಂಥ ಶಾಲೆಗಳಲ್ಲಿಯೂ ಕೂಡ ಐದು, ಹತ್ತು, ಹದಿನೈದು, ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ಡೊನೇಷನ್ ತೆಗೆದುಕೊಳ್ಳುವಂಥದ್ದು ನಡೆಯುತ್ತಿದೆ. ಬಹುಶಃ ನನ್ನ ಜಿಲ್ಲೆಯಲ್ಲೇ ಇಂಥ ಹತ್ತಾರು ಶಾಲೆಗಳನ್ನು ಉದಾಹರಣೆಯಾಗಿ ಕೊಡುತ್ತೇನೆ, ಎನ್ನುವಂಥ ಮಾತನ್ನೂ ಕೂಡ ನಾನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಈ ರೀತಿಯಾಗಿ ಖಾಸಗಿ ಅನುದಾನಿತ ಪ್ರೌಢ ಶಾಲೆಗಳೂ ಸಹ ಡೊನೇಷನ್ ತೆಗೆದುಕೊಳ್ಳುತ್ತಿವೆ. ಈ ಶಾಲೆಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅಂಥವರಿಗೆ 100 ಕ್ಕೆ 80 ಭಾಗ ಅನುದಾನವನ್ನು ಸರ್ಕಾರದಿಂದ ಕೊಡುವಂಥ ಅವಶ್ಯಕತೆಯಾದರೂ ಏನಿದೆ? ಅಂಥ ಶಾಲೆಗಳಿಗೆ ನೀವು ಅನುದಾನ ನೀಡುತ್ತೀರಾ ಅಥವಾ ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೀರೋ?

ಉಪಾಧ್ಯಕ್ಷರು : ಸಂಕ್ಷಿಪ್ತವಾಗಿ ಹೇಳಿ, ಭಾಷಣ ಮಾಡಬೇಡಿ. ಎಲ್ಲರಿಗೂ ಉತ್ತರ ಸಿಗಲಿ ಎನ್ನುವ ಉದ್ದೇಶದಿಂದ ಈ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅನುದಾನ ಪಡೆಯತಕ್ಕಂಥ ಶಾಲೆಗಳಲ್ಲಿ ಅವರು ಯಾವುದೇ ರೀತಿಯ ಡೊನೇಷನ್ ಪಡೆಯುವಂಥದ್ದು ಕಾನೂನಿಗೆ ವಿರುದ್ಧವಾದಂಥದ್ದು. ಆ ರೀತಿ ತೆಗೆದು ಕೊಂಡಿದ್ದಾರೆ ಎಂದು ಯಾವುದಾದರೂ ಶಾಲೆಗಳಲ್ಲಿ ಕಂಡುಬಂದರೆ ನಾವು ಅದರ ವಿರುದ್ಧ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಾವು 85 ಪರ್ಸೆಂಟ್ ಅನುದಾನವನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಕೊಡುತ್ತೇವೆ, ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಕೊಡುವುದಿಲ್ಲ. ತಾವು ಹೇಳುತ್ತಿರುವುದು ಇಂಗ್ಲೀಷ್ ಮಾದ್ಯಮದ ಶಾಲೆಗಳ ಬಗ್ಗೆ. ಕನ್ನಡ ಮಾಧ್ಯಮದ ಹೈಸ್ಕೂಲು, ಮಾಧ್ಯಮಿಕ ಶಾಲೆಗಳಿಗೆ ಅನುದಾನ ಕೊಡುತ್ತೇವೆ. ಆದರೆ ಅಲ್ಲಿಯೂ ಕೂಡ ಡೊನೇಷನ್ ತೆಗೆದುಕೊಳ್ಳುತ್ತಾರೆ ಎಂದು ನಮ್ಮ ಸ್ನೇಹಿತರು ನನ್ನ ಬಳಿ ಬಂದು ಹೇಳಿದರು. ಅದನ್ನು ಬರವಣಿಗೆಯಲ್ಲಿ ಕೊಡಿ. ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ. ಅದರಲ್ಲಿ ತಪ್ಪೇನೂ ಇಲ್ಲ ಎಂದು ಹೇಳಿದ್ದೆ. ಆ ರೀತಿ ಏನಾದರೂ ಇದ್ದರೆ ಶಾಸಕರು ದಯವಿಟ್ಟು ನಮ್ಮ ಅವಗಾಹನೆಗೆ ತರಬೇಕು.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಅನುದಾನರಹಿತ ಶಾಲೆಗಳ ಬಗ್ಗೆ ಮಾನ್ಯ ಸಚಿವರು ಹೇಳಿದರು. ಅನುದಾನರಹಿತ ಪರಿಶಿಷ್ಟ ವರ್ಗದವರಿಂದ ನಡೆಸುತ್ತಿರುವ ಜ್ಯೂನಿಯರ್ ಕಾಲೇಜುಗಳಲ್ಲಿ ಸುಮಾರು ಏಳೆಂಟು ವರ್ಷಗಳಿಂದ ಅಲ್ಲಿರುವಂಥ ಶಿಕ್ಷಕರ ಒಂದು ದೊಡ್ಡ ಸಿಬ್ಬಂದಿಯನ್ನು 300, 400 ರೂಪಾಯಿಗಳಷ್ಟು ಸಂಬಳ ಕೊಟ್ಟುಕೊಂಡು ಕಾಲೇಜುಗಳನ್ನು

ನಡೆಸಿಕೊಂಡು ಬರುತ್ತಿದ್ದಾರೆ. ಅವರು ಹಳ್ಳಿಗಾಡುಗಳಲ್ಲಿ ಬಂದು ಬಹಳಷ್ಟು ಉಪಯುಕ್ತ ಸೇವೆಯನ್ನು ಮಾಡುತ್ತಿದ್ದಾರೆ. ಆದರೂ ಇಲ್ಲಿಯವರೆಗೆ ಮಾನ್ಯ ಸಚಿವರು ಹೇಳಿದಂತೆ ಈಗಾಗಲೇ ಕ್ಯಾಬಿನೆಟ್ ಸದನ ಸಮಿತಿ ಆಗಿದೆ, ಅವುಗಳನ್ನೂ ಇನ್ಸ್‌ಪೆಕ್ಷನ್ ಕೂಡ ಮಾಡಿ, ಎಲ್ಲವೂ ಆಗದಿದ್ದರೂ ಬಹಳಷ್ಟು ಶಾಲೆಗಳಲ್ಲಿ ಯಾವ ಶಾಲೆಗಳು ನಿಜವಾಗಿಯೂ ಸರಿಯಾಗಿ ಶಾಲೆಗಳನ್ನು ನಡೆಸುತ್ತಿವೆ ಅಂಥವುಗಳಿಗೆ ಗ್ರಾಂಟನ್ನು ಕೊಡಬೇಕು. ಅನುದಾನವನ್ನು ನೀಡಬೇಕು ಎನ್ನುವ ಪ್ರಪೋಸಲ್ ಏನಿದೆ ಅದನ್ನು ಆದಷ್ಟು ಬೇಗ ಮಾಡದೇ ಇದ್ದರೆ ಎರಡುನೂರು, ಮೂರುನೂರು ರೂಪಾಯಿ ಹಣವನ್ನು ವೇತನವಾಗಿ ಪಡೆದು ಯಾವ ರೀತಿ ಜೀವನ ಮಾಡಬೇಕು ಎನ್ನುವಂಥ ಸಂದಿಗ್ಧ ಸ್ಥಿತಿ ಏನಿದೆ, ಅದರ ಬಗ್ಗೆಯೂ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಉಪಸಮಿತಿಯನ್ನು ಮಾಡಿದ್ದೇವೆ. ಇದನ್ನೆಲ್ಲಾ ಕೂಲಂಕಷವಾಗಿ ವಿಚಾರ ಮಾಡುತ್ತೇವೆ.

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಕೊಟ್ಟಿದ್ದರ ಬಗ್ಗೆಯೇ ಮತ್ತೆ ಮತ್ತೆ ಕೇಳಿದರೆ ಹೇಗೆ?

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ : ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಮಾನ್ಯ ಸಚಿವರು ಒಂದು ವಿಧಾನಸಭೆಗೆ 45 ಶಾಲಾಕಟ್ಟಡ, 9 ಲಕ್ಷ ರೂಪಾಯಿ ವೆಚ್ಚದ ಹೈಸ್ಕೂಲ್ ಬಿಲ್ಡಿಂಗ್ ಮತ್ತು 2 ಲಕ್ಷ ರೂಪಾಯಿ ಶಾಲಾ ರಿಪೇರಿ ಸಲುವಾಗಿ ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಒಂದು ಶಾಲಾ ಕಟ್ಟಡವನ್ನೂ ಕೂಡ ಕೊಟ್ಟಿಲ್ಲ. ಏಕೆಂದರೆ ನಾನು ನಗರ ಪ್ರದೇಶದ ಶಾಸಕರಾಗಿರುವುದರಿಂದ ನಮಗೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ನಲ್ಲಿ ಯಾವುದೇ ಶಾಲಾ ಕಟ್ಟಡ ಸಿಗುತ್ತಿಲ್ಲ. ಈ ಬಗ್ಗೆ ಸಚಿವರ ಉತ್ತರದಿಂದ ನಾವು ಬಹಳಷ್ಟು ಸಂತೋಷಗೊಂಡಿದ್ದೆವು. ದಯವಿಟ್ಟು 45 ಶಾಲಾ ಕಟ್ಟಡಗಳು, 2 ಲಕ್ಷ ರೂಪಾಯಿ ಶಾಲಾ ರಿಪೇರಿ ಹಾಗೂ 9 ಲಕ್ಷ ರೂಪಾಯಿ ಹೈಸ್ಕೂಲ್ ಕಟ್ಟಡದ ಬಗ್ಗೆ ಏನಾಯಿತು ಎಂಬುದನ್ನು ಹೇಳಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಈಗಾಗಲೇ ಸಂತೋಷವಾಗಿದೆ ಎಂದು ಹೇಳಿದ್ದೀರಿ. ಮನಸ್ಸಿಗೆ ನೋವನ್ನು ಮಾಡಿಕೊಳ್ಳಬೇಡಿ. ಇನ್ನು 15 ದಿವಸಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲೆಲ್ಲಾ ಖಂಡಿತ ಕೊಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜ್ : ಸನ್ಮಾನ್ಯ ಉಪಾಧ್ಯಕ್ಷರೆ, ತಾವು ಮರುಮೌಲ್ಯಮಾಪನದ ಬಗ್ಗೆ ಹೇಳಿದ್ದೀರಿ. ಈ ಮುರುಮೌಲ್ಯಮಾಪನ ಫಲಿತಾಂಶ ಬಂದ ನಂತರ ಮಾಡುತ್ತಾರೆ. ಫಲಿತಾಂಶ ಬಂದ ಸಂದರ್ಭದಲ್ಲಿ ಎಲ್ಲಾ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಾಲೇಜುಗಳಲ್ಲಿ ಅಪ್ಲಿಕೇಷನ್ ಹಾಕಿರುತ್ತಾರೆ, ಅವರಿಗೆ ಕಾಲೇಜುಗಳಲ್ಲಿ ದಾಖಲಾತಿ ದೊರಕುತ್ತದೆ. ಈ ಮರುಮೌಲ್ಯಮಾಪನದಲ್ಲಿ ಪಾಸಾದಂಥ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕಾಲೇಜಿನಲ್ಲಿ ದಾಖಲಾತಿ ದೊರೆಯಬೇಕಾದರೆ ತಾವು ಯಾವ ರೀತಿ ವ್ಯವಸ್ಥೆ ಮಾಡುತ್ತಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಉಪಸಭಾಧ್ಯಕ್ಷರ ಮೂಲಕ

ಕೇಳಿಕೊಳ್ಳುತ್ತೇನೆ. ಮತ್ತು ಎರಡನೆಯದಾಗಿ ಯೋಗಾಭ್ಯಾಸಕ್ಕೆ ಶಿಕ್ಷಣದಲ್ಲಿ ಯಾವ ರೀತಿಯ ಒತ್ತನ್ನು ಕೊಡುತ್ತಿದ್ದೀರಿ, ಅದರ ಬಗ್ಗೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ಸಹ ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮರುಮೌಲ್ಯಮಾಪನದ ಸಂದರ್ಭದಲ್ಲಿ 6 ಅಂಕಗಳಿಗಿಂತ ಹೆಚ್ಚಿಗೆ ಬಂದರೆ ಅವರು ಕಟ್ಟಿರುವಂಥ 500 ರೂಪಾಯಿ ಶುಲ್ಕವನ್ನು ಮರುಪಾವತಿ ಮಾಡುತ್ತೇವೆ. ಮತ್ತು ಹೊಸ ಮಾರ್ಕ್ಸ್ ಕಾರ್ಡ್ ಕೊಡುತ್ತೇವೆ. ಹೆಚ್ಚು ದಿನ ತಡವಾಗದಂತೆ ಅವರು ಮುಂದಿನ ತರಗತಿಗಳಿಗೆ ಹೋಗುವುದಕ್ಕೆ ಅನುಕೂಲ ಆಗುವಂಥ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಹೆಚ್.ಡಿ. ಬಸವರಾಜ್ : ಕಾಲೇಜುಗಳಲ್ಲಿ ಅಡ್ಮಿಷನ್ ಸಿಗುತ್ತಿಲ್ಲ. ಅವರಿಗೆ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ನಾನು ಕೇಳುತ್ತಿದ್ದೇನೆ. ಅವರು ಪಾಸ್ ಆಗಿ 6 ಅಂಕಗಳಿಗಿಂತ ಹೆಚ್ಚು ಅಂಕಗಳನ್ನು ಪಡೆದರೆ 500 ರೂಪಾಯಿಗಳನ್ನು ವಾಪಸ್ ಕೊಡುತ್ತೇವೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅವರು ವಿದ್ಯಾಭ್ಯಾಸವನ್ನು ಮುಂದುವರೆಸಬೇಕಾದ ಸಂದರ್ಭದಲ್ಲಿ ಅವರಿಗೆ ಯಾವ ರೀತಿಯ ವ್ಯವಸ್ಥೆ ಮಾಡಿಕೊಡುತ್ತೀರಿ? ಏಕೆಂದರೆ ಯಾರೋ ಮಾಡಿದಂಥ ತಪ್ಪಿಗೆ ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಗಿದೆ.

ಉಪಾಧ್ಯಕ್ಷರು : ಸಮಯದ ಅಭಾವದಿಂದ ಧೀರ್ಘವಾಗಿ ಭಾಷಣ ಮಾಡುವುದು ಸರಿಯಲ್ಲ. ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಈ ರೀತಿ ಹೊಸ ಯೋಜನೆ ತಂದಿರುವುದನ್ನು ಅವರು ಸ್ವಾಗತ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜ್ : ನಾನು ಇದನ್ನು ಸ್ವಾಗತ ಮಾಡುತ್ತಿದ್ದೇನೆ. ಇದರ ಜೊತೆಗೆ ಇವತ್ತಿನ ದಿವಸ ಪೋಷಕರ ಕಷ್ಟವನ್ನೂ ಸಹ ಹೇಳುತ್ತಿದ್ದೇನೆ.

ಶ್ರೀ ಹೆಚ್.ಜಿ ಗೋವಿಂದೇಗೌಡ : ಮಕ್ಕಳಿಗೆ ಯಾವ ರೀತಿ ತೊಂದರೆಯಾಗುತ್ತದೆ ಹೆಚ್ಚು ದಿವಸ ತಡವಾಗದ ಹಾಗೆ ಮಾರ್ಕ್ಸ್ ಕೊಡುತ್ತೇವೆ. ಅವರು ಯಾವ ಶಾಲೆ, ಕಾಲೇಜಿಗೆ ಯಾವ ಕೋರ್ಸಿಗೆ ಹೋಗಬೇಕೋ ಅದಕ್ಕೆ ಹೋಗಲು ಅವಕಾಶವಿರುತ್ತದೆ. ತಿಂಗಳಾನುಗಟ್ಟಲೆ ತಡವಾದರೆ ನಾನು ಅವರು ಹೇಳಿರುವುದನ್ನು ಒಪ್ಪುತ್ತೇನೆ. ಆದರೆ ಕೆಲವೇ ದಿವಸಗಳಲ್ಲಿ ಅವರಿಗೆ ಹೊಸ ಮಾರ್ಕ್ಸ್ ಕಾರ್ಡ್ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವು 50ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನು ಸುವರ್ಣ ಜಯಂತಿಯಾಗಿ ಆಚರಣೆ ಮಾಡುತ್ತಿದ್ದೇವೆ. ನೀವು ಯಾವ ಟ್ರಾನ್ಸ್‌ಫರ್ ಬೇಕಾದರೆ ಎಲ್ಲಿಗಾದರೂ ಹಾಕಿಕೊಳ್ಳಿ. ಆದರೆ ಗಂಡ ಹೆಂಡತಿ ಒಟ್ಟಿಗೆ ಇರುವುದಕ್ಕೆ ತಾವು ಏನಾದರೂ ಅನುಕೂಲ ಮಾಡಿಕೊಡಬೇಕು. ಅದೊಂದು ಆಶ್ವಾಸನೆ ಕೊಡಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅವರು ಮಹಿಳೆಯಾಗಿ ಮಹಿಳೆಯರ ಜವಾಬ್ದಾರಿ ಇರುವುದರಿಂದ ಆ ಮಾತು ಹೇಳುವುದರಲ್ಲಿ ಅರ್ಥವಿದೆ. ಆದರೆ ಆಡಳಿತ ನಡೆಸುವಂಥ ದೃಷ್ಟಿಯಿಂದ ಇದು ಸಾಧ್ಯವೇ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಈ ರಾಜ್ಯದ ಒಟ್ಟು ಉಪಾಧ್ಯಾಯರಲ್ಲಿ ಅರ್ಧ ಭಾಗ ಗಂಡಹೆಂಡತಿ ಉಪಾಧ್ಯಾಯರಾಗಿರುವಂಥವರೇ ಇದ್ದಾರೆ. ಅವರನ್ನೆಲ್ಲಾ ಒಂದೇ ಕಡೆ ಮಾಡಬೇಕು ಎಂದರೆ ಎಷ್ಟೋ ಶಾಲೆಗಳನ್ನು ಮುಚ್ಚಬೇಕಾದಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇದು ಸ್ವಲ್ಪ ಕಷ್ಟವಾಗುತ್ತದೆ ಎಂಬುದನ್ನು ನಾನು ಅವರ ಮನಸ್ಸಿಗೆ ಸ್ವಲ್ಪ ನೋವಾದರೂ ಕೂಡ ಹೇಳಬೇಕಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಏತಕ್ಕೆ ಮದುವೆಯಾಗಬೇಕು? ಆ ಮದುವೆ ಎನ್ನುವಂಥ ಇನ್‌ಸ್ಟಿಟ್ಯೂಷನ್ ಆದರೂ ಏತಕ್ಕೆ ಬೇಕು, ಅದನ್ನು ತೆಗೆದುಹಾಕಿ. ನೀವು ಆದಷ್ಟು ಮಟ್ಟಿಗೆ ಒಂದೇ ಕಡೆ ಹಾಕುತ್ತೇವೆ ಎಂದು ನೋಟಿಫಿಕೇಷನ್ ಹೊರಡಿಸಿದ್ದೀರಿ. ನಾವು ಅದನ್ನು ನೋಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ಹಗುರವಾಗಿ ತೆಗೆದುಕೊಳ್ಳುವುದು ಬೇಡ. ಕೊನೇಪಕ್ಷ ಸ್ವಲ್ಪ ಹತ್ತಿರದಲ್ಲಿ ಆ ತಾಲ್ಲೂಕಿನ ಹತ್ತಿರ ಅಥವಾ ಅದೇ ಜಿಲ್ಲೆಯಲ್ಲಾದರೂ ಹಾಕಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಈ ವರ್ಷದ ಟ್ರಾನ್ಸ್‌ಫರ್ ನಾರ್ಮ್ಸ್ ಏನಿದೆ ಎಂದರೆ ಮ್ಯುಚುಯಲ್ ಟ್ರಾನ್ಸ್‌ಫರ್ಸ್ ಮತ್ತು ಗಂಡ ಹೆಂಡತಿ ದೂರದಲ್ಲಿದ್ದರೆ ಹತ್ತಿರ ತರತಕ್ಕಂಥದ್ದರಲ್ಲಿ ನಾವು ಟ್ರಾನ್ಸ್‌ಫರ್ ಮಾಡಿರುವುದು. 50ನೇ ಸ್ವಾತಂತ್ರ್ಯೋತ್ಸವದಲ್ಲಿ, ಇದಕ್ಕೆ ನಾವು ಹೆಚ್ಚು ಒತ್ತು ಕೊಟ್ಟಿದ್ದೇವೆ. ಗಂಡ ಹೆಂಡತಿಯನ್ನು ಹತ್ತಿರ ತರಬೇಕೆಂದೇ ಮಾಡಿದ್ದೇವೆ. ಇದನ್ನು ಸಂತೋಷವಾಗಿ ಸ್ವೀಕಾರ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ.ಬಿ. ಶಿವಪ್ಪ : ರಾತ್ರಿಯಾದರೆ ಅವರು ಮನೆ ಸೇರುವಷ್ಟು ಹತ್ತಿರದಲ್ಲಾದರೂ ಇಡಿ.

ಶ್ರೀ ಎಸ್. ಶಿವಪ್ಪ : ಶ್ರೀಮತಿ ಪ್ರಮೀಳಾರವರು ಹೇಳಿದ್ದರಲ್ಲಿ ಸ್ವಲ್ಪ ಸತ್ಯ ಇದೆ. 50 ಪರ್ಸೆಂಟ್ ಮಹಿಳೆಯರಿಗೆ ಏನು ಮೀಸಲಾತಿ ಇದೆ...

ಉಪಾಧ್ಯಕ್ಷರು : ತಾವು ಮಹಿಳೆಯರ ಬಗ್ಗೆ ಜಾಸ್ತಿ ಮಾತನಾಡುತ್ತೀರಿ.

ಶ್ರೀ ಎಸ್. ಶಿವಪ್ಪ : ಹೌದು, ಇಲ್ಲಿ ಏನಾಗಿದೆ ಎಂದರೆ ಮಹಿಳೆಯರನ್ನು ಗ್ರಾಮಾಂತರ ಪ್ರದೇಶಕ್ಕೆ ಕಳುಹಿಸುವುದು ಅನಿವಾರ್ಯವಾಗಿದೆ. ಇವರಿಗೆ ಪಟ್ಟಣದಲ್ಲಿ ಪೋಸ್ಟಿಂಗ್ ಕೊಡುವುದಕ್ಕೆ ಸಾಧ್ಯ ಇಲ್ಲ. ಆದರೆ ಗ್ರಾಮಾಂತರ ಪ್ರದೇಶಗಳಿಗೆ ಹೋದಾಗ ಅವರಿಗೆ ರಕ್ಷಣೆ ಇಲ್ಲ, ಸುರಕ್ಷತೆ ಇಲ್ಲ. ಸಾರಿಗೆ ಸಂಚಾರಕ್ಕೆ ಒಳ್ಳೆಯ ಮಾರ್ಗ ಇಲ್ಲ. ಇದರಿಂದ ಅನೇಕ ತೊಂದರೆಗಳಾಗಿವೆ. ಏಕೆಂದರೆ ಇಂಥ ವಿಷಯಗಳು ನಮ್ಮ ಗಮನಕ್ಕೆ ಬಂದಿವೆ. ಇದರಿಂದ ಎಷ್ಟೋ ಅನಾಹುತಗಳಾಗಿವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಗ್ರಾಮೀಣ ಪ್ರದೇಶದಲ್ಲಿ ಸೇಫ್ಟೀ ಇಲ್ಲ, ಸೆಕ್ಯೂರಿಟಿ ಇಲ್ಲ ಎನ್ನುವಂಥ ಮಾತನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ಇದರಿಂದ ಗ್ರಾಮೀಣ ಜನತೆಯ ಬಗ್ಗೆ ಒಂದು ರೀತಿಯಲ್ಲಿ ಅವಮಾನ ಮಾಡಿದಂತಾಗುತ್ತದೆ. ತಾವು ಈ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು : ಪುಟ್ಟಣ್ಣಯ್ಯನವರೇ, ಅವರು ಆ ರೀತಿ ಹೇಳಿಲ್ಲ.

ಶ್ರೀ ಎಸ್. ಶಿವಪ್ಪ : ಮಹಿಳೆಯರ ಮಾನವನ್ನು ಕಾಪಾಡುವುದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಸೆಕ್ಯೂರಿಟಿ ಇಲ್ಲ. ಎರಡು ಮೈಲಿ ಮೂರು ಮೈಲಿ ನಡೆದುಕೊಂಡು ಹೋಗಬೇಕು. ಚಿತ್ರದುರ್ಗದ ಹತ್ತಿರ ಒಂದು ಘಟನೆ ನಡೆದಿದೆ. ಒಬ್ಬ ಹುಡುಗ ಕಾದಿದ್ದು ಆ ಮಹಿಳೆ ಶಾಲೆಗೆ ಹೋಗಬೇಕಾದರೆ ಅಬಲೆ, ಒಬ್ಬಾಕೆ ಹೋಗಬೇಕು ಒಬ್ಬಾಕೆ ಬರಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಬಲೆ ಎಂದು ಹೇಳಬೇಡಿ. ಅದನ್ನು ನಾನು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಎಸ್. ಶಿವಪ್ಪ : ಅವರಿಗೆ ಸೇಫ್ಟೀ ಇಲ್ಲ. ಹುಡುಗರ ಜೊತೆ ಬಾಕ್ಸಿಂಗ್ ಮಾಡುವುದಕ್ಕೆ ಶಕ್ತಿ ಇಲ್ಲ.

ಉಪಾಧ್ಯಕ್ಷರು : ತಾವು ಬೇಗ ಮುಗಿಸಿ.

ಶ್ರೀ ಎಸ್ ಶಿವಪ್ಪ : ಪ್ರಮೀಳಾ ತರಹ ಹೆಣ್ಣು ಮಕ್ಕಳು ಯಾರೂ ಇಲ್ಲ ಸ್ವಾಮಿ. ಎಲ್ಲರೂ ಅಷ್ಟು ಗಟ್ಟಿ ಮುಟ್ಟಾಗಿ, ಗಂಡಸರ ಧ್ವನಿಯಿಂದ ಹೆದರಿಸತಕ್ಕ ಶಕ್ತಿ ಸಾಮರ್ಥ್ಯ ಎಲ್ಲಾ ಮಕ್ಕಳಿಗೂ ಇಲ್ಲ ಎಂದು ನನಗೆ ಅನಿಸುತ್ತದೆ. ಆದ್ದರಿಂದ ತಾವು ಹೇಳಿದ ಈ ಮೀಸಲಾತಿ ಕೊಡುವುದರಿಂದ ಹುಡುಗರಿಗೂ ತೊಂದರೆ ಆಗುತ್ತಿದೆ. ಅವರು ಟೆರರಿಸ್ಟ್ ಆಗುತ್ತಿದ್ದಾರೆ. ಅವರಿಗೆ 50 ಭಾಗ ಈಗ ಹೆಣ್ಣು ಮಕ್ಕಳಿಗೆ ಕೊಟ್ಟಿದ್ದರಿಂದ ಏನು ಹುಡುಗರು ಕೆಲಸ ಇಲ್ಲದೆ ಅವರು ನಿರುದ್ಯೋಗಿಗಳಾಗಿ ನಕ್ಸಲೈಟ್ಸ್ ಆಗುತ್ತಿದ್ದಾರೆ, ಟೆರರಿಸ್ಟ್‌ಗಳು ಆಗುತ್ತಿದ್ದಾರೆ. ಅದನ್ನು ತಡೆ ಹಿಡಿಯುವುದಕ್ಕೋಸ್ಕರ ಮತ್ತು ಹೆಣ್ಣು ಮಕ್ಕಳ ಸೇಫ್ಟಿಗೋಸ್ಕರ ಅವರ ಮಾನವನ್ನು ಕಾಪಾಡುವುದಕ್ಕೋಸ್ಕರ ಅದನ್ನು ಏನಾದರೂ ಕಡಿಮೆ ಮಾಡಿ ಹುಡುಗರಿಗೆ ನೇಮಕಾತಿ ಮಾಡುವ ವ್ಯವಸ್ಥೆ ಏನಾದರೂ ಮಾಡುತ್ತೀರಾ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ : ಹುಡುಗರು ನಕ್ಸಲೈಟ್ ಆಗುತ್ತಿದ್ದಾರೆ ಎಂದು ಮಾನ್ಯ ಶಿವಪ್ಪ ನವರು ಹೇಳಿದರು. ಹೆಣ್ಣು ಮಕ್ಕಳು ಫೂಲನ್ ದೇವಿ ಆದರೆ ಏನು ಮಾಡೋಣ?

ಉಪಾಧ್ಯಕ್ಷರು : ಇನ್ನೂ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡಬೇಕು. ಆಮೇಲೆ ಕೃಷ್ಣಪ್ಪನವರು ಉತ್ತರ ಕೊಡಬೇಕು. ಆಮೇಲೆ ಪ್ರಶ್ನೋತ್ತರ ಇದೆ. ದಯಮಾಡಿ ಎಲ್ಲರೂ ಸಮಯದ ಅವಕಾಶವನ್ನು ತಾವೆಲ್ಲರೂ ತಿಳಿದುಕೊಳ್ಳಬೇಕು.

ಶ್ರೀ ಎಚ್.ಜಿ. ಗೋವಿಂದೇಗೌಡ : ಈಗ ಪ್ರಾಥಮಿಕ ಶಾಲಾ ಉಪಾಧ್ಯಯರನ್ನು ನೇಮಕ ಮಾಡುವಾಗ ಅರ್ಧ ಭಾಗ ಹೆಣ್ಣು ಮಕ್ಕಳಿಗೆ ಅವಕಾಶ ಇಟ್ಟು ಮಾಡುತ್ತಿದ್ದೇವೆ. ಇದು ಬರೇ ಪ್ರಾಥಮಿಕ ಪಾಠ ಶಾಲೆಗೆ ಮಾತ್ರ ಸಂಬಂಧಪಟ್ಟಿರತಕ್ಕದ್ದನ್ನು ನಾವು ಮಾಡಿರತಕ್ಕದ್ದು. ಈಗ ಬದಲಾವಣೆ ಸಧ್ಯಕ್ಕೆ ಏನೂ ಮಾಡುವುದಿಲ್ಲ. 50 ಪರ್ಸೆಂಟ್‌ನಂತೆ ಕಂಟಿನ್ಯೂ ಮಾಡಿಕೊಂಡು ಹೋಗುತ್ತೇವೆ.

ಶ್ರೀ ಶ್ರೀ ಶೈಲಪ್ಪ ಬಿದರೂರು : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪುಟ್ಟಣ್ಣಯ್ಯನವರು ಶಾಲಾ ಅಭಿವೃದ್ಧಿ ಸಮಿತಿಯ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಅದರೊಳಗೆ ಸದಸ್ಯರು ಯಾರು ಇರಬೇಕು, ಯಾರು ಇರಬಾರದು ಎನ್ನತಕ್ಕದ್ದರ ಬಗ್ಗೆ ಹೇಳುವುದಿಲ್ಲ. ಅಲ್ಲಿ ಯಾರೇ ಚುನಾಯಿತ ಪ್ರತಿನಿಧಿಗಳು ಆಗಿರಲಿ, ಅಥವಾ ಆ ಶಿಕ್ಷಣದ ಬಗ್ಗೆ ಕಾಳಜಿ ಇರತಕ್ಕವರು ಆಗಿರಲಿ. ಯಾವುದೇ ಒಂದು ಶಾಲಾ ಅಭಿವೃದ್ಧಿ ಸಮಿತಿ ಹೆಚ್ಚು ಪರಿಣಾಮಕಾರಿಯಾಗಿ, ಹೆಚ್ಚು ಶಕ್ತಿಯುತವಾಗಿ ಇವತ್ತು ಹಳ್ಳಿಗಳಲ್ಲಿ ಕೆಲಸ ಮಾಡಬೇಕಾದಂತಹ ಅವಶ್ಯಕತೆ ಇದೆ. ಅವುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾರ್ಪಡಿಸಲಿಕ್ಕೆ ಸರ್ಕಾರ ಅವುಗಳಿಗೆ ಏನು ಶಕ್ತಿ ಕೊಡುತ್ತದೆ ಎಂದು ಸನ್ಮಾನ್ಯ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ. ಈಗ ಈ ಶಾಲಾ ಅಭಿವೃದ್ಧಿ ಸಮಿತಿಗಳು ಅಲ್ಲಿ ಒಂದೋ ಎರಡೋ ಶಾಲೆಗಳು ಇರಬಹುದು. ಅಥವಾ ಪ್ರೌಢಶಾಲೆಗಳು ಹಳ್ಳಿಗಳಲ್ಲಿ ಇರಬಹುದು. ಅದನ್ನು ಗ್ರಾಮ ಶಿಕ್ಷಣ ಸಮಿತಿ ಎಂದು ಮಾಡಿ ಅಲ್ಲಿಯ ಶೈಕ್ಷಣಿಕ ಚಟುವಟಿಕೆಯನ್ನು ನಿಯಂತ್ರಣ ಮಾಡತಕ್ಕದ್ದು, ಪ್ರತಿ ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ಸೇರತಕ್ಕದ್ದು. ಕನಿಷ್ಟ ಎರಡು ಸಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಆಗಲಿ ಅಥವಾ ಸಹಾಯಕ ಶಿಕ್ಷಣಾಧಿಕಾರಿಗಳು ಆಗಿಲಿ ಇಬ್ಬರಲ್ಲಿ ಒಬ್ಬರು ಅಲ್ಲಿ ಸೇರುವಂತಹ ಕಡ್ಡಾಯ ಏನಾದರೂ ಮಾಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಎಚ್.ಜಿ. ಗೋವಿಂದೇಗೌಡ : ಈಗ ಶಾಲಾ ಅಭಿವೃದ್ಧಿ ಸಮಿತಿ ಚೆನ್ನಾಗಿ ಕೆಲಸ ಮಾಡಬೇಕು ಎನ್ನತಕ್ಕ ಉದ್ದೇಶದಿಂದ ನಾವು ಹೊಸದಾಗಿ ಶಾಲಾ ಅಭಿವೃದ್ಧಿ ಸಮಿತಿಗಳನ್ನು ನೇಮಕ ಮಾಡಿರತಕ್ಕದ್ದು. ಮಾನ್ಯ ಸ್ನೇಹಿತರು ಹೇಳಿದ ಹಾಗೆ ನಮ್ಮ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಗಿಂದಾಗ್ಗೆ ಆ ಬಗ್ಗೆ ಹೋಗಿ ನೋಡಿ ಮೀಟಿಂಗ್‌ಗಳನ್ನು ಸೇರಿಸುತ್ತಾರೋ ಇಲ್ಲವೋ ಅವರಿಗೆ ಏನು ತೊಂದರೆಗಳಿವೆ, ಇದನ್ನು ಮೇಲ್ವಿಚಾರಣೆ ನೋಡತಕ್ಕದ್ದನ್ನೂ ಸಹ ಅವರಿಗೆ ಆದೇಶ ಕೊಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕಿನಲ್ಲಿರುವಂತಹ ಪ್ರೌಢಶಾಲಾ ಉಸ್ತುವಾರಿಯನ್ನು ಬಿಓ ಅವರಿಗೆ ಕೊಟ್ಟಿರತಕ್ಕದ್ದು ತುಂಬಾ ಸ್ವಾಗತಾರ್ಹವಾದ ವಿಚಾರ. ಆದರೆ ಅವರಿಗೆ ಅದಕ್ಕೆ ಬೇಕಾದಂತಹ ಸಿಬ್ಬಂದಿಯನ್ನು ನೀವು ಒದಗಿಸಲಿಲ್ಲ. ಇದರ ಪರಿಣಾಮ ಏನಾಗಿದೆ ಎಂದರೆ ಶಾಲೆಯ ಶಿಕ್ಷಕರನ್ನೇ ನಿಮ್ಮ ಕಛೇರಿಗಳಲ್ಲಿ ಅವರ ಸ್ಯಾಲರಿ ಬಿಲ್ ಮಾಡಲಿಕ್ಕೆ ಹಚ್ಚಿಕೊಂಡಿದ್ದೀರಿ ಒಂದೊಂದು ಶಾಲೆಯಲ್ಲಿ ಬಿಓ ಕಛೇರಿಯಿಂದ ಹಿಡಿದು ಜಾಯಿಂಟ್ ಡೈರೆಕ್ಟರ್‌ವರೆಗೆ ಐದು ಆರು ಜನ ಟೀಚರ್ಸ್ ಐದಾರು ವರ್ಷದಿಂದ ಗುಮಾಸ್ತೆಯ ಕೆಲಸ ಮಾಡುತ್ತಿದ್ದಾರೆ. ಅವರನ್ನು ದಯವಿಟ್ಟು ರಿಲೀಸ್ ಮಾಡಿ ಶಾಲೆಗಳಿಗೆ ವಾಪಸ್ ಕಳುಹಿಸಿ. ಬೇರೆ ಸಿಬ್ಬಂದಿಯನ್ನು ನೇಮಕ ಮಾಡಿಸಿಕೊಳ್ಳಲು ಅವಕಾಶ ಮಾಡಿ ಕೊಡಿ. ಈ ಅಧ್ಯಾಪಕರನ್ನು ನೀವು ಲೆಕ್ಕದಲ್ಲಿ ಶಿಕ್ಷಕರು ಎಂದು ಮಾಡಿ ನಿಮ್ಮ ಕಛೇರಿಗಳಲ್ಲಿ ಏಕೆ ಈ ರೀತಿ ದುಡಿಸಿಕೊಳ್ಳುತ್ತಿದ್ದೀರಿ?

ಶ್ರೀ ಎಚ್.ಜಿ. ಗೋವಿಂದೇಗೌಡ : ಬಿಓ ಹಿಂದೆ ಇರಲಿಲ್ಲ. ನಾವು ಬಂದ ಮೇಲೆ ಮಾಡಿದ್ದುದು. ಎಇಓ, ಡಿಡಿಪಿಐ ಆಫೀಸ್, ಜಾಯಿಂಟ್ ಡೈರೆಕ್ಟರ್ ಆಫೀಸ್‌ಗಳಲ್ಲಿ ಅಲ್ಲಲ್ಲಿ ಮಾಡುತ್ತಿದ್ದಾರೆ ಎನ್ನತಕ್ಕದ್ದು ಒಂದು ರೀತಿ ಆಗ ಇತ್ತು. ಈಗ ಆ ರೀತಿ ಆಗುತ್ತಾ ಇಲ್ಲ. ಎಲ್ಲಾ ಕಡೆ ಫಸ್ಟ್ ಡಿವಿಜನ್ ಅಸಿಸ್ಟೆಂಟ್,

ಸೂಪರಿಡೆಂಟ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲದಿದ್ದರೂ ಸಹ ಉಪಾಧ್ಯಾಯರುಗಳ ಉಪಯೋಗಿಸಿಕೊಳ್ಳದೇ ಇರುವ ರೀತಿಯಲ್ಲಿ ಇರತಕ್ಕದ್ದರಲ್ಲಿಯೇ ವ್ಯವಸ್ಥೆ ಮಾಡಬೇಕು. ಹೆ ಉಪಾಧ್ಯಾಯರನ್ನು ಇದಕ್ಕೆ ನೇಮಕ ಮಾಡಿಕೊಳ್ಳಬಾರದು ಎಂದು ಹೇಳಿದ್ದೇನೆ. ಅವರು ಹೇಳತಕ್ಕ ನ್ಯಾಯ ಇದೆ. ಉಪಾಧ್ಯಾಯರುಗಳು ಇಲ್ಲೇ ಬಂದು ಬರೆಯುತ್ತಾ ಕುಳಿತರೆ ಪಾಠ ಆಗುವುದಿ ಅದಕ್ಕೆ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅದಕ್ಕೆ ಅವಕಾಶ ಕೊಟ್ಟಿಲ್ಲ.

ಶ್ರೀ ಡಿ.ಎಸ್. ಮಾದಪ್ಪ : ಮಾನ್ಯ ಉಪಾಧ್ಯಕ್ಷರೆ, ಶಾಲಾ ಮಾಸ್ತರರ ಪೈಕಿ ನರ್ಸರಿ ಶಿಕ್ಷಕ ಯಾರು ಇದ್ದಾರೆ, ಅವರದೊಂದು ಸಮಸ್ಯೆ ಇದೆ. ಅವರನ್ನು ತಾವು ಈ ಜನರಲ್ ಕ್ಯಾಟಗ ಸೇರಿಸುವುದಿಲ್ಲ. ಮತ್ತೆ ಅವರ ಸಂಖ್ಯೆ ಬಹಳ ಕಡಿಮೆ ಇದೆ. ತಾವು ಅವರ ವರ್ಗಾವಣೆ ಮಾಡುವ ಮಾರ್ಗಸೂಚಿಯ ಮೇಲೆ ಮಾಡುವುದು ಅಷ್ಟು ಉಚಿತವಲ್ಲ ಎಂದು ಹೇಳುತ್ತೇನೆ. ಜನರ ಕ್ಯಾಟಗರಿಗೆ ತೆಗೆದುಕೊಳ್ಳಬೇಕು. ಎರಡನೆಯದಾಗಿ ಸಿಪಿಎಡಿಗೆ ತಾವು ಅಧ್ಯಾಪಕರನ್ನು ತೆಗೆ ಕೊಳ್ಳುತ್ತೀರಿ. ನ್ಯಾಶನಲ್‌ಗೆ ಯಾರು ಇರುತ್ತಾರೆ, ಸ್ಟೇಟಿಗೆ ಯಾರು ರೆಪ್ರೆಸೆಂಟ್ ಮಾಡಿರುತ್ತಾ ಅವರಿಗೆ ತಾವು ಆದ್ಯತೆ ಕೊಡುತ್ತಿಲ್ಲ. ಅವರಿಗೆ ತಾವು ಸ್ವಲ್ಪ ಆದ್ಯತೆಯನ್ನು ಕೊಟ್ಟು ಉದ್ಯೋ ತೆಗೆದುಕೊಳ್ಳುವಾಗ ಅವರಿಗೆ ಆದ್ಯತೆಯನ್ನು ಕೊಡಬೇಕೆಂದು ಎರಡು ಸಲಹೆಯನ್ನು ತಮ ಕೊಡುತ್ತಿದ್ದೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಕ್ಷೇತ್ರದಲ್ಲಿರತಕ್ಕ ಗಜಾನನ ರೂರಲ್ ಹೈಸ್ಕೂಲ್‌ನಲ್ಲಿ ಉ ನ್ಯಾಯಾಲಯದ ಒಂದು ಆಜ್ಞೆಯಿಂದಾಗಿ ಇಲ್ಲಿಯವರೆಗೂ ಕಳೆದ ಎರಡು ವರ್ಷಗಳಿಂದ ಮಕ್ಕ ಯಾವ ಶಾಲೆಗೂ ಸೇರಿಲ್ಲ. ಗಜಾನನ ರೂರಲ್ ಹೈಸ್ಕೂಲಿಗೆ ಇಲ್ಲಿಯವರೆಗೆ ದಾಖಲಾಗಿರತಕ್ಕವ ಕೇವಲ 13 ಜನ ಮಕ್ಕಳು. ಇನ್ನು ಅಲ್ಲಿರತಕ್ಕ ಗವರ್ನಮೆಂಟ್ ಹೈಸ್ಕೂಲಿಗೆ ಇಲ್ಲಿಯವರೆಗೆ ಯಾರ ಕೂಡ ಅಡ್ಮಿಟ್ ಆಗಿಲ್ಲ. ಅಡ್ಮಿಟ್ ಮಾಡುವುದಕ್ಕೆ ಅವಕಾಶ ಮಾಡಿಲ್ಲ. ಅನೇಕ ಸಾರಿ ಪ್ರಶ್ನೆಗಳ ಹಾಕಿ ಕಾಗದಗಳನ್ನು ಬರೆದು ಗಮನಕ್ಕೆ ತಂದರೂ ಸಹ ಯಾವುದೇ ತರಹದ ಕಾರ್ಯಕ್ರ ತೆಗೆದುಕೊಂಡಿಲ್ಲ. ಅದರ ಬಗ್ಗೆ ನಿಮ್ಮ ಉತ್ತರ ಏನು ಎನ್ನತಕ್ಕದ್ದು ಒಂದು. ಎರಡನೆಯದಾಗಿ ನೀ ಸ್ಕೂಲನ್ನು ಅಪ್‌ಗ್ರೇಡ್ ಮಾಡಿದ್ದೀರಿ. ಆದರೆ ಎಲ್ಲೂ ಕೂಡ ಟೀಚರ್ಸನ್ನು ಕೊಟ್ಟಿಲ್ಲ. ಆದರೆ ಉತ್ತರದ ಏನು ಕೊಟ್ಟಿದ್ದೀರಿ ಎಂದರೆ ಈಗ ಈ ವರ್ಷಕ್ಕೆ 1997- 98ನೇ ಸಾಲಿಗೆ 12,000ಕ್ಕೂ ಹೆಚ್ಚು ಜ ಶಿಕ್ಷಕರನ್ನು ಜುಲೈ 31ರೊಳಗೆ ತುಂಬುತ್ತೇವೆ ಎಂದು ಹೇಳಿದ್ದೀರಿ. ಆದರೆ ಈಗಾಗಲೇ ನಾ ಆಗಸ್ಟ್‌ನಲ್ಲಿದ್ದೇವೆ. ಇಲ್ಲಿಯವರೆಗೆ ಯಾವುದೇ ತರಹದ ಕಾರ್ಯಕ್ರಮ ಆಗಿಲ್ಲ. ದಯಮಾಡಿ ಶಿಕ್ಷಕರ ಕೊರತೆಯನ್ನು ಯಾವ ರೀತಿ ತುಂಬುತ್ತೀರಿ ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷರು : ಸೂಕ್ಷ್ಮವಾಗಿ ಸ್ವಲ್ಪದರಲ್ಲಿಯೇ ಕೇಳಬೇಕು.

ಶ್ರೀ ಎಚ್.ಜಿ. ಗೋವಿಂದೇಗೌಡ : 12, ಸಾವಿರ ಚಿಲ್ಲರೆ ಹೇಳಿದ್ದು ನಾವು ಪ್ರೈಮರಿ ಸ್ಕೂ ಟೀಚರ್ಸನ್ನು ಈ ವರ್ಷ 1997- 98ನೇ ಸಾಲಿನಲ್ಲಿ ಅಪಾಯಿಂಟ್ ಮಾಡಿಕೊಳ್ಳಬೇಕು ಎಂದು ತೀರ್ಮಾ

ಆಗಿದೆ. 9 ಸಾವಿರ ನಮಗೆ ಸೆಂಟ್ರಲ್ ಗವರ್ನಮೆಂಟ್‌ನಿಂದ ಬರಬೇಕು ಎಂದು ಹೇಳಿ ಈಗಾಗಲೇ ಕರೆಸ್ಪಾಂಡೆನ್ಸ್ ಮಾಡುತ್ತಿದ್ದೇವೆ. ಅದೂ ಬಂದರೆ 22 ಸಾವಿರ ಆಗುತ್ತದೆ. 12,300 ಏನು ಹೇಳುತ್ತಿದ್ದೀರಲ್ಲಾ ಆದಷ್ಟೂ ಈಗ ನಾವು ಮಾಡಿಕೊಳ್ಳುತ್ತೇವೆ. ಸ್ನೇಹಿತರು ಹೇಳಿರತಕ್ಕದ್ದು ನನ್ನ ಅವಗಾಹನೆಗೆ ತಂದಿದ್ದಾರೆ. ಏಡೆಡ್ ಸ್ಕೂಲೂ ಇದೆ, ಆಮೇಲೆ ಗವರ್ನಮೆಂಟ್ ಸ್ಕೂಲ್ ಮಂಜೂರು ಮಾಡಿದ್ದೇವೆ. ಈಗ ಕೆಲವು ಸಂದರ್ಭದಲ್ಲಿ ಏನಾಗುತ್ತದೆ ಎಂದರೆ ಸಾರ್ವಜನಿಕರು, ಚುನಾಯಿತ ಪ್ರತಿನಿಧಿಗಳು ಏನಾದರೂ ಹೇಳಿದಾಗ ಒಂದೊಂದು ಸಲ ಅಧಿಕಾರಿಗಳು ಇರಲಿ ಅಥವಾ ನಾವಾದರೂ ಯೋಚನೆ ಮಾಡುತ್ತೇವೆ. ಮಂಜೂರು ಮಾಡಿದ ಮೇಲೆ ಅಲ್ಲಿ ಅನ್ಯಾಯ ಆಗುತ್ತದೆ ಎನ್ನತಕ್ಕದ್ದು ಗೊತ್ತಾಗುತ್ತದೆ. ಅದು ನಿಜ, ನೀವು ಹೇಳತಕ್ಕದ್ದು. ಗವರ್ನಮೆಂಟ್ ಸ್ಕೂಲೂ ಇದೆ, ಏಡೆಡ್ ಸ್ಕೂಲೂ ಇದೆ. ಆ ಏಡೆಡ್ ಸ್ಕೂಲು ಬಹಳ ವರ್ಷದಿಂದ ನಡೆಯುತ್ತಿರತಕ್ಕದ್ದು. ಆ ಏಡೆಡ್ ಸ್ಕೂಲು ಮುಚ್ಚೋಣವೆಂದರೆ ಅಲ್ಲಿ ಸ್ಟ್ರೆಂಗ್ಥೇ ಇಲ್ಲ, ನಡೆಯುವುದೇ ಇಲ್ಲ. ಆದರೆ ಏಡೆಡ್ ನಾವು ಸುಮ್ಮನೇ ಕೊಡುತ್ತಿದ್ದೇವೆ. ಅಲ್ಲಿ ಇನ್ನೊಂದು ಹೈಸ್ಕೂಲು ಮಂಜೂರು ಆಗಿದೆ. ಹೈಸ್ಕೂಲು ಮಂಜೂರು ಆಗದೇ ಇದ್ದಿದ್ದರೆ ಆ ಏಡೆಡ್ ಸ್ಕೂಲು ಚೆನ್ನಾಗಿ ನಡೆಯುತ್ತಿತ್ತು. ಇದರ ಬಗ್ಗೆ ಆದಷ್ಟು ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಹಳ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಈಗ ಈ ಮಕ್ಕಳ ಹಾಜರಾತಿ ಸಲುವಾಗಿ ಊಟ, ಉಪಚಾರ ಮತ್ತು ಉಡುಪು ಎಲ್ಲಾ ಕೊಡುತ್ತೀರಿ. ಹೀಗೆ ಕೊಡುತ್ತಿರುವುದರಿಂದ ಪರಿಣಾಮ ಏನಾಗಿದೆ ಎನ್ನುವುದನ್ನು ದಯವಿಟ್ಟು ತಿಳಿಸಿ. ಇದರ ಪರಿಣಾಮ ಎಷ್ಟರಮಟ್ಟಿಗೆ ಸದುಪಯೋಗ ಆಗಿದೆಯೋ ಇಲ್ಲವೋ? ಯಾವ್ಯಾವ ಜಿಲ್ಲೆಯೊಳಗೆ ಇದರ ಒಳ್ಳೆಯ ರೀತಿಯ ಪರಿಣಾಮ ಆಗಿದೆ ಎನ್ನುವುದನ್ನು ದಯವಿಟ್ಟು ತಿಳಿಸಿ. ಇನ್ನು ಎರಡನೆಯದು ಮಕ್ಕಳ ಹಾಜರಾತಿ ಸಲುವಾಗಿ ವರ್ಗಗಳನ್ನು ಹೆಚ್ಚಿಸುವುದಕ್ಕೆ ತಾವು ಒಪ್ಪಿಗೆ ಕೊಡುತ್ತೀರಿ. ವರ್ಗಗಳನ್ನು ಹೆಚ್ಚಿಸುವಂತಹ ರೀತಿಯಲ್ಲಿ ಶಿಕ್ಷಕರ ಹುದ್ದೆಗಳನ್ನು ಅಷ್ಟೇ ರೀತಿಯಿಂದ ಸೃಷ್ಟಿಸಬೇಕು. ಆ ಶಿಕ್ಷಕರ ಹುದ್ದೆಯನ್ನು ತಾವು ಮಾಡುವುದಿಲ್ಲ. ಅದಕ್ಕೆ ಸರ್ಕಾರದ ಯಾವ ನಿಲುವು ಇದೆ, ಯಾವ ರೀತಿಯ ಕಾರ್ಯಕ್ರಮ ಹಾಕಿ ಕೊಳ್ಳುತ್ತೀರಿ?

ಶ್ರೀ ಎಚ್.ಜಿ. ಗೋವಿಂದೇಗೌಡ : ಉಪಾಧ್ಯಾಯರ ಸಂಖ್ಯೆ ನಾನು ತಮಗೆ ಕೊಟ್ಟಿದ್ದೇನೆ. 1996- 97ನೇ ಸಾಲಿನಲ್ಲಿ ನಾವು 9 ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಉಪಾಧ್ಯಾಯರ ಸಂಖ್ಯೆ ತುಂಬಾ ಬೇಕಾಗುತ್ತದೆ. ಪ್ರತಿ ವರ್ಷ ನಮಗೆ ಹೆಚ್ಚು ಉಪಾಧ್ಯಾಯರು ಬೇಕಾಗುತ್ತದೆ. ಅದು ಹಿಂದೆ ಬಹಳ ವರ್ಷಗಳಿಂದ ಉಪಾಧ್ಯಾಯರುಗಳನ್ನು ನೇಮಕ ಮಾಡದೇ ಇದ್ದುದರಿಂದ ಸ್ವಲ್ಪ ತೊಂದರೆ ಆಗಿದೆ. ಆದರೂ ಚಿಂತೆ ಇಲ್ಲ. ಈ ವರ್ಷ ಪುನಃ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೇವೆ. ಉಪಾಧ್ಯಾಯರುಗಳ ಅವಶ್ಯಕತೆ ಈ ರಾಜ್ಯದಲ್ಲಿ ತುಂಬಾ ಇದೆ. ರಿಟೈರ್ ಆಗುವವರು ಇರುತ್ತಾರೆ. ಮತ್ತು ಅವರನ್ನು ನೇಮಕ ಮಾಡಿಕೊಳ್ಳಬೇಕು. ಇದೆಲ್ಲವನ್ನೂ ನಾವು ಪರಿಶೀಲನೆ ಮಾಡಿ ಉಪಾಧ್ಯಾಯರುಗಳ ನೇಮಕ ಜಾಸ್ತಿ ಮಾಡಿಕೊಳ್ಳಬೇಕು. ಈ ವರ್ಷ ಹೈಸ್ಕೂಲಿನಲ್ಲಿ 3,500 ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೇವೆ. ಹೊಸದಾಗಿ ಹೈಸ್ಕೂಲುಗಳನ್ನು ಕಳೆದ ವರ್ಷ

ಮಂಜೂರು ಮಾಡಿದ್ದೇವೆ. ಅದಕ್ಕಾಗಿ ನನ್ನ ಸ್ನೇಹಿತರು ಇನ್ನೊಂದು ಪ್ರಶ್ನೆ. ಕೇಳಿದರು. ಕೊಠಡಿಗಳನ್ನು ಕಟ್ಟಿಸುವುದಕ್ಕೋಸ್ಕರ ಲಕ್ಷ ರೂಪಾಯಿ ಒಂದೊಂದು ಕ್ಷೇತ್ರಕ್ಕೆ, ಎಂಎಲ್‌ಎ ಕ್ಷೇತ್ರ ಎಲ್ಲಿದೆಯೋ ಅಲ್ಲಿಗೆ ಕೊಡುತ್ತೇವೆ. ಈ ವರ್ಷ ಹೈಸ್ಕೂಲು ಕೊಡುವುದಿಲ್ಲ. ಕಟ್ಟಡ ಕಟ್ಟಿಸಿ, ನಮಗೆ ಬೇಕಾಗಿರತಕ್ಕ ಉಪಕರಣಗಳನ್ನು ಕೊಡಿ ಎಂದು ಕೇಳಿದ್ದೇವೆ. ಇನ್ನೊಂದು ತಾವು ಕೇಳಿದ್ದುದು ಹಾಜರಾತಿ ಸಲುವಾಗಿ. ಇತ್ತೀಚೆಗೆ ಹಾಜರಾತಿ ಬಹಳ ಇಂಪ್ರೂವ್ ಆಗಿದೆ. ಈಗ ಹಿಂದೆಯೂ ಬಟ್ಟೆ ಕೊಡುತ್ತಿದ್ದೆವು. ಪುಸ್ತಕಗಳನ್ನು ಕೊಡುತ್ತಿದ್ದೆವು. ಮಧ್ಯಾಹ್ನದ ಉಪಹಾರವನ್ನು ಕೊಡುತ್ತಿದ್ದೇವೆ. ಅಕ್ಕಿ ಕೊಡುವುದಕ್ಕೆ ಶುರು ಮಾಡಿದ್ದೇವೆ. ಮೂರು ಕೇಜಿ ಅಕ್ಕಿ ಅಥವಾ ಗೋಧಿ ಕೊಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಉಪಾಧ್ಯಾಯರುಗಳನ್ನು ಹೆಚ್ಚಿಗೆ ನೇಮಕ ಮಾಡಿಕೊಂಡು ಪ್ರಾರಂಭ ಆದ ಮೇಲೆ ಮಕ್ಕಳ ಸಂಖ್ಯೆ ಜಾಸ್ತಿ ಬರುತ್ತದೆ. ಪ್ರತಿಯೊಬ್ಬರೂ ಸಹ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಬೇಕು ಎಂಬ ಜಾಗೃತಿ ಜನರಲ್ಲಿ ಮೂಡಿದೆ. ಇದು ಶುಭ ಚಿಹ್ನೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

+ ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಸಚಿವರು) : ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಕುನ್ನೂರ್‌ರವರು ಲೋಕ ಶಿಕ್ಷಣ ಇಲಾಖೆಯ ಬಗ್ಗೆ ಮಾತನಾಡುತ್ತಾ ಸಾಕ್ಷರತಾ ಆಂದೋಳನಕ್ಕೆ ಹೆಚ್ಚು ಒತ್ತು ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಮಾರ್ಚಿ 1998ರ ವೇಳೆಗೆ 15 ರಿಂದ 35 ವರ್ಷ ವಯಸ್ಸಿನಲ್ಲಿರುವವರಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸುವ ಒಂದು ವಿಶೇಷ ಪ್ರಯತ್ನವನ್ನು ಮಾಡಲಾಗುತ್ತಿದೆ. 1997ರ ಅಕ್ಟೋಬರ್ 2 ರಂದು ಆರಂಭವಾಗಲಿರುವ "ಕನ್ನಡ ನಾಡು ಸಾಕ್ಷರ ನಾಡು" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು 3 ತಿಂಗಳ ಅವಧಿಯಲ್ಲಿ ಮುಗಿಸಲು ಉದ್ದೇಶಿಸಿದೆ. ಇನ್ನು ಧಾವವಾಡ ಜಿಲ್ಲೆಯಲ್ಲಿ ಕೆಲವೆಡೆ ಸಾಕ್ಷರತೆ ಬದಲು ರಾಜಕೀಯ ಪ್ರಚಾರವಾಗುತ್ತಿದೆ ಎಂದಿದ್ದಾರೆ. ಈ ಬಗ್ಗೆ ಶ್ರೀಶೈಲ ಉತ್ತಾರ್ ಎಂಬುವರ ಹೆಸರನ್ನು ತಿಳಿಸಿದ್ದಾರೆ. ಇದು ಗಂಭೀರವಾದ ವಿಷಯವಾದ್ದರಿಂದ ಈ ಬಗ್ಗೆ ಇಲಾಖೆಯ ಒಬ್ಬ ಉನ್ನತಾಧಿಕಾರಿಯಿಂದ ತನಿಕೆ ನಡೆಸಿ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳುತ್ತೇನೆ.

ಇನ್ನು ವೃತ್ತಿ ಶಿಕ್ಷಣ ಕೋರ್ಸುಗಳನ್ನು ನೀಡುವ ಬಗ್ಗೆ 1997- 98ನೇ ಸಾಲಿನಲ್ಲಿ 300 ಕೋರ್ಸುಗಳನ್ನು ಮಂಜೂರು ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಿದೆ. ಏಕೆಂದರೆ ಈ ಕಾರ್ಯಕ್ರಮದಡಿ ಶೇಕಡಾ 100 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರದಿಂದ ಪಡೆಯಬೇಕಾಗಿದೆ. 9ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಾವಧಿ ಅನುದಾನವನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಿರುವುದರಿಂದ ಹೋದ ವರ್ಷ ಹೊಸ ಕೋರ್ಸುಗಳನ್ನು ಆರಂಭಿಸಿಲ್ಲ. ಕೇಂದ್ರ ಸರ್ಕಾರದಿಂದ ಹೊಸ ಕೋರ್ಸುಗಳು ಮಂಜೂರಾಗಿ ಬಂದ ನಂತರ ಮಾನ್ಯ ಸದಸ್ಯರ ಮನವಿಯನ್ನು ಪರಿಗಣಿಸಲಾಗುವುದು.

ಗ್ರಾಮ ಪಂಚಾಯತಿ ಗ್ರಂಥಾಲಯಗಳ ಬಗ್ಗೆ

ಗ್ರಂಥಾಲಯಗಳ ಮಹತ್ವ ಮತ್ತು ಉಪಯುಕ್ತತೆಯ ಬಗ್ಗೆ ಶಾಸಕ ಮಿತ್ರ ಶ್ರೀ ಮುದ್ದಹನುಮಯ್ಯ ಹಾಗೂ ಇತರರು ನೀಡಿರುವ ಅಭಿಪ್ರಾಯಗಳಿಗೆ ಈಗಾಗಲೇ ಈ ನಮ್ಮ ಸರ್ಕಾರದ ಧೋರಣೆಯಂತೆ

೯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಒಂದು ಗ್ರಂಥಾಲಯವನ್ನು ಪ್ರಾರಂಭಿಸುವ ೀಜನೆಯಂತೆ ರಾಜ್ಯಾದ್ಯಂತ ಈಗಾಗಲೇ 1251 ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ರಂಭಿಸಲಾಗಿದೆ. ಈ ಗ್ರಂಥಾಲಯಗಳಲ್ಲಿ ಗ್ರಾಮೀಣ ಜನರಿಗೆ ಅನುಕೂಲವಾಗುವ ಸಾಹಿತ್ಯಕ್ಕೆ ಬಂಧಿಸಿದ ಪುಸ್ತಕಗಳನ್ನು ಹಾಗೂ ಮಾಹಿತಿಗಾಗಿ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಗಿಸಲಾಗುತ್ತಿದೆ. ಇನ್ನು ಮುಂದೆ ಈ ಗ್ರಂಥಾಲಯಗಳಲ್ಲಿ ಗ್ರಾಮೀಣ ಪ್ರದೇಶದ ಓದುಗರ ರುಚಿಗಾಗಿ ಮತ್ತು ಮಾಹಿತಿಯನ್ನು ನೀಡುವ ಪುಸ್ತಕಗಳನ್ನು ಒದಗಿಸಲಾಗುವುದು. 7-98ನೇ ಸಾಲಿನಲ್ಲಿ ಅಂದರೆ ಈ ವರ್ಷ ಇನ್ನೂ 500 ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ರಂಭಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈಗ ಹಾಲಿ ಇರುವ 5600 ಗ್ರಾಮ ಚಾಯಿತಿಯ ಮುಖ್ಯ ಕೇಂದ್ರಗಳಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಿದ ನಂತರ, ಉಳಿದ ದೊಡ್ಡ ಡ್ಡ ಹಳ್ಳಿಗಳಲ್ಲಿಯೂ ಕೂಡ ಗ್ರಂಥಾಲಯ ಸೇವೆಯ ಅಡಿಯಲ್ಲಿ ತರಲು ಪ್ರಯತ್ನಿಸಲಾಗುವುದು. ಕ್ಷರೇ, ಇನ್ನೂ ಹಲವಾರು ಸದಸ್ಯರು ಒಳ್ಳೊಳ್ಳೆಯ ಸಲಹೆ ಕೊಟ್ಟಿರುವುದನ್ನು ಸ್ವೀಕರಿಸುತ್ತಾ, ಸ್ಕರ ಶಿಕ್ಷಣ ಇಲಾಖೆಯ ಕಾರ್ಯಕ್ರಮದಲ್ಲಿ ಶಾಸಕರು ಅವರವರ ಕ್ಷೇತ್ರದಲ್ಲಿ ಆದ್ಯತೆ ಮೇರೆಗೆ ಶಸ್ವಿಗೊಳಿಸಬೇಕೆಂದು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ, ನಮಸ್ಕಾರ.

+ ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) : ಅಧ್ಯಕ್ಷರೇ, ಈಗಾಗಲೇ ಶಿಕ್ಷಣ ಾಖೆಯ ಬೇಡಿಕೆ ಬಗ್ಗೆ ಅನೇಕ ಸದಸ್ಯರು ತಮ್ಮ ತಮ್ಮ ವಿಚಾರಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಣ ಇಲಾಖೆ ಬಹಳ ಮಹತ್ತರವಾದ ಇಲಾಖೆ ಎಂದು ನಾನು ಹೇಳಬೇಕಾಗಿಲ್ಲ. ಏಕೆಂದರೆ ಇಡೀ ಶವನ್ನು ಕಟ್ಟುವ, ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ಶಿಕ್ಷಣ ಇಲಾಖೆಯ ಮೇಲಿದೆ. ನವರನ್ನು ಸತ್ಪ್ರಜೆಗಳನ್ನಾಗಿ ತಯಾರು ಮಾಡುವ ಜವಾಬ್ದಾರಿಯುತ ಇಲಾಖೆ ಇದು. ನಮ್ಮ ಶ, ಸಮಾಜ ಯಾವುದರ ಮೇಲಿದೆ ಅಂದರೆ ಒಳ್ಳೆಯ ಪ್ರಜೆಗಳ ಮೇಲೆ ನಿಂತಿದೆ. ಒಳ್ಳೆಯ ಜೆಗಳು ಯಾವುದರಿಂದಾಗುತ್ತಾರೆ ಅಂದರೆ ಒಳ್ಳೆಯ ಶಿಕ್ಷಣದಿಂದ. ಒಳ್ಳೆಯ ಶಿಕ್ಷಣ ಯಾವ ಕಡೆಯಿಂದ ುತ್ತದೆ ಅಂದರೆ ಒಳ್ಳೆಯ ಉಪಾಧ್ಯಾಯರಿಂದ. The quality of nation depends on the ality of citizens, the quality of citizens depends on the quality of education, l the quality of education depends on the quality of teachers. ಆದ್ದರಿಂದ ಮಟ್ಟದ ಸಮಾಜವನ್ನು ಕಟ್ಟುವಂತಹ ಜವಾಬ್ದಾರಿ ಹೆಚ್ಚು ಶಿಕ್ಷಕರ ಮೇಲಿದೆ. ಆದ್ದರಿಂದಲೇ ವು ಹೆಚ್ಚು ಹೆಚ್ಚು ಶಿಸ್ತು ಶಿಕ್ಷಣ ಕ್ಷೇತ್ರದಲ್ಲಿ ಬರಬೇಕೆಂಬುದು ನಮ್ಮ ಉದ್ದೇಶ. ಈ ಕ್ಷೇತ್ರದಲ್ಲಿ ಶಿಸ್ತು ದರೆ ಸಮಾಜದಲ್ಲಿ ಶಿಸ್ತು ಬಂದಂತೆ. ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಶೈಕ್ಷಣಿಕ ಮಟ್ಟ ಬೆಳೆದರೆ ಮಾಜದ ಶೈಕ್ಷಣಿಕ ಮಟ್ಟ ಹೆಚ್ಚಿಗೆ ಆಗುತ್ತದೆ. ಇದು ನಿರ್ವಿವಾದ. ಈ ದಿಕ್ಕಿನಲ್ಲಿ ನಮ್ಮ ರಾಜ್ಯದಲ್ಲಿ ಮ್ಮ ಗೋವಿಂದೇಗೌಡರು ಇರಬಹುದು, ಕೃಷ್ಣಪ್ಪನವರಿರಬಹುದು, ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಮ್ಮ ುಖ್ಯಮಂತ್ರಿಗಳ ಆಶೀರ್ವಾದದಿಂದ ಉತ್ತಮವಾದ ಕಾರ್ಯಗಳನ್ನು ನಾವು ಶಕ್ತಿಮೀರಿ ಒಳ್ಳೆಯ ವಸ್ಥೆ ತರುವುದಕ್ಕೆ ಒಳ್ಳೆಯ ಶಿಕ್ಷಣ ಪದ್ಧತಿ ತರುವುದಕ್ಕೆ ಪ್ರಯತ್ನ ಮಾಡುತ್ತಾ ಬಂದಿದ್ದೇವೆ. ೀವಿಂದೇಗೌಡರ ವ್ಯಾಪ್ತಿಯಲ್ಲಿ ಬರುವವರು ಶೇಕಡ 94 ಮಂದಿ. ನನ್ನ ವ್ಯಾಪ್ತಿಗೆ ಬರುವವರು ಕಡ 6ರಷ್ಟು. ಅಂದರೆ ಉನ್ನತ ಶಿಕ್ಷಣಕ್ಕೆ ಬರುವವರು ಅವರು. ಆದರೆ ಶೇಕಡ 6ರಷ್ಟೇ ಸಮಾಜದ

ಜವಾಬ್ದಾರಿ ಹೊತ್ತುಕೊಳ್ಳುವ ಜನ. ಇನ್ನು 95 ಭಾಗ ಕೆಳಗಡೆ ಹೊರಟುಹೋಗುತ್ತಾರೆ. ಸಮಾ ಒಳ್ಳೆಯ ಇಂಜಿನಿಯರ್, ಡಾಕ್ಟರು, ರಾಜಕಾರಣಿ ವಕೀಲರು, ಅಥವಾ ಪತ್ರಿಕೋದ್ಯಮದಲ್ಲಿ ಬರು ಇವರೆಲ್ಲಾ ಆ ಶೇಕಡ 6ರಲ್ಲೇ ಬರುವವರು. ಆದ್ದರಿಂದ ಬಹಳ ಮುಖ್ಯವಾದ ಅಂಗ ನಮ್ಮ ಶಿಕ್ಷಣ. ವಿವಿಧ ಕ್ಷೇತ್ರಗಳ ಗಣ್ಯರು ಈ ವರ್ಗದಿಂದ ಹೊರಬಂದು ಸಮಾಜದ ಜವಾ ಹೊತ್ತುಕೊಳ್ಳುತ್ತಾರೆ. ಆದ್ದರಿಂದ ಈ ಮಟ್ಟದಲ್ಲಿ ಉನ್ನತವಾದ ಉತ್ತಮವಾದ ಶಿಕ್ಷಣದ ಗುಣಮ ನಾವು ತರಬೇಕಾಗುತ್ತದೆ. ನನ್ನ ವ್ಯಾಪ್ತಿಗೆ ಬರುವಂಥದ್ದು ಒಂದು ತಾಂತ್ರಿಕ ಶಿಕ್ಷಣ, ಮತ್ತೆ ಕಾಲೇಜು ಶಿಕ್ಷಣ, ಮತ್ತೊಂದು ವಿಶ್ವ ವಿದ್ಯಾನಿಲಯಗಳು. ತಾಂತ್ರಿಕ ಶಿಕ್ಷಣದಲ್ಲಿ ಇಂಜಿನಿಯ ಕಾಲೇಜುಗಳು ಪಾಲಿಟೆಕ್ನಿಕ್ಸ್ ಬರುತ್ತವೆ. ನಮ್ಮ ರಾಜ್ಯದಲ್ಲಿ ಇದುವರೆಗೆ 53 ಇಂಜಿನಿಯ ಕಾಲೇಜುಗಳಿವೆ, ಅದರಲ್ಲಿ ಸುಮಾರು 78 ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದಾರೆ.

4.40 ಪಿ.ಎಂ

ಮೊದಲನೇ ವರ್ಷ ಸುಮಾರು 20 ಸಾವಿರ ವಿದ್ಯಾರ್ಥಿಗಳು ಸೇರುತ್ತಾರೆ. ಒಟ್ಟು ವರ್ಷಗಳು ಸೇರಿ ಸುಮಾರು 78,80 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾ ಇದ್ದಾ ವರ್ಷ ಹೊಸದಾಗಿ ನಾವು 11 ಕಾಲೇಜುಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ಅವರು ಈಗಾಗಲೇ ಮೊನ್ನೆ ತಾನೇ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದುದರಿಂದ ಸಾವಿರ ವಿದ್ಯಾರ್ಥಿಗಳು ಜಾಸ್ತಿ ಆಗುತ್ತಾರೆ. ಅದೇ ರೀತಿ ಪಾಲಿಟೆಕ್ನಿಕ್ ತೆಗೆದುಕೊಂಡರೆ ರಾಜ್ಯದಲ್ಲಿ ಸುಮಾರು 180 ಪಾಲಿಟೆಕ್ನಿಕ್, ಡಿಪ್ಲೊಮಾ ಕಾಲೇಜುಗಳು ಬರುತ್ತವೆ. ಇದರಲ್ಲಿ ಮು ಸಾವಿರ ಐನೂರು ವಿದ್ಯಾರ್ಥಿಗಳು ಪ್ರಥಮ ವರ್ಷದಲ್ಲಿ ಸೇರುತ್ತಾರೆ. ಒಟ್ಟು ಸುಮಾರು 91 ವಿದ್ಯಾರ್ಥಿಗಳು ಡಿಪ್ಲೊಮಾ ತರಗತಿಯಲ್ಲಿ ವ್ಯಾಸಂಗ ಮಾಡುತ್ತಾ ಇದ್ದಾರೆ. ಈ ಒಂದು ತಾ ಶಿಕ್ಷಣಕ್ಕೆ ತರತಕ್ಕಂತಹ ಹಣ ಈ ವರ್ಷ ಪ್ಲಾನ್‌ನಲ್ಲಿ ಸುಮಾರು ಹತ್ತು ಕೋಟಿ ರೂಪಾಯಿ ಇದೆ. ಮತ್ತು ನಾನ್ ಪ್ಲಾನ್‌ನಲ್ಲಿ ಸುಮಾರು ಮುವತ್ತಾರು ಕೋಟಿ ಇಪ್ಪತ್ತೇಳು ಲಕ್ಷ ಇದೆ. ನಲವತ್ತಾರು ಕೋಟಿ ಇಪ್ಪತ್ತೇಳು ಲಕ್ಷ ಇದೆ. ಹೋದ ವರ್ಷ ನಲವತ್ತೇಳು ಕೋಟಿ ರೂ. ಇ ವರ್ಷ ಒಂದು ಕೋಟಿ ರೂ. ಕಡಿಮೆಯಾಗಿದೆ. ಏಕೆಂದರೆ ನಾನ್ ಪ್ಲಾನ್‌ನಲ್ಲಿ ಜಾಸ್ತಿ ಆಗಿರುವುದರಿಂದ ಅದನ್ನು ನಾವು ಸ್ವಲ್ಪ ಕಡಿತ ಮಾಡಿದ್ದೇವೆ. ಈಗ ಈ ಒಂದು ತಾಂತ್ರಿಕ ಮಟ್ಟವನ್ನು ಹೆಚ್ಚಿಸಬೇಕಾದರೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಏಕೆಂದರೆ ಕಂಪ್ಯೂಟರ್ ಎಜ್ಯುಕೇಷನ್ ಇರಬಹುದು, ನೆಟ್‌ವರ್ಕ್ಸ್ ಇರಬಹುದು, ನಮ್ಮ ರಾಜ್ಯ ವರ್ಷಗಳಿಂದ, ಡಾ. ವಿಶ್ವೇಶ್ವರಯ್ಯನವರ ಕಾಲದಿಂದಲೂ ಇಡೀ ರಾಷ್ಟ್ರದಲ್ಲೇ ತಾಂತ್ರಿಕ ಶಿ ಹೆಸರುವಾಸಿಯಾದಂತಹ ರಾಜ್ಯ. ಹೆಚ್ಚು ಸವಲತ್ತುಗಳು, ಇನ್‌ಫ್ರಾಸ್ಟ್ರಕ್ಚರ್ ಎಂದು ಏನು ಹೇಳು ಅದು ಇಡೀ ದೇಶದಲ್ಲಿ ನಮ್ಮ ಕರ್ನಾಟಕದಲ್ಲಿಯೇ ಚೆನ್ನಾಗಿದೆ. ಅದನ್ನು ಉಪಯೋಗಿಸಿಕೊಳ್ಳ ನಮ್ಮ ಜವಾಬ್ದಾರಿ. ಅದರಲ್ಲಿ ನಮ್ಮ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸ್ವಲ್ಪ ಶಿಸ್ತು ಬ ಇನ್‌ಟೇಕ್ ನಿಗದಿ ಮಾಡಿರತಕ್ಕಂಥದ್ದೇ ಒಂದು ಕಾಲೇಜುಗಳಲ್ಲಿ ಸೇರಿಸತಕ್ಕಂತಹ ವಿದ್ಯಾರ್ಥಿ ಬೇರೆ ಆಗಿದೆ. ಮಾನ್ಯ ಸಭಾಧ್ಯಕ್ಷರೆ, ಪ್ರತಿ ವರ್ಷ ನಿಯಂತ್ರಣ ಮಾಡುವಂಥದ್ದು ಬಹಳ ಕಷ್ಟವಾ

ಕಾಲೇಜಿನಲ್ಲಿ 150 ವಿದ್ಯಾರ್ಥಿಗಳ ನಿಗದಿ ಇದ್ದರೆ ಅವರು 250 ದಾಖಲಾತಿ ಮಾಡುತ್ತಾ ರೆ. ಕೇಳದೆ ಮಾಡದೆ ಸೇರಿಸಿಕೊಳ್ಳತಕ್ಕಂತಹದ್ದು, ನಂತರ ಕೋರ್ಟಿನಿಂದ ಬರುವುದು, ಾರಿಣಿಗಳ ಒತ್ತಡ ತರುವುದು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನೀವು ಅವರನ್ನು ರೆಗ್ಯುಲರೈಸ್ ಎಂದು ಪರಿಪಾಠ ಬಹಳ ವರ್ಷಗಳಿಂದ ನಡೆದುಕೊಂಡು ಬರುತ್ತಾ ಇದೆ. ಆದರೆ ಒಂದು ದಿಂದ ಈಚೆಗೆ ನಮ್ಮ ಅವಧಿಯಲ್ಲಿ ಬಹಳ ಸಂತೋಷದಿಂದ ಹೇಳುತ್ತಾ ಇದ್ದೇವೆ, ಒಂದು ಅಡ್‌ಮಿಷನ್ ಆಗಿಲ್ಲ. ಇದು ಒಂದು ಬಹಳ ಒಳ್ಳೆಯ ಶಿಸ್ತು ನಮ್ಮ ತಾಂತ್ರಿಕ ಶಿಕ್ಷಣದಲ್ಲಿ ದೆ ಎಂದು ಹೇಳುವುದಕ್ಕೆ ಹೆಮ್ಮೆ ಎನಿಸುತ್ತದೆ. ಈಗ ಇರುವ 53 ಕಾಲೇಜುಗಳಲ್ಲಿ ಯಾವುದೇ ್ರಕ ಕಾಲೇಜಿನವರು ಒಂದು ಎಕ್ಸ್‌ಸ್ ಅಡ್‌ಮಿಷನ್ ಮಾಡಿಸಿಲ್ಲ. ಅಂದರೆ ನಾವು ಎಷ್ಟರ ಗೆ ನಮ್ಮ ತಾಂತ್ರಿಕ, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶಿಸ್ತನ್ನು ತಂದಿದ್ದೇವೆ ಎಂಬುದು ತ್ತಗುತ್ತದೆ. ಮತ್ತು ಡಿಪ್ಲೊಮಾ ಕಾಲೇಜಿನವರಿಗೂ ಒಂದು ಒಳ್ಳೆಯ ಸ್ಕೀಂ ತಂದಿದ್ದೇವೆ. ಾಹರಣೆಗೆ ಮಾನ್ಯ ಅಧ್ಯಕ್ಷರೆ, ಡಿಪ್ಲೊಮಾ ಮೂರು ವರ್ಷದಲ್ಲಿ ಓದುವಾಗ ಕೆಲವು ವಿಷಯಗಳನ್ನು ತ್ತಾರೆ, ಅವರು ಏನಾದರೂ ಇಂಜಿನಿಯರಿಂಗ್‌ಗೆ ಹೋಗಬೇಕಾದರೆ ಅದೇ ವಿಚಾರಗಳನ್ನು ಓದುತ್ತಾರೆ. ಆದುದರಿಂದ ಅವರ ವಯಸ್ಸಿನಲ್ಲಿ ಒಂದು ವರ್ಷ ಹಾಳಾಗುತ್ತದೆ ಮತ್ತು ಅದೇ ರಗಳು ಡೂಪ್ಲಿಕೇಷನ್ ಆಗುತ್ತದೆ. ಎಂದು ಹೇಳಿ ನಾವು ಒಂದು ಹೊಸ ಯೋಜನೆ ತಂದು, ವ ಯಾವ ವಿಷಯಗಳಲ್ಲಿ ಓದಿದ್ದಾರೆ ಅದೇ ವಿಷಯಗಳನ್ನು ಇಂಜಿನಿಯರಿಂಗ್‌ನಲ್ಲಿ ಓದತಕ್ಕಂತಹ ್ಯಕತೆ ಇಲ್ಲ. ಆ ವಿಷಯಗಳನ್ನು ಕಡಿತಗೊಳಿಸಿ ಅವರ ಒಂದು ಡ್ಯೂರೇಷನ್ ಏನು ಇದೆ ನಾಲ್ಕು ಓದತಕ್ಕಂತಹದ್ದು ಅದು ಮೂರು ವರ್ಷಕ್ಕೆ ಆಗಬೇಕು ಎಂದು ಮಾಡಿದ್ದೇವೆ. ಅಂದರೆ ರು ವರ್ಷ ಡಿಪ್ಲೊಮಾ, ಮೂರು ವರ್ಷ ಇಂಜಿನಿಯರಿಂಗ್ ಆಗಬೇಕು ಎನ್ನತಕ್ಕಂಹದ್ದು ಒಂದು ಸ ನಿಯಮವನ್ನು ತಿದ್ದುಪಡಿ ಮಾಡಿ ವಿದ್ಯಾರ್ಥಿಗಳಿಗೆ ಒಂದು ಒಳ್ಳೆಯ ವ್ಯವಸ್ಥೆಯನ್ನು ಈ ಸಲ ದ್ದೇವೆ. ಅದು ಒಂದು ಉತ್ತಮವಾದಂತಹ ವ್ಯವಸ್ಥೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ್ತೊಂದು ವಿಚಾರ ವೈಡ್ ಏರಿಯಾ ನೆಟ್ ವರ್ಕ್ ಎಂದು ಹೇಳಿ ಈಗಾಗಲೇ ಶ್ರೀಮತಿ ಪ್ರಮೀಳಾ ರ್ಗಿ ಅವರು ಪ್ರಾಥಮಿಕ ಶಿಕ್ಷಣದಲ್ಲಿ ತರಬೇಕು ಎಂದು ಒಂದು ಸಲಹೆ ಕೊಟ್ಟಿದ್ದಾರೆ. ಈ ್ಯೂಟರ್ಸ್ ಪ್ರತಿಯೊಂದು ಕಾಲೇಜಿನಲ್ಲೂ ಇದೆ. ಡಿಪ್ಲೊಮಾ ಕಾಲೇಜಿನಲ್ಲಿ ಇದೆ, ಪಾಲಿಟೆಕ್ನಿಕ್ ೇಜಿನಲ್ಲಿ ಇದೆ, ಇಂಜಿನಿಯರಿಂಗ್ ಕಾಲೇಜಿನಲ್ಲಿ ಇದೆ. ಕೆಲವು ವಿಚಾರಗಳನ್ನು ವಿಚಾರ ವಿನಿಮಯ ಡಬೇಕು ಎಂದರೆ, ಒಂದು ವಿಷಯಗಳನ್ನು ತಿಳಿದು ಕೊಳ್ಳಬೇಕು ಎಂದರೆ ನಾವು ಪತ್ರ ವ್ಯವಹಾರ ಡಬೇಕು. ಅದಕ್ಕೆ ಅವರು ಉತ್ತರ ಕೊಡುವುದಕ್ಕೆ ಎಂಟು, ಹತ್ತು ದಿವಸ ತೆಗೆದುಕೊಳ್ಳತಕ್ಕಂತಹದ್ದು, ಷ್ಟು ಕ್ಲಾರಿಫಿಕೇಷನ್ ಮಾಡಬೇಕು ಎಂದರೆ, ಎಷ್ಟು ಸೀಟ್ ಇದೆ ಎಂದು ತಿಳಿದುಕೊಳ್ಳಬೇಕಾದರೆ ವ್ಯವಹಾರ ಮಾಡಬೇಕು. ಎಷ್ಟು ರಿಸರ್ವೇಷನ್ ಇದೆ ಎಂದು ತಿಳಿದುಕೊಳ್ಳಬೇಕಾದರೆ ಪತ್ರ ಹಾರ ಮಾಡಬೇಕು. ಹೀಗಾಗಿ ಬಹಳ ವಿಳಂಬ ಆಗತಕ್ಕಂತಹ ವಿಚಾರ ಇದೆ. ಅಲ್ಲಿ ಎಷ್ಟು ಜನ ರು ಇದ್ದಾರೆ, ಅವರ ಬಯೋಡೇಟಾ ಮತ್ತು ಎಲ್ಲಾ ವಿಚಾರಗಳ ಬಗ್ಗೆ ಪತ್ರವ್ಯವಹಾರಗಳಿಂದ ರ್ನುಗಟ್ಟಲೆ ಆಗತಕ್ಕಂತಹ ಪರಿಸ್ಥಿತಿ ಇದೆ. ಆದುದರಿಂದ ಈ ವರ್ಷ ಈ ಒಂದು ವ್ಯವಸ್ಥೆ

ತಂದು, ಪ್ರತಿಯೊಂದನ್ನೂ ಕಂಪ್ಯೂಟರೈಸ್ ಮಾಡಿ, ಆ ನೆಟ್‌ವರ್ಕ್‌ನಲ್ಲಿ ಒಂದು ನಿಮಿಷ ಎಲ್ಲಾ ಕಡೆ ಏನು ವಿಚಾರಗಳು ಇದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಈ ಒಂದು ವ ಪ್ರಥಮ ಬಾರಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರುತ್ತದೆ. ಇದಕ್ಕೆ ಎರಡು ಕ ಖರ್ಚಾಗುತ್ತದೆ. ಆದುದರಿಂದ ಈಗ ಇರತಕ್ಕಂತಹ ಕಂಪ್ಯೂಟರ್ ಉಪಯೋಗಿಸಿಕೊಂಡು ಈ ಒಂದು ಸ್ಕೀಂನ್ನು ತಂದರೆ ಇಡೀ ನಮ್ಮ ಭಾರತದಲ್ಲೇ ವೈಡ್ ಏರಿಯಾ ನೆಟ್‌ವರ್ಕ್ ಈ ಒ ತಾಂತ್ರಿಕ ಶಿಕ್ಷಣದಲ್ಲಿ ಸಿಗುತ್ತದೆ ಎಂಬುದು ನನ್ನ ಆಸೆ. ಇದನ್ನು ನಾವು ಈ ವರ್ಷ ಮಾಡ ಇದ್ದೇವೆ. ಮತ್ತು ಪ್ರೊಫೆಷನಲ್ ಕಾಲೇಜಿನಲ್ಲಿ ಈಗಾಗಲೇ 1993 ರಿಂದ ಸಿ.ಇ.ಟಿ. ಪರೀಕ್ಷೆ ವ ಪ್ರಾರಂಭವಾಯಿತು, ಇದು ನಾಲ್ಕನೇ ವರ್ಷ. ಎರಡು ವರ್ಷಗಳಿಂದ ಈಚೆಗೆ ಅನೇಕ ಬದಲಾವಣೆಗ ತಂದು ಇವತ್ತು, ಸುಮಾರು ಇಪ್ಪತ್ತೈದು ಸಾವಿರ ವಿದ್ಯಾರ್ಥಿಗಳು ಇಂಜಿನಿಯರಿಂಗ್, ಮೆಡಿಕ ಮತ್ತು ಡೆಂಟಲ್ ಕಾಲೇಜುಗಳಿಗೆ ಸೇರುತ್ತಾರೆ. ಮೆರಿಟ ತೆಗೆದುಕೊಂಡಿರುತ್ತಾರೆ, ಆದರೆ ಒ ಅನುಮಾನ ಇತ್ತು. ಏನೆಂದರೆ ಯಾರು ಯಾರು ದೊಡ್ಡವರ ಮಕ್ಕಳು, ಐಎಎಸ್ ಅಧಿಕಾ ಮಕ್ಕಳು ಮಿನಿಸ್ಟರ್ಸ್ ಮಕ್ಕಳು ಇರುತ್ತಾರೆ, ಅವಾರಿಗೆ ಮೆರಿಟ್ ಇಲ್ಲದೇ ಇದ್ದರೂ ಒಳ್ಳೆಯ ಕಾಲೇ ಸೀಟ್ ಕೊಡುತ್ತಾರೆ ಎಂಬ ಭಾವನೆ ಸಮಾಜದಲ್ಲಿ ಮೂಡಿತ್ತು. ಆದರೆ ಹೋದ ವರ್ಷದ ವ್ಯವಸ್ಥ ಈ ವರ್ಷದ ವ್ಯವಸ್ಥೆಯನ್ನು ತಂದಿರತಕ್ಕಂತದ್ದನ್ನು ನೋಡಿದರೆ ಎಷ್ಟು ಟ್ರಾನ್ಸ್‌ಫರೆಂಟಾಗಿ ನಡೆಯ ಇದೆ, ಎಂದು ನೋಡಿದರೆ, ಪ್ರತಿಯೊಬ್ಬರೂ ಈ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಇದ ಒಬ್ಬ ಚೀಫ್ ಸೆಕ್ರೆಟರಿ ಮಗ ಇರಲಿ, ಎಜ್ಯುಕೇಷನ್ ಮಿನಿಸ್ಟರ್ ಮಕ್ಕಳೇ ಇರಲಿ, ಯಾರೇ ಇ ಎಲ್ಲರೂ ಕ್ಯೂನಲ್ಲಿ ನಿಲ್ಲಬೇಕು. ಅವರ ಅರ್ಹತೆಯ ಆಧಾರದ ಮೇಲೆ, ಅವರು ಪಡೆದಿರತಕ್ಕಂ ಅಂಕಗಳ ಮೇಲೆ ಅವರು ಸೀಟು ಪಡೆಯಬೇಕು ಎನ್ನತಕ್ಕಂತಹ ವ್ಯವಸ್ಥೆಯನ್ನು ನಾವು ಬ ವ್ಯವಸ್ಥಿತವಾಗಿ ಸಿಇಟಿ ಆ್ಯಕ್ಟ್‌ಗೆ ರೂಲ್ಸ್‌ಗಳನ್ನು ತಂದು, ಎಲ್ಲಾ ವರ್ಗದಲ್ಲಿ ಅಂದರೆ ಅದು ಸ್ಪೋಃ ವರ್ಗ ಇರಬಹುದು, ಎನ್‌ಸಿಸಿ ವರ್ಗ ಇರಬಹುದು, ನಾನ ಕರ್ನಾಟಕ ವರ್ಗ ಇರಬಹು ಕರ್ನಾಟಕ ವರ್ಗ ಇರಬಹುದು ಎಲ್ಲಾ ವರ್ಗದವರಿಗೂ ಮೀಸಲಾತಿ ಒದಗಿಸಿದ್ದೇವೆ. ಆದರ ಜೊ ರೂರಲ್ ಅವರಿಗೆ ಗ್ರಾಮೀಣ ಪ್ರದೇಶದವರಿಗೆ, ನಗರ ಪ್ರದೇಶದವರಿಗೆ, ಅದರಲ್ಲಿ ಪರಿ ಜಾತಿಯವರು ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶ, ಹಿಂದುಳಿದ ವರ್ಗದವರಿಗೂ ಗ್ರಾಮಿ ಪ್ರದೇಶ, ನಗರ ಪ್ರದೇಶ. ಈ ಎಲ್ಲಾ ಹಂತದಲ್ಲೂ ಒಬ್ಬರಿಗೂ ಯಾವುದೇ ರೀತಿಯ ಅನ್ಯಾ ಆಗದಂತೆ ಒಂದು ವ್ಯವಸ್ಥೆಯನ್ನು ತಂದಿದ್ದೇವೆ. ಇಡೀ ಭಾರತದಲ್ಲೇ ಮೆಚ್ಚುಗೆ ಆಗತಕ್ಕಂತಹ ಸಿ ವ್ಯವಸ್ಥೆಯನ್ನು ತಂದಿದ್ದೇವೆ. ಮತ್ತು ಕಾಲೇಜು ಶಿಕ್ಷಣದ ಬಗ್ಗೆ ಹೇಳುವುದಾದರೆ, ನಮ್ಮ ಕರ್ನಾ ರಾಜ್ಯದಲ್ಲಿ ಸುಮಾರು 149 ಸರ್ಕಾರಿ ಕಾಲೇಜುಗಳು ಇವೆ. ಸುಮಾರು 300 ಖಾಸಗಿ ಕಾಲೇಜು ಇವೆ. ಇದಕ್ಕೆ ನಾವು ಪ್ಲಾನ್‌ನಲ್ಲಿ ಇಟ್ಟಿರತಕ್ಕ ಹಣ ಸುಮಾರು ಒಂಬತ್ತು ಕೋಟಿ ಎಪ್ಪತ್ತೈದು ನಾನ್ ಪ್ಲಾನ್‌ನಲ್ಲಿ ತೆಗೆದುಕೊಂಡರೆ 183 ಕೋಟಿ 40 ಲಕ್ಷ ಇದೆಲ್ಲಾ ಸಂಬಳಕ್ಕೆ ಹೋಗುತ್ತಿದೆ. ಬಹಳ ಭ್ರಷ್ಟಾಚಾರ ಇರುವುದು ನಮ್ಮ ಗಮನಕ್ಕೆ ಬಂದಿದೆ. ಕಾಲೇಜು ಶಿಕ್ಷಣ ನಿರ್ದೇಶನಾಲಯದ ಜಂಟೀ ನಿರ್ದೇಶನದ ಮಟ್ಟದಲ್ಲಿ ಭ್ರಷ್ಟಾಚಾರ ಇದೆ ಎಂದು ನಮ್ಮ ಗಮನಕ್ಕೆ ಬಂದ ಮೇಲೆ ಒಂ

ವರ್ಷದಿಂದ ಈಚೆಗೆ ಅನೇಕ ಸುಧಾರಣೆಗಳನ್ನು ನಾವು ತಂದಿದ್ದೇವೆ. ಪ್ರಥಮ ಬಾರಿಗೆ ನಮ್ಮ ಕಾಲೇಜು ಶಿಕ್ಷಣದ ನೇತೃತ್ವವನ್ನು ಸೀನಿಯರ್ ಐಎಎಸ್ ಅಧಿಕಾರಿ ಆಗಿರತಕ್ಕಂತಹ ಒಬ್ಬ ಕಮೀಷನರ್ ವಹಿಸಿಕೊಳ್ಳಬೇಕು. ಈ ಇಲಾಖೆಯನ್ನು ಉನ್ನತೀಕರಣಗೊಳಿಸಿ, ಮತ್ತು ರೀ ಆರ್ಗನೈಸ್ ಮಾಡಿ, ಡಿಪಾರ್ಟ್‌ಮೆಂಟ್‌ಗಳಲ್ಲಿ ನಾವು ಈ ಒಂದು ಭ್ರಷ್ಟಾಚಾರ ನಿರ್ಮೂಲನ ಮಾಡತಕ್ಕಂತಹ ಪ್ರಯತ್ನವನ್ನು ಮಾಡಿದ್ದೇವೆ. ಮತ್ತು ಪ್ರಥಮ ಬಾರಿಗೆ ನಾವು ಕೆಲವು ಸುಧಾರಣೆಗಳನ್ನು ತಂದಿದ್ದೇವೆ. ಅದೇನೆಂದರೆ ಲೆಕ್ಚರರ್‌ಗಳಲ್ಲಿ ಮೊದಲು ಯಾವ ಒಂದು ಸೀನಿಯಾರಿಟಿ ಇರುತ್ತಿರಲಿಲ್ಲ ಅವರಲ್ಲಿ ಯಾರು ಸೀನಿಯರ್ ಲೆಕ್ಚರರ್ ಆಗಿರುತ್ತಾರೆ ಅವರನ್ನು ಪ್ರಿನ್ಸಿಪಾಲ್ ಮಾಡತಕ್ಕಂತಹ ವ್ಯವಸ್ಥೆ ಇತ್ತು. ಕೇಡರ್ ಇರಲಿಲ್ಲ. ಆದರೆ ಇವತ್ತು ಪ್ರಥಮ ಬಾರಿಗೆ ಪ್ರಿನ್ಸಿಪಾಲ್ ಕೇಡರ್‌ಗಳನ್ನು ಸೃಷ್ಟಿಮಾಡಿ ಅವರನ್ನು ಗ್ರೇಡ್ ಒನ್ ಪ್ರಿನ್ಸಿಪಾಲ್ ಗ್ರೇಡ ಟೂ ಪ್ರಿನ್ಸಿಪಾಲ್ ಎಂಬ ಹುದ್ದೆಗಳನ್ನು ಸೃಷ್ಟಿ ಮಾಡಿ ಆಯಾಯಾ ಕಾಲೇಜುಗಳನ್ನು ಗುರುತಿಸಿ ಅವರ ಅರ್ಹತೆಗೆ ತಕ್ಕಂತೆ, ಅವರ ಸೀನಿಯಾರಿಟಿಗೆ ತಕ್ಕಂತೆ ಅವರನ್ನು ನೇಮಕ ಮಾಡುವಂತಹ ಒಂದು ಪ್ರಯತ್ನವನ್ನು ಮಾಡಿದ್ದೇವೆ. ಮತ್ತು ಮಕ್ಕಳಲ್ಲಿ ಶಿಸ್ತು ಬೆಳೆಯಬೇಕು, ದೇಶಪ್ರೇಮ ಬೆಳೆಯಬೇಕು, ಸಮಯ ಪ್ರಜ್ಞೆ ಇರಬೇಕು, ಒಳ್ಳೆಯ ಪ್ರಜೆಗಳು ಆಗಬೇಕು. ಆದರೆ ಇವುಗಳೆಲ್ಲಾ ಬಹಳ ವರ್ಷಗಳ ಹಿಂದೆ ಇತ್ತು. ಆದರೆ ಈವತ್ತಿನ ದಿನಗಳಲ್ಲಿ ಇವೆಲ್ಲಾ ಕಣ್ಮರೆಯಾಗುತ್ತಿವೆ. ಅದಕ್ಕೋಸ್ಕರ ಇದಕ್ಕೆ ಪುನರ್ ಜೀವ ಕೊಡಬೇಕಾದರೆ ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬ ಒಂದು ತೀರ್ಮಾನಕ್ಕೆ ಬಂದು, ಪ್ರಥಮ ಬಾರಿಗೆ ಎನ್‌ಸಿಸಿ, ಎನ್.ಎಸ್.ಎಸ್.ಗಳನ್ನು ಕಡ್ಡಾಯ ಮಾಡಬೇಕು ಮತ್ತು ಈ ವಿಷಯದಲ್ಲಿ ಹೆಣ್ಣು ಮಕ್ಕಳು ಇರಬಹುದು, ಗಂಡು ಮಕ್ಕಳು ಇರಬಹುದು ಇಬ್ಬರಿಗೂ ಕಡ್ಡಾಯ ಮಾಡಬೇಕು ಎಂಬ ತೀರ್ಮಾನಕ್ಕೆ ಬಂದೆವು. ಏಕೆಂದರೆ ಶಿಸ್ತನ್ನು ತರಬೇಕಾದರೆ ಇದು ಒಂದು ಅಸ್ತ್ರ ಆಗುತ್ತದೆ ಎಂಬ ದೃಷ್ಟಿಯಿಂದ ಈ ವ್ಯವಸ್ಥೆಯನ್ನು ತರಬೇಕು ಎಂದು, ಮತ್ತು ಅದನ್ನು ಈ ವರ್ಷದಿಂದ ತರಬೇಕಾದರೆ ಅದಕ್ಕೆ ಒಂದು ಸಮಿತಿ ರಚನೆ ಮಾಡಿದ್ದೇವೆ. ಆ ಸಮಿತಿ ಕಮಿಷನ್‌ರವರ ನೇತೃತ್ವದಲ್ಲಿ ರಚನೆಯಾಗಿದೆ. ಬಹುಶಃ ಇನ್ನು 15 ದಿವಸಗಳಲ್ಲಿ ಅಥವಾ 30 ದಿವಸಗಳ ಒಳಗಾಗಿ ಒಂದು ವರದಿ ಕೊಡುತ್ತಾರೆ. ಆ ವರದಿಯ ಆಧಾರದ ಮೇಲೆ ನಾವು ಇದನ್ನು ಅನುಷ್ಠಾನಕ್ಕೆ ತರುತ್ತಾ ಇದ್ದೇವೆ. ಮತ್ತು ಕಾಲೇಜು ಮಟ್ಟದಲ್ಲಿ, ಅದರಲ್ಲೂ ವಿಶೇಷವಾಗಿ ವೃತ್ತಿ ಶಿಕ್ಷಣದ ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳ ಮೇಲೆ ರ್‍ಯಾಗಿಂಗ್ ಏನು ನಡೆಯುತ್ತಾ ಇತ್ತು, ಅದನ್ನು ತಡೆಗಟ್ಟುವ ದೃಷ್ಟಿಯಿಂದ ಕಳೆದ ವರ್ಷ ತಂದಂತಹ ವ್ಯವಸ್ಥೆ, ಕಾನೂನು ತಿದ್ದುಪಡಿ, ರೂಲ್ಸ್, ಏನು ತಂದಿದ್ದೇವೆ, ಇದರಿಂದ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ. ಎಲ್ಲಾ ಕಾಲೇಜುಗಳನ್ನು ತೆಗೆದುಕೊಳ್ಳಿ ಹಿಂದೆ ಇದ್ದಂತಹ ರ್‍ಯಾಗಿಂಗ್ ಇತ್ತೀಚಿನ ದಿನಗಳಲ್ಲಿ ಕಾಣಿಸುತ್ತಿಲ್ಲ. ಏಕೆಂದರೆ ವಿದ್ಯಾರ್ಥಿಗಳಲ್ಲಿ ಸ್ವಲ್ಪ ಭಯ ಬಂದಿದೆ, ಇಂತಹ ಕೃತ್ಯ ಮಾಡಿದರೆ ನಮಗೆ ಶಿಕ್ಷೆ ಆಗುತ್ತದೆ ಆದುದರಿಂದ ಇದನ್ನು ಮಾಡಬಾರದು ಎಂದು ಮಾನಸಿಕವಾಗಿ ಬದಲಾವಣೆ ಆಗಿದ್ದಾರೆ. ಇದು ಬಹಳ ಸಂತೋಷವಾದಂತಹ ವಿಚಾರ, ಈ ಒಂದು ವ್ಯವಸ್ಥೆಯನ್ನು ತಂದಿದ್ದೇವೆ. ಮೊದಲು ಟೀಚರ್ಸ್‌ಗಳಿಗೆ ಕೇವಲ ಪ್ರಾಥಮಿಕ ಹಂತದಲ್ಲಿ ಅವಾರ್ಡ್ ಕೊಡುತ್ತಿದ್ದರು, ಆದರೆ ನಮ್ಮ ಉನ್ನತ ಶಿಕ್ಷಣದಲ್ಲಿ ಲೆಕ್ಚರರ್‌ಗೆ ಈ ಅವಾರ್ಡ್ ಇರಲಿಲ್ಲ. ಆದರೆ ನಾವು ಪ್ರಥಮ ಬಾರಿಗೆ ಅವರಿಗೂ ಸಹ, ಅಂದರೆ ಒಳ್ಳೆಯ ಉಪನ್ಯಾಸಕರಿಗೆ, ಚೆನ್ನಾಗಿ

ಕೆಲಸ ಮಾಡತಕ್ಕಂತವರಿಗೆ ಅವಾರ್ಡ್ ಕೊಡಬೇಕು ಎಂಬ ತೀರ್ಮಾನ ಮಾಡಿ ಪ್ರತಿ ವರ್ಷ 6 ಪದಕಗಳನ್ನು ಅವರಿಗೆ ಕೊಡುವಂತಹ ಒಂದು ಕಾನೂನು ತಂದಿದ್ದೇವೆ. ನಾವು ಈ ಪಾರ್ಟ್ ಟೈಂ ಉಪನ್ಯಾಸಕರ ಬಗ್ಗೆ ಒಂದು ತಾತ್ವಿಕ ನಿಲುವು ತೆಗೆದುಕೊಂಡಿದ್ದೇವೆ. ಅಂದರೆ 93-94 ಹಾಗೂ 94-95 ಈ ಎರಡು ವರ್ಷ ಅವರು ಕೆಲಸ ಮಾಡಿರಬೇಕು, ಮತ್ತು ಮೊದಲನೇ ದರ್ಜೆ ಕಾಲೇಜಿಗೆ ಬರಬೇಕಾದರೆ ಅವರು 55 ಅಂಕಗಳಿಗಿಂತ ಮೇಲೆ ಬಂದಿರಬೇಕು. ಮತ್ತು 55 ಅಂಕಗಳಿಗಿಂತ ಕಡಿಮೆ ಇದ್ದರೆ ಅಂಥವರು ಪಿಯುಸಿ ಕಾಲೇಜಿಗೆ ಹೋಗುತ್ತಾರೆ ಎಂದು ಹೇಳಿ, ಅಂತವರ ಪೈಕಿ ನೇಮಕ ಮಾಡಬೇಕು ಎಂದು ಹೇಳಿ, ನಾವು ಒಂದು ತಾತ್ವಿಕ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಅದರ ಅಡಿಯಲ್ಲಿ ರೂಲ್ಸ್ ಇಷ್ಯೂ ಮಾಡಿದ್ದೇವೆ. ಅದರಡಿಯಲ್ಲಿ ಇವೊತ್ತು ಎಷ್ಟು ಹುದ್ದೆಗಳು ಖಾಲಿ ಇವೆ ಯಾವ್ಯಾವ ವಿಷಯಗಳಲ್ಲಿ ಎಷ್ಟು ಖಾಲಿ ಇವೆ? ಯಾವ್ಯಾವ ವಿಷಯಗಳಲ್ಲಿ ಯಾರ್ಯಾರು ಪಾಸ್ ಮಾಡಿದ್ದಾರೆ? ಈಗ ಇರತಕ್ಕಂಥ ವ್ಯಾಪ್ತಿಯಲ್ಲಿ ಯಾವ್ಯಾವ ವಿದ್ಯಾರ್ಥಿಗಳು ಬರುತ್ತಾರೆ? ಯಾವ ವಿಷಯಗಳಲ್ಲಿ ಪಾಸ್ ಮಾಡಿರತಕ್ಕಂಥವರಿದ್ದಾರೆ ; ಒಟ್ಟು ಎಷ್ಟು ಖಾಲಿ ಇದೆಯೆನ್ನುವುದರ ಆಧಾರದ ಮೇಲೆ ಇವೊತ್ತು ಸುಮಾರು 450 ಅರೆಕಾಲಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆಯಲ್ಲದೆ, ಈ ಒಂದು ಕಾರ್ಯಕ್ರಮವನ್ನು ಖಾಸಗಿ ಕಾಲೇಜುಗಳಲ್ಲೂ ಸಹ ಹಮ್ಮಿಕ್ಕೊಂಡಿದ್ದೇವೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ಈ ಸಂಬಂಧದ ರೂಲ್ಸ್ ಅನ್ನು ಒಂದು ವಾರದೊಳಗೆ ಹೊರಡಿಸುವವರಿದ್ದಾರೆ. ಇನ್ನು ವಿಶ್ವವಿದ್ಯಾನಿಲಯಗಳ ಕುರಿತು ಹೇಳುವುದಾದರೆ, ಇವು ಸ್ವಾಯತ್ತ ಸಂಸ್ಥೆಗಳಾಗಿದ್ದು, ನಮ್ಮ ಮುಖ್ಯಮಂತ್ರಿಗಳು ಹೇಳಿದಂತೆ ವಿಶ್ವವಿದ್ಯಾನಿಲಯಗಳ ಬಗ್ಗೆ ಹಿಂದೆ ಬಹಳ ಗೌರವವಿತ್ತು. ವಿಶ್ವವಿದ್ಯಾನಿಲಯಗಳನ್ನು ದೇಗುಲಗಳೆಂದು ಕರೆದು, ದೇವಸ್ಥಾನಗಳಿಗಿಂತ ಹೆಚ್ಚಿನ ಗೌರವ ಲಭಿಸಿತ್ತು. ಆಗ ಉನ್ನತ ಮಟ್ಟದ ಶಿಕ್ಷಕರು, ಉಪಕುಲಪತಿಗಳಿದ್ದು ಉನ್ನತ ಮಟ್ಟದ ಶಿಕ್ಷಣ ಅಲ್ಲಿ ನಡೆಯುತ್ತಿತ್ತು ಹಾಗೂ ಶಿಸ್ತೂ ಸಹ ಇತ್ತು. ಆದರೆ, ಇತ್ತೀಚಿನ ದಿವಸಗಳಲ್ಲಿ ನೋಡಿದರೆ, ಅದರ ಬಗ್ಗೆ ನಾನು ವಿವರವಾಗಿ ಹೇಳುವುದಿಲ್ಲ, ಬಹಳ ನೋವಾಗುತ್ತದೆ, ನಾವು ಅಲ್ಲಿ ಶಿಸ್ತು ತರಬೇಕಾಗುತ್ತದೆ. ಏಕೆಂದರೆ, ಪಠ್ಯಕ್ರಮಗಳನ್ನು ರಚಿಸತಕ್ಕಂಥವು ವಿಶ್ವವಿದ್ಯಾನಿಲಯುಗಳು, ಪರೀಕ್ಷೆಗಳನ್ನು ಏರ್ಪಡಿಸತಕ್ಕಂಥವು ವಿಶ್ವವಿದ್ಯಾನಿಲಯಗಳು, ಪದವಿ ಕೊಡುವುದು ವಿಶ್ವವಿದ್ಯಾನಿಲಯ, ಉನ್ನತ ಶಿಕ್ಷಣ ಮಟ್ಟದಲ್ಲಿರುವ ಶೇಕಡಾ ಆರರಷ್ಟು ವಿದ್ಯಾರ್ಥಿಗಳು ಹೊರಗಡೆ ಬರಬೇಕಾದರೆ ಎಂತಹ ವೈದ್ಯರುಗಳನ್ನು, ಇಂಜಿನಿಯರುಗಳನ್ನು, ಶಾಸಕರುಗಳನ್ನು ಕಳುಹಿಸುತ್ತವೋ ಇದು ವಿಶ್ವವಿದ್ಯಾನಿಲಯಗಳ ಜವಾಬ್ದಾರಿಯಾಗುತ್ತದೆ. ಆದುದರಿಂದ, ಮೊದಲು ಅಲ್ಲಿ ಶಿಸ್ತು ಮೂಡಬೇಕು, ಮತ್ತು ಶಿಕ್ಷಣದ ಮಟ್ಟ ಹೆಚ್ಚಾಗಬೇಕು. ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆಯನ್ನು ಯಾವುದೇ ರೀತಿಯಲ್ಲೂ ಮೊಟಕುಗೊಳಿಸಬಾರದೆಂಬುದೇ ನಮ್ಮ ಸರ್ಕಾರದ ಉದ್ದೇಶ. ಆದರೆ, ಅಲ್ಲಿ ಏನೇ ಅರಾಜಕತೆಯಾದರೂ ಕಣ್ಮುಚ್ಚಿ ಕುಳಿತುಕೊಳ್ಳುವಂಥ ಪ್ರವೃತ್ತಿ ನಮ್ಮಲ್ಲಿ ಬರಬಾರದು. ಏಕೆಂದರೆ, ಕರ್ನಾಟಕ ವಿಧಾನಮಂಡಲದಲ್ಲಿ ಮಸೂದೆಯನ್ನು ಪಾಸ್ ಮಾಡಿದ ಬಳಿಕ ಅದು ಆ್ಯಕ್ಟ್ ಆಗಿ ವಿಶ್ವವಿದ್ಯಾನಿಲಯಗಳು ಅಸ್ತಿತ್ವದಲ್ಲಿವೆ. ವಿಶ್ವವಿದ್ಯಾನಿಲಯಗಳು ಖರ್ಚು ಮಾಡುವ ಹಣವನ್ನು ಪರಿಶೀಲಿಸುವ ಜವಾಬ್ದಾರಿ ಈ ಸಭೆಗಿದೆ, ವಿಶ್ವವಿದ್ಯಾನಿಲಯಗಳಿಗೆ ಸರ್ಕಾರದಿಂದ ಶೇಕಡ 95ರಷ್ಟು

ಹಣ ಗ್ರಾಂಟ್ ರೂಪದಲ್ಲಿ ಕೊಡುತ್ತಿದ್ದೇವೆ. ಕೊಡುವಂಥ ಹಣ ಯಾವ ರೀತಿ ಖರ್ಚಾಗುತ್ತಿದೆ? ಸರ್ಕಾರದ ನಿಯಮಗಳು ಸರಿಯಾಗಿ ಪಾಲನೆಯಾಗುತ್ತಿದೆಯೇ, ಇಲ್ಲವೇ, ಗುಣಮಟ್ಟ ರಕ್ಷಿಸ್ಲಾಗುತ್ತಿದೆಯೇ, ಇಲ್ಲವೇ, ಇದನ್ನು ನೋಡುವ ಜವಾಬ್ದಾರಿ ಸರ್ಕಾರಕ್ಕಿರಬೇಕು. ಸರ್ಕಾರವೆಂದರೆ ಆ ಜವಾಬ್ದಾರಿ ಶಾಸನಸಭೆಗಿರಬೇಕು ಆ ದೃಷ್ಟಿಯಿಂದ ನಾವು ಕೆಲವು ಜವಾಬ್ದಾರಿಗಳನ್ನು ಹೊರಿಸುತ್ತೇವೆಯೇ ಹೊರತು ನೇರವಾಗಿ ಅದರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವಂಥ ಯಾವುದೇ ಪ್ರವೃತ್ತಿ ನಮ್ಮಲ್ಲಿಲ್ಲ. ಅದನ್ನು ನಾನು ಸ್ಪಷ್ಟಪಡಿಸುತ್ತೇನೆ. ಇದನ್ನು ನಾವೇ ಮಾಡತಕ್ಕಂಥಾದ್ದು. We are making the Universities more accountable to be the people. We are making the Universities more responsible. ಅದಕ್ಕೋಸ್ಕರ ಏನೇನು ನಿಯಮಗಳನ್ನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆಯೇ ಹೊರತು ಅವರ ಫೈಲ್‌ಗಳನ್ನು ತಂದು ಶಿಕ್ಷಣ ಮಂತ್ರಿಗಳಿಂದ ಅಪ್ರೂವಲ್ ತೆಗೆದುಕೊಳ್ಳುವುದಿಲ್ಲ, ಒಬ್ಬ ಪ್ರೊಫೆಸರ್‌ರವರ ಟ್ರಾನ್ಸ್‌ಫರ್‌ಗೆ ಸಂಬಂಧಿಸಿದಂತೆ ಫೈಲ್ ತಂದು ಶಿಕ್ಷಣ ಮಂತ್ರಿಗಳಿಂದ ಅಪ್ರೂವಲ್ ತೆಗೆದುಕೊಳ್ಳುವುದಿಲ್ಲ ಅಥವಾ ನೇಮಕಾತಿ ಮಾಡುವ ಪ್ರಕ್ರಿಯೆ ಶಿಕ್ಷಣ ಮಂತ್ರಿಗಳಿಂದ, ಸರ್ಕಾರದಿಂದ ಆಗತಕ್ಕಂಥಾದ್ದಲ್ಲ. ಏನು ಬೇಕಾದರೂ ನೀವು ಮಾಡಿ ಆದರೆ, ಈ ರೀತಿ ಮಾಡಿ ಎಂದು ಮಾತ್ರ ನಾವು ಹೇಳುತ್ತೇವೆ. ಅಲ್ಲಿನ ಅರಾಜಕತೆಯನ್ನು ಬಿಡಬೇಕಾದರೆ ಇದನ್ನು ಮಾಡಿ ಎಂದು ಹೇಳುತ್ತೇವೆಯೇ ಹೊರತು, we are making it more accountable. ಆ ಜವಾಬ್ದಾರಿಯನ್ನು ಹೊರಿಸಬೇಕಾದರೆ ಕೆಲವು ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಹೊಸ ಶಿಕ್ಷಣ ಪದ್ಧತಿಯಿಂದ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತಿರುವುದರ ಬಗ್ಗೆ ಅನೇಕ ಸದಸ್ಯರುಗಳು ಮಾತನಾಡಿದ್ದಾರೆ. ಇದು ನಮಗೂ, ನಿಮಗೂ ಗೊತ್ತಿದೆ. ಈಗ ಇರತಕ್ಕಂಥ ಸಾಂಪ್ರದಾಯಿಕ ಶಿಕ್ಷಣದಿಂದ ಏನೇನೂ ಪ್ರಯೋಜನವಿಲ್ಲ, ಬದಲಿಗೆ ವಿದ್ಯಾರ್ಥಿಗಳಿಗೆ ನಿರುದ್ಯೋಗ ಸಮಸ್ಯೆ ಜಾಸ್ತಿ ಯಾಗುತ್ತಿದೆಯೇ ಹೊರತು ಅವರಿಗೆ ಉದ್ಯೋಗ ಸಿಗುವುದಿಲ್ಲವೆನ್ನುವುದು ನಿರ್ವಿವಾದ. ಈ ಕುರಿತು ನಾವು ತೀಕ್ಷ್ಣವಾಗಿ ಯೋಚಿಸುತ್ತಿದ್ದೇವೆ. ನಮ್ಮಲ್ಲಿರುವ ಸಾಂಪ್ರದಾಯಿಕ ಕೋರ್ಸುಗಳನ್ನು ಬದಲಾಯಿಸಿ ಪ್ರತಿಯೊಂದು ವೃತ್ತಿಪರ ಶಿಕ್ಷಣಕ್ಕೂ ಹೆಚ್ಚು ಒತ್ತು ಕೊಟ್ಟು ಕಾಲೇಜಿನಲ್ಲಿ ಓದಿದಂಥ ವ್ಯಕ್ತಿಗಳು ಸರ್ಕಾರಿ ಕೆಲಸವನ್ನು ಅವಲಂಬಿಸದೆ ಸ್ವತಃ ತನ್ನ ಕಾಲ ಮೇಲೆ ನಿಂತುಕೊಂಡು ದೇಶದ ಸಂಪತ್ತು ಹೆಚ್ಚಿಸುವ ಬಗ್ಗೆ ತನ್ನ ಜೀವನವನ್ನು ತಾನೇ ಕಂಡುಕೊಳ್ಳಬೇಕೆನ್ನುವ ಉದ್ದೇಶದಿಂದ ಶಿಕ್ಷಣ ವ್ಯವಸ್ಥೆಯನ್ನು ಬದಲಾಯಿಸಬೇಕಾಗಿದೆ. ಇದನ್ನು ನಾವು ಬಹಳ ತೀಕ್ಷ್ಣತೆಯಿಂದ ಯೋಚಿಸಿದ್ದೇವೆ. ಮುಂದಿನ ವರ್ಷದಿಂದಲಾದರೂ ಇದನ್ನು ಜಾರಿಗೆ ತರಬೇಕೆಂಬ ದೃಷ್ಟಿಯಿಂದ ಒಂದು ಸಮಿತಿ ರಚಿಸುತ್ತಿದ್ದೇವೆ. ಕರಿಕುಲಮಅನ್ನು ಯಾವರೀತಿ ಬದಲಾವಣೆ ಮಾಡಬಹುದೆಂಬುದಕ್ಕಾಗಿ ಸಮಿತಿ ರಚಿಸಿ ಅದು ಕೊಡುವ ವರದಿ ತೆಗೆದುಕೊಂಡು ಮುಂದಿನ ಕ್ರಮ ಕೈಗೊಳ್ಳುತ್ತಿದ್ದೇವೆ. ಮತ್ತೊಂದು ವಿಚಾರವೇನೆಂದರೆ, 1976ನೇ ಇಸವಿಯಲ್ಲಿ ಅಂದರೆ ಸುಮಾರು ಇಪ್ಪತ್ತೊಂದು ವರ್ಷಗಳ ಹಿಂದೆ ಯೂನಿವರ್ಸಿಟಿ ಆ್ಯಕ್ಟ್ ಮಾಡಲಾಗಿತ್ತು, ಅದಾದ ನಂತರ ಅನೇಕ ಬೆಳವಣಿಗೆಗಳಾಗಿ ವಿಶ್ವವಿದ್ಯಾನಿಲಯಗಳಿಗೆ ನಾವು ಸ್ವಾಯತ್ತತೆಯನ್ನು ಕೊಟ್ಟ ನಂತರ ಏನೇನಾಗಿದೆಯೆಂಬುದರ ಬಗ್ಗೆ ಅನೇಕ ಮಾನ್ಯ ಸಂದಸ್ಯರುಗಳಿಗೆ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ. ಅಲ್ಲದೆ ತೊಂದರೆಗಳು, ಲೂಪ್ ಹೋಲ್ಸ್‌ಗಳಿರುವುದರಿಂದ

ಯೂನಿವರ್ಸಿಟಿ ಆ್ಯಕ್ಟ್‌ಗೆ ತಿದ್ದುಪಡಿ ಮಾಡುವ ಅವಶ್ಯಕತೆಯಿದೆ. ಆ ದೃಷ್ಟಿಯಿಂದ ಇವೊತ್ತು ಸರ್ಕಾರ ಕೆಲವು ಬದಲಾವಣೆಗಳನ್ನು ತರಬೇಕೆಂದು ಯೋಚಿಸಿದೆ. ಈಗಾಗಲೇ ಅದರ ಬಗ್ಗೆ ಅನೇಕ ವಿವಾದಗಳು ಎದ್ದಿವೆ. ಬಹಳ ನೋವಾಗತಕ್ಕಂಥ ಸಂಗತಿಯೇನೆಂದರೆ, ಏನೇ ಒಳ್ಳೆಯದನ್ನು ಮಾಡಲಿ ಅದನ್ನು ಕೆಟ್ಟದ್ದಾಗಿ ತಿರುಚಿ ಸಾರ್ವಜನಿಕರಿಗೆ ಹೇಳುವ ಒಂದು ಪ್ರವೃತ್ತಿ ಬೆಳೆದುಬಿಟ್ಟಿದೆ. ಒಳ್ಳೆಯದನ್ನು ಒಳ್ಳೆಯದು ಎಂದು ಒಪ್ಪಿಕೊಳ್ಳುವ ಸೌಜನ್ಯತೆ ನಮ್ಮಲ್ಲಿ ಬೆಳೆಯುವುದಿಲ್ಲ, ಬದಲಾಗಿ ಒಳ್ಳೆಯದನ್ನು ಕೆಟ್ಟದ್ದಾಗಿ ತೋರಿಸುವ ಪ್ರವೃತ್ತಿ ಜನರಲ್ಲಿ ಬೆಳೆಯುತ್ತಿದೆ, ಇದು ಬಹಳ ತಪ್ಪು, ಅಲ್ಲದೆ, ಕೆಟ್ಟದನ್ನು ಒಳ್ಳೆಯದನ್ನಾಗಿ ತಿಳಿಸಿ ಜನರಿಗೆ ತೋರಿಸುವ ಪದ್ಧತಿಯೂ ತಪ್ಪು. ಇದರ ಬಗ್ಗೆ ನಾವು ನಿಷ್ಪಕ್ಷಪಾತವಾಗಿ ವಿಶ್ಲೇಷಿಸಬೇಕಾಗಿದೆ. ಆದುದರಿಂದ, ಸಾರ್ವಜನಿಕರಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಯಾವ ತಿದ್ದುಪಡಿಗಳನ್ನು ತರಬೇಕೋ ಆ ಕುರಿತು ಕಾನೂನನ್ನು ನಾನು ತರುತ್ತಿದ್ದೇನೆ. ಇದನ್ನು ನೋಡಿದಾಗ ನಿಜಾವಾಗಿಯೂ ಅರ್ಥವಾಗುತ್ತದೆ. ನಾನು ಮೊದಲೇ ಹೇಳಿದಂತೆ ಸಮಾಜದ, ದೇಶದ ಜವಾಬ್ದಾರಿ ಶಿಕ್ಷಕರ ಮೇಲಿದೆ. ಅದಕ್ಕೋಸ್ಕರ ಇವೊತ್ತು ಶಿಕ್ಷಕರುಗಳಿಗೆ ನಾವು ಅನೇಕ ರೀತಿಯ ಸವಲತ್ತುಗಳನ್ನು ಕೊಟ್ಟಿದ್ದೇವೆ. ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡುವ ಜವಾಬ್ದಾರಿ ಶಿಕ್ಷಕರ ಮೇಲಿರುವುದರಿಂದ, ಅಲ್ಲದೆ ಶಿಸ್ತಿನ ಸಮಾಜ ಕಟ್ಟುವ ಜವಾಬ್ದಾರಿ ಅವರ ಮೇಲಿರುವುದರಿಂದ ಮೊದಲು ಅವರಲ್ಲಿ ಶಿಸ್ತು ಬರಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶವಾಗಿದೆ. ಏಕೆಂದರೆ, ಅವರಲ್ಲೇ ಶಿಸ್ತು ಹೊರಟು ಹೋದರೆ, ಆ ಒಂದು ವೃತ್ತಿಗೇ ಅಪಚಾರವೆಸಗಿದಂತಾಗುತ್ತದಾದ್ದಾರಿಂದ ಶಿಸ್ತನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಸರ್ಕಾರ ಕೆಲವು ಕಾನೂನುಗಳನ್ನು ಮಾಡಬೇಕಾಗುತ್ತದೆ. ಅವರ ವೃತ್ತಿ ಧರ್ಮ ಎತ್ತಿ ಹಿಡಿಯುವ ದೃಷ್ಟಿಯಿಂದ ಈ ರೀತಿ ಕ್ರಮ ಕೈಗೊಳ್ಳಲಾಗಿದೆಯೇ ವಿನಃ ಅವರಿಗೆ ವೈಯಕ್ತಿಕವಾಗಿ ನೋವು ಮಾಡತಕ್ಕಂಥಾದ್ದಲ್ಲ. ಮೊನ್ನೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರಶ್ನೆಪತ್ರಿಕೆ ಲೀಕೇಜ್ ಆಯಿತು. ತಮಗೆಲ್ಲಾ ಗೊತ್ತಿರುವಂತೆ ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು ಸರ್ಕಾರಕ್ಕೂ ಅವುಗಳಿಗೂ ಯಾವುದೇ ಸಂಬಂಧವಿಲ್ಲ. ಪರೀಕ್ಷೆ ನಡೆಸುವ ಸಂಪೂರ್ಣ ಜವಾಬ್ದಾರಿ ಇರತಕ್ಕಂಥವರು ಅವರದಾಗಿದ್ದು, ಒಂದು ಪ್ರಶ್ನೆ ಪತ್ರಿಕೆ ಲೀಕೇಜ್ ಆದ ತಕ್ಷಣ ಭಾರತೀಯ ಜನತಾ ಪಕ್ಷದ ಉಪ ನಾಯಕರು ಮಾತನಾಡುತ್ತಾ ಸೋಮಶೇಖರ್‌ರವರು ರಾಜೀನಾಮೆ ಕೊಡಬೇಕೆಂದರು. ರಾಜೀನಾಮೆ ಕೊಡಬೇಕಾದವರು ಯಾರೆಂಬುದು ಅವರಿಗೆ ಗೊತ್ತಿದ್ದೂ ಏಕೆ ಆ ರೀತಿ ಕೇಳಿದರೋ ನನಗಂತೂ ಅರ್ಥವಾಗಲಿಲ್ಲ. ಇನ್ನೊಂದು ವಿಷಯವೇನೆಂದರೆ, ಇವೊತ್ತು ನಾವು ಪರೀಕ್ಷೆ ನಡೆಸಬೇಕೆಂದಾಗ ಸರ್ಕಾರ ಈ ದಿಸೆಯಲ್ಲಿ ಅವರೊಂದಿಗೆ ಕೈಗೂಡಿಸಿದಾಗ ಸರ್ಕಾರ ಹಸ್ತಕ್ಷೇಪ ಮಾಡುತ್ತದೆ, ಪರೀಕ್ಷೆ ನಡೆಸುವುದು ವಿಶ್ವವಿದ್ಯಾನಿಲಯದ ಕರ್ತವ್ಯವೇ ಹೊರತು ಸರ್ಕಾರದ್ದಲ್ಲ, ಸರ್ಕಾರ ಹಸ್ತಕ್ಷೇಪ ಮಾಡುಬಾರದು. ಎಂದು ಅನೇಕರು ಬೊಬ್ಬೆ ಹಾಕಿದರು. ಪರೀಕ್ಷೆ ನಡೆಸುವುದು ನಿಮ್ಮ ಜವಾಬ್ದಾರಿಯಾಗಿರುವುದರಿಂದ ನೀವೇ ನಡೆಸಿ ಎಂದು... ತಮಗೆಲ್ಲಾ ತಿಳಿದಿರುವಂತೆ ಶಿಕ್ಷಣ ಕಾಯಿದೆ 1983ರಲ್ಲಿ ಜಾರಿಗೆ ಬಂತು. ಕರ್ನಾಟಕದ ವಿಧಾನಮಂಡಲದ ಉಭಯ ಸದನಗಳಲ್ಲಿ ಪಾಸ್ ಮಾಡಿದ ಶಿಕ್ಷಣ ಮಸೂದೆಗೆ 1995ರಲ್ಲಿ ರಾಷ್ಟ್ರಪತಿಗಳ ಅಂಕಿತ ಪಡೆಯಿತು. 1983ರಲ್ಲಿ ನಾನು ಶಿಕ್ಷಣ ಮಂತ್ರಿಯಾಗಿರಲಿಲ್ಲ; ಇಲ್ಲಿ

ಸೆಕ್ಷನ್ 28ರಲ್ಲಿ ಏನು ಹೇಳುತ್ತಾರೆಂದರೆ: Duties of employees of educational Institutions to do the examination work not withstanding anything contained in any law for the time being in force, or in any contract or in any Judgment, decree or order of any Court or Tribunal, it shall be the duty of every officer, teacher or other employee of every educational institution and every person in the service or pay or remunerated by any educational institution to do any work assigned to him in connection with any examination.

Section 127 : Punishment for contravention of Section 28 : Any person who without reasonable excuse refuses to do any work connected with any examination and assigned to him, shall on conviction be punished with imprisonment for a term which may extend to one year or with fine which may extend to Rs. 1,000/- or with both. ಈ ಪ್ರಾವಿಷನ್ ಅನ್ನು ಸೋಮಶೇಖರ್ ತಂದಿದ್ದಲ್ಲ, 1983ರಲ್ಲಿ ಯಾರು ಶಿಕ್ಷಣ ಮಂತ್ರಿಗಳಾಗಿದ್ದರೋ, ಜಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ಪಾಸ್ ಆಗಿ 1995ರಲ್ಲಿ ರಾಷ್ಟ್ರಪತಿಗಳ ಅಂಕಿತ ಪಡೆದು ಪಾಸ್ ಆಗಿ ಆ್ಯಕ್ಟ್ ಆಗಿರುವಂಥಾದ್ದು. ಒಂದು ಕಡೆ ಪರೀಕ್ಷೆ ನಡೆಸುವಲ್ಲಿ ಸರ್ಕಾರ ಏಕೆ ಹಸ್ತಕ್ಷೇಪ ಮಾಡುತ್ತದೆ ಎಂದಾಗ ನೀವೇ ಮಾಡಿ ಎಂದು ಹೇಳಿ ಈ ಪ್ರಾವಿಷನ್ ಅನ್ನು ಶಿಕ್ಷಣ ಮಸೂದೆಗೆ ನಾವು ಟ್ರಾನ್ಸ್‌ಫರ್ ಮಾಡುತ್ತಿದ್ದೇವೆ. ಅದು ಬಿಟ್ಟು ಸೋಮಶೇಖರ್ ಇಂತಹ ಒಂದು ಕರಾಳವಾದ ಕಾನೂನನ್ನು ತರುತ್ತಿದ್ದಾರೆಂದು ಪತ್ರಿಕೆಗಳು ದೊಡ್ಡದಾಗಿ ವರದಿ ಮಾಡಿದವು. ಇವೊತ್ತು ನೋಡಿದರೆ ಎಲ್ಲರೂ ಸೇರಿ ನನ್ನ ಮೇಲೆ ಅಟ್ಯಾಕ್ ಮಾಡುತ್ತಾರೆ. ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಪ್ರಶ್ನೆ ಪತ್ರಿಕೆ ಲೀಕೇಜ್ ಆದರೆ ಸೋಮಶೇಖರ್ ರಾಜೀನಾಮೆ ಕೊಡಬೇಕು! ಮಾನ್ಯ ಅಧ್ಯಕ್ಷರೇ ಹಳ್ಳಿ ಭಾಷೆಯಲ್ಲಿ ಒಂದು ಗಾದೆ ಮಾತು ಹೇಳುತ್ತಾರೆ. ಮಾರಿ ಕಣ್ಣು ಹೋತದ ಮೇಲೆ ಎಂದು ನಾವು ಒಳ್ಳೆಯದನ್ನು ಮಾಡಿದರೂ ಸೋಮಶೇಖರ್ ಕೆಟ್ಟದ್ದು ಮಾಡಿದರು. ಕೆಟ್ಟದ್ದು ಮಾಡಿದರಂತೂ ಫಿನಿಷ್ ಮಾಡಿ ಬಿಡುತ್ತಾರೆ. ಇಂತಹ ಒಂದು ಸಮಾಜದಲ್ಲಿ ನಾವು ಯಾವ ರೀತಿ ಕೆಲಸ ಮಾಡಬೇಕು. ಉದಾಹರಣೆಗೆ ಹೇಳಬೇಕೆಂದರೆ ಪತ್ರಿಕೆಗಳವರು ಎರಡು ವರ್ಷ ಶಿಕ್ಷೆ ವಿಧಿಸುವ ಮಸೂದೆಯನ್ನು ಸೋಮಶೇಖರ್ ತರುತ್ತಿದ್ದಾರೆಂದು ಬರೆದರು. ಇಲ್ಲಿ ಮಾನ್ಯ ಸಭಾಧ್ಯಕ್ಷರೇ, ಯಾವುದೋ ಒಂದು ಪ್ರಿಜುಡಿಸ್ ಇಟ್ಟುಕೊಂಡು ಯಾವುದೋ ಒಂದು ಪೂರ್ವಗ್ರಹ ಪೀಡಿತರಾಗಿ, ನಮ್ಮನ್ನು ಒಬ್ಬ ಮನುಷ್ಯನ ವ್ಯಕ್ತಿತ್ವವನ್ನು ಅಳೆಯಬೇಕಾದರೆ ಅದರ ಹಿನ್ನೆಲೆಯನ್ನು ನೋಡಬೇಕಾಗುತ್ತದೆ. ಏನು ಮಾಡಿದ್ದಾರೆ ಏನು ಮಾಡಿಲ್ಲ ಎಂದು, ಎಲ್ಲವನ್ನೂ ಹಳದಿ ಕಣ್ಣಿನಿಂದ ನೋಡತಕ್ಕಂಥಾದ್ದು ಅಲ್ಲ. ಆ ದೃಷ್ಟಿಯಿಂದ ನಾನು ಮಾಡಿದ್ದೇವೆ. ಇವತ್ತು ನಾವು ಬಹಳ ಜನ ಶಾಸಕರು ಆಗಬಹುದು, ಮಂತ್ರಿಗಳು ಆಗಬಹುದು, ಪ್ರಧಾನ ಮಂತ್ರಿಗಳು ಆಗಬಹುದು ಮುಖ್ಯಮಂತ್ರಿಗಳು ಆಗಬಹುದು. ಮುಖ್ಯ ನ್ಯಾಯಾಧೀಶರು ಆಗಬಹುದು. ಡಾಕ್ಟರ್ಸ್ ಆಗಬಹುದು ಇಂಜಿನೀಯರ್ಸ್ ಆಗಬಹುದು. ನಾವು ಒಳ್ಳೆಯ ಪ್ರಿನ್ಸಿಫಾಲ್ಸನ್ನು ಇಟ್ಟುಕೊಂಡಿರುತ್ತೇವೆ. ಅವುಗಳನ್ನು

ಬೆಳೆಸಬೇಕಾದ ಪ್ರಿನ್ಸಿಪಲ್ ಸೆಂಟ್ರಲ್ ಲೀಡರ್ ಶಿಪ್ ಬೆಳೆಸಬೇಕಾಗುತ್ತದೆ. ವಿದ್ಯಾರ್ಥಿಗಳಲ್ಲಿ ನಾವು ಆದರ್ಶ ಗುಣಗಳನ್ನು ಬೆಳೆಸಬೇಕಾಗುತ್ತದೆ. ದೊಡ್ಡ ಸ್ಥಾನದಲ್ಲಿ ಕುಳಿತುಕೊಂಡವರೆಲ್ಲಾ ದೊಡ್ಡ ಮನುಷ್ಯರು ಆಗುವುದಿಲ್ಲ. ಸಣ್ಣ ಸ್ಥಾನದಲ್ಲಿ ಕುಳಿತುಕೊಂಡಿರುವವರೆಲ್ಲಾ ಸಣ್ಣ ವ್ಯಕ್ತಿಗಳು ಆಗುವುದಿಲ್ಲ. ದೊಡ್ಡತನ ಆ ಸ್ಥಾನದಿಂದ ಬರುವುದಿಲ್ಲ. ಸಣ್ಣತನ ಆ ಸ್ಥಾನದಿಂದಲೂ ಬರುವುದಿಲ್ಲ. ದೊಡ್ಡ ವ್ಯಕ್ತಿಯಾಗಿರತಕ್ಕಂಥವನು ಸಹ ಸಣ್ಣ ರೀತಿಯಲ್ಲಿ ನಡೆದುಕೊಳ್ಳ ಬಹುದು. ಸಣ್ಣತನದಿಂದ ಇರತಕ್ಕಂಥವನ್ನು ದೊಡ್ಡ ಸ್ಥಾನಕ್ಕೆ ಏರಬಹುದು. ನಾನು ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಪೋಲೀಸ್ ಕಾನ್ಸ್‌ಟೇಬಲ್ ತಿಮ್ಮಯ್ಯ ಎನ್ನತಕ್ಕಂಥ ಒಬ್ಬ ವ್ಯಕ್ತಿ ಇದ್ದ. ಒಬ್ಬ ಕಾನ್ಸ್‌ಟೇಬಲ್ ತನ್ನ ವೃತ್ತಿಯನ್ನು ನಿಷ್ಠೆಯಿಂದ ಮಾಡಿ ಸಾರ್ವಜನಿಕರ ಮನಸ್ಸು ಗೆದ್ದು ಇಡೀ ಸಾರ್ವಜನಿಕರ ಪ್ರೀತಿಗೆ ಪಾತ್ರನಾಗಿದ್ದಾನೆ. ಜನ ಇವತ್ತು ಅವನ ಜಾತಿ ನೋಡುವುದಿಲ್ಲ. ಆತ ಡಿಜಿಪಿ ಆಗಿದ್ದನೋ ಎಸ್ ಪಿ ಆಗಿದ್ದನೋ ಎಂದು ನೋಡುವುದಿಲ್ಲ. ಅವನ ಕರ್ತವ್ಯವನ್ನು ನೋಡಿ ಜನ ಇವತ್ತು ಮೆಚ್ಚುತ್ತಾರೆ. ಆದರ್ಶ ಗುಣ ಒಬ್ಬ ಡಿ.ಜಿ.ಪಿ, ಐಎಎಸ್ ಅಧಿಕಾರಿಗೆ ಕಪಾಳಕ್ಕೆ ಹೊಡೆದು ಕೇಸ್ ಹಾಕುತ್ತಾರೋ ಅದಕ್ಕಿಂತ ದೊಡ್ಡದ್ದು. ಎಷ್ಟೋ ಜನ ನಾವು ಮಂತ್ರಿಗಳು ಇರಬಹುದು, ಶಾಸಕರು ಇರಬಹುದು, ಭ್ರಷ್ಟಾಚಾರ ಮಾಡಿ ನಾವು ಜೈಲಿಗೆ ಹೋಗುವುದಾದರೆ ನಾವು ಎಂತಹ ಮಂತ್ರಿಗಳು ಆಗುತ್ತೇವೆ. ದೊಡ್ಡ ದೊಡ್ಡ ಡಾಕ್ಟರ್ಸ್ ಆದವರು ಮೇಧಾವಿಗಳು ಆಗಿರುತ್ತಾರೆ. ಜ್ಞಾನಿಗಳು ಆಗಿರುತ್ತಾರೆ ದೊಡ್ಡ ದೊಡ್ಡ ಆಪರೇಷನ್ ಮಾಡುತ್ತಾರೆ. ಆದರೆ ಡಾಕ್ಟರ್ ಆದವರು ಆಪರೇಷನ್ ಮಾಡಿ ಜನರನ್ನು ಬದುಕಿಸುವುದು ಬಿಟ್ಟು ಅವನ ಕಿಡ್ನಿಯನ್ನು ಕದ್ದು ಹೊರದೇಶಕ್ಕೆ ಮಾರಾಟ ಮಾಡಿದರೆ ಅವನು ಎಂತಹ ಡಾಕ್ಟರ್ ಆಗುತ್ತಾನೆ ಅವನಿಗೆ ಏನು ನೈತಿಕತೆ ಉಳಿಯುತ್ತದೆ? ಒಬ್ಬ ವಕೀಲ ಅವನು ತನ್ನ ವಿರುದ್ಧ ಪಾರ್ಟಿಯ ಜೊತೆ ಶಾಮೀಲಾಗಿ ಕಕ್ಷಿದಾರನ ಕೇಸನ್ನು ಮುಗಿಸತಕ್ಕಂಥ ವಕೀಲನಾದರೆ ಅವನ ವೃತ್ತಿ ಧರ್ಮ ಎಂತಾದ್ದು ಆಗುತ್ತದೆ. ಒಬ್ಬ ಇಂಜಿನಿಯರ್ ಒಂದು ಲಕ್ಷ ರೂಪಾಯಿಗಳಲ್ಲಿ ಕಟ್ಟತಕ್ಕಂಥ ಕಟ್ಟಡವನ್ನು ಎರಡು ಲಕ್ಷ ರೂಪಾಯಿಗಳಿಗೆ ಎಷ್ಟಿಮೇಟ್ ಮಾಡಿ ಒಂದು ಲಕ್ಷ ರೂಪಾಯಿಗಳನ್ನು ಲೂಟಿ ಮಾಡಿದರೆ ಅವನು ಎಂತಹ ಇಂಜಿನೀಯರ್ ಆಗಬಹುದು. ಇವತ್ತು 135 ಕಾಲೇಜುಗಳಲ್ಲಿ ಪರೀಕ್ಷೆ ನಡೆಯುತ್ತಿದ್ದು 5 ಕಾಲೇಜುಗಳಲ್ಲಿ ಪರೀಕ್ಷೆ ನಡೆಯದೇ ಇದ್ದರೆ 135 ಕಾಲೇಜುಗಳಲ್ಲಿ ಪರೀಕ್ಷೆ ಬಹಿಷ್ಕಾರ ಆಗಿದೆ ಎಂದು ಪತ್ರಿಕೆಗಳಲ್ಲಿ ವರದಿ ಬರುತ್ತದೆಯಲ್ಲಾ, ಅದು ಯಾವ ದೇಶ ಪ್ರೇಮ? ಅದು ಯಾವ ವೃತ್ತಿ ಧರ್ಮ? ಪ್ರತಿಯೊಂದು ವಿಚಾರದಲ್ಲಿಯೂ ಸಹ ನಾವು ಇವತ್ತು ದೇಶ ಪ್ರೇಮವನ್ನು ಇಟ್ಟುಕೊಂಡು ಮಾಡಬೇಕಾಗುತ್ತದೆ. ಈ ದೇಶ ಪ್ರೇಮ ದೊಡ್ಡ ಸ್ಥಾನದಲ್ಲಿ ಇರತಕ್ಕಂಥವರಿಗೆ ಬರುವುದಿಲ್ಲ. ದೇಶ ಪ್ರೇಮವನ್ನು ಮೂಡಿಸಬೇಕಾದರೆ ಕೆಲವು ವಿಚಾರಗಳನ್ನು ನಾವು ಪಠ್ಯ ಕ್ರಮದಲ್ಲಿ ತರಬೇಕಾಗುತ್ತದೆ. ದ್ವೇಷ ಅಸೂಯೆ ಇವುಗಳನ್ನೆಲ್ಲಾ ನಾವು ಹೋಗಲಾಡಿಸಬೇಕಾದರೆ ನಾನು ಹೊಸದಾಗಿ ಯೋಚನೆ ಮಾಡಿದ್ದೇನೆ. ಅದಕ್ಕೆ ನಾನು ಒಂದು ಸಮಿತಿಯನ್ನು ರಚನೆ ಮಾಡಿದ್ದೆ ಪ್ರಥಮ ಭಾರಿಗೆ ಇಂಡಿಯಾ ದೇಶದಲ್ಲಿ ಕರ್ನಾಟಕ ರಾಜ್ಯ ಪರ್ಸನಾಲಿಟಿ ಡೆವಲಪ್‌ಮೆಂಟ್, ವ್ಯಾಲ್ಯೂ ಆಫ್ ಎಜುಕೇಷನ್ ಅದಕ್ಕೆ ಮೌಲ್ಯಗಳು ಹೇಗೆ ಇರಬೇಕೆಂದು ಹೇಳಿ ಈಗ ಒಬ್ಬ ತಹಶೀಲ್ದಾರ್ ಇರುತ್ತಾನೆ. ಅವನು ತನ್ನ ಕಛೇರಿಯನ್ನು ಯಾವ ರೀತಿ ನಡೆಸಬೇಕು ಎನ್ನತಕ್ಕಂಥ ಲೀಡರ್‌ಶಿಪ್ ಅವನಿಗೆ ಇಲ್ಲದೇ ಇದ್ದರೆ

ಒಬ್ಬ ಸಬ್ ಇನ್ಸ್‌ಪೆಕ್ಟರ್ ತನ್ನ ವೃತ್ತಿ ಧರ್ಮವನ್ನು ಯಾವ ರೀತಿ ನಡೆಸಬೇಕು ಎನ್ನತಕ್ಕಂಥಾದ್ದು ಇಲ್ಲದೇ ಇದ್ದರೆ ಒಬ್ಬ ಮಂತ್ರಿ ತನ್ನ ಇಲಾಖೆಯನ್ನು ಯಾವ ರೀತಿ ನಡೆಸಬೇಕು ಎನ್ನತಕ್ಕಂಥಾದ್ದು ಇಲ್ಲದೇ ಇದ್ದರೆ ಏನು ಪ್ರಯೋಜನ? ಅದಕ್ಕೆ ನಾನು 26 ವಿಚಾರಗಳನ್ನು ಗಮನಿಸಬೇಕೆಂದು ಯೋಚನೆ ಮಾಡಿದ್ದೇನೆ. ಮೊದಲು ಚೇಂಜ್ ಇನ್ ಪರ್‌ಸೆಪ್‌ಷನ್ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಹೇಳಿದರು. ವಿದ್ಯಾವಂತರಲ್ಲಿ ಬಹಳ ಕಲುಷಿತ ಭಾವನೆ ಇದೆ ಎಂದು ಪರ್‌ಸೆಪ್‌ಷನ್ ಪ್ರತಿಯೊಬ್ಬರಲ್ಲಿ ಬರಬೇಕಾಗುತ್ತದೆ. ಒಂದು ವಿಚಾರವನ್ನು ಯಾವ ದೃಷ್ಟಿಯಿಂದ ನೋಡಬೇಕು ಎನ್ನುವುದನ್ನು ಅವರು ಮೊದಲು ಕಲಿತುಕೊಂಡರೆ ಬಹುಶಃ ಸೋಮಶೇಖರ್ ಒಳ್ಳೆಯದನ್ನು ಮಾಡುತ್ತಿದ್ದರೆ ಅದು ಒಳ್ಳೆಯದು ಎಂದು ಹೇಳುವಂತಹ ಒಂದು ಸೌಜನ್ಯತೆ ಬೆಳೆಸಿಕೊಂಡರೆ ಅದು ಒಳ್ಳೆಯ ಪರ್‌ಸೆಫ್‌ಷನ್. ಸೋಮಶೇಖರ್ ಕೆಟ್ಟದ್ದು ಮಾಡಿದ್ದರೆ ಲೂಟಿ ಮಾಡಿದ್ದರೆ ಅದನ್ನು ಲೂಟಿ ಮಾಡಿದ್ದಾರೆಂದು ಬರೆಯತಕ್ಕಂಥಾದ್ದು ಗುಡ್ ಪರ್‌ಸೆಪ್‌ಷನ್ ಅದು ಇಲ್ಲ ಇವತ್ತು. ಅದಕ್ಕೆ ವಿದ್ಯಾರ್ಥಿಗಳಲ್ಲಿ ಕಾಲೇಜು ಮಟ್ಟದಲ್ಲಿ ಫರ್‌ಸೆಪ್‌ಷನ್ ಚೇಂಜ್ ಆಗಬೇಕು ಅದು ಪಠ್ಯ ಕ್ರಮದಲ್ಲಿ ಸೇರಬೇಕು ಎನ್ನುವಂತಹ ಒಂದು ವಿಚಾರ. ನಂತರ ಆಟಿಟ್ಯೂಡ್‌ನಲ್ಲಿ ಬಿಹೇವಿಯರ್ ಚೇಂಜ್ಸ್, ಕ್ರಿಯೇಟಿಂಗ್ ಎಫೆಕ್ಟೀವ್‌ನೆಸ್ ಅಂಡ್ ಎಕ್ಸಲೆನ್ಸ್ ತನ್ನ ಯಾವ ಕೆಲಸದಲ್ಲಿ ಇರುತ್ತಾನೆ ಅದರಲ್ಲಿ ಎಕ್ಸಲೆನ್ಸ್ ತೋರಿಸಬೇಕು. ಕ್ರಿಯೇಟಿವಿಟಿ ಇರಬೇಕು. ಅದನ್ನು ಯಾವ ರೀತಿ ಮೂಡಿಸಬೇಕು ಅದು ಪಠ್ಯಕ್ರಮದಲ್ಲಿ ಬರಬೇಕು. ಮತ್ತೆ ಕ್ಯಾರೆಕ್ಟರ್ ಬಿಲ್ಡಿಂಗ್ ಒಬ್ಬ ಮನುಷ್ಯನಿಗೆ ಕ್ಯಾರೆಕ್ಟರ್ ಇಲ್ಲದೆ ಇದ್ದರೆ ಏನು ಪ್ರಯೋಜನ? When wealth is lost nothing is lost; when Health is lost, something is lost, when character is lost everything is lost ಇದನ್ನು ನಾನೇನೂ ಹೇಳಬೇಕಾಗಿಲ್ಲ ಬಹಳ ಜನರಿಗೆ ಗೊತ್ತಿದೆ. ವಿದ್ಯಾರ್ಥಿಗಳಲ್ಲಿ ಕೆಲವರಲ್ಲಿ ಕಾಂಪಿಟೆನ್ಸ್ ಇರುತ್ತದೆ ಆದರೆ ಕ್ಯಾರೆಕ್ಟರ್ ಇರುವುದಿಲ್ಲ. ಕೆಲವರಿಗೆ ಕ್ಯಾರೆಕ್ಟರ್ ಇರುತ್ತದೆ ಕಾಂಪಿಟೆನ್ಸ್ ಇರುವುದಿಲ್ಲ. ನಮ್ಮ ಸುಭಾಷ್‌ಚಂದ್ರ ಬೋಸ್ ಅವರು ಆ ಮನುಷ್ಯನಿಗೆ ಕಾಂಪಿಟೆನ್ಸ್ ಮತ್ತು ಕ್ಯಾರೆಕ್ಟರ್ ಎರಡೂ ಇತ್ತು. ಆದರೆ ದುರ್ದೈವ ಆ ಮನುಷ್ಯ ಪ್ರಧಾನಿ ಆಗುವುದಕ್ಕೆ ಆಗಲಿಲ್ಲ. ಬೇರೆ ಯಾರ್‍ಯಾರೋ ಆಗುತ್ತಾರೆ ಅವರು ಆಗುವುದಕ್ಕೆ ಆಗಲಿಲ್ಲ. ಆದರೆ ಕ್ಯಾರೆಕ್ಟರ್ ಅಂಡ್ ಕಾಂಪಿಟೆನ್ಸ್ ಇದನ್ನು ಯಾವ ರೀತಿ ಮೂಡಿಸಬೇಕು, ಅದು ಬಹಳ ಮುಖ್ಯವಾಗುತ್ತದೆ. ಪ್ರಿನ್ಸಿಪಲ್ಸ್ ಇನ್ ವ್ಯಾಲ್ಯೂಸ್ ಇನ್ ಲೈಫ್. ಮನುಷ್ಯನಲ್ಲಿ ವಾಲ್ಯೂಸ್ ಇಲ್ಲದಿದ್ದರೆ ಅವನು ಮರಕ್ಕೂ ಸಮಾನ. ತನ್ನ ಕೃತಿಯಲ್ಲಿ ಪೇಟ್ರಿಯಾಟ್ರಿಸಂ ಇರಬೇಕಾಗುತ್ತದೆ. ಪರಿಸರದ ಬಗ್ಗೆ ಪರಿಜ್ಞಾನ ಇರಬೇಕಾಗುತ್ತದೆ. ರಾಜ್ಯಾಂಗದ ಬಗ್ಗೆ ಪರಿಕಲ್ಪನೆ ಇರಬೇಕಾಗುತ್ತದೆ. ಸರ್ವೀಸ್ ಅಂಡ್ ಕಾಂಟ್ರಿಬ್ಯೂಷನ್, ಕ್ರಿಯೇಟಿವಿಟಿ, ಬಿಲ್ಡಿಂಗ್ ಆಫ್ ಕಾನ್ಫಿಡೆನ್ಸ್ ಅಂಡ್ ಕರೇಜ್ ಜವಾಬ್ದಾರಿ ಎಫೆಕ್ಟೀವ್ ಕಮ್ಯುನಿಕೇಷನ್ ರಿಲೇಷನ್ ಶಿಪ್, ಟೈಮ್ ಮ್ಯಾನೇಜ್‌ಮೆಂಟ್ ಇವತ್ತು ನಾವು ಹರಟೆ ಹೊಡೆಯುತ್ತೇವೆ ದಿನಗಟ್ಟಲೆ ಸಮಯ ಹಾಳು ಮಾಡುತ್ತೇವೆ. ಒಂದು ನಿಮಿಷದ ಬೆಲೆ ಗೊತ್ತಿಲ್ಲ. ಈ ಸಮಯದಲ್ಲಿ ದೇಶ ಕಟ್ಟುವ ಬಗ್ಗೆ ನಾವು ಯಾರೂ ಯೋಚನೆ ಮಾಡುತ್ತಿಲ್ಲ. ಔಟ್ ಫಿಟ್ಟಿಂಗ್ ಇನ್‌ಫಿರಿಯಾರಿಟಿ ಕಾಂಪ್ಲೆಕ್ಸ್ ಮೈಂಡ್ ಡೈನಮಿಕ್ಸ್ ಹೆಲ್ತ್ ಸೆಲ್ಫ್ ಡಿಸಿಪ್ಲೀನ್ ಟೀಮ್ ವರ್ಕ್ಸ್ ವೊಕ್ಯಾಬ್ಯುಲರಿ ಬಿಲ್ಡಿಂಗ್, ಮೆಮೋರಿ ಪವರ್, ಸ್ಟ್ರೆಸ್

ಮ್ಯಾನೇಜ್‌ಮೆಂಟ್, ಪಬ್ಲಿಕ್ ಸ್ಪೀಕಿಂಗ್, ಗೋಲ್ಸ್ ಅಂಡ್ ಅಕಾಂಪ್ಲೀಷ್‌ಮೆಂಟ್ ಇಂತಹ ಕೆಲವು ವಿಚಾರಗಳನ್ನು ನಾವು ಇವತ್ತು ಆ ಕಮಿಟಿಗೆ ಕೊಟ್ಟು ಈ ವಿಚಾರಗಳನ್ನು ಒಳಗೊಂಡ ಪಠ್ಯಕ್ರಮಗಳನ್ನು ತಯಾರು ಮಾಡಬೇಕೆಂದು ಹೇಳಿದ್ದೇವೆ. ಒಂದು 10 ಪರ್ಸೆಂಟ್ ಜನ ಈ ರೀತಿ ಯೋಚನೆ ಮಾಡುವವರು ಬರಲಿ ಚಿಂತೆ ಇಲ್ಲ. ಸ್ವಲ್ಪ ವರ್ಷಗಳಲ್ಲಿ ಸ್ವಲ್ಪವಾದರೂ ಬದಲಾವಣೆ ತರಬಹುದು ಎನ್ನುವುದು ನಮ್ಮ ಆಸೆ. ಆ ದಿಕ್ಕಿನಲ್ಲಿ ನಾವು ನಮ್ಮ ಪಠ್ಯ ಕ್ರಮದಲ್ಲಿ ಸೇರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಇಂತಹ ವಿಚಾರಗಳ ಬಗ್ಗೆ ನಾವು ಯೋಚನೆಮಾಡಬೇಕಾಗಿದೆ. ಒಬ್ಬ ಡಾಕ್ಟರ್ ಆದವನು ತನ್ನ ವೃತ್ತಿ ಧರ್ಮವನ್ನು ಎತ್ತಿ ಹಿಡಿಯಬೇಕು ಹಾಗೆಯೇ ಒಬ್ಬ ಶಾಸಕನಾದವನು ಮಂತ್ರಿಯಾದವನು ತನ್ನ ವೃತ್ತಿ ಧರ್ಮವನ್ನು ಎತ್ತಿ ಹಿಡಿದು ದೇಶ ಕಟ್ಟುತಕ್ಕಂಥ ದಿಕ್ಕಿನಲ್ಲಿ ಯೋಚನೆ ಮಾಡಬೇಕು. ಅದೊಂದು ಬಹಳ ಮುಖ್ಯವಾದ ಕೆಲಸ ಮಾಡುತ್ತಿದ್ದೇವೆ. ಹಾಗೆಯೇ ಯೂನಿವರ್ಸಿಟಿಗಳಲ್ಲಿ ಬ್ಯಾಕ್ ಲಾಗ್ ಹುದ್ದೆಗಳನ್ನು ತುಂಬತಕ್ಕಂಥ ಒಂದು ಕೆಲಸವನ್ನು ತೆಗೆದುಕೊಂಡಿದ್ದೇನೆ. ಇನ್ನೂ ಅನೇಕ ಬದಲಾವಣೆಗಳನ್ನು ತರುತ್ತಿದ್ದೇವೆ ನಾನು ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಉದ್ದೇಶ ಏನೆಂದರೆ ಈ ಕ್ಷೇತ್ರದಲ್ಲಿ ನಾವು ಏನಾದರೂ ಸರಿ ಮಾಡದೇ ಹೋದರೆ ಇಡೀ ದೇಶ ಸರಿಯಾಗುವುದಿಲ್ಲ. ಒಂದು ಕಡೆ ಹೇಳುತ್ತಾರೆ. If you want to leave Six months to grow paddy, If you want to leave for 50 years grow coconut. If you want to live for hundred years Grow people, So, this is the Department which Grows people. ಹೋದರೆ ಮುಂದಿನ ಸಾರಿ ಒಳ್ಳೆಯ ಭತ್ತ ಹಾಕಬಹುದು. ಒಂದು ಸಾರಿ ರಸ್ತೆ ಕೆಟ್ಟು ಹೋದರೆ ಇನ್ನೊಂದು ಸಾರಿ ಆ ರಸ್ತೆಯನ್ನು ಮಾಡಬಹುದು. ಯಾವುದಾದರೂ ಒಂದು ಫ್ಯಾಕ್ಟರಿಯಿಂದ ಒಂದು ವಸ್ತು ಸರಿಯಾಗಿ ಬರದಿದ್ದರೆ ಅದನ್ನು ಬಿಸಾಕಿ ಇನ್ನೊಂದು ಮಾಡಬಹುದು. ಆದರೆ ಒಬ್ಬ ಒಳ್ಳೆಯ ವ್ಯಕ್ತಿ ಬಂದರೆ ಅವನು ಇಡೀ ದೇಶ ಕಟ್ಟುತ್ತಾನೆ. ಒಬ್ಬ ಕಿಡಿಗೇಡಿ ಏನಾದರೂ ದೇಶಕ್ಕೆ ಹುಟ್ಟಿದರೆ ಅವನು ದೇಶ ಹಾಳು ಮಾಡುತ್ತಾನೆ. ದೇಶ ನಾಶ ಮಾಡುತ್ತಾನೆ. ಅದು ಯಾರೇ ಇರಬಹುದು ಅವನು ಉಪಾಧ್ಯಾಯ ಇರಬಹುದು ಅಥವಾ ಒಬ್ಬ ಪ್ರಧಾನಿ ಇರಬಹುದು ಒಬ್ಬ ವಿಜ್ಞಾನಿ ಒಳ್ಳೆಯದನ್ನು ಕಂಡು ಹಿಡಿದು ಅವನು ಬಾಂಬ್ ಬ್ಲಾಸ್ಟ್ ತರಹ ಮಾಡಿದರೆ ಹೇಗೆ ಆಗುತ್ತದೆ? ಇವತ್ತು ನಾವು ಏನೇನು ಹೊಸದಾಗಿ ಕಂಡು ಹಿಡಿಯುತ್ತಿದ್ದೇವೆ ಅದನ್ನೆಲ್ಲಾ ದುರುಪಯೋಗ ಮಾಡುವಂತಹ ಒಂದು ಪೀಳಿಗೆ ಹುಟ್ಟುತ್ತಿದೆ. ಮೊಬೈಲ್ ಫೋನ್ ಕಂಡು ಹಿಡಿದಿದ್ದೇವೆ. ಏನಾದರೂ ಎಮರ್ಜನ್ಸಿ ಕಮ್ಯುನಿಕೇಷನ್‌ಗೆ ಉಪಯೋಗ ಆಗಬೇಕು ಎಂದು ಅಂದರೆ, ಅದು ಪ್ರಾಸ್ಟಿಟ್ಯೂಷನ್‌ಗೆ ಉಪಯೋಗವಾಗುತ್ತಿದೆ ಎಂದು ಪತ್ರಿಕೆಯಲ್ಲಿ ಬಂತು. ಇದಕ್ಕೆಲ್ಲಾ ಕಾರಣ ನಮ್ಮಲ್ಲಿ ವ್ಯಾಲ್ಯೂ ಆಫ್ ಎಜ್ಯುಕೇಷನ್ ಇಲ್ಲ. ಡಿಸ್ಟ್ರಕ್ಟೀವ್ ಆ್ಯಟಿಟ್ಯೂಡ್ ಆಗಿದ. ಅದಕ್ಕೆ ಇರತಕ್ಕಂಥ ಒಂದೇ ದಾರಿ ಅಂದರೆ, ಶಿಕ್ಷಣವನ್ನು ದೇಶ ಕಟ್ಟುತಕ್ಕಂಥ ದಿಸೆಯಲ್ಲಿ ಕೊಡಬೇಕು. ಆ ದೃಷ್ಟಿಯಿಂದ ನಾವು ಕೆಲವು ಬದಲಾವಣೆಗಳನ್ನು ತರುತ್ತಿದ್ದೇವೆ ಹೊರತು ಇದರಲ್ಲಿ ಪ್ರತಿಷ್ಠೆ ಏನೂ ಇಲ್ಲ.

5.10 ಪಿ.ಎಂ

ಸಮಾಜವನ್ನು ಕಟ್ಟತಕ್ಕ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡು ಎಲ್ಲಾ ಸದಸ್ಯರು ಅದರ ಬಗ್ಗೆ ಯೋಚನೆ ಮಾಡಿ. ಯಾರೇ ಬರಲಿ, ಯಾರೇ ಮಾಡಲಿ, ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು ಎಂದು ಹೇಳೋಣ ಒಳ್ಳೆಯದನ್ನು ಮಾಡಿದರೆ ಒಳ್ಳೆಯದು ಎನ್ನುವ ಸದ್ಭಾವನೆಯನ್ನು ಬೆಳೆಸಿಕೊಳ್ಳೋಣ ಈ ಒಂದು ಬೇಡಿಕೆಗಳನ್ನು ಇವತ್ತು ಸದನದ ಮುಂದೆ ಇಟ್ಟಿದ್ದೇನೆ. ಆ ಬೇಡಿಕೆಗಳಿಗೆ ತಮ್ಮ ಸಂಪೂರ್ಣವಾದಂತಹ ಬೆಂಬಲವನ್ನು ಕೊಟ್ಟು, ಮಂಜೂರಾತಿ ಮಾಡಿಕೊಡಬೇಕೆಂದು ಹೇಳಿ ತಮಗೆ ವಂದಿಸುತ್ತೇನೆ. ನಮ್ಮ ಶಾಸಕರು ಅನೇಕ ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ, ಸೂಚನೆಗಳನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ನಾನು ಮಾಡುತ್ತೇನೆ. ಆದರೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅದು ಲೆಕ್ಚರರ್‌ಗಳನ್ನು ನೇಮಕ ಮಾಡುವುದೇ ಇರಬಹುದು, ಕಟ್ಟಡಗಳನ್ನು ಕಟ್ಟುವುದಕ್ಕೆ ಇರಬಹುದು, ಹಣದ ಕೊರತೆ ಇದೆ, ಆದರೆ ಅದಕ್ಕೆ ಬೇರೆ ರೂಪವನ್ನು ಹುಡುಕುತ್ತಿದ್ದೇವೆ. ಅದನ್ನೆಲ್ಲಾ ಮಾಡಲಿಕ್ಕೆ ತಾವೆಲ್ಲರೂ ಒಪ್ಪಿಗೆ ಕೊಡಬೇಕೆಂದು ಹೇಳಿ ತಮಗೂ, ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಸನ್ಮಾನ್ಯ ಉಪಾಧ್ಯಕ್ಷರೆ, ಉನ್ನತ ಶಿಕ್ಷಣದ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸತಕ್ಕ ಸಂದರ್ಭದಲ್ಲಿ, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ, ಶಾಲಾ ಕಾಲೇಜ್‌ಗಳಲ್ಲಿ ಉಪನ್ಯಾಸ ಮಾಡಲಿಕ್ಕೆ ಬರಗೂರು ರಾಮಚಂದ್ರಪ್ಪನವರ "ಬಯಲಾಟದ ಭೀಮ" ಎನ್ನತಕ್ಕ ಒಂದು ಪುಸ್ತಕವನ್ನು ಟೆಕ್ಸ್ಟ್ ಬುಕ್ ಕಮಿಟಿಯಿಂದ ರಾಜ್ಯದ ಎಲ್ಲಾ ಶಾಲಾಕಾಲೇಜಗಳಿಗೆ ಭೋಧಿಸಲಿಕ್ಕೆ ಬಿಡುಗಡೆ ಮಾಡಲಾಗಿದೆ. ಈ ಸದನದಲ್ಲಿ ಪಾರ್ಲಿಮೆಂಟ್ ಪದಯಾವುದು, ಅನ್ ಪಾರ್ಲಿಮೆಂಟ್ ಪದ ಯಾವುದು ಎನ್ನುವುದನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಪಡೆದು ಹೇಳುತ್ತಿದ್ದೇನೆ. ಎರಡು ಮೂರು ಪದಗಳನ್ನು ಅಧ್ಯಕ್ಷರ ಅಪ್ಪಣೆ ಪಡೆದು ಹೇಳಬೇಕಾಗುತ್ತದೆ. ಈ ಒಂದು ಪುಸ್ತಕವನ್ನು ಪ್ರಥಮ ವರ್ಷದ ಬಿ.ಎ., ಬಿ.ಕಾಂ, ಬಿಎಸ್‌ಸಿ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡಬೇಕಾಗಿದೆ. ಈ ಪುಸ್ತಕದಲ್ಲಿರುವ ಬರವಣಿಗೆಗಳನ್ನು ತಮ್ಮ ಒಪ್ಪಿಗೆ ಪಡೆದು ಹೇಳುತ್ತಿದ್ದೇನೆ. ನನಗೆ ಪಾರ್ಲಿಮೆಂಟ್ ಪದ ಯಾವುದು ಅನ್‌ಪಾರ್ಲಿಮೆಂಟ್ ಪದ ಯಾವುದೆಂಬುದು ಗೊತ್ತಿಲ್ಲ. ಆದುದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಪುಸ್ತಕದಲ್ಲಿ ಬೋಳಿಮಗ, ಬೇವಾರ್ಸಿ, ಎನ್ನತಕ್ಕ ಪದಗಳನ್ನು ಉಪಯೋಗಿಸಲಾಗಿದೆ. ಮತ್ತು ಇನ್ನು ಅನೇಕ ಅವ್ಯಾಚ ಶಬ್ದಗಳನ್ನು ಈ ಪುಸ್ತಕದಲ್ಲಿ ಬಳಸಲಾಗಿದೆ. ನಾವು ಇವತ್ತು ಪ್ರಜಾಪ್ರಭುತ್ವದಲ್ಲಿ ಹಾದಿಯಲ್ಲಿ ನಮ್ಮ ದೇಶದಲ್ಲಿ 50 ನೇ ವರ್ಷದ ಸ್ವಾತಂತ್ರ್ಯ ಮಹೋತ್ಸವವನ್ನು ಆಚರಿಸತಕ್ಕ ಸಂದರ್ಭದಲ್ಲಿ ಸೌಹಾರ್ದ್ಯತೆ ಸಮಾನತೆ ಬಗ್ಗೆ ಮಾತನಾಡುವ ನಾವು, ಸಮಾಜದ ಮುಖಂಡರಾಗಲೀ, ಶಾಸಕರಾಗಲೀ, ಲೋಕಸಭೆಯ ಸದಸ್ಯರಾಗಲೀ, ಟೆಕ್ಸ್ಟ್ ಬುಕ್ ಕಮಿಟಿಯವರು ತಂದಂತಹ ಪುಸ್ತಕವನ್ನು ಅಭ್ಯಾಸ ಮಾಡಲಿಲ್ಲವೇ? ಈ ಪುಸ್ತಕದಲ್ಲಿ ಒಂದು ಕಡೆ ಬರುವಂತಹ ಪದಗಳನ್ನು ಸ್ವಲ್ಪ ಮಾತ್ರ ನಾನು ಇಲ್ಲಿ ಓದುತ್ತೇನೆ. ಬಾಕಿಯದೆಲ್ಲಾ ಉಪಾಧ್ಯಕ್ಷರಿಗೆ ಕಳುಹಿಸಿ ಕೊಡುತ್ತೇನೆ. ಎಂತಹ ಪದಗಳನ್ನು ಪುಸ್ತಕದಲ್ಲಿ ಬರದಿದ್ದರೆ ಎಂಬುದನ್ನು ಇಲ್ಲಿ ಹೇಳುತ್ತೇನೆ. ಓದಿಕೊಂಡು ಹೋಗುವುದಿಲ್ಲ. ಈ ಸದನದಲ್ಲಿ ನನ್ನ ಬೇಡಿಕೆ ಏನೆಂದರೆ,

ಉಪಾಧ್ಯಕ್ಷರು : ಆ ಪುಸ್ತಕವನ್ನು ನನಗೆ ಕಳುಹಿಸಿ ಕೊಡಿ. ನಂತರ ಅದರ ಬಗ್ಗೆ ಏನು ಮಾಡಬೇಕ ಎಂಬುದನ್ನು ಯೋಚನೆ ಮಾಡೋಣ. ನಂತರದಲ್ಲಿ ಅದರ ಬಗ್ಗೆ ಕ್ರಮ ಕೈಗೊಳ್ಳೋಣ.

ಶ್ರೀ ಯು.ಆರ್. ಸಭಾಪತಿ : ಈ ನನ್ನ ಮಗನಿಗೆ ಪಾಠ ಕಲಿಸಬೇಕು. ಊರಿನವರೆಲ್ಲಾ ಓ ಒಬ್ಬ ಹಿಪ್ಪೆ ಮಾಡುವವರನ್ನು ಬಿಟ್ಟು ಮರ್ಯಾದೆಯಿಂದ ಇರು ಎಂದು ಹೇಳಬೇಕು. ಓದುತ್ತಾವೆ ರೆಕ್ಕೆ ಬಂದರೆ ಸಾಕು, ಏನಾದರೂ ಹರಕಲು ಅಂಗಿ, ನಿಕ್ಕರ್, ಕೊಡಿ ಸ್ವಾಮೇರಾ, ಜಮೀನ್ದಾರ ದೌರ್ಜನ್ಯದ ಬಗ್ಗೆ ಹೊಲೆಮಾದಿಗರು ಬಡವರು, ಎಚ್ಚರಗೊಳ್ಳಬೇಕು ಎನ್ನುವುದರ ಬಗ್ಗೆ ಉದಾಹರಣ ಕೊಟ್ಟು ತಾನು ಸಮಯ ಸಿಕ್ಕಿದಾಗಲೆಲ್ಲಾ ಹೇಳುತ್ತಿದ್ದನ್ನು ಮುಗ್ದವಾಗಿ ಕೇಳುತ್ತಿದ್ದ ರೀತಿ ಇಂಥ ಘಟನೆಗಳು ಇದು ಕಾಲೇಜಿನಲ್ಲಿ ಅಧ್ಯಾಪಕರು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಠ ಮಾಡತಕ್ಕದ್ದು, ಇಲ್ಲಿ ಏ ಓದಬಾರದು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾವು ಇದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳು ಮುಂಚೆ ಇದು ಯಾವ ಭಾಷೆ, ಹಳ್ಳಿ ಭಾಷೆಯೇ, ಪಟ್ಟಣದ ಭಾಷೆಯೆ, ಜಾನಪದವೇ ಇವೆಲ್ಲವನ್ನು ಸ್ವಲ್ಪ ನೋಡಬೇಕು.

ಶ್ರೀ ಯು.ಆರ್. ಸಭಾಪತಿ : "ಹಿಡಿದುಕೊಳ್ಳಿ ಕಳ್ಳನನ್ನ ಮಗನ್ನ, ಹೊಡೀರಿ ಬಡ್ಡಿಮಗನ್ನ" ಇದು ಭಾಷೆ ಸರ್, "ಜಮೀನ್ದಾರರ ಕಾಲಿಗೆ ಬಿದ್ದುಕೊಂಡು ಅವರನ್ನು ಒತ್ತಾಯಿಸುತ್ತಾ ಹೇಳಿಕೊಂಡರು ಕಾಲಿಗೆ ಬೀಳಲಿ ಆಮ್ಯೇಕೆ ಜಮೀನ್ದಾರರ ಹತ್ತಿರ ಹೋಗೋಣ, ಇಲ್ಲದಿದ್ದರೆ ಎರಡು ಇಕ್ಕಾನ, ಲೊ ನಿನ್ನ ಇವತ್ತು ಸುಮ್ಮನೆ ಬಿಡಲ್ಲ ಕಣೆ ನನ್ನ ಅಪ್ಪನಿಗೆ ಹುಟ್ಟಿದವನಾದರೆ ಬಡ್ಡಿಮಗನೇ ನೀನು ಹುಟ್ಟೀ ಅನ್ನಿಸುತ್ತೇನೆ." ಇನ್ನು ಇದೆ.

ಉಪಾಧ್ಯಕ್ಷರು : ಪುಸ್ತಕ ತುಂಬಾ ಇದೆ. ಅದನ್ನೆಲ್ಲಾ ಓದುವುದಕ್ಕೆ ಇಲ್ಲಿ ಆಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಇಲ್ಲಿ ಕೇಳಿ ಸರ್, "ಅವರು ಇವಳ ಸೀರೆ ಕಿತ್ತು ಎಸೆದಾ ನನಗೆ ಒಳಗೆ ಕಂಡಿದ್ದು, ಬೇಲೂರು ಶಿಲಾಬಾಲಿಕೆಯ ಅಂದ", ಇದು ಅಧ್ಯಾಪಕರು ವಿದ್ಯಾರ್ಥಿಗಳಿ ಓದಿ ಹೇಳುವುದು.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಈ ವಿಚಾರವನ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಉನ್ನತ ಶಿಕ್ಷಣ ಮಂತ್ರಿಗಳು ಹೇಳುತ್ತಿದ್ದರು, ನಮ್ಮ ರಾಜ್ಯದಲ್ಲಿ ನಮ್ಮ ದೇಶದಲ್ಲಿ ಆದರ್ಶ ವಿದ್ಯಾರ್ಥಿಗಳನ್ನು ಹುಟ್ಟುಹಾಕಬೇಕು ಎಂದು ಅದಕ್ಕೆ ಉತ್ತಮವಾ ವಿದ್ಯಾದಾನವನ್ನು ಮಾಡಿದಾಗ ಮಾತ್ರ ಆದರ್ಶ ವಿದ್ಯಾರ್ಥಿಗಳನ್ನು ಸೃಷ್ಟಿ ಮಾಡಲಿಕ್ಕೆ ಸಾಧ್ಯವಾಗುತ್ತದ ಆದರ್ಶ ವಿಚಾರಗಳನ್ನು ಹೊಂದಿರತಕ್ಕ ಪುಸ್ತಕಗಳನ್ನು ಮುದ್ರಣ ಮಾಡಿ ವಿದ್ಯಾರ್ಥಿಗಳಿಗೆ ಕೊಟ್ಟರೆ

ಗ ಮಾತ್ರ ಆದರ್ಶ ವಿದ್ಯಾರ್ಥಿಗಳು ಬರುವ ಸಾಧ್ಯತೆ ಇದೆ. ಈ ರೀತಿಯ ಪುಸ್ತಕಗಳನ್ನು ಮುದ್ರಣ ಾಡುವಾಗ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿತ್ತೇ? ಟೆಕ್ಸ್ಟ್ ಬುಕ್ ಕಮಿಟಿಯವರ ಗಮನಕ್ಕೆ ಃ ವಿಚಾರ ಬಂದಿಲ್ಲವೋ, ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ಬಂದಿಲ್ಲವೋ, ಅಟ್ರಾಸಿಟೀಸ್ ಯಿದೆ ಪ್ರಕಾರ ಪುಸ್ತಕದಲ್ಲಿ ಇಂತಹ ಪದಗಳನ್ನು ಬಳಸಿದಂತಹ ವ್ಯಕ್ತಿಗಳ ಮೇಲೆ ಮೊಕದಮ್ಮೆ ೂಡುವಂಥ ಅಧಿಕಾರ ಇಲ್ಲವೇ? ಈ ಪುಸ್ತಕದಲ್ಲಿ ಈ ರೀತಿಯ ಪದಗಳನ್ನು ಬಳಸಿದ್ದಕ್ಕೆ ಯಾವ ೀತಿಯ ಕಾನೂನು ಕ್ರಮವನ್ನು ಅವರ ಮೇಲೆ ಜರುಗಿಸಿದ್ದೀರಿ? ಅವರ ಮೇಲೆ ಪೋಲಿಸ್ ಮೊಕದ್ದಮೆ ಕುವಂತೆ ಮಾಡುತ್ತಿರೇನು? ಮುಖ್ಯವಾಗಿ ಈ ಪುಸ್ತಕವನ್ನು ತಕ್ಷಣ ಶಾಲಾ ಕಾಲೇಜಗಳಿಂದ ವಾಪಸ್ಸು ಡೆಯುವಂತೆ ಆದೇಶ ನೀಡಬೇಕೆಂದು ನಾನು ಸರ್ಕಾರಕ್ಕೆ ತಮ್ಮಿಂದ ಮನವಿಯನ್ನು ಮಾಡುತ್ತೇನೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ನಾವು ಯಾವುದೇ ಸಾಹಿತ್ಯವನ್ನು ಅದರ ಣಾತ್ಮಕ ಕಾರಣಗಳಿಂದ ಅದನ್ನು ಬ್ಯಾನ್ ಮಾಡುವುದು, ಪ್ರಾಸ್‌ಪರೈಸ್ ಮಾಡುವುದು ಒಂದು ತೆ. ಆದರೆ ಇದನ್ನು ಪಠ್ಯಪುಸ್ತಕ ಎಂದು ಹೇಳಿರುವುದರಿಂದ ಸರ್ಕಾರ ಇದನ್ನು ಗಮನಿಸಬೇಕಾಗುತ್ತದೆ. ಯವಿಟ್ಟು ಆ ಪುಸ್ತಕವನ್ನು ವಿದ್ಯಾ ಮಂತ್ರಿಗಳಿಗೆ ಕೊಡಿ, ಆ ಪುಸ್ತಕವನ್ನು ಯಾವಾಗ ಅಪ್ರೂವ್ ಾಡಿದ್ದುದು, ಅದರ ಆಥರ್ ಯಾರು, ಮತ್ತು ಯಾವ ತರಗತಿಗೆ ಅದನ್ನು ಭೋಧಿಸಲಾಗುತ್ತಿದೆ ವೆಲ್ಲವನ್ನೂ ವಿವರವಾಗಿ ಅವರಿಗೆ ಹೇಳಿದರೆ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ. ಯಾರು ಯಾವಯಾವ ರಹ ಭಾಷೆ ಉಪಯೋಗಿಸುತ್ತಾರೆ ಎನ್ನುವುದು ಒಂದು. ಅದು ಅಶ್ಲೀಲ. ಶ್ಲೀಲ, ಅಶ್ಲೀಲ ಮಕ್ಕಳ ನಸ್ಸಿನ ಮೇಲೆ ಪರಿಣಾಮ ಮಾಡತಕ್ಕಂಥಾದ್ದು, ಮಾಡದೇ ಇರತಕ್ಕಂಥಾದ್ದು ಇವತ್ತು ಜಗತ್ತಿನ ಲ್ಲಾ ದೇಶಗಳಲ್ಲಿ ಈ ಸಮಸ್ಯೆ ಬಂದಿದೆ. ಬಹಳ ಕೆಟ್ಟ ಪರಿಣಾಮವನ್ನು ಮಾಡತಕ್ಕಂಥ ಮಾಧ್ಯಮ ದು ಓದುವುದು ಇರಲಿ, ನೋಡುವುದು ಇರಲಿ, ಕೇಳುವುದು ಇರಲಿ. ಸರ್ಕಾರ ಎಲ್ಲವನ್ನೂ ದ್ದಲು ಆಗುವುದಿಲ್ಲ. ಅದು ಪಠ್ಯ ಪುಸ್ತಕ ಆಗಿದ್ದರೆ ಮಾಡೋಣ. ಈಗ ಅದನ್ನು ಮಂತ್ರಿಗಳ ಕಡೆ ೂಡಿ. ಅದನ್ನು ಯಾರು ಬರೆದರು, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಗೆದುಕೊಳ್ಳುತ್ತೇವೆ. ಅದು ಬಿಟ್ಟು ಏಕೆ ನೀವು ಇದನ್ನು ಓದುತ್ತಾ ಹೋಗುತ್ತೀರಿ? There are two hings. What the Government can do is one thing. If it is a text book of if it is here in the list of books approved by Text Book Committee. ಯಾರೋ ಏನೋ ರೆಯುತ್ತಾರೆ, ಅವನ್ನೆಲ್ಲಾ ನಾವು ತಿದ್ದಿಕೊಂಡು ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲ. ಅದರ ಕರ್ತೃ ಯಾರು?

ಶ್ರೀ ಯು.ಆರ್. ಸಭಾಪತಿ : ಬರಗೂರು ರಾಮಚಂದ್ರಪ್ಪನವರು.

ಶ್ರೀ ಜೆ.ಹೆಚ್. ಪಟೇಲ್ : ಬರಗೂರು ರಾಮಚಂದ್ರಪ್ಪನವರು ಹೆಸರಾದ ಸಾಹಿತಿ. ಅವರು ಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು.

ಶ್ರೀ ಯು.ಆರ್. ಸಭಾಪತಿ : ಅವರೇ ಬರೆದಿದ್ದಾರೆ, ಸ್ವಲ್ಪ ನೋಡಿ.

ಶ್ರೀ ಜೆ.ಹೆಚ್. ಪಟೇಲ್ : ನಾನು ಅದರ ವಿವರಗಳಿಗೆ ಹೋಗುವುದಿಲ್ಲ. ಸರ್ಕಾರ, ಮಂತ್ರಿಗ ಏನು ಮಾಡಬೇಕೋ ಅದನ್ನು ಮಾಡುತ್ತಾರೆ.

ಉಪಾಧ್ಯಕ್ಷರು : ಅವರು ವಿವರಗಳಿಗೆ ಹೋಗುವುದು ಬೇಡ, ಕ್ರಮ ತೆಗೆದುಕೊಳ್ಳುತ್ತೇ ಎಂದು ಹೇಳಿದ್ದಾರೆ. ಆದ್ದರಿಂದ ದಯಮಾಡಿ ತಾವು ಕುಳಿತುಕೊಳ್ಳಿ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು : ಅವರು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚು ಮಾತನಾಡುವುದಿ ಒಂದು ನಿಮಿಷ ಅಷ್ಟೇ. 'ಬಯಲಾಟದ ಭೀಮಣ್ಣ' ಇದು ಆ ಪುಸ್ತಕದ ಹೆಸರು. ಹಳ್ಳಿಯ ಬಯಲಾಟ ಆಡತಕ್ಕಂಥಾದ್ದು ಇದ್ದು, ಅದರ ಹೆಸರು ಭೀಮಣ್ಣ ಎಂದು. ಬರೆದಿರತಕ್ಕಂಥ ಸಾಹಿ ಬರಗೂರು ರಾಮಚಂದ್ರಪ್ಪ. ಅವರು ಕರ್ನಾಟಕ ರಾಜ್ಯದಲ್ಲಿ ಒಂದು ವಿಚಾರ ಕ್ರಾಂತಿಯ ಎಬ್ಬಿಸಿರತಕ್ಕಂಥ, ಒಬ್ಬ ಅದ್ವಿತೀಯವಾದಂಥ ಪಾಂಡಿತ್ಯ ಪಡೆದಿರತಕ್ಕಂಥ ಮೇರು ಸಾಹಿತಿ. ಅ ನಿರ್ವಿರಾದ. ಆ ರೀತಿ ಒಂದೊಂದು ಪದವನ್ನು ಬಳಸುವಾಗ, ಹಳ್ಳಿಯ ಗ್ರಾಮ್ಯ ಭಾಷೆ, ಮನೆ ಮುಂದೆ ಆಡುವಾಗ, ರಸ್ತೆಯಲ್ಲಿ ಓಡಾಡುವಾಗ ಬಯಲಿನಲ್ಲಿ ಹೋಗುವಾಗ, ಬೇಲಿಯ ಪಕ್ಕದ ಹೋಗುವಾಗ, ಪೊದೆಯ ಸಂದಿಯಲ್ಲಿ ಕುಳಿತಿರುವಾಗ ಒಬ್ಬರಿಗೊಬ್ಬರು ಮಾತನಾಡುವ ವಾ ಪಂಡಿತರ ವಾಕ್ಯದಲ್ಲಿ ಬರತಕ್ಕಂಥಾದ್ದು ಅಲ್ಲ. ಹೀಗೆ ಗ್ರಾಮೀಣ ಭಾಷೆಯನ್ನು ಬರೆದು ಹೊಸ ದಿಕ್ಕ ತೆಗೆದುಕೊಂಡು ಹೋದ ಪುಸ್ತಕ ಇದು ಆಗುತ್ತದೆಯೇ ಹೊರತು ಅದು ಅಶ್ಲೀಲವಲ್ಲ. ಅದು ಬಹ ಅಶ್ಲೀಲವಾಗಿ ಹೋಯಿತು ಎಂದರೆ, ಏನು ಅಶ್ಲೀಲ? ಎಲ್ಲಿ ಅಶ್ಲೀಲ ಇದೆ. ಅಲ್ಲಿ? ಯಾವುದ ಅಶ್ಲೀಲ? ಎಲ್ಲಿದೆ ಅಶ್ಲೀಲ? ಅದು ಒಂದು ಚೂರೂ ಅಶ್ಲೀಲ ಅಲ್ಲ. ಗ್ರಾಮ್ಯ ಭಾಷೆ ಅದು. ದಿನನಿ ಈ ಶಾಸನಸಭೆಯಲ್ಲಿ ಬರೆದಿರುವಂಥ ಎಲ್ಲ ಪುಸ್ತಕಗಳನ್ನೆಲ್ಲಾ ರದ್ದು ಮಾಡತಕ್ಕಂಥ ಸಭೆ ಆಗಬಾರದ

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದು ಅನ್‌ಪಾರ್ಲಿಮೆಂಟರಿ ಪದ. ಪಾರ್ಲಿಮೆಂಟ ಮತ್ತು ಅನ್‌ಪಾರ್ಲಿಮೆಂಟರಿ ಪದ ಏನೆಂದು ಗೊತ್ತಾಗಬೇಕು.

ಶ್ರೀ ವಾಟಾಳ್ ನಾಗರಾಜ್ : ಏನಿದು ಹುಡುಗಾಟ? ಮಾತೆತ್ತಿದರೆ ದಿನಾ ಒಂದು ಪುಸ್ತ ತರುವುದು, ರದ್ದು ಮಾಡಿ ಎಂದು ಕೇಳುವುದು, ಇದೇ ಆಗಿದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪುಸ್ತಕದ ಬಗ್ಗೆ ನಿಮ್ಮ ಅಭ್ಯಂತರವಿದ್ದರೆ ಸರ್ಕಾರ ಅದನ ಪರಿಶೀಲನೆ ಮಾಡಲಿ.

ಉಪಾಧ್ಯಕ್ಷರು : ಮುಖ್ಯ ಮಂತ್ರಿಗಳು ಈಗ ಹೇಳಿದ್ದಾರೆ. ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮತ್ತೆ ಏಕೆ ಇದರ ಬಗ್ಗೆ ಚರ್ಚೆ ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ಹಳ್ಳಿಯಿಂದ ಬಂದಿರತಕ್ಕಂಥವನು. ನನ್ನ ಪ್ರಶ್ನೆ ಏನೆಂದರೆ, ನಾನು ಚಡ್ಡಿ ಬಿಚ್ಚಿಬಿಟ್ಟು ಮೂತ್ರಕ್ಕೆ ಹೋಗುತ್ತಿದ್ದೆ ಆಗ ಎಂದರೆ, ಅದು ಅಶ್ಲೀಲವೇ? ಅದಕ್ಕಾಗಿ ನನಗನ್ನಿಸುತ್ತದೆ, ಆ ಪುಸ್ತಕಕ್ಕೆ ಅತ್ಯುನ್ನತಮವಾದಂಥ ಬಹುಮಾನ ಕೊಡಬೇಕು ಎಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಮಾತನಾಡುತ್ತಾರೆ, ಸಭಾಪತಿಯವರೇ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಕೇಳಿ. ಸಗೀರ್ ಅಹಮದ್‌ರವರು ಇದು ಅನ್‌ಪಾರ್ಲಿಮೆಂಟರಿ ಪದ ಎಂದು ಹೇಳಿದರು. ಆ ಪುಸ್ತಕದಲ್ಲಿ ಇರುವುದು ಪಾರ್ಲಿಮೆಂಟರಿಯೋ, ಅನ್‌ಪಾರ್ಲಿಮೆಂಟರಿಯೋ, ಅದಕ್ಕೂ ಪಾರ್ಲಿಮೆಂಟಿನ ಪ್ರೊಸೀಡಿಂಗ್ಸ್‌ಗೂ ಸಂಬಂಧವಿಲ್ಲ. ಆಮೇಲೆ ಪಾರ್ಲಿಮಂಟಿನ ಪ್ರೊಸೀಡಿಂಗ್ಸ್ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ಹೌಸ್ ಆಫ್ ಕಾಮನ್ಸ್‌ನಲ್ಲಿ ಒಬ್ಬ ಸದಸ್ಯ "ದಟ್ ಬಾಸ್ಟರ್ಡ್" ಅಂದು ಬಿಟ್ಟು. ಅದಕ್ಕೆ ಸ್ಪೀಕರ್ ರೂಲಿಂಗ್ ಕೊಡುತ್ತಾರೆ. But he was really a bastard. Then he ruled it was parlimentary. I am only quoting the House of Commons.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಈಗ ಇಲ್ಲಿ ಏನು ಹೇಳಿದಿರಿ, ಉತ್ತರ ಹಾಗೇ ಬಂದಿದೆ. ಹಾಗೆ ನಾವು ಸಾಮಾನ್ಯವಾಗಿ ಹೇಳಬಹುದೇ? ಒಂದು ಕೆಲಸ ಮಾಡಿ. ದಯವಿಟ್ಟು ತಾವು ಇದನ್ನು ಪರಿಶೀಲನೆ ಮಾಡಿ.

SRI. J.H. PATEL : Actually the speaker investigated into the matter. His mother was divorced and this man was born to some other husband. That is why he called him a bastard.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ಪುಸ್ತಕದ ಬಗ್ಗೆ, ಪುಸ್ತಕ ಬರೆದವರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ಪುಸ್ತಕ ಬರೆಯುವವರಿಗೆ ಸ್ವಾತಂತ್ರ್ಯ ಇದ್ದು ಅವರು ಏನು ಬೇಕಾದರೂ ಬರೆಯಬಹುದು. ಆದರೆ ಅಂಥ ಪುಸ್ತಕಗಳನ್ನು ಶಾಲೆಗಳಲ್ಲಿ ಪಠ್ಯ ಪುಸ್ತಕಗಳನ್ನಾಗಿ ತರಲಿಕ್ಕೆ ನಿಮ್ಮದೇ ಆದಂಥ ಒಂದು ಸಮಿತಿ ಇದೆ. ಆ ಸಮಿತಿ ಇಂಥ ಪುಸ್ತಕಗಳನ್ನು ಶಾಲಾ ಮಕ್ಕಳಿಗೆ ತರುತ್ತಾರಲ್ಲಾ, ಅದರ ಬಗ್ಗೆ ನಮ್ಮದು ಆಕ್ಷೇಪಣೆ ಇದೆ. ಇದೇ ತರಹದ ಒಂದು ಆಕ್ಷೇಪಣೆಯನ್ನು ನಾನು ಮೊನ್ನೆ ಕಳೆದ ಸದನದಲ್ಲಿ ಎತ್ತಲು ಪ್ರಯತ್ನ ಮಾಡಿದ್ದೆ. ಅವಕಾಶ ಆಗಲಿಲ್ಲ. ಮೊನ್ನೆ ಪತ್ರಿಕೆಯಲ್ಲಿ ಹೇಳಿದೆ, ಸನ್ಮಾನ್ಯ ವಿದ್ಯಾ ಮಂತ್ರಿಗಳಾದ ಗೋವಿಂದೇಗೌಡರು ಆ ಪುಸ್ತಕವನ್ನು ಹರಿದು ಬಿಸಾಡಿ, ಅದನ್ನು ಬ್ಯಾನ್ ಮಾಡಬೇಕು ಎಂದು ಹೇಳಿದ್ದಾರೆ. ವಯಸ್ಕರ ಶಿಕ್ಷಣ ನೀಡುತ್ತಿದ್ದಾರಲ್ಲಾ, ಅಲ್ಲಿ ಓದಲು ಇದೇ ತರಹದ ಪುಸ್ತಕಗಳನ್ನು ನಾನ್-ಡೀಟೈಲ್‌ಗೆ ಇಟ್ಟಿದ್ದಾರೆ. ಆ ಕಥೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಓದಿದ್ದೇ ಆದರೆ, ಬಹುಶಃ ಮೂರು ದಿವಸ ನೀವು ಸದನಕ್ಕೆ ಬರುವುದಿಲ್ಲ. ಅಷ್ಟರಮಟ್ಟಿಗೆ ಇದೆ ಅದರ ವಿಚಾರ. ಆ ಒಂದು ಪುಸ್ತಕವನ್ನು ಸನ್ಮಾನ್ಯ ಗೋವಿಂದೇಗೌಡರು ಮೊನ್ನೆ ಹರಿದು ಬಿಸಾಡಿದ್ದಾರೆ. ನಾನು ಯಾವತ್ತೋ

ಇದನ್ನು ಗಮನಕ್ಕೆ ತಂದಿದ್ದೆ ಪುಸ್ತಕಗಳನ್ನು ಆಯ್ಕೆಗಾಗಿ ಒಂದು ಸಮಿತಿ ರಚನೆ ಮಾಡಿ, ಅಲ್ಲಿ ಅದನ್ನು ಸೆಲೆಕ್ಟ್ ಮಾಡಿ ವಿದ್ಯಾ ಇಲಾಖೆಗೆ ಕಳುಹಿಸುತ್ತಾರಲ್ಲಾ ಬೇರೆ ಎಲ್ಲಿಗಾದರೂ ಕಳುಹಿಸಿ, ಅದರ ಬಗ್ಗೆ ನಾವು ಚಿಂತೆ ಮಾಡುವುದಿಲ್ಲ. ಪಬ್‌ಗಳಿಗೆ ಕಳುಹಿಸಿ, ಕ್ಲಬ್‌ಗಳಿಗೆ ಕಳುಹಿಸಿ ಎಲ್ಲಿಗಾದರೂ ಕಳುಹಿಸಿ ಆ ಪುಸ್ತಕಗಳನ್ನು. ವಿದ್ಯಾರ್ಥಿಗಳ ಮನಸ್ಸಿನ ಮೇಲೆ ದುಷ್ಪರಿಣಾಮ ಉಂಟು ಮಾಡತಕ್ಕಂಥ ಇಂಥ ಪುಸ್ತಕಗಳನ್ನು ಶಾಲೆಗಳಿಗೆ ಕಳುಹಿಸತಕ್ಕಂಥ ಕಮಿಟಿ ಏನಿದಿ, ಅದರ ಬಗ್ಗೆ ಉಗ್ರವಾಗಿ ಕ್ರಮ ತೆಗೆದುಕೊಳ್ಳಿ. ಆ ಸಮಿತಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಅದರಲ್ಲಿ ಐಎಎಸ್ ಅಧಿಕಾರಿಗಳಿದ್ದಾರೆ. ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ನನ್ನ ಒತ್ತಾಯ.

ಶ್ರೀ ವಾಟಾಳ್ ನಾಗರಾಜ್ : ಶ್ಲೀಲ ಯಾವುದು, ಅಶ್ಲೀಲ ಯಾವುದು ಎನ್ನುವುದನ್ನು ನಿರ್ಧಾರ ಮಾಡತಕ್ಕಂಥಾದ್ದು ಬಹಳ ಕಷ್ಟಕರವಾದ ಪರಿಸ್ಥಿತಿಯಾಗಿದೆ. ಈಗ ನೀವು ಆ ರೀತಿ ಹೊರಟರೆ, ಪ್ರತಿದಿನ ಬರುವ ಟಿ.ವಿ. ಬಗ್ಗೆ ಏನು ಹೇಳಬಹುದು. 24 ಗಂಟೆಗಳು, 120 ಚಾನಲ್‌ನಲ್ಲಿ ಅನೇಕ ವಿಧವಾಗಿ ಬರುತ್ತಿದೆ. ಇತ್ತೀಚೆಗೆ ಕೆಲವು ಪತ್ರಿಕೆಗಳು ಬರುತ್ತಿವೆ, ತಾವೂ ನೋಡಿರಬಹುದು. ಅವು ಎಷ್ಟು ಚೆನ್ನಾಗಿ, ಬಹಳ ಗಾಂಭೀರ್ಯವಾಗಿ ಶ್ಲೀಲದ ಬಗ್ಗೆ, ನಮ್ಮಗಳ ಬಗ್ಗೆ ಬರೆಯುತ್ತಾರೆ ಎನ್ನುವುದನ್ನು ತಾವು ನೋಡಿರಬೇಕು. ನಮ್ಮ ರಾಜಕಾರಣದ ಬಗ್ಗೆ, ಮಂತ್ರಿಗಳ ಬಗ್ಗೆ, ಬಗ್ಗೆ ಈ ಪತ್ರಿಕೆಗಳಲ್ಲಿ ಬರೆಯುವುದನ್ನು ತಾವೂ ನೋಡಿರಬಹುದು. ಆ ಭಾಷೆಯನ್ನು ನೋಡಿದಾಗ, ಅದರ ಬಗ್ಗೆ ಯಾರೂ ಚಕಾರ ಎತ್ತುವುದೇ ಇಲ್ಲ. ಏನಪ್ಪಾ ಈ ರೀತಿ ಬರೆಯುತ್ತಾರೆ ಎಂದು ಕೇಳುವುದೇ ಇಲ್ಲ. ಒಂದು ಗ್ರಾಮ್ಯದ ಇತಿಹಾಸವನ್ನು ಸೃಷ್ಟಿ ಮಾಡಿ, ಈ ನಾಡಿನ ಗ್ರಾಮ್ಯತೆಯನ್ನು, ಹಳ್ಳಿಗಾಡಿನ ಜನತೆಯ ಭಾಷೆಯನ್ನು, ಅದು ಒಂದು ಭಾಷೆ, ಹಳ್ಳಿಗಾಡಿನ ಪ್ರದೇಶದ ಜನತೆಯ ಭಾಷೆ ಆ ಜಾನಪದ ಭಾಷೆಗೆ ಒಂದು ಶಕ್ತಿ ಇದೆ.

ಶ್ರೀ ಯು.ಆರ್. ಸಭಾಪತಿ : ಆ ಪುಸ್ತಕವನ್ನು ದಯವಿಟ್ಟು ಓದಿ. ನಿಮ್ಮ ಮಕ್ಕಳು ಯಾರಾದರೂ ಆ ಶಾಲೆಗೆ ಹೋಗಿ, ಆ ಭಾಷೆಯನ್ನು ಉಪಯೋಗಿಸಿದರೆ ಅದು ಸರಿಯೇ ಎಂಬುದನ್ನು ನೋಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಸ್ನೇಹಿತನಿಗೆ 'ಏನೋ ಬೋಳಿ ಮಗನೇ ನೀನು ಬರಲಿಲ್ಲವಲ್ಲಾ' ಎಂದು ಮೊನ್ನೆ ಹೇಳಿದೆ. ಇದು ಗ್ರಾಮ್ಯವಾಗಿ ಮಾತನಾಡತಕ್ಕಂಥ ಮಾತು. ಈ ಭಾಷೆ ಕೆಟ್ಟ ಭಾಷೆ ಎನ್ನುವ ಅರ್ಥ ಇಲ್ಲ. ಅದನ್ನು ಪ್ರೀತಿಗೂ ಬಳಸಬಹುದು. ಉಪಾಧ್ಯಕ್ಷರೇ, ತಮಗೂ ಗೊತ್ತಿದೆ. ಏನೋ ನನ್ನ ಮಗನೇ ಚೆನ್ನಾಗಿದ್ದೀಯಾ ಎಂದರೆ ಅದರ ಅರ್ಥ ನಿಜವಾಗಿ ನನ್ನ ಮಗ ಎನ್ನುವ ಅರ್ಥ ಅಲ್ಲ. ಆ ಭಾಷೆ, ಅದರ ಹಿಂದೆ ಇರತಕ್ಕಂಥ ಶಬ್ದ, ಅದರ ಉದ್ದೇಶ, ಇವು ಮುಖ್ಯ. ಆದ್ದರಿಂದ ಬರಗೂರು ರಾಮಚಂದ್ರಪ್ಪನಂಥ ಒಬ್ಬ ಮೇರು ಸಾಹಿತಿ ಈ ಪುಸ್ತಕವನ್ನು ಬರೆದಿರತಕ್ಕಂಥಾದ್ದನ್ನು ನಾವು ಕೇವಲ ಟೀಕೆ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬಹುದೇ ಹೊರತು ನಿಜವಾಗಲೂ ನಮಗೆ ಆ ಪುಸ್ತಕ ಬೇಕು, ಅಂಥ ಪುಸ್ತಕಗಳು ನಮ್ಮ ಸಮಾಜಕ್ಕೆ ಬೇಕು. ಆದ್ದರಿಂದ ಇದನ್ನು ತೆಗೆದು ಹಾಕತಕ್ಕಂಥಾದ್ದು ಸರಿಯಲ್ಲ.

ಉಪಾಧ್ಯಕ್ಷರು : ಈಗ ಕುಂಬ್ಳೆ ಸುಂದರರಾಯರು. ಅವರು ಎದ್ದು ನಿಂತು ಬಹಳ ಹೊತ್ತು ಆಯಿತು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ವ್ಯಾಖ್ಯಾನ ಮಾಡಿದರು. ಬರೆಯುವವರು ತಮ್ಮ ತಮ್ಮ ಬಾಷೆಯಲ್ಲಿ ಮತ್ತು ಶೈಲಿಯಲ್ಲಿ ಯಾರು ಏನು ಬೇಕಾದರೂ ಬರೆಯಬಹುದು. ಅದರ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರಾದಂಥ ಸೋಮಶೇಖರ್‌ರವರು ಒಂದು ಪುಸ್ತಕವನ್ನು ಓದಿ ಹೇಳಿದರು. ನಾವು ಪಠ್ಯಪುಸ್ತಕಗಳನ್ನು ತಯಾರು ಮಾಡಬೇಕಾದರೆ ಯಾವಯಾವ ಆದರ್ಶಗಳನ್ನು ದೃಷ್ಟಿಕೋನದಲ್ಲಿ ಇಟ್ಟುಕೊಳ್ಳಬೇಕು ಎನ್ನುವುದರ ಬಗ್ಗೆ ಕೆಲವು ಸೂಚನೆಗಳನ್ನು, ನಿರ್ದೇಶನಗಳನ್ನು, ಗೈಡ್‌ಲೈನ್ಸ್‌ಗಳನ್ನು ಓದಿ ಹೇಳಿದರು. ಆ ಗೈಡ್‌ಲೈನ್ಸ್‌ನ ವ್ಯಾಪ್ತಿಯಲ್ಲಿ ಈ ಪಠ್ಯಪುಸ್ತಕ ಬಂದರೆ ತಾವು ಅದನ್ನು ಇಟ್ಟುಕೊಳ್ಳಿ, ಅದನ್ನೇ ಕಲಿಸಿರಿ. ಮಾನ್ಯ ಸಗೀರ್ ಅವರ ವಾದದ ಪ್ರಕಾರ ಈ ಗೈಡ್‌ಲೈನ್ಸ್‌ನ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ. ಆದ್ದರಿಂದ ವಾಪಸ್ಸು ತೆಗೆದುಕೊಳ್ಳಿ ಎಂದು ಅವರು ಹೇಳಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಹೇಳುವುದು ಶ್ಲೀಲ, ಅಶ್ಲೀಲದ ಬಗ್ಗೆ. 1997ನೇ ಇಸವಿಯಲ್ಲಿ, ಕರ್ನಾಟಕದಲ್ಲಿ ಒಬ್ಬ ಖ್ಯಾತ ಸಾಹಿತಿ ಗ್ರಾಮೀಣ ಭಾಷೆಯನ್ನು ತದ್ರೂಪ ಬರೆಯುವ ಸ್ಥಿತಿಯಲ್ಲಿ ನಾವು ಜನರನ್ನು ಇಟ್ಟಿದ್ದೇವಲ್ಲಾ, ಅದು ಅಶ್ಲೀಲ. ಹಳ್ಳಿಯಲ್ಲಿ ಜನ ಆ ಮಾತುಗಳನ್ನು ಆಡುತ್ತಾರಲ್ಲಾ, ಅವರು ಆ ಶಬ್ದಗಳನ್ನು ಉಪಯೋಗಿಸುವ ಸ್ಥಿತಿಯಲ್ಲಿ ಅವರನ್ನು ಸ್ವಾತಂತ್ರ್ಯ ಬಂದ 50 ವರ್ಷದ ನಂತರವೂ ಇಟ್ಟಿದ್ದೇವಲ್ಲಾ, ಅದು ಅಶ್ಲೀಲ.

ಶ್ರೀ ಯು.ಆರ್. ಸಭಾಪತಿ : ಹಾಗಾದರೆ ಇದನ್ನು ನಿಮ್ಮ ಮಕ್ಕಳಿಗೂ ಕಲಿಸುತ್ತೀರಾ? ಅದರಲ್ಲಿರತಕ್ಕಂಥ ಅಶ್ಲೀಲ ಭಾಷೆಯನ್ನು ವಿದ್ಯಾರ್ಥಿಗಳಿಗೂ ನೀವು ಕಲಿಸುತ್ತೀರಾ? ನಾವು ಇಲ್ಲಿ ಕುಳಿತುಕೊಂಡು ಈ ರೀತಿಯಲ್ಲೀ ಮಾರ್ಗದರ್ಶನ ಕೊಡುವುದು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೇ, ಈಗ ತಾನೇ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ, ಮಾನ್ಯ ಸದನದ ನಾಯಕರು ಒಂದು ವೇಳೆ ಆ ರೀತಿ ಇದ್ದು, ಅದು ಪಠ್ಯಪುಸ್ತಕವಾಗಿದ್ದರೆ ಅದರ ಜವಾಬ್ದಾರಿಯನ್ನು ಶಿಕ್ಷಣ ಸಚಿವರಿಗೆ ಕಳುಹಿಸಿ ಕೊಡಿ ಎಂದು ಹೇಳಿದರು. ಇಲ್ಲಿ ಅದನ್ನು ಲಂಬಿಸಬೇಕಾದಂಥ ಅಗತ್ಯವಿಲ್ಲ. ಸಾಹಿತ್ಯದ ಒಂದು ಮೌಲ್ಯಮಾಪನವನ್ನು ಮಾಡಬೇಕಾಗಿರತಕ್ಕಂಥ ಸಂದರ್ಭ ಬಂದಾಗ ತತ್‌ಕ್ಷಣದಲ್ಲೇ ಆ ವಿಚಾರವನ್ನು ನಮ್ಮ ನಮ್ಮ ಮೂಗಿನ ನೇರಕ್ಕೇ ಅದನ್ನು ಅರ್ಥೈಸುವಂಥ ಪರಿಸ್ಥಿತಿಯನ್ನು ತರಬಾರದು. ಯಾವ ಯಾವ ಸನ್ನಿವೇಶಗಳಲ್ಲಿ, ಯಾವ ಪಾತ್ರ ಪೋಷಣೆಗೆ ಅನುಗುಣವಾಗಿರತಕ್ಕಂಥ ಭಾಷೆಯ ಬಳಕೆ, ಭಾಷೆಯ ಸಾಧ್ಯತೆಗಳು, ಅವುಗಳ ಬಳಕೆ ಈ ವಿಚಾರಗಳೂ ಕೂಡ ಇದರಲ್ಲಿ ಅಡಕವಾಗಿರುತ್ತವೆ. ಆದ್ದರಿಂದ ನಾವು ಯಾವುದು ನೈತಿಕತೆ, ಯಾವುದು ಸೌಂದರ್ಯ, ಯಾವುದು ಅಶ್ಲೀಲ ಎಂದು ಬೇರೆ ಇಟ್ಟು ಬಹಳ ಅಸಹಿಷ್ಣತವಾದಂಥ ವಾತಾವರಣವನ್ನು ಸೃಷ್ಟಿಮಾಡಿ ನೋಡಬೇಕಾದಂಥ ಅಗತ್ಯವಿಲ್ಲ. ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಅದು ಪಠ್ಯಪುಸ್ತಕವಾಗಿರುವುದರಿಂದ ಸರ್ಕಾರದ ಜವಾಬ್ದಾರಿ

ಯಾಗಿರುವುದರಿಂದ ತಾವು ಆ ಪುಸ್ತಕವನ್ನು ಕಳುಹಿಸಿಕೊಡಿ ಗುಣಾತ್ಮಕವಾಗಿ ಅದನ್ನು ಮಾಡುತ್ತೇವೆ ಎಂದು. ಆದ್ದರಿಂದ ಅದನ್ನು ಅವಲಂಬಿಸಬೇಕಾದ ಅಗತ್ಯವಿಲ್ಲ. ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ಮಾನ್ಯ ಉಪಾಧ್ಯಕ್ಷರೇ, ಈ ದೀರ್ಘ ಚರ್ಚೆ ಕಂಡಾಗ ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಯಾರೆಲ್ಲಾ ಮಾತನಾಡಿದ್ದಾರೆ ಅದರಲ್ಲಿ ಯಾರೊಬ್ಬರೂ ಆ ಪುಸ್ತಕವನ್ನು ಓದಿಲ್ಲ ಎಂದು ಕಾಣುತ್ತದೆ. ಇದು ಕುರುಡ ಮುಟ್ಟಿದ ಆನೆಯ ಕಥೆ ಇದ್ದ ಹಾಗೆ ಇದೆ. ಒಬ್ಬ ಆನೆಯನ್ನು ಕಂಬದ ಹಾಗೆ ಇದೆ ಎಂದು ಹೇಳುತ್ತಾನೆ, ಇನ್ನೊಬ್ಬ ಇದರ ಕಿವಿ ಗರಸೆ ಕಿವಿ ಇದೆ ಎಂದು ಹೇಳುತ್ತಾನೆ. ಅವರು ಯಾರೂ ಆನೆಯನ್ನು ನೋಡಿರುವುದಿಲ್ಲ, ಬರೀ ಸ್ಪರ್ಶದಿಂದ ಆನೆಯನ್ನು ಬಣ್ಣಿಸುತ್ತಾರೆ. ಇದೂ ಕೂಡ ಹಾಗೆ ಆಗಿಬಿಟ್ಟಿದೆ. ಅದು ಕಾದಂಬರಿ ಅಲ್ಲ ಅದೊಂದು ಕಥಾ ಸಂಕಲನ. ಬೈಲಾಟದ ಭೀಮಣ್ಣ ಎಂಬ ಒಂದು ಕಥೆಯ ಹೆಸರನ್ನು ಇಡೀ ಪುಸ್ತಕಕ್ಕೆ ಇಟ್ಟಿದ್ದಾರೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನಾವು ಓದಿದ್ದನ್ನು ಹೇಳುತ್ತಿದ್ದೀರಿ. ತಾವು ಅದನ್ನು ಓದಿದ್ದೀರಾ?

ಶ್ರೀ ಕುಂಬ್ಳೆ ಸುಂದರ್‌ರಾವ್: ನಾನು ಇಡೀ, ಆ ಪುಸ್ತಕವನ್ನು ಓದಿದ್ದೇನೆ. ನಾನು ನಿಮ್ಮ ಪರವಾಗಿಯೇ ಇದ್ದೇನೆ. ಆ ಪುಸ್ತಕದಲ್ಲಿ ಬರುವಂಥ ಆ ಭಾಗ ಅಶ್ಲೀಲವಾಗಿದೆ. ಮಕ್ಕಳ ಮನಸ್ಸಿನ ಆರೋಗ್ಯವನ್ನು ಕೆಡಿಸುವಂಥ ರೀತಿಯಲ್ಲಿ ಇದೆ. ಸೊಂಟದ ಕೆಳಗಿನ ಮಾತು ಎಂದು ಏನು ಹೇಳುತ್ತಾರೆ ಅದೆಲ್ಲಾ ಆ ಪುಸ್ತಕದಲ್ಲಿ ಬಂದಿದೆ. ಮೇಲ್ಮನೆಯಲ್ಲಿ ಈಗಾಗಲೇ ಇದು ಪ್ರಸ್ತಾಪ ಆಗಿದೆ. ಬರಗೂರು ರಾಮಚಂದ್ರಪ್ಪನವರು ಆ ಪುಸ್ತಕ ಬರೆದಿದಕ್ಕೆ ಅವರಿಗೆ ಪ್ರಶಸ್ತಿ ಕೊಡಬೇಕು ಎಂದು ಹೇಳಿದ್ದೀರಿ. ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಕನ್ನಡದಲ್ಲಿ ಬಹಳಷ್ಟು ಶ್ರೇಷ್ಠ ಸಾಹಿತಗಳು. ಲಂಕೇಶರೂ ಸಹ ನಮ್ಮನ್ನು ಬಹಳ ಸಲ ಚಡ್ಡಿಗಳು ಎಂದು ಬಯ್ಯುತ್ತಾರೆ. ಆದರೂ ಅವರ ಕನ್ನಡ ಓದಲಿಕ್ಕೆ ನಮಗೆ ಇಷ್ಟ ಆಗುತ್ತದೆ. ಆ ಭಾಷೆಗೆ ಒಂದು ಪ್ರಭುತ್ವ ಇದೆ. ಪೂರ್ಣ ತೇಜಸ್ವಿಯವರ ಕನ್ನಡ ಓದಿದರೆ ನಮಗೆ ಇಡೀ ಚಿತ್ರ ಕಣ್ಣೆದುರು ಬರುತ್ತದೆ. ಎಂತಹ ಭಾಷೆ, ಎಂತಹ ಸಾಮರ್ಥ್ಯ, ಬರಗೂರು ರಾಮಚಂದ್ರಪ್ಪನವರೂ ಸಹ ಇರಬಹುದು. ಆದರೆ ಪಠ್ಯ ಪುಸ್ತಕ ಆಗುವಂಥ ರೀತಿಯಲ್ಲಿ ಅವರ ಆ ಪುಸ್ತಕ ಇಲ್ಲ. ವಿದ್ಯಾರ್ಥಿಗಳು ಓದಬೇಕಾದಂಥ ರೀತಿಯಲ್ಲಿ ಆ ಪುಸ್ತಕ ಇಲ್ಲ. ಅಂತಹ ಪುಸ್ತಕವನ್ನು ಆ ಸಮಿತಿಯು ಆಯ್ಕೆ ಮಾಡಬೇಕಾಗಿರಲಿಲ್ಲ. ಅದು ನನ್ನ ಮಾತಿನ ಸಾರ. ಆದ್ದರಿಂದ ಸಂಬಂಧಪಟ್ಟವರು ಮತ್ತೊಮ್ಮೆ ಆ ಪುಸ್ತಕವನ್ನು ಸಮಗ್ರವಾಗಿ ಓದಿ ತೀರ್ಮಾನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅವರು ಲಂಕೇಶ್‌ರವರ ಸಾಹಿತ್ಯದ ಬಗ್ಗೆ ಪ್ರಭುತ್ವದ ಬಗ್ಗೆ ಮಾತನಾಡಿದರು ಅವರು ಅವರ ತುಂಟಾಟದ ವಿಚಾರವನ್ನು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದು ಏನೇ ಇರಲಿ. ಆದ್ದರಿಂದ ಅನೇಕ ವಿಷಯಗಳ ಬಗ್ಗೆ, ಸಾಹಿತ್ಯ ಎನ್ನತಕ್ಕಂಥ ನಮ್ಮ ಸಹಿಷ್ಣತೆಗಳ ಬಗ್ಗೆ ನಮ್ಮ ಕಥೆಯ ಆಶೆಯ ಪಾತ್ರಗಳ ಆಶೆಯ ಒಪ್ಪಂದದ ಅರ್ಥ ಅವುಗಳ ಹಿನ್ನಲೆಯಲ್ಲಿ ನಾವು

ರ್ಚೆ ಮಾಡಬೇಕಾಗುತ್ತದೆ. ತಾವು ಯಕ್ಷಗಾನದಲ್ಲಿ ಅರ್ಥೈಸುವ ಸಂದರ್ಭಗಳು ಬಂದಾಗ ಕೃಷ್ಣನ ಪಾತ್ರ, ರಾಧೆಯ ಪಾತ್ರ, ಸತ್ಯಭಾಮೆಯ ಪಾತ್ರಗಳು ಬಂದಾಗ ಯಾವ ರೀತಿ ಅರ್ಥೈಸುತ್ತೀರಿ? ುಚ, ಸ್ತನ, ಮೊದಲಾದಂಥ ವಿಚಾರಗಳ ಬಗ್ಗೆ ಅರ್ಥೈಸುವಾಗ ನಮ್ಮ ಪೌರಾಣಿಕ ಕಥಾ ವಸ್ತುಗಳ ೀಗೆ ಇರುತ್ತದೆ ಈ ಎಲ್ಲಾ ವಿಚಾರಗಳ ಬಗ್ಗೆ ನಾವು ಮುಖ್ಯವಾಗಿ ಚರ್ಚೆ ಮಾಡಬೇಕು. ಸಭಾ ಾಯಕರು ಈಗಾಗಲೇ ಹೇಳಿದ್ದಾರೆ ಏನಾದರೂ ಇದ್ದರೆ ಅದನ್ನು ಶಿಕ್ಷಣ ಸಚಿವರಿಗೆ ಕಳುಹಿಸಿಕೊಡಿ ದನ್ನು ಕಾನೂನಿನ ಚೌಕಟ್ಟಿನೊಳಗೆ ಪರಿಶೀಲಿಸುತ್ತೇವೆ ಎಂದು ಹೇಳಿದಾಗ ಅದನ್ನು ನಾವು ದೀರ್ಘವಾಗಿ ೆಳೆಸಿ ಅಸಹಿಷ್ಣುತೆಯ ವಾತಾವರಣ ಸೃಷ್ಟಿಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸರ್ವಜ್ಞನ ವಚನದಲ್ಲೂ ಹೇಳುತ್ತಾರೆ. ಬರೆಯದೇ ಓದುವವನ, ರೆಯದೇ ಹೋಗುವವನ, ಕರೆದು ಯಾವುದರಲ್ಲಿ ಹೊಡೆಯಬೇಕು? ಆದ್ದರಿಂದ ನಾವು ಅದನ್ನು ಶ್ಲೀಲ ಎಂದು ಕರೆಯಬೇಕೇ?

ಉಪಾಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ: 31.3.1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 11 ಮತ್ತು 14ಕ್ಕೆ ಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಬರಿಸಲು ಸರ್ಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು
ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 11-ಉನ್ನತ ಶಿಕ್ಷಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.98 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉನ್ನತ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ರೂ. 1,63,73,52,000 ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ',50,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14-ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 91,772,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು."